ಕರ್ನಾಟಕ ನೀರಾವರಿ ನಿಗಮ ನಿಯಮಿತ
KARNATAKA NEERAVARI NIGAM LIMITED

20ನೇ TH ವಾರ್ಷಿಕ ವರದಿ
ANNUAL REPORT
2017–18

ನೊಂದಾಯಿತ ಕಛೇರಿ : 4ನೇ ಮಹಡಿ, ಕಾಫಿ ಬೋರ್ಡ್ ಕಟ್ಟಡ, ನಂ.1, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001. ದೂರವಾಣಿ: 080 2228 3074–78 ಫ್ಯಾಕ್ಸ್ : 080 2238 6015

Registered Office: 4th Floor, Coffee Board Building, No. 1, Dr. B.R. Ambedkar Veedhi, Bengaluru - 560 001. Ph : 080 2228 3074 - 78 Fax : 080 2238 6015

ಮಲಪ್ರಭಾ ಯೋಜನೆಯ ಮುಖ್ಯ ಕಾಲುವೆಯ ಆಧುನೀಕರಣ ಕಾಮಗಾರಿಗಳು

ಗೋಂದಿ ಆಣೆಕಟ್ಟು ಯೋಜನೆಯ ಬಲದಂಡೆ ಕಾಲುವೆ

ಕಾರಂಜಾ ಯೋಜನೆಯ ಬಲದಂಡೆ ಮುಖ್ಯ ಕಾಲುವೆಯ ಆಧುನೀಕರಣ ಕಾಮಗಾರಿಗಳು

ನಿರ್ದೇಶಕರ ಮಂಡಳಿ

ಶ್ರೀ ಹೆಚ್. ಡಿ. ಕುಮಾರಸ್ವಾಮಿ	ಅಧ್ಯಕ್ಷರು
ಶ್ರೀ ಡಿ.ಕೆ. ಶಿವಕುಮಾರ್	ಉಪಾಧ್ಯಕ್ಷರು
ಶ್ರೀ ಟಿ.ಎಂ. ವಿಜಯ್ ಭಾಸ್ಕರ್, ಭಾ.ಆ.ಸೇ.	ನಿರ್ದೇಶಕರು
ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ.	ನಿರ್ದೇಶಕರು
ಡಾ: ಇ.ವಿ. ರಮಣ ರೆಡ್ಡಿ, ಭಾ.ಆ.ಸೇ.	ನಿರ್ದೇಶಕರು
ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ.	ನಿರ್ದೇಶಕರು
ಡಾ: ಶಾಲಿನಿ ರಜನೀಶ್, ಭಾ.ಆ.ಸೇ.	ನಿರ್ದೇಶಕರು
ಶ್ರೀ ಕೆ. ಜೈಪ್ರಕಾಶ್	ನಿರ್ದೇಶಕರು
ಶ್ರೀ ಮಲ್ಲಿಕಾರ್ಜುನ ಬಿ. ಗುಂಗೆ	ವ್ಯವಸ್ಥಾಪಕ ನಿರ್ದೇಶಕರು
ಶ್ರೀ ಡಿ.ಎನ್. ದೇಸಾಯಿ	ಸ್ವತಂತ್ರ ನಿರ್ದೇಶಕರು
ಶ್ರೀ ಎಸ್.ಎಸ್. ಮಗದಾಳ್	ಸ್ವತಂತ್ರ ನಿರ್ದೇಶಕರು
ಪ್ರೊ: ಎಂ.ಎಸ್. ಮೋಹನ್ ಕುಮಾರ್	ಸ್ವತಂತ್ರ ನಿರ್ದೇಶಕರು

ಶ್ರೀ ಎನ್. ರವೀಂದ್ರನ್
ಪ್ರಧಾನ ವ್ಯವಸ್ಥಾಪಕರು – ಹಣಕಾಸು ಮತ್ತು
ಮುಖ್ಯ ಹಣಕಾಸು ಅಧಿಕಾರಿಗಳು

ಶ್ರೀ ಶಶಿಧರ ಬಗಲಿ
ಮುಖ್ಯ ಆಡಳಿತಾಧಿಕಾರಿಗಳು

ಶ್ರೀ ಎಸ್. ಆರ್. ಗೋಪಾಲ್
ಕಂಪನಿ ಕಾರ್ಯದರ್ಶಿಗಳು

ಶ್ರೀ ಎಂ.ಎಂ. ಮಿರ್ಜಾ
ಮುಖ್ಯ ಲೆಕ್ಕಾಧಿಕಾರಿಗಳು

ನೋಂದಾಯಿತ ಕಛೇರಿ:
ನಂ. 1, ಕಾಫಿ ಬೋರ್ಡ್ ಕಟ್ಟಡ, 4ನೇ ಮಹಡಿ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001.

ಕೇಂದ್ರ ಕಛೇರಿ:
ವಿಜಯ ಕಾಂಪ್ಲೆಕ್ಸ್, ಶ್ರೀನಗರ ಸರ್ಕಲ್,
ಹಳಿಯಾಳ ರಸ್ತೆ, ಧಾರವಾಡ – 580 003

ಕಾನೂನು ಸಲಹೆಗಾರರು:
ಶ್ರೀ ಎಂ.ಆರ್.ಸಿ. ರವಿ, ವಕೀಲರು, ಮೆ. ಐಎಲ್‌ಪಿಎಂ ಕಾನೂನು ಸಲಹೆಗಾರರು, "ಸ್ವಾತಿ", ನಂ. 123, 6ನೇ ಮೈನ್, 12ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.

ಮೆ: ಲಾ ಲಿಂಕ್
ವಕೀಲರು ಮತ್ತು ಕಾನೂನು ಸಲಹೆಗಾರರು,
ಸಿ 47, (ಬೇಸ್ಮೆಂಟ್) ನಿಜಾಮುದ್ದೀನ್ ಈಸ್ಟ್,
ನವ ದೆಹಲಿ–110 013.

ಶ್ರೀ ಆರ್.ಎನ್. ಮಿಸಾಳೆ, ವಕೀಲರು ಮತ್ತು ಕಾನೂನು ಸಲಹೆಗಾರರು,
"ಕೃಷ್ಣಾ" ನಂ. 13/ಎ, ಗ್ರೇಸ್ ಅಪಾರ್ಟ್‌ಮೆಂಟ್ ಎದುರು,
ಎಂ.ಜಿ. ಕಾಲೋನಿ, ತಿಲಕವಾಡಿ, ಬೆಳಗಾವಿ–590 006.

ಶಾಸನಬದ್ಧ ಲೆಕ್ಕ ಪರಿಶೋಧಕರು

ಮೆ॥ ಮಣಿಯನ್ ಅಂಡ್ ರಾವ್, ಸನದಿ ಲೆಕ್ಕಿಗರು
ನಂ.361, 1ನೇ ಮಹಡಿ, 7ನೇ ಅಡ್ಡ ರಸ್ತೆ, 1ನೇ ಬ್ಲಾಕ್, ಜಯನಗರ, ಬೆಂಗಳೂರು–560 011, ದೂರವಾಣಿ–080– 26569500
ಫ್ಯಾಕ್ಸ್ ನಂ.080–26569501, ಇ–ಮೇಲ್: contact@manian-rao.com

ಕ್ರ.ಸಂ	ಪರಿವಿಡಿ	ಪುಟ ಸಂಖ್ಯೆ
1	ಸೂಚನಾ ಪತ್ರ	2
2	ನಿರ್ದೇಶಕರ ವರದಿ	3–52
3	ಲೆಕ್ಕ ಪರಿಶೋಧಕರ ವರದಿ	53–75
4	ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ವರದಿ	76
5	ಸಂತುಲನ ಪಟ್ಟಿ	77–78
6	ಲಾಭ ಮತ್ತು ನಷ್ಟದ ತಃಖ್ತೆ	79
7	ನಗದು ಪ್ರವಹನ ಪಟ್ಟಿ	80–81
8	ಈಕ್ವಿಟಿಯಲ್ಲಿನ ಬದಲಾವಣೆಯ ತ:ಖ್ತೆ	82–83
9	ಆರ್ಥಿಕ ತಃಖ್ತೆಗಳ ಭಾಗವಾಗಿ ರೂಪುಗೊಂಡಿರುವ ಟಿಪ್ಪಣಿಗಳು	84–142
10	ಯೋಜನೆಗಳ ಪ್ರಗತಿಯ ವರದಿ 31.08.2018	143–156

ಗಮನಿಕೆ: ಇದು ಮೂಲ ಇಂಗ್ಲೀಷ್‌ನಲ್ಲಿರುವ ವಾರ್ಷಿಕ ವರದಿಯ ಕನ್ನಡ ಭಾಷಾನುವಾದ. ಇದರಲ್ಲಿ ಯಾವುದೇ ತಪ್ಪುಗಳು ಅಥವಾ ಅರ್ಥ ವ್ಯತ್ಯಾಸಗಳೇನಾದರು ಕಂಡುಬಂದಲ್ಲಿ ಇಂಗ್ಲೀಷ್ ಭಾಷೆಯ ಮೂಲ ವರದಿ ಅಧಿಕೃತವೆಂದು ತಿಳಿಯಬಹುದಾಗಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

ನಂ. 1, ಕಾಫಿ ಬೋರ್ಡ್ ಕಟ್ಟಡ, 4ನೇ ಮಹಡಿ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001.

ಸೂಚನಾ ಪತ್ರ

ಕರ್ನಾಟಕ ನೀರಾವರಿ ನಿಗಮ ನಿಯಮಿತ ಸಂಸ್ಥೆಯ ಸರ್ವಸದಸ್ಯರ **20**ನೇ ವಾರ್ಷಿಕ ಸಾಮಾನ್ಯ ಸಭೆಯನ್ನು **ಶನಿವಾರ, ದಿನಾಂಕ 29ನೇ ಸಪ್ಟೆಂಬರ್, 2018ರಂದು ಸಂಜೆ 4.15 ಗಂಟೆಗೆ** ಈ ಕೆಳಕಂಡ ವಿಷಯಗಳನ್ನು ಪರಿಗಣಿಸಲು ಮತ್ತು ವ್ಯವಹರಿಸಲು ಕೊಠಡಿ ಸಂಖ್ಯೆ 336, ಮಾನ್ಯ ಜಲ ಸಂಪನ್ಮೂಲ ಸಚಿವರು ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಇವರ ಕಛೇರಿ, 3ನೇ ಮಹಡಿ, ವಿಧಾನಸೌಧ, **ಬೆಂಗಳೂರು – 560 001** ಇಲ್ಲಿ ಕರೆಯಲಾಗಿದೆ.

ಸದರಿ ಸಭೆಯನ್ನು ಆಡಳಿತಾತ್ಮಕ ಕಾರಣಗಳಿಗೋಸ್ಕರ ಕರ್ನಾಟಕ ನೀರಾವರಿ **ನಿಗಮದ ನೊಂದಾಯಿತ ಕಛೇರಿಯ ಸಮಿತಿ ಕೊಠಡಿಯಲ್ಲಿ** ಪ್ರತ್ಯೇಕವಾಗಿ ಸೂಚನಾ ಪತ್ರ ನೀಡಿ ನಡೆಸಲಾಯಿತು.

ಸಾಮಾನ್ಯ ವ್ಯವಹಾರ:

1. ಲಗತ್ತಿಸಲಾದ ಅನುಸೂಚಿಗಳು ಮತ್ತು ನಿರ್ದೇಶಕರ ಹಾಗೂ ಲೆಕ್ಕಪರಿಶೋಧಕರ ವರದಿಗಳ ಜೊತೆಗೆ ದಿನಾಂಕ 31.3.2018ರಂದು ಇದ್ದಂತೆ ಸಂತುಲನ ಪಟ್ಟಿಯನ್ನು ಹಾಗೂ ಅದೇ ದಿನಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ತಃಖ್ತೆಯನ್ನು ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.
2. ಕಂಪನಿ ಕಾಯ್ದೆ, 2013ರ ಪರಿಚ್ಛೇದ 102(2)ರ ಅಡಿ ನೇಮಕ ಮಾಡಿಕೊಂಡ ಲೆಕ್ಕ ಪರಿಶೋಧಕರ ಸಂಭಾವನೆ ನಿಗದಿಪಡಿಸುವುದು **(ದಯವಿಟ್ಟು ಕೆಳಗಿನ ಟಿಪ್ಪಣಿ–1ನ್ನು ನೋಡಿ).**

ಮಂಡಳಿಯ ಅಪ್ಪಣೆಯ ಮೇರೆಗೆ
ಕರ್ನಾಟಕ ನೀರಾವರಿ ನಿಗಮ ನಿಯಮಿತ ಪರವಾಗಿ

ಸಹಿ/–
(ಎಸ್. ಆರ್. ಗೋಪಾಲ್)
ಕಂಪನಿ ಕಾರ್ಯದರ್ಶಿ

ದಿನಾಂಕ : 28.09.2018
ಸ್ಥಳ : ಬೆಂಗಳೂರು

ಟಿಪ್ಪಣಿ:

1. ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 139ರ ಉಪಬಂಧಗಳ ಅನುಸಾರ ಲೆಕ್ಕಪರಿಶೋಧಕರಿಗೆ ಸಂದಾಯವಾಗಬೇಕಿರುವ ಸಂಭಾವನೆಯನ್ನು ಕಂಪೆನಿಯು ಸರ್ವಸದಸ್ಯರ ಸಭೆಯಲ್ಲಿ ನಿಗದಿಪಡಿಸಬೇಕು ಅಥವಾ ಸರ್ವಸದಸ್ಯರ ಸಭೆಯಲ್ಲಿ ನಿರ್ಧಾರವಾಗುವ ರೀತಿಯಲ್ಲಿ ನಿಗದಿಪಡಿಸಬೇಕು. ದಿನಾಂಕ 29.09.2001ರಂದು ನಡೆದ ಸರ್ವಸದಸ್ಯರ 3ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಂಪೆನಿ ಕಾಯ್ದೆ ಅಡಿಯಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರು ನೇಮಕ ಮಾಡಿದೊಡನೆಯೇ ಪ್ರತ್ಯೇಕವಾಗಿ ಪ್ರತಿವರ್ಷ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಸಂದಾಯವಾಗಬೇಕಾದ ಸಂಭಾವನೆಯನ್ನು ನಿಗದಿಪಡಿಸಲು ಸಭೆಯು ನಿರ್ದೇಶಕ ಮಂಡಳಿಗೆ ಅಧಿಕಾರವನ್ನು ನೀಡಿದೆ. ಇದಕ್ಕನುಗುಣವಾಗಿ ನಿರ್ದೇಶಕ ಮಂಡಳಿಯ ಲೆಕ್ಕಪರಿಶೋಧನಾ ಸಮಿತಿಯು 2017–18ರ ಹಣಕಾಸು ವರ್ಷಕ್ಕೆ ಶಾಸನಬದ್ಧ ಲೆಕ್ಕಪರಿಶೋಧಕರು ಮತ್ತು ತೆರಿಗೆ ಲೆಕ್ಕಪರಿಶೋಧಕರಾದ ಮೆ. ಮಣಿಯನ್ & ರಾವ್ & ಕಂ., ಸನದಿ ಲೆಕ್ಕಿಗರು–ಇವರಿಗೆ ತೆರಿಗೆಯನ್ನು ಹೊರತುಪಡಿಸಿ ಭಾರತದ ಮಹಾಲೇಖಾಪಾಲರು ತಮ್ಮ ಪತ್ರ ದಿ: 17.8.2017 ರಲ್ಲಿ ನಿಗದಿಪಡಿಸಿರುವಂತೆ ರೂ.15,73,000/– (ರೂಪಾಯಿ ಹದಿನೈದು ಲಕ್ಷ ಎಪ್ಪತ್ತ ಮೂರು ಸಾವಿರ ಮಾತ್ರ) ಸಂಭಾವನೆಯನ್ನು ನೀಡಲು ಸಹಮತಿಸಿ ಅನುಮೋದಿಸಿರುತ್ತದೆ ಮತ್ತು 2017–18ರ ಟ್ಯಾಕ್ಸ್ ಆಡಿಟ್‌ಗಾಗಿ ಮೆ: ಮಣಿಯನ್ & ರಾವ್, ಚಾರ್ಟರ್ಡ್ ಅಕೌಂಟೆಂಟ್ ಅವರಿಗೆ ವಹಿಸಲು ಅನುಮೋದಿಸಲಾಗಿರುತ್ತದೆ.
2. ಸಭೆಯಲ್ಲಿ ಪಾಲ್ಗೊಂಡು ಮತ ಚಲಾಯಿಸುವ ಸದಸ್ಯ ತನ್ನ ಬದಲಿಗೆ ಒಬ್ಬ ಬದಲಿ ವ್ಯಕ್ತಿಯನ್ನು (ಪ್ರಾಕ್ಸಿ) ಸಭೆಯಲ್ಲಿ ಪಾಲ್ಗೊಂಡು ಮತ ಚಲಾಯಿಸುವಂತೆ ನೇಮಿಸುವ ಅಧಿಕಾರವನ್ನು ಹೊಂದಿರುತ್ತಾರೆ ಮತ್ತು ಅಂತಹ ಬದಲಿ ವ್ಯಕ್ತಿಯು ಸಭೆಯ ಸದಸ್ಯರಾಗಿರಬೇಕಾದ ಅಗತ್ಯವಿಲ್ಲ.
3. ಕಂಪೆನಿ ಕಾಯ್ದೆ, 2013 ಪರಿಚ್ಛೇದ 101(1)ರ ಅಡಿಯಲ್ಲಿ ಅಗತ್ಯವಿರುವಂತೆ ಸದಸ್ಯರ ಒಪ್ಪಿಗೆಯನ್ನು ಪಡೆದುಕೊಂಡ ನಂತರ ಈ ಸಭೆಯನ್ನು ಅಲ್ಪ ಕಾಲ ಸೂಚನಾ ಪತ್ರ ನೀಡಿ ಕರೆಯಲಾಗಿದೆ.

ನಿರ್ದೇಶಕರ ವರದಿ

ಆತ್ಮೀಯ ಸದಸ್ಯರೆ,

ಇಪ್ಪತ್ತನೇ ವಾರ್ಷಿಕ ವರದಿ ಹಾಗೂ 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಲೆಕ್ಕಪರಿಶೋಧಿತ ಹಣಕಾಸು ತಃಖ್ತೆಗಳನ್ನು ಪ್ರಸ್ತುತಪಡಿಸಲು ನಿಮ್ಮ ನಿರ್ದೇಶಕರುಗಳು ಹರ್ಷಿಸುತ್ತಾರೆ.

2. ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು:

ಸರ್ಕಾರ ವಹಿಸಿರುವ 90 ನೀರಾವರಿ ಯೋಜನೆಗಳನ್ನು ನಿಮ್ಮ ಕಂಪನಿ ಜಾರಿಗೊಳಿಸುತ್ತಿದೆ. ಯೋಜನೆಗಳ ಸಂಕ್ಷಿಪ್ತ ವಿವರಗಳು ಕೆಳಗಿನಂತಿವೆ:

ವಿವರಗಳು	
ಒಟ್ಟು ಯೋಜನೆಗಳ ಸಂಖ್ಯೆ	90
01.04.2018 ರಂದು ಇದ್ದಂತೆ ಉಳಿಕೆ ವೆಚ್ಚ **(ಕೋಟಿಗಳಲ್ಲಿ)**	19,590.41
ಅಂತಿಮ ಸಾಮರ್ಥ್ಯ **(ಹೆಕ್ಟೇರುಗಳಲ್ಲಿ)**	16,71,407
ಮಾರ್ಚ್ 2018ರ ವರೆಗೆ ಸೃಷ್ಟಿಯಾದ ಸಂಚಯಿತ ಸಾಮರ್ಥ್ಯ **(ಹೆಕ್ಟೇರುಗಳಲ್ಲಿ)**	14,03,938
ಉಳಿಕೆ ಸಾಮರ್ಥ್ಯ 01.04.2018 ರಂದು ಇದ್ದಂತೆ **(ಹೆಕ್ಟೇರುಗಳಲ್ಲಿ)**	2,67,469
ನೀರಿನ ಹಂಚಿಕೆ (ಟಿಎಂಸಿ)	477.51

3. ಯೋಜನೆಗಳ ಸ್ಥಿತಿಗತಿಗಳ ವರದಿ

31.08.2018ರಲ್ಲಿದ್ದಂತೆ ಕಂಪನಿಯು ಕಾರ್ಯಗತ ಗೊಳಿಸುವಿಕೆಯ ಅಡಿಯಲ್ಲಿರುವ ಯೋಜನೆಗಳ ಸ್ಥಿತಿಗತಿಗಳ ವರದಿಯನ್ನು ಪ್ರತ್ಯೇಕವಾಗಿ ಈ ವಾರ್ಷಿಕ ವರದಿಯ ಒಂದು ಭಾಗವಾಗಿ ಅಂತ್ಯದಲ್ಲಿ ಪ್ರತ್ಯೇಕವಾಗಿ ಲಗತ್ತಿಸಲಾಗಿರುವುದು. ಈ ವರದಿಯ ದಿನಾಂಕದವರೆಗೆ ಬೃಹತ್ ಯೋಜನೆಗಳ ಸಂಕ್ಷಿಪ್ತ ಸಾರಾಂಶಗಳನ್ನು ಈ ಕೆಳಗೆ ನೀಡಲಾಗಿದೆ.

(i) **ತುಂಗಾ ಮೇಲ್ದಂಡೆ ಯೋಜನೆಗಳು :** ತುಂಗಾ ಮೇಲ್ದಂಡೆ ಯೋಜನೆಯು, ಶಿವಮೊಗ್ಗ ತಾಲ್ಲೂಕಿನ ಗಾಜನೂರಿನ ಬಳಿ ಪ್ರಸ್ತುತ ಇರುವಂತಹ ತುಂಗಾ ಅಣೆಕಟ್ಟೆಯ 100.00 ಮೀಟರುಗಳ ನದಿಯ ಪ್ರವಾಹದ ದಿಕ್ಕಿನಲ್ಲಿ (ಡೌನ್ ಸ್ಟ್ರೀಮ್) ತುಂಗಾ ನದಿಗೆ ಹೊಸ ಅಣೆಕಟ್ಟೆಯ ನಿರ್ಮಾಣವನ್ನು ಹಾಗೂ 270.00 ಕಿಲೋಮೀಟರುಗಳ ಉದ್ದಕ್ಕೆ ತುಂಗಾ ಮೇಲ್ದಂಡೆ ನಾಲೆಯ ನಿರ್ಮಾಣವನ್ನು ರೂಪಿಸಿರುತ್ತದೆ. ಇದರಲ್ಲಿ 4.00 ಕಿಲೋಮೀಟರುಗಳ ಉದ್ದದ ಸುರಂಗ ನಾಲೆ ಹಾಗೂ ವಿತರಣಾ ನಾಲಾ ಸಂಕೀರ್ಣ ವ್ಯವಸ್ಥೆಗಳ (ಡಿಸ್ಟ್ರಿಬ್ಯೂಟರಿ ನೆಟ್‌ವರ್ಕ್) ನಿರ್ಮಾಣವನ್ನು ಒಳಗೊಂಡಿರುತ್ತದೆ. ತುಂಗಾ ನದಿಯಿಂದ 12.24 ಟಿಎಂಸಿ ನೀರನ್ನು ಬಳಸಿಕೊಳ್ಳುವ ಮೂಲಕ ಈ ಯೋಜನೆಯ ಅಡಿಯಲ್ಲಿ ಶಿವಮೊಗ್ಗ, ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳ 80,494 ಹೆಕ್ಟೇರುಗಳಷ್ಟು ಪ್ರದೇಶಕ್ಕೆ ನೀರಾವರಿ ಅನುಕೂಲತೆಯನ್ನು ಒದಗಿಸುವ ಪ್ರಸ್ತಾವನೆಯಿರುತ್ತದೆ. ಅಣೆಕಟ್ಟೆಯ ಕಾಮಗಾರಿಯು ಎಲ್ಲಾ ರೀತಿಯಲ್ಲಿಯೂ ಪೂರ್ಣಗೊಂಡಿರುತ್ತದೆ. ಪ್ರಸ್ತುತ, ನಾಲಾ ನಿರ್ಮಾಣದ 258 ಕಿಲೋಮೀಟರುಗಳ ಪೈಕಿ 230 ಕಿಲೋಮೀಟರುಗಳ ನಿರ್ಮಾಣವು ಪೂರ್ಣಗೊಂಡಿರುತ್ತದೆ ಹಾಗೂ 6 ವಿತರಣಾ ನಾಲೆಗಳ ಪೈಕಿ 5 ವಿತರಣಾ ನಾಲೆಗಳ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

(ii) **ತುಬಚಿ–ಬಬಲೇಶ್ವರ ಏತ ನೀರಾವರಿ ಯೋಜನೆ :** ಈ ಏತ ನೀರಾವರಿ ಯೋಜನೆಯು ಮುಂಗಾರು ಮಳೆಗಾಲದಲ್ಲಿ ಕೃಷ್ಣಾ ನದಿಯಿಂದ 6.30 ಟಿಎಂಸಿ ನೀರನ್ನು ಬಳಸಿಕೊಳ್ಳುವ ಮೂಲಕ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳ ವಿಜಯಪುರ, ಅಥಣಿ ಮತ್ತು ಜಮಖಂಡಿಯ 52,700 ಹೆಕ್ಟೇರುಗಳಷ್ಟು ಪ್ರದೇಶಕ್ಕೆ ನೀರಾವರಿ ಯೋಜನೆಯನ್ನು ಒದಗಿಸುವ ಪ್ರಸ್ತಾವನೆಯಿರುತ್ತದೆ. ಹಂತ– Iರ ಅಡಿಯಲ್ಲಿ ಅಣೆಕಟ್ಟೆಯಿಂದ ನಾಲೆಗೆ ನೀರು ಬಿಡುವ ವ್ಯವಸ್ಥೆಯ ಪ್ರಮುಖ ಕಾಮಗಾರಿಯನ್ನು (ಹೆಡ್ ವರ್ಕ್) ರೂ.1,022.58 ಕೋಟಿ ಮೌಲ್ಯದಲ್ಲಿ ಟರ್ನ್‌ಕೀ ಆಧಾರದ ಮೇರೆಗೆ ವಹಿಸಲಾಯಿತು ಹಾಗೂ ಶೇಕಡಾ 80ರಷ್ಟು ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಹಂತ – IIರ ಅಡಿಯಲ್ಲಿ ಅಣೆಕಟ್ಟೆಯಿಂದ ನಾಲೆಗೆ ನೀರು ಬಿಡುವ ವ್ಯವಸ್ಥೆಯ ಪ್ರಮುಖ ಕಾಮಗಾರಿಯನ್ನು (ಹೆಡ್ ವರ್ಕ್) ರೂ.538.30 ಕೋಟಿ ಮೌಲ್ಯದಲ್ಲಿ ಟರ್ನ್‌ಕೀ ಆಧಾರದ ಮೇರೆಗೆ ವಹಿಸಲಾಯಿತು ಹಾಗೂ ಈ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಮುಂದುವರೆದು, ಪಶ್ಚಿಮ ಪ್ರಧಾನ ನಾಲೆ ಮತ್ತು ಪೂರ್ವ ಪ್ರಧಾನ ನಾಲೆಗಳಿಗೆ ಸಂಬಂಧಿತ ಕಾಮಗಾರಿಗಳನ್ನು ರೂ.333.76 ಕೋಟಿ ಹಾಗೂ ರೂ.89.59 ಕೋಟಿ ಮೊತ್ತಗಳಿಗೆ ನೀಡಲಾಗಿದ್ದು ಆ ಕಾಮಗಾರಿಗಳು

ಪ್ರಗತಿಯಲ್ಲಿರುತ್ತವೆ. ಪೂರ್ವ ಪ್ರಧಾನ ನಾಲೆಯ ಅಡಿಯಲ್ಲಿ ಉತ್ತರ ಮತ್ತು ದಕ್ಷಿಣ ನಾಲೆಗಳ ಕಾಮಗಾರಿಗಳು ಮತ್ತು ವಿತರಣಾ ನಾಲೆ 1 ಎ ಅಡಿಯಲ್ಲಿನ ಕಲಬಿಲಗಿ ಪೂರ್ವ ನಾಲೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(iii) **ಬಸವೇಶ್ವರ (ಕೆಂಪವಾಡ್) ಏತ ನೀರಾವರಿ ಯೋಜನೆ :** ಈ ಏತ ನೀರಾವರಿ ಯೋಜನೆಯನ್ನು, ಮಳೆಗಾಲದಲ್ಲಿ ಹಿಪ್ಪರಗಿ ಅಡ್ಡಗಟ್ಟೆಯ (ಬ್ಯಾರೇಜು) ಹಿನ್ನೀರಿನಿಂದ 4.00 ಟಿಎಂಸಿ ನೀರನ್ನು ಬಳಸಿಕೊಳ್ಳುವ ಮೂಲಕ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಅಡಿಯಲ್ಲಿ ಬರುವಂತಹ ಬರಪೀಡಿತ ಗ್ರಾಮಗಳ 27,462 ಹೆಕ್ಟೇರುಗಳಷ್ಟು ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವ ಸಲುವಾಗಿ ಪ್ರಸ್ತಾಪಿಸಲಾಗಿರುತ್ತದೆ. ಪ್ರಸ್ತುತ, ಟೆಂಡರನ್ನು ರೂ.1,363.48 ಕೋಟಿ ಮೊತ್ತಕ್ಕೆ ನೀಡಲಾಗಿರುತ್ತದೆ ಹಾಗೂ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

(iv) **ಶ್ರೀ ವೀರಭದ್ರೇಶ್ವರ ಏತ ನೀರಾವರಿ ಯೋಜನೆ :** ಈ ಏತ ನೀರಾವರಿ ಯೋಜನೆಯನ್ನು, ಬೇಸಿಗೆ ಮಳೆಯ ಪ್ರಾರಂಭದ ಸಮಯದಲ್ಲಿ (ಖಾರಿಫ್) 2.40 ಟಿಎಂಸಿ ನೀರನ್ನು ಬಳಸಿಕೊಳ್ಳುವ ಮೂಲಕ ರಾಮದುರ್ಗ ಮತ್ತು ಮುಧೋಳ ತಾಲ್ಲೂಕುಗಳ 17,377 ಹೆಕ್ಟೇರುಗಳಷ್ಟು ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವ ಹಾಗೂ 0.10 ಟಿಎಂಸಿ ನೀರನ್ನು ಬಳಸಿಕೊಳ್ಳುವ ಮೂಲಕ ಜಲಾನಯನ ಪ್ರದೇಶದ (ಕಮಾಂಡ್ ಏರಿಯ) 10 ಸಣ್ಣಪ್ರಮಾಣದ ಕೆರೆಗಳಿಗೆ ನೀರು ತುಂಬುವ ಸಲುವಾಗಿ ಪ್ರಸ್ತಾಪಿಸಲಾಗಿರುತ್ತದೆ. ಪ್ರಸ್ತುತ, ಟೆಂಡರನ್ನು ರೂ.544.48 ಕೋಟಿ ಮೊತ್ತಕ್ಕೆ ನೀಡಲಾಗಿರುತ್ತದೆ ಹಾಗೂ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

(v) **ಸಾಸಿವೆಹಳ್ಳಿ ಏತ ನೀರಾವರಿ ಯೋಜನೆ :** ಈ ಯೋಜನೆಯು ಶಿವಮೊಗ್ಗ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ 121 ಕೆರೆಗಳಿಗೆ ನೀರನ್ನು ತುಂಬುವ ಸಲುವಾಗಿ ಸಾಸಿವೆಹಳ್ಳಿ ಸಮೀಪ ತುಂಗಭದ್ರಾ ನದಿಯಿಂದ ನೀರನ್ನು ಎತ್ತುವ ಕಾಮಗಾರಿಯನ್ನು ಒಳಗೊಂಡಿರುತ್ತದೆ. ಈ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ ಹಾಗೂ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

(vi) **ಸೂಕ್ಷ್ಮ ನೀರಾವರಿ :** ಹಾವೇರಿ ಜಿಲ್ಲೆಯ 9,900 ಹೆಕ್ಟೇರುಗಳಲ್ಲಿ ಈಗಾಗಲೇ ಕಾರ್ಯಾರಂಭಗೊಂಡಿರುವಂತಹ ಹನಿ ನೀರಾವರಿಯೊಂದಿಗೆ (ಡ್ರಿಪ್ ಇರಿಗೇಷನ್) ಶಿಗ್ಗಾವಿ ಏತ ನೀರಾವರಿ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದನಂತರ ಅತಿಸಣ್ಣ ಪ್ರಮಾಣದ ನೀರಾವರಿ ಯೋಜನೆಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗೆತ್ತಿಕೊಳ್ಳುವಲ್ಲಿ ನಿಗಮವು ದೇಶದಲ್ಲಿಯೇ ಪ್ರಥಮ ಬಾರಿಗೆ ಪ್ರಾರಂಭಿಕ ಹೆಜ್ಜೆಯನ್ನು ಇಟ್ಟಿರುತ್ತದೆ, ಈ ಯೋಜನೆಯ ಅಡಿಯಲ್ಲಿ 3,600 ಹೆಕ್ಟೇರುಗಳನ್ನು ಹೆಚ್ಚುವರಿಯಾಗಿ ತರಲಾಯಿತು. ಹನಿ ನೀರಾವರಿಯ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಇತರೆ ಯೋಜನೆಗಳೆಂದರೆ ಸಿಂಗಟಲೂರು ಏತ ನೀರಾವರಿ ಯೋಜನೆ (87,793 ಹೆಕ್ಟೇರುಗಳು) ಮತ್ತು ಸವಣೂರು ಏತ ನೀರಾವರಿ ಯೋಜನೆ (15,500 ಹೆಕ್ಟೇರುಗಳು) ಇವೆರಡೂ ಸೇರಿದಲ್ಲಿ ಅತಿಸಣ್ಣ ಪ್ರಮಾಣದ ನೀರಾವರಿ ಪ್ರದೇಶದ ಒಟ್ಟಾರೆ 1,16,793 ಹೆಕ್ಟೇರುಗಳಷ್ಟು ಆಗುತ್ತವೆ.

4. **ತ್ವರಿತ ನೀರಾವರಿ ಪ್ರಯೋಜನ ಕಾರ್ಯಕ್ರಮದ ಅಡಿಯಲ್ಲಿ (ಎಐಬಿಪಿ) ಸಹಾಯಧನ:**

ಪ್ರಸಕ್ತ ಸಾಲಿನಲ್ಲಿ ಕಂಪನಿಯು ತ್ವರಿತ ನೀರಾವರಿ ಪ್ರಯೋಜನ ಕಾರ್ಯಕ್ರಮದ ಅಡಿಯಲ್ಲಿ (ಎಐಬಿಪಿ) ತುಂಗಾ ಮೇಲ್ದಂಡೆ ಯೋಜನೆ ಮತ್ತು ಕರಂಜಾ ಯೋಜನೆಗಳಿಗಾಗಿ ರೂ.90.66 ಕೋಟಿ ಮೊತ್ತವನ್ನು ಕೇಂದ್ರ ಸರ್ಕಾರದ ಸಹಾಯಧನವನ್ನಾಗಿ ಸ್ವೀಕರಿಸಿರುವುದು.

5. **ಕರ್ನಾಟಕ ಸಮಗ್ರತೆಯಿಂದ ಕೂಡಿದಂತಹ ಮತ್ತು ಊರ್ಜಿತಗೊಳ್ಳಬಲ್ಲಂತಹ ಜಲ ಸಂಪನ್ಮೂಲಗಳ ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಎಸ್‌ಡಬ್ಲ್ಯುಆರ್‌ಎಂಐಪಿ):**

ಕಂಪನಿಯು, ಏಳು ವರ್ಷಗಳ ಅವಧಿಯಲ್ಲಿ ಅಂದರೆ 2014–2020ರ ಅವಧಿಯಲ್ಲಿ 150 ಮಿಲಿಯನ್ ಡಾಲರುಗಳಷ್ಟು (ರೂ.750 ಕೋಟಿ) ಒಂದು ವಿವಿಧ–ಭಾಗಗಳ ಹಣಕಾಸು ಸಹಾಯದ ಅನುಕೂಲತೆಯನ್ನು ಪಡೆಯುವ ಸಲುವಾಗಿ ಏಷಿಯನ್ ಡೆವೆಲಪ್‌ಮೆಂಟ್ ಬ್ಯಾಂಕಿನಿಂದ (ಎಡಿಬಿ) ಅನುಮೋದನೆಯನ್ನು ಹಾಗೂ ಕೇಂದ್ರ ಸರ್ಕಾರದಿಂದ ಅನುಮತಿಯನ್ನು ಸ್ವೀಕರಿಸಿತು. ಏಷಿಯನ್ ಡೆವೆಲಪ್‌ಮೆಂಟ್ ಬ್ಯಾಂಕಿನ ಸಹಾಯಧನದೊಂದಿಗಿನ ಕರ್ನಾಟಕ ಸಮಗ್ರತೆಯಿಂದ ಕೂಡಿದ ಮತ್ತು ಊರ್ಜಿತಗೊಳ್ಳಬಲ್ಲಂತಹ ಜಲ ಸಂಪನ್ಮೂಲಗಳ ನಿರ್ವಹಣಾ ಹೂಡಿಕೆ ಕಾರ್ಯಕ್ರಮವು (ಕೆಐಎಸ್‌ಡಬ್ಲ್ಯುಆರ್‌ಎಂಐಪಿ) ಪ್ರಗತಿಯಲ್ಲಿರುವುದು. ಪ್ರಪ್ರಥಮ ಕರ್ನಾಟಕ ಸಮಗ್ರತೆಯಿಂದ ಕೂಡಿದ ಮತ್ತು ಊರ್ಜಿತಗೊಳ್ಳಬಲ್ಲಂತಹ ಜಲ ಸಂಪನ್ಮೂಲಗಳ ನಿರ್ವಹಣಾ ಹೂಡಿಕೆ ಕಾರ್ಯಕ್ರಮಕ್ಕಾಗಿ (ಕೆಐಎಸ್‌ಡಬ್ಲ್ಯುಆರ್‌ಎಂಐಪಿ) ಸಾಲ ಪತ್ರ/ಒಡಂಬಡಿಕೆಗೆ ಸಹಿ ಹಾಕುವ ಕಾರ್ಯಕ್ರಮವು 7 ಜುಲೈ 2015ರಂದು ನಡೆಯಿತು ಹಾಗೂ ಇದು 13 ಜುಲೈ 2015ರಿಂದ ಜಾರಿಗೆ ಬರುವುದಾಗಿ ಘೋಷಿಸಲಾಯಿತು. ಈ ಸಹಾಯಧನದ ಮೊದಲ ಭಾಗವಾಗಿ ರೂ.48 ಮಿಲಿಯನ್ ಡಾಲರುಗಳನ್ನು (ರೂ.240 ಕೋಟಿ) 2014–18ರ ಅವಧಿಯಲ್ಲಿ ಗೊಂಡಿ ಯೋಜನೆ, ತುಂಗಭದ್ರಾ ಉಪ–ಕಣಿವೆಯಲ್ಲಿನ ಆಯ್ದ ಯೋಜನೆಗಳ ಭಾಗ (ಕೆ–8), ನದಿ ಕಣಿವೆ, ಪೂರ್ವಭಾವಿಯಾಗಿ ಯೋಜಿಸುವುದು ಮತ್ತು ಸಾಮರ್ಥ್ಯ ನಿರ್ಮಾಣ ಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳಲಾಗುವುದು. ಪ್ರಸ್ತುತ, ಕರ್ನಾಟಕ

ಸಮಗ್ರತೆಯಿಂದ ಕೂಡಿದ ಮತ್ತು ಊರ್ಜಿತಗೊಳ್ಳಬಲ್ಲಂತಹ ಜಲ ಸಂಪನ್ಮೂಲಗಳ ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಎಸ್‌ಡಬ್ಲ್ಯುಆರ್‌ಎಂಐಪಿ) ಯೋಜನೆ–1ರ ಎಲ್ಲಾ ಚಟುವಟಿಕೆಗಳು ಪ್ರಗತಿಯಲ್ಲಿರುತ್ತವೆ. ಯೋಜನೆ – 1 ಸೆಪ್ಟಂಬರ್ 2018ರಲ್ಲಿ ಮುಕ್ತಾಯಗೊಂಡಿರುತ್ತದೆ (ಯೋಜನೆ ಮುಕ್ತಾಯಗೊಳ್ಳುವುದು). ಮುಂದುವರೆದು, ಕರ್ನಾಟಕ ಸಮಗ್ರತೆಯಿಂದ ಕೂಡಿದ ಮತ್ತು ಊರ್ಜಿತಗೊಳ್ಳಬಲ್ಲಂತಹ ಜಲ ಸಂಪನ್ಮೂಲಗಳ ನಿರ್ವಹಣಾ ಹೂಡಿಕೆ ಕಾರ್ಯಕ್ರಮದ (ಕೆಐಎಸ್‌ಡಬ್ಲ್ಯುಆರ್‌ಎಂಐಪಿ) ಭಾಗ – 2ರ ಅಡಿಯಲ್ಲಿ ವಿಜಯನಗರ ನಾಲೆಗಳ ನವೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಕ್ರಮವನ್ನು ಕೈಗೊಳ್ಳಲಾಗಿರುವುದು.

6. **ಹೊಸ ಯೋಜನೆಗಳು :** ಈ ಕೆಳಗಿನ ಹೊಸ ಯೋಜನೆಗಳಿಗೆ ಸರ್ಕಾರವು ನೀರಾವರಿ ಅನುಕೂಲತೆಯ ಕೃಷಿಗಾಗಿ ಮತ್ತು ರಾಜ್ಯದ ಬರಪೀಡಿತ ಪ್ರದೇಶಗಳಲ್ಲಿ ಕೆರೆಗಳಿಗೆ ನೀರು ತುಂಬುವ ಕಾರ್ಯಕ್ಕೆ ಒಂದು ತ್ವರಿತ ಚಾಲನೆಯನ್ನು ನೀಡಿದಂತೆ 2017–18ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುವುದು:

(i) **ಮಲಪ್ರಭಾ ಇಆರ್‌ಎಂ :** ಮಲಪ್ರಭಾ ಪ್ರಧಾನ ನಾಲೆ ಹಾಗೂ ವಿತರಣಾ ನಾಲೆಗಳನ್ನು 35 ವರ್ಷಗಳ ಹಿಂದೆ ನಿರ್ಮಾಣ ಮಾಡಲಾಗಿದ್ದು ಹಾಗೂ ಕಾಲವು ಕಳೆದಂತೆ ನಾಲೆಗಳ ಚಾಚುಗಳು ಜೀರ್ಣಾವಸ್ಥೆಗೆ ಬಂದಿರುತ್ತವೆ/ಶಿಥಿಲಗೊಂಡಿರುತ್ತವೆ. ಇದರಿಂದಾಗಿ ನಾಲೆಗಳ ತುಟ್ಟತುದಿಯವರೆಗೂ ನೀರನ್ನು ಸಾಗಿಸುವುದು ಕಾಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ, ಮಲಪ್ರಭಾ ನಾಲೆ ಹಾಗೂ ಅದರ ವಿತರಣಾ ನಾಲೆಗಳ ನವೀಕರಣ ಕಾಮಗಾರಿಗಳನ್ನು ರೂ.1,120 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(ii) **ರಾಯಭಾಗ ಕೆರೆಗಳಿಗೆ ನೀರು ತುಂಬುವ ಯೋಜನೆ :** ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ 10 ಗ್ರಾಮಗಳ 17 ಕೆರೆಗಳು ಹಾಗೂ 22 ಹೆಚ್ಚುವರಿ ಕೆರೆಗಳಿಗೆ, ಈ ರೀತಿಯಾಗಿ ಒಟ್ಟಾರೆ 39 ಕೆರೆಗಳಿಗೆ ಕೃಷ್ಣಾ ನದಿಯಿಂದ ನೀರನ್ನು ತುಂಬುವ ಪ್ರಸ್ತಾವನೆಯನ್ನು ಮಾಡಲಾಯಿತು. ಈ ಕೆರೆಗಳಿಗೆ ಒಳಹರಿವಿನಲ್ಲಿನ ಕೊರತೆಯ ಕಾರಣ, ಕೆರೆಗಳು ಅವುಗಳ ಸಂಪೂರ್ಣ ಸಾಮರ್ಥ್ಯಗಳಿಗೆ ತಕ್ಕಂತೆ ತುಂಬಿಕೊಳ್ಳಲಿಲ್ಲ, ಇದರಿಂದಾಗಿ ಕುಡಿಯುವ ನೀರಿಗಾಗಿ ಕೆರೆಗಳ ಮೇಲೆ ಅವಲಂಭಿತವಾಗಿದ್ದ ಜನತೆ ಹಾಗೂ ಪ್ರಾಣಿಗಳು ತೊಂದರೆಗೆ ಈಡಾಗುವಂತಾಯಿತು. ಆದ್ದರಿಂದ, ಕೃಷ್ಣಾ ನದಿಯಿಂದ ನೀರನ್ನು ಎತ್ತುವ ಮೂಲಕ ಈ ಕೆರೆಗಳಿಗೆ, ಅವುಗಳ ಸಾಮರ್ಥ್ಯದ ಶೇಕಡಾ 50ರಷ್ಟರ ಮಟ್ಟಿಗೆ ನೀರನ್ನು ತುಂಬುವ ಪ್ರಸ್ತಾವನೆಯನ್ನು ಮಾಡಲಾಯಿತು, ಇದರಿಂದಾಗಿ, ಜನತೆಗೆ ಹಾಗೂ ಪ್ರಾಣಿಗಳಿಗೆ ನೀರನ್ನು ಒದಗಿಸುವ ಉದ್ದೇಶವನ್ನು ಈಡೇರಿಸಿಕೊಳ್ಳಬಹುದಲ್ಲದೆಯೇ ಅಂತರ್ಜಲದ ಮಟ್ಟವನ್ನು ಉತ್ತಮಗೊಳಿಸಬಹುದು. ಈ ಕಾಮಗಾರಿಗಾಗಿ ಸವಿವರ ಯೋಜನಾ ವರದಿಗೆ ರೂ.91.40 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಯಿತು ಹಾಗೂ ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(iii) **ಕುಡಚಿ ಕೆರೆಗೆ ನೀರನ್ನು ತುಂಬುವ ಯೋಜನೆ :** ಬೆಳಗಾವಿ ಜಿಲ್ಲೆಯ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಕುಡಚಿ ವಿಧಾನಸಭಾ ಕ್ಷೇತ್ರದಲ್ಲಿ ಬರುವಂತಹ ಬಸ್ತವಾಡ, ಕಣದಾಳ್, ಕಡಕಬಾವಿ, ದೇವಪುರಹಟ್ಟಿ, ನಿಡಗುಂದಿ ಹಾಗೂ ಸವಸುದ್ದಿ, ಮೊರಬ, ನಿಲಜಿ, ಸುತ್ತತ್ತಿ ಮತ್ತು ಹಾರೋಗೇರಿ ಗ್ರಾಮಗಳಲ್ಲಿನ 19 ಕೆರೆಗಳಿಗೆ ಕೃಷ್ಣಾ ನದಿಯಿಂದ ನೀರನ್ನು ತುಂಬುವ ಕಾಮಗಾರಿಗೆ ಪ್ರಸ್ತಾವನೆಯನ್ನು ಮಾಡಲಾಯಿತು. ಈ ಕಾಮಗಾರಿಗಾಗಿ ಸವಿವರ ಯೋಜನಾ ವರದಿಗೆ ರೂ.34.382 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಯಿತು ಹಾಗೂ ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(iv) **ಕುಲಹಳ್ಳಿ ಏತ ನೀರಾವರಿ ಯೋಜನೆ :** ಜಮಖಂಡಿ ಶಾಖಾ ನಾಲೆಯು ಘಟಪ್ರಭಾ ಎಡದಂಡೆ ನಾಲೆಯ ಕಿಮೀ 70ರಲ್ಲಿ ಪ್ರಾರಂಭಗೊಳ್ಳುತ್ತದೆ. ಕೃಷ್ಣಾ ನದಿಯಿಂದ 0.88 ಟಿಎಂಸಿ ನೀರನ್ನು ಎತ್ತುವ ಮೂಲಕ ಜಮಖಂಡಿ ಶಾಖಾ ನಾಲೆಯ ಚೈನೇಜು 20+650ರ ಕೆಳಹರಿವಿನ ಅಡಿಯಲ್ಲಿ (ಮೈಗೂರು ಚೌಕಿ) ಬರುವಂತಹ 9,163.63 ಹೆಕ್ಟೇರುಗಳಷ್ಟು ತೊಂದರೆಗೆ ಈಡಾಗಿದ್ದ ಅಚ್ಚುಕಟ್ಟು ಪ್ರದೇಶವನ್ನು ಹಾಗೂ ಜಮಖಂಡಿ ತಾಲ್ಲೂಕಿನ ಸುತ್ತಮುತ್ತಲನೀರಿನ ಕೊರತೆಯಿಂದ ತೊಂದರೆಗೆ ಈಡಾಗಿದ್ದ ಗ್ರಾಮಗಳ ಭದ್ರತೆಗೊಳಿಸುವ ಉದ್ದೇಶದಿಂದ ಕುಲಹಳ್ಳಿ – ಹುನ್ನೂರು ಏತ ನೀರಾವರಿ ಯೋಜನೆಯನ್ನು ಪ್ರಸ್ತಾಪಿಸಲಾಯಿತು. ಪ್ರಸ್ತುತ, ಈ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(v) **ಗೊಡ್ಡಿನಮಲ್ಕಿ ಏತ ನೀರಾವರಿ ಯೋಜನೆ :** ಗೊಡ್ಡಿನಮಲ್ಕಿ ಏತ ನೀರಾವರಿ ಯೋಜನೆಯ ಅಡಿಯಲ್ಲಿ ಘಟಪ್ರಭಾ ನದಿಯಿಂದ 0.191 ಟಿಎಂಸಿ ನೀರನ್ನು ಎತ್ತುವ ಮೂಲಕ ಹಂತ–1ರಲ್ಲಿ 1,031.51 ಹೆಕ್ಟೇರುಗಳಷ್ಟು ಹಾಗೂ ಹಂತ–2ರಲ್ಲಿ ಮಾರ್ಕಾಂಡೇಯ ನದಿಯಿಂದ 0.280 ಟಿಎಂಸಿ ನೀರನ್ನು ಎತ್ತುವ ಮೂಲಕ 1,537.91 ಹೆಕ್ಟೇರುಗಳಷ್ಟು, ಈ ರೀತಿಯಾಗಿ ಗೋಕಾಕ ತಾಲ್ಲೂಕಿನ 12 ಗ್ರಾಮಗಳ 2,569.42 ಹೆಕ್ಟೇರುಗಳಷ್ಟು ಪ್ರದೇಶಕ್ಕೆ ನೀರಾವರಿ ಅನುಕೂಲತೆಯನ್ನು ಒದಗಿಸುವುದನ್ನು ಪ್ರಸ್ತಾಪಿಸಲಾಗಿದ್ದಿತು. ಪ್ರಸ್ತುತ, ಈ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(vi) **ಗಲಗಲಿ ಅಡ್ಡಗಟ್ಟೆಯನ್ನು ಬಲಪಡಿಸುವಿಕೆ ಮತ್ತು ಎತ್ತರವನ್ನು ಹೆಚ್ಚಳಗೊಳಿಸುವಿಕೆ :** ಗಲಗಲಿ ಸೇತುವೆ ಸಹಿತ ಅಡ್ಡಗಟ್ಟೆಯನ್ನು ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಗಲಗಲಿ ಮತ್ತು ಚಿಕ್ಕ ಗಲಗಲಿ ಗ್ರಾಮಗಳ ನಡುವೆ ಕೃಷ್ಣಾ ನದಿಗೆ ಅಡ್ಡಲಾಗಿ 1973ರಲ್ಲಿ ನಿರ್ಮಾಣ ಮಾಡಲಾಗಿದೆ. ಅಡ್ಡಗಟ್ಟೆಯ ಸಂಗ್ರಹಣಾ ಸಾಮರ್ಥ್ಯವು 0.569 ಟಿಎಂಸಿ ಆಗಿರುತ್ತದೆ. ನದಿಯ ಎರಡೂ ದಂಡೆಗಳ ಮೇಲೆ ಇದ್ದಂತಹ 7,448 ಎಕರೆಗಳಷ್ಟು ಪ್ರದೇಶಕ್ಕೆ ನೀರಾವರಿ ಅನುಕೂಲತೆಗಳನ್ನು ನೀಡುವ ಹಾಗೂ ಅಲ್ಲದೆಯೇ ಕೆರೆಯ ಎರಡೂ ದಂಡೆಗಳ ಮೇಲೆ ಇದ್ದಂತಹ 20 ಗ್ರಾಮಗಳಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಗತ್ಯತೆಯನ್ನು ಪೂರೈಸುವ ಉದ್ದೇಶದಿಂದ ಅಡ್ಡಗಟ್ಟೆಯ ನಿರ್ಮಾಣವನ್ನು ಯೋಜಿಸಲಾಗಿದ್ದಿತು. ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿನ ಗ್ರಾಮಗಳ ಕುಡಿಯುವ ನೀರಿನ ಅಗತ್ಯತೆಯನ್ನು ಪೂರೈಸುವ ಸಲುವಾಗಿ, ಪ್ರಸಕ್ತ ಇರುವಂತಹ ಅಡ್ಡಗಡೆಯನ್ನು ಬಲಪಡಿಸಬೇಕು ಹಾಗೂ ಸಂಗ್ರಹಣಾ ಸಾಮರ್ಥ್ಯವನ್ನು 0.569 ಟಿಎಂಸಿಯಿಂದ 1.244 ಟಿಎಂಸಿಗೆ ಹೆಚ್ಚಳಗೊಳಿಸಬೇಕು. ಪ್ರಸ್ತುತ, ಕಾಮಗಾರಿಗಳಿಗಾಗಿ ಟೆಂಡರು ಪ್ರಕ್ರಿಯೆಯು ಪ್ರಗತಿಯಲ್ಲಿರುವುದು.

(vii) **ಸಾಲಾಪುರ ಏತ ನೀರಾವರಿ ಯೋಜನೆ :** ಸಾಲಾಪುರ ಏತ ನೀರಾವರಿ ಯೋಜನೆಯ ಅಡಿಯಲ್ಲಿ ರಾಮೇಶ್ವರ ಮತ್ತು ವೀರಭದ್ರೇಶ್ವರ ಏತ ನೀರಾವರಿ ಯೋಜನೆಗಳೆರಡರಿಂದಲೂ ನೀರಾವರಿಯಿಂದ ವಂಚನೆಗೊಳಗಾದ ಭೂಮಿಗೆ ನೀರಾವರಿಯ ಅನುಕೂಲತೆಯನ್ನು ಒದಗಿಸುವ ಸಲುವಾಗಿ ಪ್ರಸ್ತಾವನೆಯನ್ನು ಮಾಡಲಾಗಿದ್ದಿತು. ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಚಿಕ್ಕೂರು ತಾಂಡಾ ಬಳಿ ಘಟಪ್ರಭಾ ನದಿಯಿಂದ ನೀರನ್ನು ಎತ್ತುವ ಹಾಗೂ ರಾಮದುರ್ಗಾ ತಾಲ್ಲೂಕಿನ 19 ಗ್ರಾಮಗಳ 10,878, ಬದಾಮಿ ತಾಲ್ಲೂಕಿನ 6 ಗ್ರಾಮಗಳ 1,832 ಹೆಕ್ಟೇರುಗಳಷ್ಟು ಪ್ರದೇಶಕ್ಕೆ ಹಾಗೂ ಮುಧೋಳ ತಾಲ್ಲೂಕಿನ 2 ಗ್ರಾಮಗಳ 290 ಹೆಕ್ಟೇರುಗಳಷ್ಟು ಪ್ರದೇಶಕ್ಕೆ, ಈ ರೀತಿಯಾಗಿ ಒಟ್ಟಾರೆ 13,000 ಹೆಕ್ಟೇರುಗಳಿಗೆ ನೀರಾವರಿ ಅನುಕೂಲತೆಯನ್ನು ಒದಗಿಸುವ ಪ್ರಸ್ತಾವನೆಯನ್ನು ಮಾಡಲಾಯಿತು. ಕಾಮಗಾರಿಯನ್ನು ಹಂತಾನುಹಂತವಾಗಿ ಕೈಗೆತ್ತಿಕೊಳ್ಳಬೇಕೆಂಬ ಷರತ್ತಿನೊಂದಿಗೆ ಮೊದಲ ಹಂತಕ್ಕೆ ರೂ.327 ಕೋಟಿ ಅಂದಾಜು ಮೊತ್ತಕ್ಕೆ ಹಾಗೂ ಎರಡನೆಯ ಹಂತಕ್ಕೆ ರೂ.239 ಕೋಟಿ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಯಿತು. ಪ್ರಸ್ತುತ ಮೊದಲ ಹಂತಕ್ಕೆ ಟೆಂಡರು ಪ್ರಕ್ರಿಯೆಯು ಪ್ರಗತಿಯಲ್ಲಿರುವುದು.

(viii) **ಕಿತ್ತೂರು ಕೆರೆಗೆ ನೀರನ್ನು ತುಂಬುವ ಯೋಜನೆ :** ಈ ಯೋಜನೆಯ ಅಡಿಯಲ್ಲಿ, ಕಿತ್ತೂರು ಮತ್ತು ಬೈಲಹೊಂಗಲ ವಿಧಾನಸಭಾ ಕ್ಷೇತ್ರಗಳ 64 ಕೆರೆಗಳಿಗೆ ನೀರನ್ನು ತುಂಬುವ ಪ್ರಸ್ತಾವನೆಯನ್ನು ಮಾಡಲಾಗಿದೆ. ವರ್ಷಗಳು ಕಳೆದಂತೆ, ಈ ಕೆರೆಗಳಿಗೆ ನೀರಿನ ಒಳಹರಿವು ಇಳಿಮುಖಗೊಂಡ ಕಾರಣ, ಈ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ತೀವ್ರಸ್ವರೂಪದ ಒತ್ತಾಯವಿದೆ. ಈ ದೃಷ್ಟಿಯಿಂದ, ಈ ಕೆರೆಗಳ ಸಂಗ್ರಹಣಾ ಸಾಮರ್ಥ್ಯದ ಶೇಕಡಾ 50ರಷ್ಟು ನೀರನ್ನು ತುಂಬಿಸುವ ಮೂಲಕ ಹಾಗೂ ಈ ಪ್ರದೇಶದಲ್ಲಿನ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಉದ್ದೇಶದಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಪ್ರಸ್ತುತ ಟೆಂಡರು ಪ್ರಕ್ರಿಯೆಯು ಪ್ರಗತಿಯಲ್ಲಿರುವುದು.

(ix) **ಬೆಳಗಾವಿ ತಾಲ್ಲೂಕಿನ ಸಿದ್ಧನಭಾವಿ, ಬೆಂಡಗೇರಿ ಮತ್ತು ಮುತ್ನಾಳ ಗ್ರಾಮಗಳ ಕೆರೆಗಳಿಗೆ ನೀರನ್ನು ತುಂಬುವುದು :** ಈ ಯೋಜನೆಯ ಅಡಿಯಲ್ಲಿ, ಬೆಳಗಾವಿ ತಾಲ್ಲೂಕಿನ ಸಿದ್ಧನಭಾವಿ, ಬೆಂಡಗೇರಿ ಮತ್ತು ಮುತ್ನಾಳ ಗ್ರಾಮಗಳ ಕೆರೆಗಳಿಗೆ ನೀರನ್ನು ತುಂಬುವ ಸಲುವಾಗಿ ಪರಿಷದ್ವಾಡ ಗ್ರಾಮದ ಸಮೀಪ ಮಲಪ್ರಭಾ ನದಿಯಿಂದ 0.0285 ಟಿಎಂಸಿ ನೀರನ್ನು ಎತ್ತುವ ಪ್ರಸ್ತಾವನೆಯನ್ನು ಮಾಡಲಾಯಿತು. ಈ ಯೋಜನೆಗೆ ರೂ.12.57 ಕೋಟಿ ಮೊತ್ತಕ್ಕೆ ಮಾರ್ಚ್ 2017ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಯಿತು. ಪ್ರಸ್ತುತ ಟೆಂಡರು ಪ್ರಕ್ರಿಯೆಯು ಪ್ರಗತಿಯಲ್ಲಿರುವುದು.

(x) **ತುಪರಿಹಳ್ಳ ಕೆರೆಗೆ ನೀರನ್ನು ತುಂಬುವ ಯೋಜನೆ :** ಈ ಯೋಜನೆಯ ಅಡಿಯಲ್ಲಿ, ತುಪರಿಹಳ್ಳದಿಂದ ಧಾರವಾಡ ತಾಲ್ಲೂಕಿನ ತಡಕೋಟ, ಭೋಕ್ಯಾಪುರ, ಗರಗ, ಹಳೆತೇಗೂರು, ಬೋಗೂರು ಮತ್ತು ನೀರಲಕಟ್ಟಿ ಗ್ರಾಮಗಳ ಸಣ್ಣ ಪ್ರಮಾಣದ ನೀರಾವರಿ ಕೆರೆಗಳಿಗೆ ನೀರನ್ನು ತುಂಬುವ ಪ್ರಸ್ತಾವನೆಯನ್ನು ಮಾಡಲಾಯಿತು. ಪೋಲಾವರಂ ಯೋಜನೆಯ ಅಡಿಯಲ್ಲಿ ಗೋದಾವರಿ ನೀರನ್ನು ಕೃಷ್ಣಾ ಕಣಿವೆಗೆ ಮಾರ್ಗಾಂತರಣ ಮಾಡುವುದು ಹಾಗೂ 9 ಕೆರೆಗಳಿಗೆ ನೀರನ್ನು ತುಂಬುವ ಸಲುವಾಗಿ ಹಂಚಿಕೆ ಮಾಡಲಾಗಿರುವ 1.00 ಟಿಎಂಸಿ ನೀರಿನ ಪೈಕಿ 0.164 ಟಿಎಂಸಿ ನೀರನ್ನು ಬಳಸುವುದನ್ನು ಈ ಯೋಜನೆಯು ಉದ್ದೇಶವನ್ನು ಹೊಂದಿರುವುದು, ಈ ಕಾಮಗಾರಿಗಾಗಿ ಮಾರ್ಚ್ 2017ರಲ್ಲಿ ರೂ.22.50 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುವುದು. ಪ್ರಸ್ತುತ ಟೆಂಡರು ಪ್ರಕ್ರಿಯೆಯು ಪೂರ್ಣಗೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುವವು.

(xi) **ಹಳಿಯಾಳ ಕೆರೆಗೆ ನೀರು ತುಂಬುವ ಯೋಜನೆ :** ಈ ಯೋಜನೆಯ ಅಡಿಯಲ್ಲಿ, ಕಾಳಿ ನದಿಯಿಂದ 0.812 ಟಿಎಂಸಿ ನೀರನ್ನು ಎತ್ತುವ ಮೂಲಕ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ 46 ಕೆರೆಗಳಿಗೆ ಮತ್ತು 19 ಅಡ್ಡಗಟ್ಟೆಗಳಿಗೆ ನೀರನ್ನು ತುಂಬುವುದನ್ನು ಚಿಂತಿಸಲಾಗಿದೆ. ಬೇಸಿಗೆಯಲ್ಲಿ ರೈತರುಗಳಿಗೆ ನೀರಾವರಿ ಅನುಕೂಲತೆಯನ್ನು ಒದಗಿಸುವುದು ಮತ್ತು

ಜನವರಿಯಿಂದ ಜೂನ್ ತಿಂಗಳುಗಳಲ್ಲಿ ಜನತೆಗೆ ಮತ್ತು ದನಕರುಗಳಿಗೆ ಕುಡಿಯುವ ನೀರನ್ನು ಒದಗಿಸುವುದು ಹಾಗೂ ಅಂತರ್ಜಲದ ಮಟ್ಟವನ್ನು ಉತ್ತಮಗೊಳಿಸುವ ಉದ್ದೇಶವನ್ನು ಹೊಂದಲಾಗಿರುವುದು. ರೂ.220 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುವವು.

(xii) **ಬೇಡ್ತಿ ಕೆರೆಗೆ ನೀರು ತುಂಬುವ ಯೋಜನೆ :** ಈ ಯೋಜನೆಯ ಅಡಿಯಲ್ಲಿ, ಬೆಳವಂತರ ಗ್ರಾಮದ ಬಳಿ ಬೇಡ್ತಿ ನದಿಗೆ ಅಡ್ಡಲಾಗಿ ಒಂದು ಅಡ್ಡಗಟ್ಟೆಯ ನಿರ್ಮಾಣವನ್ನು ಹಾಗೂ ಧಾರವಾಡ ಜಿಲ್ಲೆಯ ಕಲಘಟಗಿಯ 35 ಕೆರೆಗಳಿಗೆ ಅವುಗಳ ಪೂರ್ಣ ಸಾಮರ್ಥ್ಯದ ಶೇಕಡಾ 50ರಷ್ಟು ನೀರನ್ನು ತುಂಬುವ ಸಲುವಾಗಿ 0.449 ಟಿಎಂಸಿ ನೀರನ್ನು ಎತ್ತುವ ಪ್ರಸ್ತಾಪಿಸಲಾಯಿತು. ಕೆರೆಗಳ ಸುತ್ತಮುತ್ತಲ ಪ್ರದೇಶದ ಜನತೆಗೆ ಮತ್ತು ದನಕರುಗಳಿಗೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ನೀರಾವರಿಯ ಅನುಕೂಲತೆಯನ್ನು ಒದಗಿಸುವುದು, ಅಂತರ್ಜಲದ ಮಟ್ಟವನ್ನು ಉತ್ತಮಪಡಿಸುವುದನ್ನು ಹಾಗೂ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವುದನ್ನು ಅದು ಉದ್ದೇಶಿಸಿದೆ.

(xiii) **ರಾಣೆಬೆನ್ನೂರು ದೊಡ್ಡಕೆರೆ ಮತ್ತು ಅದರ ಸುತ್ತಮುತ್ತಲು ಇರುವಂತಹ ಮತ್ತಿತರ 3 ಕೆರೆಗಳಿಗೆ ನೀರನ್ನು ತುಂಬುವುದು:** ಈ ಯೋಜನೆಯ ಅಡಿಯಲ್ಲಿ ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ದೊಡ್ಡಕೆರೆ ಮತ್ತು ಅದರ ಸುತ್ತಮುತ್ತಲು ಇರುವಂತಹ ಮತ್ತಿತರ 3 ಕೆರೆಗಳಿಗೆ ನೀರನ್ನು ತುಂಬುವುದನ್ನು ಉದ್ದೇಶಿಸಲಾಗಿದೆ. ಮಳೆಯ ಅಭಾವದ ಕಾರಣ ಕೆರೆಗಳ ನೀರಿನ ಮಟ್ಟವು ನಿರೀಕ್ಷಿತ ಪ್ರಮಾಣದಲ್ಲಿರಲಿಲ್ಲ ಹಾಗೂ ಇದರಿಂದಾಗಿ ಜನತೆಗೆ ಮತ್ತು ದನಕರುಗಳಿಗೆ ನೀರಿನ ಕೊರತೆಯು ಉದ್ಭವಿಸಿತ್ತು. ಆದ್ದರಿಂದ, ಈ ಕೆರೆಗಳಿಗೆ, ಅವುಗಳ ಸಂಪೂರ್ಣ ಸಂಗ್ರಹಣಾ ಸಾಮರ್ಥ್ಯದ ಶೇಕಡಾ 50ರಷ್ಟರ ಮಟ್ಟಿಗೆ ನೀರನ್ನು ತುಂಬುವ ಹಾಗೂ ಅದರಿಂದಾಗಿ ನೀರಿನ ಕೊರತೆಯನ್ನು ನೀಗಿಸುವ ಹಾಗೂ ಅಂತರ್ಜಲದ ಮಟ್ಟವನ್ನು ಉತ್ತಮಗೊಳಿಸುವ ಪ್ರಸ್ತಾವನೆಯನ್ನು ಮಾಡಲಾಗಿದೆ. ಸರ್ಕಾರವು ಯೋಜನೆಯ ಸವಿವರ ಯೋಜನಾ ವರದಿಗೆ 31.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು ಹಾಗೂ ಈ ನಿಟ್ಟಿನಲ್ಲಿ ಕಾಮಗಾರಿಯು ಪ್ರಸ್ತುತ ಪ್ರಗತಿಯಲ್ಲಿರುವವು.

(xiv) **ಹರಪನಹಳ್ಳಿ ಕೆರೆಗೆ ನೀರು ತುಂಬುವ ಯೋಜನೆ :** ಈ ಯೋಜನೆಯ ಅಡಿಯಲ್ಲಿ ಬರಪೀಡಿತ ಹರಪನಹಳ್ಳಿ ತಾಲ್ಲೂಕಿನ 50 ಕೆರೆಗಳಿಗೆ ನೀರನ್ನು ತುಂಬುವ ಸಲುವಾಗಿ ಚಿಕ್ಕಬಿದರೆ ಗ್ರಾಮದ ಸಮೀಪ ತುಂಗಭದ್ರಾ ನದಿಯಿಂದ ನೀರನ್ನು ಎತ್ತುವುದನ್ನು ಚಿಂತಿಸಲಾಯಿತು. ಸರ್ಕಾರವು ರೂ.227.00 ಕೋಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುವವು.

(xv) **ದುರ್ಗಾದೇವಿ ಮತ್ತು ಬಹುಗ್ರಾಮದ ಕೆರೆಗೆ ನೀರನ್ನು ತುಂಬುವ ಯೋಜನೆ :** ಹಿರೇಕೆರೂರು ತಾಲ್ಲೂಕಿನ ತಿಪ್ಪಾಯಿಕೊಪ್ಪ ಗ್ರಾಮದಲ್ಲಿ ಒಂದು ಜಾಕ್‌ವೆಲ್ ಮತ್ತು ಪಂಪುಹೌಸ್ ನಿರ್ಮಾಣ ಮಾಡುವ ಮೂಲಕ ಕುಮುದ್ವತಿ ನದಿಯಿಂದ 0.067 ಟಿಎಂಸಿ ನೀರನ್ನು ಎತ್ತುವ ಮೂಲಕ ದುರ್ಗಾದೇವಿ ಮತ್ತು ಹಿರೇಕೆರೂರು ಪಟ್ಟಣಕ್ಕೆ ಹೊಂದಿಕೊಂಡಂತಿರುವ ಕೆರೆಗಳಿಗೆ ಅವುಗಳ ಸಂಪೂರ್ಣ ಸಾಮರ್ಥ್ಯದ ಶೇಕಡಾ 50ರಷ್ಟರ ಮಟ್ಟಿಗೆ ನೀರು ತುಂಬುವುದನ್ನು ಈ ಯೋಜನೆಯ ಗುರಿಯಾಗಿದೆ. ಸರ್ಕಾರವು ಸವಿವರ ಯೋಜನಾ ವರದಿಗೆ ರೂ.140.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು ಹಾಗೂ ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(xvi) **ಮಡ್ಲೂರು ಕೆರೆಗೆ ನೀರನ್ನು ತುಂಬುವ ಯೋಜನೆ :** ಹಾನಗಲ್ ತಾಲ್ಲೂಕಿನ ತಿಲುವಳ್ಳಿ ಗ್ರಾಮದ ಸಮೀಪ ಹೊನ್ನನ ಅಡ್ಡಗಟ್ಟೆಯ ಮೇಲ್ಭಾಗದಲ್ಲಿ ಒಂದು ಜಾಕ್‌ವೆಲ್ ಮತ್ತು ಪಂಪುಹೌಸನ್ನು ನಿರ್ಮಿಸುವ ಮೂಲಕ ವರದಾ ನದಿಯಿಂದ ನೀರನ್ನು ಎತ್ತುವ ಮೂಲಕ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ 13 ಕೆರೆಗಳಿಗೆ ಮತ್ತು ಬ್ಯಾಡಗಿ ತಾಲ್ಲೂಕಿನ 2 ಕೆರೆಗಳಿಗೆ ನೀರನ್ನು ತುಂಬುವುದನ್ನು ಈ ಯೋಜನೆಯು ಚಿಂತಿಸಿರುತ್ತದೆ. ಪ್ರಸ್ತುತ ಟೆಂಡರು ಪ್ರಕ್ರಿಯೆಯು ಪ್ರಗತಿಯಲ್ಲಿರುವುದು.

(xvii) **ಅಸುಂಡಿ ಕೆರೆಗೆ ನೀರನ್ನು ತುಂಬುವ ಯೋಜನೆ :** ಹಾವೇರಿ ಜಿಲ್ಲೆಯ ರಾಣೆಬೆನ್ನೂರು, ಬ್ಯಾಡಗಿ ಮತ್ತು ಹಿರೇಕೆರೂರು ತಾಲ್ಲೂಕುಗಳ ಸಮೀಪದ 17 ಕೆರೆಗಳಿಗೆ ನೀರನ್ನು ತುಂಬುವ ಉದ್ದೇಶವನ್ನು ಹೊಂದಿರುವ ಅಸುಂಡಿ ಏತ ನೀರಾವರಿ ಯೋಜನೆಯ ಸವಿವರ ಯೋಜನಾ ವರದಿಗೆ ಸರ್ಕಾರವು ಡಿಸೆಂಬರ್ 2017ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು ಹಾಗೂ ಟೆಂಡರು ಪ್ರಕ್ರಿಯೆಯು ಪ್ರಗತಿಯಲ್ಲಿರುವುದು.

(xviii) **ಗುಡ್ಡದಮಾದಾಪುರ ಕೆರೆಗೆ ನೀರನ್ನು ತುಂಬುವ ಯೋಜನೆ :** ತುಂಗಭದ್ರಾ ನದಿಯಿಂದ 0.037 ಟಿಎಂಸಿ ನೀರನ್ನು ಎತ್ತುವ ಮೂಲಕ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ 13 ಕೆರೆಗಳಿಗೆ ನೀರನ್ನು ತುಂಬುವುದನ್ನು ಈ ಯೋಜನೆಯು ಚಿಂತಿಸಿದೆ.

(xix) **ಬನವಾಸಿ ಕೆರೆಗೆ ನೀರನ್ನು ತುಂಬುವ ಯೋಜನೆ :** ಈ ಯೋಜನೆಯ ಅಡಿಯಲ್ಲಿ, ವರದಾ ನದಿಯಿಂದ ನೀರನ್ನು ಎತ್ತುವ ಮೂಲಕ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿ ಹೋಬಳಿಯ 32 ಕೆರೆಗಳಿಗೆ ನೀರನ್ನು ತುಂಬುವುದನ್ನು ಹಾಗೂ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವುದು, ಕುಡಿಯುವ ನೀರನ್ನು ಪೂರೈಸುವುದು ಹಾಗೂ ಅಂತರ್ಜಲ ಸಂಪನ್ಮೂಲಗಳ

ಮಟ್ಟವನ್ನು ಉತ್ತಮಗೊಳಿಸುವುದನ್ನು ಚಿಂತಿಸಲಾಗಿದೆ. ಶಿರಸಿ ತಾಲ್ಲೂಕಿನಲ್ಲಿ ಕೆರೆಗಳಿಗೆ ನೀರಿನ ಒಳಹರಿವಿನಲ್ಲಿನ ಕೊರತೆಯ ಕಾರಣ, ಕೆರೆಗಳು ಒಣಗಲು ಪ್ರಾರಂಭಗೊಂಡಿದ್ದು ಹಾಗೂ ಇವುಗಳ ಮೇಲೆ ಅವಲಂಭಿತಗೊಂಡಿದ್ದ ರೈತರುಗಳಿಗೆ ನೀರಿನ ಕೊರತೆಯುಂಟಾಗುವಲ್ಲಿ ಪರಿಣಮಿಸಿದೆ. ಅಲ್ಲದೆಯೇ, ಆ ಪ್ರದೇಶದಲ್ಲಿ ಕೊಳವೆ ಬಾವಿಗಳು ಕೂಡ ಒಣಗಲು ಪ್ರಾರಂಭಗೊಂಡವಾದ್ದರಿಂದ, ವರದಾ ನದಿಯಿಂದ 0.17 ಟಿಎಂಸಿ ನೀರನ್ನು ಎತ್ತುವ ಮೂಲಕ ಮೇಲೆ ತಿಳಿಸಲಾದ ಕೆರೆಗಳಿಗೆ ನೀರನ್ನು ತುಂಬಲು ಉದ್ದೇಶಿಸಲಾಯಿತು. ಸರ್ಕಾರವು ಈ ಯೋಜನೆಯ ಸವಿವರ ಯೋಜನಾ ವರದಿಗೆ ರೂ.62.58 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಡಿಸೆಂಬರ್ 2017ರಂದು ನೀಡಿತು ಹಾಗೂ ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(xx) ಗಂಡೋರಿನಾಲಾ ನವೀಕರಣ : ಗಂಡೋರಿನಾಲಾ ಯೋಜನೆಯ ಅಡಿಯಲ್ಲಿ ಕಲಬುರಗಿ ತಾಲ್ಲೂಕಿನ ಬೆಳೆಕೋಟ ಗ್ರಾಮದ ಬಳಿ ಒಂದು ಅಣೆಕಟ್ಟೆಯನ್ನು ನಿರ್ಮಿಸಲಾಗಿರುವುದು ಹಾಗೂ 1.99 ಟಿಎಂಸಿ ನೀರನ್ನು ಬಳಸಿಕೊಂಡು ಬರಪೀಡಿತ ಕಲಬುರಗಿ ಜಿಲ್ಲೆಯ ಒಟ್ಟಾರೆ 7,943 ಹೆಕ್ಟೇರುಗಳಿಗೆ ನೀರಾವರಿ ಅನುಕೂಲತೆಗಳನ್ನು ನೀಡಲಾಗಿರುವುದು. ಯೋಜನೆಯ ಪ್ರಧಾನ ನಾಲೆಯನ್ನು 15 ವರ್ಷಗಳ ಹಿಂದೆ ನಿರ್ಮಿಸಲಾಗಿರುವುದು ಹಾಗೂ ಅದರ ಕೆಲವು ಭಾಗಗಳು ಕ್ರಮೇಣ ಶಿಥಿಲಗೊಂಡಿರುವ ಸ್ಥಿತಿಯನ್ನು ತಲುಪಿರುವವು.ಗಂಡೋರಿನಾಲಾ ಸಂಕೀರ್ಣದ ನವೀಕರಣ ಕಾಮಗಾರಿಯನ್ನು ರೂ.92 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ ಹಾಗೂ ಟೆಂಡರನ್ನು ನೀಡಲಾಗಿದ್ದು, ಈ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(xxi) ಕೆಳ ಮುಲ್ಲಾಮಾರಿ ಅಣೆಕಟ್ಟೆಯ ನವೀಕರಣ : ಕೆಳ ಮುಲ್ಲಾಮಾರಿ ಯೋಜನೆಯ ಅಡಿಯಲ್ಲಿ ಒಂದು ಅಣೆಕಟ್ಟೆಯನ್ನು ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ನಗರಲ್ ಗ್ರಾಮದ ಬಳಿ 1972ರಲ್ಲಿ ನಿರ್ಮಿಸಲಾಗಿದ್ದು ಹಾಗೂ 2.61 ಟಿಎಂಸಿ ನೀರನ್ನು ಬಳಸಿಕೊಂಡು 9,713 ಹೆಕ್ಟೇರುಗಳಿಗೆ ನೀರಾವರಿ ಅನುಕೂಲತೆಯನ್ನು ಒದಗಿಸಲಾಗಿದೆ. ಯೋಜನೆಯನ್ನು ಅನೇಕ ವರ್ಷಗಳ ಹಿಂದೆಯೇ ಪೂರ್ಣಗೊಳಿಸಲಾಗಿದ್ದು ಹಾಗೂ ಅದರ ಕೆಲವು ಭಾಗಗಳು ಕ್ರಮೇಣ ಶಿಥಿಲಗೊಂಡಿರುವ ಸ್ಥಿತಿಯನ್ನು ತಲುಪಿರುವವು. ಪ್ರಸಕ್ತ ಸರ್ಕಾರವು ಗಂಡೋರಿನಾಲಾ ಸಂಕೀರ್ಣದ ನವೀಕರಣ ಕಾಮಗಾರಿಯನ್ನು 117.00 ಕೋಟಿಗೆ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ ಹಾಗೂ ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(xxii) ಬೋರಿ ಏತ ನೀರಾವರಿ ಯೋಜನೆ : ಇತ್ತೀಚಿನ ಸಾಲುಗಳಲ್ಲಿ ಅತೀವಿರಳವಾದಂತಹ ಮಳೆಯಾಗುತ್ತಿದ್ದು ಕಲಬುರಗಿ ಜಿಲ್ಲೆಯ ಕೊಳವೆ ಬಾವಿಗಳಲ್ಲಿ, ಮುಕ್ತ ಬಾವಿಗಳಲ್ಲಿ ಹಾಗೂ ಕೆರೆಗಳಲ್ಲಿ ನೀರಿನ ಮಟ್ಟವು ಇಳಿಮುಖವಾಗುತ್ತಿದ್ದು ಇದರ ಕಾರಣದಿಂದ ಕಲಬುರಗಿ ಜಿಲ್ಲೆಯ ಅಫಝುಲ್‌ಪುರ ಮತ್ತು ಆಳಂದ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ತೀವ್ರತರವಾದಂತಹ ಒತ್ತಡವು ಸೃಷ್ಟಿಯಾಗಿದೆ. ಆದ್ದರಿಂದ, ಅಮರ್ಝಾ ಜಲಾಶಯದಲ್ಲಿ ಅದರ ಶೇಕಡಾ 60ರಷ್ಟು ನೀರಿನ ಕೊರತೆಯನ್ನು ಹಾಗೂ ಅಫಝುಲ್ ಪುರ ತಾಲ್ಲೂಕಿನಲ್ಲಿನ 10 ಸಣ್ಣ ಪ್ರಮಾಣದ ನೀರಾವರಿ ಕೆರೆಗಳ ಹಾಗೂ ಆಳಂದ ತಾಲ್ಲೂಕಿನಲ್ಲಿನ 3 ಸಣ್ಣಪ್ರಮಾಣದ ನೀರಾವರಿ ಕೆರೆಗಳ ಶೇಕಡಾ 50ರಷ್ಟು ನೀರಿನ ಕೊರತೆಯನ್ನು ನೀಗಿಸುವ ಸಲುವಾಗಿ ಬಾಲುಂಡಗಿ ಗ್ರಾಮದ ಬಳಿ ಭೀಮಾ ನದಿಯ ಒಂದು ಉಪ ನದಿಯಾಗಿರುವಂತಹ ಬೋರಿ ನದಿಯಿಂದ ಮಳೆಗಾಲದಲ್ಲಿ/ಪ್ರವಾಹದ ಸಮಯದಲ್ಲಿ 1.00 ಟಿಎಂಸಿ ನೀರನ್ನು ಎತ್ತುವ ಪ್ರಸ್ತಾವನೆಯನ್ನು ಮಾಡಲಾಯಿತು. ಕಾಮಗಾರಿಗಾಗಿ ಟೆಂಡರು ಪ್ರಕ್ರಿಯೆಯು ಪ್ರಗತಿಯಲ್ಲಿರುವುದು.

(xxiii) ಕರಂಜಾ ಯೋಜನೆಯ ನಾಲಾ ವ್ಯವಸ್ಥೆಯ ನವೀಕರಣ : ಕರಂಜಾ ನೀರಾವರಿ ಯೋಜನೆಯನ್ನು ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನ ಬೈಲಹಳ್ಳಿ ಗ್ರಾಮದ ಬಳಿ ನಿರ್ಮಿಸಲಾಗಿರುತ್ತದೆ. ಈ ಯೋಜನೆಯ ಮೂಲಕ ಭಾಲ್ಕಿ, ಬೀದರ್ ಮತ್ತು ಹುಮ್ನಾಬಾದ್ ತಾಲ್ಲೂಕುಗಳಲ್ಲಿನ 29,227 ಹೆಕ್ಟೇರುಗಳಷ್ಟು ಭೂಮಿಗೆ ನೀರಾವರಿ ಅನುಕೂಲತೆ ಒದಗಿಸುವುದನ್ನು ಚಿಂತಿಸಲಾಗಿದೆ. ಪ್ರಧಾನ ನಾಲೆಯನ್ನು 30 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು ಹಾಗೂ ಅದರ ಕೆಲವು ಭಾಗಗಳು ಕ್ರಮೇಣ ಶಿಥಿಲಗೊಂಡಿರುವ ಸ್ಥಿತಿಯನ್ನು ತಲುಪಿರುವವು. ಇದರಿಂದಾಗಿ ನಾಲೆಗಳ ತುಟ್ಟತುದಿಯವರೆಗೂ ನೀರನ್ನು ಸಾಗಿಸುವುದು ಕಷ್ಟಸಾಧ್ಯವಾಗಿದೆ. ಆದ್ದರಿಂದ, ಕರಂಜಾ ಯೋಜನೆಯ ನಾಲೆಗಳ ಕೆಲವು ಭಾಗಗಳನ್ನು ನವೀಕರಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಯಿತು.

ಸರ್ಕಾರವು ಬಲದಂಡೆ ನಾಲೆಯ ಕಿಮೀ 0.00ಯಿಂದ ಕಿಮೀ 100.00 ಅಡಿಯಲ್ಲಿ 106 ವಿತರಣಾ ನಾಲೆಗಳನ್ನು ಒಳಗೊಂಡಂತೆ, ಎಡ ದಂಡೆ ನಾಲೆಯ ಕಿಮೀ 0.00ಯಿಂದ ಕಿಮೀ 31.00ರವರೆಗೆ, ಕರಂಜಾ ಏತ ನೀರಾವರಿ ಯೋಜನೆಯ ಕಿಮೀ 0.00ಯಿಂದ ಕಿಮೀ 21.00ರ ಅಡಿಯಲ್ಲಿ 27 ವಿತರಣಾ ನಾಲೆಗಳನ್ನು ಒಳಗೊಂಡಂತೆ ಸವಿವರ ಯೋಜನಾ ವರದಿಗೆ ರೂ.482.00 ಕೋಟಿಗೆ ನವಂಬರ್ 2017ರಲ್ಲಿ ಅನುಮೋದನೆ ನೀಡಿತು ಹಾಗೂ ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(xxiv) ಕರಂಜಾ ಜಲಾಶಯದಲ್ಲಿನ ನೀರಿನ ಕೊರತೆಯನ್ನು ತುಂಬಿಸಲು ಕರಂಜಾ ಬಲದಂಡೆ ನಾಲೆಯ ಕಿಮೀ 60ರಿಂದ ಕಿಮೀ 90ರ ನಡುವಿನ ನಾಲೆಗೆ ಮಾಣಿಕೇಶ್ವರ ಮತ್ತು ಹಾಲಹಳ್ಳಿ ಅಡ್ಡಗಟ್ಟೆಯಿಂದ ನೀರನ್ನು ಒದಗಿಸುವುದು : ಕರಂಜಾ ನೀರಾವರಿ ಯೋಜನೆಯನ್ನು ಬೀದರ್ ಜಿಲ್ಲೆಯಲ್ಲಿನ ಭಾಲ್ಕಿ ತಾಲ್ಲೂಕಿನ ಬೈಲಹಳ್ಳಿ ಗ್ರಾಮದ ಸಮೀಪ ನಿರ್ಮಾಣ ಮಾಡಲಾಗಿದೆ. ಭಾಲ್ಕಿ, ಬೀದರ್ ಮತ್ತು ಹುಮ್ನಾಬಾದ್ ತಾಲ್ಲೂಕುಗಳಲ್ಲಿನ 29,227 ಹೆಕ್ಟೇರುಗಳಷ್ಟು ಪ್ರದೇಶಕ್ಕೆ ಈ ಯೋಜನೆಯ ಮೂಲಕ ನೀರಾವರಿ ಅನುಕೂಲತೆಗಳನ್ನು ಒದಗಿಸುವುದನ್ನು ಚಿಂತಿಸಲಾಗಿರುವುದು. ಕಾಮಗಾರಿಗಳು ಪ್ರಗತಿಯಲ್ಲಿರುವವು.

ಮುಂದುವರೆದು, ಸರ್ಕಾರವು ಸೆಪ್ಟಂಬರ್ 2017ರಲ್ಲಿ ಕರಂಜಾ ಜಲಾಶಯದಲ್ಲಿನ ನೀರಿನ ಕೊರತೆಯನ್ನು ತುಂಬಿಸಲು ಕರಂಜಾ ಬಲದಂಡೆ ನಾಲೆಯ ಕಿಮೀ 60ರಿಂದ ಕಿಮೀ 90ರ ನಡುವಿನ ನಾಲೆಗೆ ಮಾಣಿಕೇಶ್ವರ ಮತ್ತು ಹಾಲಹಳ್ಳಿ ಅಡ್ಡಗಟ್ಟೆಯಿಂದ ನೀರನ್ನು ಒದಗಿಸುವುದಕ್ಕಾಗಿ ರೂ.126.85 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿಕೆ ಹಾಗೂ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(xxv) ಮುಲ್ಲಾಮಾರಿ ಮೇಲ್ದಂಡೆ ನವೀಕರಣ : ಈ ಯೋಜನೆಯ ಅಡಿಯಲ್ಲಿ, ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಒಂದು ಅಣೆಕಟ್ಟೆಯನ್ನು ನಿರ್ಮಿಸಲಾಗಿರುವುದು. 3,279 ಹೆಕ್ಟೇರುಗಳಷ್ಟು ಹೊರಹರಿವಿನ ಸಾಮರ್ಥ್ಯವನ್ನು ಬೀದರ್ ಮತ್ತು ಕಲಬುರಗಿ ಜಿಲ್ಲೆಗಳ ಹುಮ್ನಾಬಾದ್, ಬಸವಕಲ್ಯಾಣ ಮತ್ತು ಕಲಬುರಗಿ ತಾಲ್ಲೂಕುಗಳಲ್ಲಿ ಸೃಷ್ಟಿಸಲಾಗಿರುವುದು. ಯೋಜನೆಯು ಬಹಳಷ್ಟು ಹಿಂದೆಯೇ ಪೂರ್ಣಗೊಂಡಿರುವುದು. ಯೋಜನೆಯ ಪ್ರಧಾನ ನಾಲೆಯನ್ನು 30 ವರ್ಷಗಳ ಹಿಂದೆಯೇ ನಿರ್ಮಿಸಲಾಗಿದೆ. ಹಾಗೂ ಅದರ ಕೆಲವು ಭಾಗಗಳು ಕ್ರಮೇಣ ಶಿಥಿಲಗೊಂಡಿರುವ ಸ್ಥಿತಿಯನ್ನು ತಲುಪಿರುವುವು. ಆದ್ದರಿಂದ, ಮುಲ್ಲಾಮಾರಿ ಮೇಲ್ದಂಡೆ ಯೋಜನೆಯನ್ನು ರೂ.68.60 ಕೋಟಿ ವೆಚ್ಚದಲ್ಲಿ ನವೀಕರಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದು ಹಾಗೂ ಈ ಕಾಮಗಾರಿಗಳು ಪ್ರಗತಿಯಲ್ಲಿರುವವು.

(xxvi) ಬಸವಕಲ್ಯಾಣ ತಾಲ್ಲೂಕಿನ ಕೊಂಗಲಿ ಅಡ್ಡಗಟ್ಟೆಯಿಂದ ನೀರನ್ನು ಎತ್ತುವ ಮೂಲಕ ಚುಲ್ಕಿನಾಲಾ ಜಲಾಶಯ ಮತ್ತು ಕೆರೆಗಳಿಗೆ ನೀರನ್ನು ತುಂಬುವುದು: ಈ ಯೋಜನೆಯ ಮೂಲಕ ಬಸವಕಲ್ಯಾಣ ತಾಲ್ಲೂಕಿನ ಜಮಖಂಡಿ ಗ್ರಾಮದ ಬಳಿ ಕೊಂಗಲಿ ಅಡ್ಡಗಟ್ಟೆಯಿಂದ ನೀರನ್ನು ಎತ್ತುವ ಮೂಲಕ ಬಸವಕಲ್ಯಾಣ ತಾಲ್ಲೂಕಿನ 15 ಕೆರೆಗಳಿಗೆ ನೀರನ್ನು ತುಂಬುವುದನ್ನು ರೂಪಿಸಲಾಯಿತು. ಈ ಯೋಜನೆಯ ಮೂಲಕ ಜನತೆಗೆ ಮತ್ತು ದನಕರುಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ಅಂತರ್ಜಲದ ಮಟ್ಟವನ್ನು ಉತ್ತಮಗೊಳಿಸುವುದನ್ನು ರೂಪಿಸಲಾಯಿತು. ಚುಲ್ಕಿನಾಲಾ ಯೋಜನೆಯ ಮೂಲಕ 4,047 ಎಕರೆಗಳಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ನೀಡುವ ಉದ್ದೇಶವನ್ನು ಯೋಜನೆಯು ಹೊಂದಿರುವುದು. ಆದರೆ ಒಳಹರಿವಿನಲ್ಲಿ ಕೊರತೆಯಿರುವುದರಿಂದ ಹಾಗೂ ನೀರಾವರಿ ಸೌಲಭ್ಯದಿಂದ ವಂಚಿತವಾಗಿರುವ ಪ್ರದೇಶಗಳಿಗೆ ನೀರಾವರಿ ಅನುಕೂಲತೆಯನ್ನು ಒದಗಿಸುವ ಸಲುವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿರುವುದು. ಈ ಯೋಜನೆಯು 0.768 ಟಿಎಂಸಿ ನೀರಿನ ಅಗತ್ಯತೆಯನ್ನು ಹೊಂದಿರುತ್ತದೆ ಹಾಗೂ ಚುಲ್ಕಿನಾಲಾ ಜಲಾಶಯ ಮತ್ತು 15 ಕೆರೆಗಳಿಗೆ ನೀರನ್ನು ತುಂಬುವ ಸಲುವಾಗಿ ಮಾಂಜ್ರಾ ನದಿಯಿಂದ ನೀರನ್ನು ಎತ್ತುವುದನ್ನು ಪ್ರಸ್ತಾಪಿಸಲಾಗಿರುವುದು. ಸರ್ಕಾರವು ಸವಿವರ ಯೋಜನಾ ವರದಿಗೆ ರೂ.188.00 ಕೋಟಿ ರೂಪಾಯಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುವುದು ಹಾಗೂ ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುವವು.

(xxvii) ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲ್ವಿ ಜಲಾಶಯಕ್ಕೆ ನೀರನ್ನು ತುಂಬುವುದು : ಹಗರಿಬೊಮ್ಮನಹಳ್ಳಿ ಏತ ನೀರಾವರಿ ಯೋಜನೆಯ ಅಡಿಯಲ್ಲಿ ಮಾಲ್ವಿ ಗ್ರಾಮದ ಸಮೀಪ ಚಿಕ್ಕಹಗರಿ ನದಿಗೆ ಅಡ್ಡಲಾಗಿ 1972ರಲ್ಲಿ ಒಂದು ಅಣೆಕಟ್ಟೆಯನ್ನು ನಿರ್ಮಿಸಲಾಗಿದೆ ಹಾಗೂ ಮಳೆಗಾಲದಲ್ಲಿ ಹಾಗೂ ಮಳೆಗಾಲ ಕಳೆದ ನಂತರದ ಅವಧಿಯಲ್ಲಿನ ಬೆಳೆಗಳಿಗೆ ಸುಮಾರು 2,965 ಹೆಕ್ಟೇರುಗಳಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವುದನ್ನು ರೂಪಿಸಲಾಗಿರುವುದು. 1972ರಿಂದ 1980ರ ಅವಧಿಯಲ್ಲಿ ಸತತ ಎರಡು ಕಾಲಗಳಿಗೆ/ ಅವಧಿಗಳಿಗೆ ಮೇಲೆ ತಿಳಿಸಲಾದ ಜಲಾಶಯದಿಂದ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿರುವುದು. ಈ ದೃಷ್ಟಿಯಿಂದ, ಮಾಲ್ವಿ ಜಲಾಶಯಕ್ಕೆ ನೀರಿನ ಒಳಹರಿವನ್ನು ಉತ್ತಮಗೊಳಿಸುವ ಸಲುವಾಗಿ ತುಂಗಭದ್ರಾ ನದಿಯಿಂದ ಕೊಳವೆಗಳ ಮೂಲಕ ನೀರನ್ನು ಎತ್ತುವ ಮೂಲಕ ಮಾಲ್ವಿ ಜಲಾಶಯಕ್ಕೆ ನೀರನ್ನು ಒದಗಿಸುವುದಕ್ಕಾಗಿ ರೂ.144.95 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಯಿತು. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(xxviii) ಶಿರಹಟ್ಟಿ ತಾಲ್ಲೂಕಿನ ಇಟಗಿ ಗ್ರಾಮದ ಬಳಿ ತುಂಗಭದ್ರಾ ನದಿಯಿಂದ ನೀರನ್ನು ಎತ್ತುವ ಮೂಲಕ ಶಿರಹಟ್ಟಿ ತಾಲ್ಲೂಕಿನ 20 ಕೆರೆಗಳಿಗೆ ನೀರನ್ನು ತುಂಬುವುದು: ನೀರಿನ ಒಳಹರಿವಿನ ಕೊರತೆಯ ಕಾರಣ, ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಕೆರೆಗಳು ಬತ್ತಿಹೋಗುತ್ತಿದ್ದವು, ಇದರಿಂದಾಗಿ ಜನತೆ ಮತ್ತು ದನಕರುಗಳು ನೀರಿನ ಕೊರತೆಯನ್ನು ಎದುರಿಸುವಂತಾಯಿತು. ಅದೂ ಅಲ್ಲದೆಯೇ ಅಂತರ್ಜಲವು ಬಹಳಷ್ಟು ಮಟ್ಟಿಗೆ ಇಳಿಮುಖಗೊಂಡಿದ್ದಿತು ಹಾಗೂ ಜನತೆಯು ತೀವ್ರ ಸಂಕಷ್ಟವನ್ನು ಎದುರಿಸುವಂತಾಯಿತು. ಆದ ಕಾರಣ, ಮೇಲೆ ತಿಳಿಸಲಾದ 20 ಕೆರೆಗಳಿಗೆ ನೀರನ್ನು ತುಂಬುವ ಸಲುವಾಗಿ ಇಟಗಿ ಸಮೀಪ ತುಂಗಭದ್ರಾ ನದಿಯಿಂದ 0.226 ಟಿಎಂಸಿ ನೀರನ್ನು ಎತ್ತುವುದನ್ನು ರೂಪಿಸಲಾಯಿತು. ಸರ್ಕಾರವು

ಸವಿವರ ಯೋಜನಾ ವರದಿಗೆ ರೂ.140.00 ಕೋಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(xxix) **ತಿಮ್ಮಾಪುರ ಏತ ನೀರಾವರಿ ಯೋಜನೆ :** ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ತುರಹಟ್ಟಿ ಗ್ರಾಮದ ತುಂಗಭದ್ರಾ ಎಡದಂಡೆ ನಾಲೆ ಡಿವೈ. 54ರಲ್ಲಿ 34,984 ಎಕರೆಗಳಷ್ಟು ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದಂತಹ ಜಲಾನಯನ ಪ್ರದೇಶದ ಕೊಟ್ಟಕೊನೆಯ ಭಾಗವನ್ನು ಸುಸ್ಥಿರಗೊಳಿಸುವ ಸಲುವಾಗಿ ರೂ.92 ಕೋಟಿ ಅಂದಾಜು ವೆಚ್ಚದಲ್ಲಿ ತಿಮ್ಮಾಪುರ ಏತ ನೀರಾವರಿ ಯೋಜನೆಯನ್ನು ಪ್ರಸ್ತಾಪಿಸಲಾಯಿತು. ಪ್ರಸ್ತುತ ಟೆಂಡರು ಪ್ರಕ್ರಿಯೆಯು ಪ್ರಗತಿಯಲ್ಲಿರುವುದು.

(xxx) **ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆ :** ಇಳಿಮುಖಗೊಂಡಿದ್ದ ಮಳೆಯಿಂದಾಗಿ ತೊಂದರೆಗೆ ಈಡಾಗಿದ್ದ ಬಹದ್ದೂರ್ ಬಂಡಿ ಹಾಗೂ ಅದಕ್ಕೆ ಅಕ್ಕಪಕ್ಕದ 18 ಗ್ರಾಮಗಳ ರೈತರುಗಳನ್ನು ಆರ್ಥಿಕವಾಗಿ ಬಲಪಡಿಸುವ ಉದ್ದೇಶದಿಂದ ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ರೂ.80 ಕೋಟಿ ಅಂದಾಜು ವೆಚ್ಚದಲ್ಲಿ ತುಂಗಭದ್ರಾ ನದಿಯಿಂದ 0.6 ಟಿಎಂಸಿ ನೀರನ್ನು ಎತ್ತುವ ಮೂಲಕ 5,256 ಹೆಕ್ಟೇರುಗಳಿಗೆ ನೀರಾವರಿ ಅನುಕೂಲತೆಯನ್ನು ಒದಗಿಸುವುದನ್ನು ಯೋಜನೆಯು ರೂಪಿಸಿರುವುದು.

7. 2017–18 ಹಣಕಾಸು ಸಾಲಿನಲ್ಲಿ, 49,501 ಹೆಕ್ಟೇರುಗಳಷ್ಟು ನೀರಾವರಿ ಸಾಮರ್ಥ್ಯವನ್ನು ಸೃಷ್ಟಿಸುವ ಗುರಿಯೊಂದಿಗೆ ಕಂಪನಿಯು ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಾರ್ಷಿಕ ಕಾರ್ಯಕ್ರಮವು ರೂ.3,601.37 ಕೋಟಿ ಆಗಿರುತ್ತದೆ. ಈ ಕಾರ್ಯಕ್ರಮಕ್ಕೆ ಪ್ರತಿಯಾಗಿ, 2017–18 ಹಣಕಾಸು ಸಾಲಿನಲ್ಲಿ ಭರಿಸಲಾದ ವೆಚ್ಚವು, ಸಾಲಗಳಿಗೆ ಸಂಬಂಧಿತ ವೆಚ್ಚಗಳು ರೂ.510.94 ಕೋಟಿ ಮೊತ್ತವೂ ಸೇರಿದಂತೆ ರೂ.3,739.82 ಕೋಟಿ ಆಗಿದ್ದಿತು. ಪ್ರಸಕ್ತ ಸಾಲಿನಲ್ಲಿ ಸೃಷ್ಟಿಸಲಾದಂತಹ ನೀರಾವರಿ ಸಾಮರ್ಥ್ಯವು 5,055 ಹೆಕ್ಟೇರುಗಳು. ನಿಗಮವನ್ನು ಸ್ಥಾಪಿಸಿದಂದಿನಿಂದಲೂ ಕಂಪನಿಗೆ ವಹಿಸಲಾದ ಯೋಜನೆಗಳ ಮೇಲೆ ಭರಿಸಲಾದ ಕ್ರೋಡೀಕೃತ ವೆಚ್ಚವು ರೂ.29,144.25 ಕೋಟಿ ಆಗಿರುವುದು ಹಾಗೂ ಈ ಅವಧಿಯಲ್ಲಿ ಸೃಷ್ಟಿಸಲಾದ ಒಟ್ಟಾರೆ ನೀರಾವರಿ ಸಾಮರ್ಥ್ಯವು 31.03.2018ರಲ್ಲಿದ್ದಂತೆ 14,03,938 ಹೆಕ್ಟೇರುಗಳು. ಚಾಲ್ತಿ ವರ್ಷ 2018–19ಕ್ಕೆ 24,810 ಹೆಕ್ಟೇರುಗಳಷ್ಟು ನೀರಾವರಿ ಸಾಮರ್ಥ್ಯವನ್ನು ಸೃಷ್ಟಿಸುವ ಗುರಿಯೊಂದಿಗೆ ವಾರ್ಷಿಕ ಕಾಮಗಾರಿಗಳ ಕಾರ್ಯಕ್ರಮಗಳಿಗಾಗಿ ನಿಗದಿಗೊಳಿಸಲಾಗಿರುವ ಮೊತ್ತವು, ಸಾಲಗಳನ್ನು ಹಿಂತಿರುಗಿಸುವ ಸಂಬಂಧಿತ ವೆಚ್ಚಗಳು ರೂ.761.93 ಕೋಟಿ ಮೊತ್ತವೂ ಸೇರಿದಂತೆ ರೂ.4,220.85 ಕೋಟಿ ಆಗಿರುತ್ತದೆ.

8. ಯೋಜನಾ ವೆಚ್ಚಗಳಿಗೆ ಹಣಕಾಸನ್ನು ಒದಗಿಸುವಿಕೆ

2017–18 ಹಣಕಾಸು ಸಾಲಿಗೆ, ಕಂಪನಿಯು ಕರ್ನಾಟಕ ಸರ್ಕಾರದಿಂದ ರೂ.2,188.82 ಕೋಟಿ ಮೊತ್ತದಷ್ಟು ಬಂಡವಾಳ ಅನುದಾನವನ್ನು ಹಾಗೂ ರೂ.637.77 ಕೋಟಿ ಮೊತ್ತದಷ್ಟು ವರಮಾನ ಅನುದಾನಗಳನ್ನು ಸ್ವೀಕರಿಸಿರುವುದು. ಪ್ರಸಕ್ತ ಸಾಲಿನಲ್ಲಿ, ಕಂಪನಿಯು ಬ್ಯಾಂಕುಗಳಿಂದ ಅವಧಿ ಸಾಲಗಳ ಮೂಲಕ ರೂ.765.00 ಕೋಟಿ ಮೊತ್ತವನ್ನು ಪಡೆದಿರುವುದು. ಈ ಸಾಲಗಳಿಗೆ ಕರ್ನಾಟಕ ಸರ್ಕಾರದ ಖಾತರಿ ಇರುತ್ತದೆ.

2017–18 ಹಣಕಾಸು ಸಾಲಿನಲ್ಲಿ, ಕಂಪನಿಯು ಎಸ್‌ಸಿಪಿ/ಟಿಎಸ್‌ಪಿ ಕಡೆಗೆ ರೂ.699.46 ಕೋಟಿ ಮೊತ್ತವನ್ನು ಕರ್ನಾಟಕ ಸರ್ಕಾರದ ಈಕ್ವಿಟಿಯ ರೂಪದಲ್ಲಿ ಸ್ವೀಕರಿಸಿರುವುದು. ಇದರ ಪೈಕಿ ರೂ.298.58 ಕೋಟಿ ಮೊತ್ತವನ್ನು ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ/34/ಎಫ್‌ಡಿ–1/2018 ದಿನಾಂಕ 26–06–2018ರ ಅನುಸಾರ ಈಕ್ವಿಟಿ ಎಂಬುದಾಗಿ ಪರಿಗಣಿಸುವ ಬದಲು ವರಮಾನ ಅನುದಾನ ಎಂಬುದಾಗಿ ಪರಿಗಣಿಸಲಾಗಿರುವುದು.

9. ಪ್ರಧಾನ ವ್ಯವಸ್ಥಾಪಕ ಸಿಬ್ಬಂದಿಯ ನೇಮಕ:

(ಅ) ಶ್ರೀ ಎಸ್.ಆರ್. ಗೋಪಾಲ್, ಕಂಪನಿ ಕಾರ್ಯದರ್ಶಿ

(ಆ) ಶ್ರೀ ಎನ್. ರವೀಂದ್ರನ್, ಪ್ರಧಾನ ವ್ಯವಸ್ಥಾಪಕರು, ಹಣಕಾಸು / ಮುಖ್ಯ ವಿತ್ತಾಧಿಕಾರಿ.

10. ಲೆಕ್ಕಪತ್ರಗಳು:

ನಮ್ಮ ಈ ಹಿಂದಿನ ವರದಿಯಲ್ಲಿ ತಿಳಿಸಿರುವಂತೆ, ಕಂಪನಿಯು 2010–11 ಹಣಕಾಸು ಸಾಲಿನಿಂದಲೂ ಆಸ್ತಿಗಳನ್ನು ಬಂಡವಾಳೀಕರಿಸುವುದು ಮತ್ತು ಲಾಭ ಮತ್ತು ನಷ್ಟ ತ:ಖ್ತೆಯನ್ನು ತಯಾರಿಸುವ ಪ್ರಕ್ರಿಯೆಯನ್ನು ಕೈಗೊಂಡಿರುವುದು. ವರದಿಯ ಅಡಿಯಲ್ಲಿನ ಸಾಲಿನಲ್ಲಿ ರೂ.585.04 ಕೋಟಿ ಮೊತ್ತದಷ್ಟು ಆಸ್ತಿಗಳನ್ನು ಬಂಡವಾಳೀಕರಿಸಲಾಗಿರುವುದು.

11. ಕಾರ್ಯಾಚರಣೆಯ ಫಲಿತಾಂಶಗಳು:

ಪ್ರಸ್ತುತ ವರ್ಷದಲ್ಲಿ ಕಾರ್ಯಾಚರಣೆಯ ಫಲಿತಾಂಶಗಳು ಕೆಳಗಿನಂತಿವೆ:

ಕ್ರ. ಸಂ.	ವಿವರಗಳು	ಮೊತ್ತ ವಿವರಗಳು (ಕೋಟಿ ₹ ಗಳು)
1	ಸವಕಳಿ ಮತ್ತು ತೆರಿಗೆಗೆ ಮುನ್ನ (–) ಲಾಭ/ನಷ್ಟ	(386.09)
2	ಸವಕಳಿ	189.80
3	ಸವಕಳಿ ನಂತರದ ನಷ್ಟ	(575.92)

12. ಆರ್ಥಿಕ ಮುಖ್ಯಾಂಶಗಳು: (ಪ್ರತ್ಯೇಕ)

(ಕೋಟಿ ₹ ಗಳು)

ವಿವರಗಳು	ಮೊತ್ತ
ನೀಡಿಕೆಯಾದ ಮತ್ತು ಸಂದಾಯವಾದ ಷೇರು ಬಂಡವಾಳ 01.04.2017ರಲ್ಲಿದ್ದಂತೆ	23,628.53
2017–18ನೇ ಸಾಲಿನಲ್ಲಿ ನೀಡಿಕೆಯಾದ ಷೇರು ಬಂಡವಾಳ	1,816.38
31.03.2018ರವರೆಗೆ ನೀಡಿಕೆಯಾದ ಮತ್ತು ಸಂದಾಯವಾದ ಷೇರು ಬಂಡವಾಳ	25,444.91
ಹಂಚಿಕೆಗೆ ಬಾಕಿ ಇರಿಸಿದ ಷೇರು ಅರ್ಜಿ ಹಣ	993.15
ಬ್ಯಾಂಕುಗಳಿಂದ ಪಡೆದ ಅವಧಿ ಸಾಲ (ದೀರ್ಘಾವಧಿ)	2,635.58
ಆಸ್ತಿ, ಯಂತ್ರ ಮತ್ತು ಉಪಕರಣಗಳು (ನಿವ್ವಳ)	14,019.29
31.03.2018ರಂತೆ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	7,457.84
ಉಳಿದ ಗಳಿಕೆ	(3,492.46)

13. ಸಂಗ್ರಹಿಸಲಾಗುವ ನೀರಿನ ದರಗಳು ಮಾತ್ರ ಕಂಪನಿಯ ವರಮಾನದ ಏಕೈಕ ಮೂಲವಾಗಿರುತ್ತವೆ ಹಾಗೂ ಈ ನಿಟ್ಟಿನಲ್ಲಿ ಪಾವತಿಗಾಗಿ ಸೃಷ್ಟಿಸಲಾಗಿರುವ ಮೊತ್ತವು ರೂ.28.43 ಕೋಟಿ ಆಗಿರುತ್ತದೆ. ಮುಂದುವರೆದು, ಪ್ರಸಕ್ತ ಸಾಲಿನಲ್ಲಿ, ಕರ್ನಾಟಕ ಸರ್ಕಾರವು ಈಕ್ವಿಟಿಯ ಕಡೆಗಿನ ಮುಂಗಡ ರೂ.298.58 ಕೋಟಿ ಮೊತ್ತವನ್ನು 2017–18 ಹಣಕಾಸು ಸಾಲಿನಲ್ಲಿ ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳ ಕಡೆಗೆ ಭರಿಸಲಾಗಿರುವ ವೆಚ್ಚಗಳ ಕಡೆಗೆ ಹೊಂದಾಣಿಕೆ ಮಾಡಿಕೊಳ್ಳಲು ಕರ್ನಾಟಕ ಸರ್ಕಾರವು ಅನುಮತಿ ನೀಡಿರುವುದು.

14. ನೌಕರರ ವಿವರಗಳು:

ಕಂಪನಿ ಕಾಯ್ದೆ, 2013 ಪರಿಚ್ಛೇದ 197 ಮತ್ತು 124(3)(ಕ್ಯೂ) ಉಪಬಂಧಗಳ ಅನ್ವಯ ಹಾಗೂ ಕಂಪನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ 5(2) ಮತ್ತು (3)ಕ್ಕೆ ಸಂಗತವಾಗುವಂತೆ ಮಾಡಬೇಕಾದ ಪ್ರಕಟಣೆಗಳು–ಇರುವುದಿಲ್ಲ.

15. ಮಂಡಳಿ ಸಭೆಗಳು:

ಹಣಕಾಸು ವರ್ಷ 2017–18ರಲ್ಲಿ ಆರು (6) ಮಂಡಳಿ ಸಭೆಗಳು ಜರುಗಿದವು.

16. ಸ್ವತಂತ್ರ ನಿರ್ದೇಶಕರಿಂದ ಘೋಷಣೆ:

ಕಂಪನಿ ಕಾಯ್ದೆ, 2013ರ ಪರಿಚ್ಛೇದ 149, ಉಪಪರಿಚ್ಛೇದ (6) ರಲ್ಲಿ ಸೂಚಿಸಿರುವಂತೆ ಕಂಪನಿಯು ಸ್ವತಂತ್ರ ನಿರ್ದೇಶಕಗಳಿಂದ ಘೋಷಣೆಗಳನ್ನು ಪಡೆದುಕೊಂಡಿದೆ. ಸ್ವತಂತ್ರ ನಿರ್ದೇಶಕರಿಂದ ಪಡೆಯುವ ಘೋಷಣೆಯ ನಮೂನೆಯನ್ನು **ಅನುಬಂಧ–6** ರಲ್ಲಿ ಲಗತ್ತಿಸಿದೆ.

17. ಲೆಕ್ಕಪರಿಶೋಧನಾ ಸಮಿತಿಯ ರಚನೆ:

ಕಂಪನಿ ಕಾಯ್ದೆ, 2013ರ ಪರಿಚ್ಛೇದ 177ರನ್ವಯ ಮಂಡಳಿಯ ಲೆಕ್ಕ ಪರಿಶೋಧನಾ ಸಮಿತಿಯನ್ನು ಕೆಳಗಿನಂತೆ ಪುನರ್ ರಚಿಸಲಾಗಿರುತ್ತದೆ:

ಕ್ರ. ಸಂ.	ವಿವರಗಳು	ಹುದ್ದೆ
1.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಹಾಗೂ ಕೆಎನ್‌ಎನ್‌ಎಲ್ ನಿರ್ದೇಶಕರಾಗಿ ಸರ್ಕಾರದಿಂದ ನಾಮನಿರ್ದೇಶಿತರಾದವರು.	ಅಧ್ಯಕ್ಷರು
2.	ಅಪರ ಮುಖ್ಯ ಕಾರ್ಯದರ್ಶಿಗಳು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಹಾಗೂ ಕೆಎನ್‌ಎನ್‌ಎಲ್ ನಿರ್ದೇಶಕರಾಗಿ ಸರ್ಕಾರದಿಂದ ನಾಮನಿರ್ದೇಶಿತರಾದವರು.	ಸದಸ್ಯರು
3.	ಶ್ರೀ ಡಿ. ಎನ್. ದೇಸಾಯಿ, ಸರ್ಕಾರ ನಾಮನಿರ್ದೇಶನ ಮಾಡಿರುವ **ಸ್ವತಂತ್ರ ನಿರ್ದೇಶಕರು**	ಸದಸ್ಯರು
4.	ಶ್ರೀ ಎಸ್.ಎಸ್. ಮಗದಾಳ್ ಸರ್ಕಾರ ನಾಮನಿರ್ದೇಶನ ಮಾಡಿರುವ **ಸ್ವತಂತ್ರ ನಿರ್ದೇಶಕರು**	ಸದಸ್ಯರು
5.	ಪ್ರೊ: ಎಂ.ಎಸ್. ಮೋಹನ್ ಕುಮಾರ್ ಸರ್ಕಾರ ನಾಮನಿರ್ದೇಶನ ಮಾಡಿರುವ **ಸ್ವತಂತ್ರ ನಿರ್ದೇಶಕರು**	ಸದಸ್ಯರು
6.	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ	ಆಹ್ವಾನಿತರು

18. ಸಂಭಾವನಾ ಕಾರ್ಯನೀತಿ:

ಹಿರಿಯ ವ್ಯವಸ್ಥಾಪನಾ ಸಿಬ್ಬಂದಿಯ ಆಯ್ಕೆ ಮತ್ತು ನೇಮಕ ಹಾಗೂ ಅವರ ಸಂಭಾವನೆಯನ್ನು ನಿಗದಿಪಡಿಸುವ ಸಲುವಾಗಿ ಮಂಡಳಿಯು ನಾಮನಿರ್ದೇಶನ ಮತ್ತು ಸಂಭಾವನಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಒಂದು ಕಾರ್ಯನೀತಿಯನ್ನು ರೂಪಿಸಿದೆ. ಅನುಮೋದಿತ ಸಂಭಾವನಾ ಕಾರ್ಯನೀತಿಯನ್ನು **ಅನುಬಂಧ–1** ರಲ್ಲಿ ಒದಗಿಸಲಾಗಿದೆ.

19. ಉಪಾಂಗ/ ಜಂಟಿ ಉದ್ಯಮ/ ಸಹ ಕಂಪನಿಗಳ ವಿವರಗಳು:

ಕಂಪನಿ ಯಾವುದೇ ಉಪಾಂಗ/ಜಂಟಿ ಉದ್ಯಮಗಳು/ ಸಹ ಕಂಪನಿಗಳನ್ನು ಹೊಂದಿರದ ಕಾರಣ ಕಂಪನಿ ಕಾಯ್ದೆ,

2013ರ ಪರಿಚ್ಛೇದ 129, ಉಪಪರಿಚ್ಛೇದ (3) ರ ಅನುಸಾರ ಪ್ರಕಟಣೆಗಳು ಇರುವುದಿಲ್ಲ.

20. ಲೆಕ್ಕಪರಿಶೋಧಕರು:

ಮೆ। ಮಣಿಯನ್ ಮತ್ತು ರಾವ್, ಸನದಿ ಲೆಕ್ಕಿಗರು, ಬೆಂಗಳೂರು, ಇವರನ್ನು ಹಣಕಾಸು ವರ್ಷ 2017–18 ರ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನೇಮಿಸಿರುತ್ತಾರೆ.

21. ಕಾರ್ಯದರ್ಶೀಯ ಪರಿಶೋಧನಾ ವರದಿ:

ಕಂಪನಿ ಕಾಯ್ದೆ, 2013ರ ಪರಿಚ್ಛೇದ 204ರ ಅನುಸಾರ ಕಂಪನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014 ಕ್ಕೆ ಹೊಂದುವಂತೆ ಕಂಪನಿಯು ಮೆ। ಎಸ್. ವಿಶ್ವನಾಥನ್ ಮತ್ತು ಕೆ. ಎನ್. ನಾಗೇಶ್ ರಾವ್, ವೃತ್ತಿ ನಿರತ ಕಂಪನಿ ಕಾರ್ಯದರ್ಶಿಗಳು – ಇವರನ್ನು 2017–18ನೇ ಸಾಲಿಗೆ ಕಂಪನಿಯ ಕಾರ್ಯದರ್ಶೀಯ ಪರಿಶೋಧಕರನ್ನಾಗಿ ನೇಮಿಸಿತ್ತು. ಕಾರ್ಯದರ್ಶೀಯ ಪರಿಶೋಧಕ ವರದಿಯನ್ನು **ಅನುಬಂಧ–2ರಲ್ಲಿ** ಲಗತ್ತಿಸಲಾಗಿದೆ.

22. ಆಂತರಿಕ ಲೆಕ್ಕಪರಿಶೋಧನೆ ಮತ್ತು ನಿಯಂತ್ರಣಗಳು:

ವರದಿಯ ವರ್ಷಕ್ಕೆ ಮೆ। ಪಿ.ಕೆ. ಸುಬ್ರಮಣಿಯನ್ & ಕೋ., ಅವರನ್ನು ಆಂತರಿಕ ಲೆಕ್ಕಪರಿಶೋಧಕರನ್ನಾಗಿ ನೇಮಿಸಲಾಗಿತ್ತು. ಪ್ರಸ್ತುತ ವರ್ಷದಲ್ಲಿ ಕಾರ್ಯಾಚರಣೆಯ ಮೇಲಿನ ನಿಯಂತ್ರಣವನ್ನು ಸುಧಾರಿಸುವ ನಿಟ್ಟಿನಲ್ಲಿ ಆಂತರಿಕ ಲೆಕ್ಕಪರಿಶೋಧಕರ ಸಲಹೆಗಳು ಮತ್ತು ಶಿಫಾರಸ್ಸುಗಳನ್ನು ಜಾರಿಗೊಳಿಸುವುದನ್ನು ಕಂಪನಿಯು ಮುಂದುವರೆಸಿತು. ಕಾರ್ಯಾಚರಣೆಗಳ ಸಾಮರ್ಥ್ಯವನ್ನು ಸುಧಾರಿಸುವ ಸಲುವಾಗಿ ಆಂತರಿಕ ಲೆಕ್ಕಪರಿಶೋಧಕರ ಪರಿಶೀಲನೆಗಳನ್ನು ಆಡಳಿತ ನಿರ್ವಾಹಕರೊಂದಿಗೆ ಚರ್ಚಿಸಲಾಯಿತು ಮತ್ತು ಆಂತರಿಕ ಲೆಕ್ಕಪರಿಶೋಧಕರು ನೀಡಿದ ಪ್ರಮುಖ ಅವಲೋಕನಗಳನ್ನು ಆಗಿದ್ದಾಂಗೆ ವರದಿಸಿದ್ದು. ಈ ಕುರಿತು ಲೆಕ್ಕಪರಿಶೋಧನಾ ಸಮಿತಿ ಚರ್ಚಿಸಿರುತ್ತದೆ.

23. ಕಣ್ಗಾವಲು ಕಾರ್ಯವಿಧಾನ:

ಕಂಪನಿ ಕಾಯ್ದೆ, 2013ರ ಪರಿಚ್ಛೇದ 177 (9) ಮತ್ತು (10) ರ ಉಪಬಂಧಗಳ ಅನುಸಾರ ಪ್ರಾಮಾಣಿಕವಾದ ಕಾಳಜಿಗಳನ್ನು ವರದಿ ಮಾಡುವುದಕ್ಕೆಂದು ನಿರ್ದೇಶಕರು ಮತ್ತು ನೌಕರರಿಗೆ ಕಣ್ಗಾವಲು ಕಾರ್ಯತಂತ್ರವನ್ನು ಸ್ಥಾಪಿಸಲಾಗಿದೆ. ಕಣ್ಗಾವಲು ಕಾರ್ಯವಿಧಾನ ಕಾರ್ಯನೀತಿಯನ್ನು ಕಂಪನಿಯ ವೆಬ್‌ಸೈಟ್ www.knnlindia.com ನಲ್ಲಿ ನಿರ್ದೇಶಕರ ಮಂಡಳಿ/ ಕಣ್ಗಾವಲು ಕಾರ್ಯತಂತ್ರ ಕಾರ್ಯನೀತಿ ಸಂಪರ್ಕದಡಿಯಲ್ಲಿ ಅಪ್‌ಲೋಡ್ ಮಾಡಲಾಗಿದೆ.

24. ಆಪತ್ತು ನಿರ್ವಹಣಾ ಕಾರ್ಯನೀತಿ:

ಕಂಪನಿಯು ಆಪತ್ತು ನಿರ್ವಹಣಾ ಕಾರ್ಯನೀತಿಯನ್ನು ಸ್ಥಾಪಿಸಿದೆ. ಕಂಪನಿಯ ಅನುಮೋದಿತ ಆಪತ್ತು ನಿರ್ವಹಣಾ ಕಾರ್ಯನೀತಿಯನ್ನು **ಅನುಬಂಧ–3** ರಲ್ಲಿ ಲಗತ್ತಿಸಲಾಗಿದೆ.

25. ವಾರ್ಷಿಕ ಸಲ್ಲಿಕೆಗಳ ಸಾರ:

ಕಂಪನಿ ಕಾಯ್ದೆ, 2013ರ ಪರಿಚ್ಛೇದ 134 (3) (ಎ) ಮತ್ತು 93(2)ರ ಪ್ರಕಾರ ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ಕ್ಕೆ ಹೊಂದುವಂತೆ ಒದಗಿಸಲಾಗಿರುವ **ನಮೂನೆ ಸಂ. ಎಂಜಿಟಿ–9**ರಲ್ಲಿ ವಾರ್ಷಿಕ ಸಲ್ಲಿಕೆಯ ಸಾರವನ್ನು **ಅನುಬಂಧ–4** ರಲ್ಲಿ ಲಗತ್ತಿಸಲಾಗಿದೆ.

26. ಆರ್ಥಿಕ ಸ್ಥಿತಿಯನ್ನು ಬಾಧಿಸುವ ವಾಸ್ತವಿಕ ಬದಲಾವಣೆಗಳು ಮತ್ತು ಬಾಧ್ಯತೆಗಳು, ಯಾವುದಾದರೂ ಇದ್ದ ಪಕ್ಷದಲ್ಲಿ:

ಹಣಕಾಸು ತಃಖ್ತೆಗಳೊಂದಿಗೆ ಸಂಬಂಧ ಹೊಂದಿರುವ ಕಂಪನಿಯ ಹಣಕಾಸು ವರ್ಷದ ಕೊನೆ ಮತ್ತು ವರದಿಯ ದಿನಾಂಕದ ನಡುವೆ ಕಂಪನಿಯ ಆರ್ಥಿಕ ಸ್ಥಿತಿಯನ್ನು ಬಾಧಿಸುವ ವಾಸ್ತವಿಕ ಬದಲಾವಣೆಗಳು ಮತ್ತು ಬಾಧ್ಯತೆಗಳು ಇರುವುದಿಲ್ಲ.

27. ಕಂಪನಿಯ ಮುಂದುವರಿಕೆ ಸ್ಥಿತಿಗತಿ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಗಳನ್ನು ಪ್ರಭಾವಿಸುವ, ನಿಬಂಧಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧಿಕರಣಗಳು ಹೊರಡಿಸಿದ ಗಣನೀಯವಾದ ಮತ್ತು ವಾಸ್ತವಿಕ ಆದೇಶಗಳ ವಿವರಗಳು:

ಕಂಪನಿಯ ಮುಂದುವರಿಕೆ ಸ್ಥಿತಿಗತಿ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಗಳನ್ನು ಪ್ರಭಾವಿಸುವಂತಹ ಆದೇಶಗಳನ್ನು ನಿಬಂಧಕರು/ ನ್ಯಾಯಾಲಯಗಳು ಹೊರಡಿಸಿರುವುದಿಲ್ಲ.

28. ಹಣಕಾಸು ತಃಖ್ತೆಗಳಿಗೆ ಸಂಬಂಧಿಸಿದಂತೆ ಆಂತರಿಕ ಹಣಕಾಸು ನಿಯಂತ್ರಣಗಳ ಪರ್ಯಾಪ್ತತೆಯ ಬಗ್ಗೆ ವಿವರಗಳು:

ಕಂಪನಿಯು ತನ್ನ ವ್ಯಾಪಾರದ ಸ್ವರೂಪ ಹಾಗೂ ತನ್ನ ಕಾರ್ಯಾಚರಣೆಗಳ ಸಂಕೀರ್ಣತೆಗೆ ಹೊಂದುವಂತಹ ಪರ್ಯಾಪ್ತವಾದ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ನಿರ್ವಹಿಸುತ್ತಿದೆ. ಲೆಕ್ಕಪರಿಶೋಧನಾ ಸಮಿತಿಯು ಕಂಪನಿ ಆಂತರಿಕ ನಿಯಂತ್ರಣದ ಪರಿಣಾಮಕಾರಿ ಗುಣ ಮತ್ತು ಪರ್ಯಾಪ್ತತೆಯನ್ನು ಪರಿಶೀಲಿಸುತ್ತದೆ ಹಾಗೂ ಲೆಕ್ಕಪರಿಶೋಧನಾ ಶಿಫಾರಸ್ಸುಗಳ ಜಾರಿಗೊಳಸುವಿಕೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ.

29. ಶಕ್ತಿ ಸಂರಕ್ಷಣೆ, ತಂತ್ರಜ್ಞಾನ ವಿಲೀನ ಹಾಗೂ ವಿದೇಶಿ ವಿನಿಮಯ ಮತ್ತು ಹೊರಹರಿವು:

ಕಂಪನಿಯು ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರುವುದಿಲ್ಲ ಮತ್ತು ನೀರಾವರಿ ಯೋಜನೆಗಳ ಅನುಷ್ಠಾನದಲ್ಲಿ ತನ್ನನ್ನು

ತೊಡಗಿಸಿಕೊಂಡಿದೆ. ಹಾಗಾಗಿ ಈ ಶೀರ್ಷಿಕೆಗಳಡಿ ಒದಗಿಸುವ ವಿವರಗಳ್ಯಾವುದೂ ಇರುವುದಿಲ್ಲ. ಕಂಪನಿಯು ವಿದೇಶಿ ವಿನಿಮಯವನ್ನು ಗಳಿಸಿರುವುದಿಲ್ಲ ಹಾಗೂ ವಿದೇಶಿ ವಿನಿಮಯದ ಹೊರಹರಿವೂ ಇರುವುದಿಲ್ಲ.

30. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ:

ಕಂಪನಿಯ ಮಂಡಳಿಯಿಂದ ಅನುಮೋದಿತ ಗೊಂಡಿರುವ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿ.ಎಸ್.ಆರ್.) ಕಾರ್ಯನೀತಿಯನ್ನು **ಅನುಬಂಧ–5** ರಲ್ಲಿ ಒದಗಿಸಲಾಗಿದೆ. ಕಂಪನಿ ಲಾಭಗಳಿಸುವ ಉದ್ದೇಶ ಹೊಂದಿರುವ ಸಂಸ್ಥೆಯಲ್ಲ. ಕಂಪನಿಯ ಕೇಂದ್ರ ಗಮನ ಕರ್ನಾಟಕ ಸರ್ಕಾರ ವಹಿಸಿರುವ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದಾಗಿದೆ. ರೈತರಿಂದ ವಸೂಲಿಯಾಗುವ ನೀರಿನ ಕರಗಳ ಮೂಲಕ ಪ್ರಾಪ್ತವಾಗುವ ಆದಾಯ ಅತ್ಯಲ್ಪವಾಗಿದ್ದು ನೀರಾವರಿಗೆಂದು ಬಿಡುಗಡೆ ಮಾಡಿದ ನೀರಿನಿಂದ ಯಾವುದೇ ಲಾಭಗಳನ್ನೂ ಪಡೆದುಕೊಳ್ಳಲು ಸಾಧ್ಯವಿರುವುದಿಲ್ಲ. ಹೀಗಾಗಿ, ಯೋಜನೆಯ ಪ್ರಯೋಜನವು ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಕಂಪನಿಗೆ ನೇರವಾಗಿ ಆದಾಯವನ್ನು ತರದಿದ್ದರೂ ಸಹ, ನೀರಾವರಿ ಕಾರಣದಿಂದಾಗಿ, ಕೃಷಿ ಆದಾಯದ ಹೆಚ್ಚಳದಿಂದಾಗಿ ಯೋಜನಾ ಪ್ರದೇಶದ ಜನರ ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಉನ್ನತಿಕರಿಸುವಲ್ಲಿ ಇದು ನೆರವಾಗಿರುತ್ತದೆ.

ಕಂಪನಿಯು ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 135(1) ರ ಅಡಿ ನಿಗದಿಪಡಿಸಿರುವಂತೆ ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಕಂಪನಿಯು ನಿವ್ವಳ ಲಾಭಗಳಿಸಲಿಲ್ಲವಾದ್ದರಿಂದ, ಸಿಎಸ್‌ಆರ್ ಅಡಿಯಲ್ಲಿ ಯಾವುದೇ ಖರ್ಚು ಮಾಡಿರುವುದಿಲ್ಲ.

31. ಲೆಕ್ಕಪರಿಶೋಧಕರ ವರದಿಯಲ್ಲಿನ ಪರಿಶೀಲನೆಗಳಿಗೆ ಉತ್ತರಗಳು:

ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಉಲ್ಲೇಖಿಸಿರುವಂತೆ ಹಣಕಾಸು ತಃಖ್ತೆಗಳ ಭಾಗವಾದ ಅನುಕ್ರಮವಾದ ಟಿಪ್ಪಣಿಗಳಲ್ಲಿ 2017–18ರ ಸಾಲಿನ ಲೆಕ್ಕಪತ್ರಗಳ ಮೇಲಿನ ತಮ್ಮ ವರದಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಪರಿಶೀಲನೆಗಳು/ ಒದಗಿಸಿರುವ ಅಭಿಪ್ರಾಯಗಳಿಗೆ ಉತ್ತರಗಳನ್ನು ಒದಗಿಸಲಾಗಿದ್ದು ಅವು ಸ್ವಯಂವೇದ್ಯವಾಗಿವೆ. ಆದರೆ, ಮಹತ್ವದ ಪರಿಶೀಲನೆಗಳಿಗೆ ನಿರ್ದೇಶಕರ ವರದಿಗೆ ನೀಡಿರುವ ಜೋಡಿಕೆಯಲ್ಲಿ ವಿವರವಾದ ಉತ್ತರಗಳನ್ನು ಒದಗಿಸಲಾಗಿದೆ.

32. ಮೆ. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ಯೋಜನೆಗಳನ್ನು ವರ್ಗಾಯಿಸಿರುವುದು :

ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಡಬ್ಲ್ಯೂಆರ್‌ಡಿ 35 ವಿಇ ಬಿವೈಎಇಇ 2016 ದಿನಾಂಕ 20.08.2016ರ ಮೂಲಕ ಎತ್ತಿನಹೊಳೆ ಅಂತರ್–ಸಂಪರ್ಕಿತ ಕುಡಿಯುವ ನೀರು ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಈ ಯೋಜನೆಗಳಿಗೆ ಸಂಬಂಧಿತ ಯೋಜನೆಗಳನ್ನು ಹಾಗೂ ಕರ್ನಾಟಕದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳಿಗೆ ಬರ ಪೀಡಿತ ಪ್ರದೇಶಗಳ ನೀರಿನ ಅಗತ್ಯತೆಯನ್ನು ಪೂರೈಸುವ ಯೋಜನೆಗಳು ಮತ್ತು ಮುಂದುವರೆದುಕೊಂಡು ಹೋಗುತ್ತಿರುವ ಇತರೆ ಯಾವುದಾದರೂ ಯೋಜನೆಗಳು ಇದ್ದಲ್ಲಿ, ಅವುಗಳನ್ನು ಈ ಕಂಪನಿಗೆ ವರ್ಗಾಯಿಸಿತು. ಸರ್ಕಾರಿ ಆದೇಶ ಸಂಖ್ಯೆ ಡಬ್ಲ್ಯೂಆರ್‌ಡಿ 130 ವಿಇಬಿವೈಎಇಇ 2016 ದಿನಾಂಕ 18.11.2016ರ ಪ್ರಕಾರ ಕರ್ನಾಟಕ ಸರ್ಕಾರವು ತಾತ್ವಿಕವಾಗಿ ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಯೋಜನೆ, ವಾಣಿವಿಲಾಸ ಸಾಗರ, ಗಾಯಿತ್ರಿ ಜಲಾಶಯದ ಮುಂದುವರೆದುಕೊಂಡು ಹೋಗುತ್ತಿರುವ ಕಾಮಗಾರಿಗಳ ಆಸ್ತಿಗಳನ್ನು ಮತ್ತು ಜವಾಬ್ದಾರಿಗಳನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ತಾತ್ವಿಕವಾಗಿ ವರ್ಗಾಯಿಸಿರುವುದು, ಮಂಡಳಿಯು 14–12–12016ರಂದು ನಡೆದ ನಿರ್ದೇಶಕರುಗಳ ಮಂಡಳಿಯಲ್ಲಿ ಮೇಲೆ ತಿಳಿಸಲಾದ ಯೋಜನೆಗಳನ್ನು ಸಂಬಂಧಿತ ಕಚೇರಿಗಳು ಮತ್ತು ಸಂಬಂಧಿತ ಉದ್ಯೋಗಿಗಳ ಜೊತೆಯಲ್ಲಿ 01–01–2017ರಿಂದ ಜಾರಿಗೆ ಬರುವಂತೆ ಮೆ. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವಾಸ್ತವಿಕವಾಗಿ ವರ್ಗಾಯಿಸಿರುವುದಕ್ಕೆ ತನ್ನ ಅನುಮೋದನೆಯನ್ನು ನೀಡಿರುವುದು ಹಾಗೂ ಈ ನಿಟ್ಟಿನಲ್ಲಿ ಒಂದು ಅಧಿಸೂಚನೆಯನ್ನು ನೀಡಿರುವುದು.

31.12.2016ರಲ್ಲಿದ್ದಂತೆ ಮೆ. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವರ್ಗಾಯಿಸಲಾಗಿರುವ ಯೋಜನೆಗಳಿಗೆ ಸಂಬಂಧಿತ ಆಸ್ತಿಗಳನ್ನು ಲೆಕ್ಕಹಾಕಲಾಗಿದೆ ಹಾಗೂ ವಿವರಗಳು ಈ ಕೆಳಗಿನಂತಿರುತ್ತವೆ :

ವಿವರಗಳು	ಮೊತ್ತ (ರೂ. ಕೋಟಿಗಳಲ್ಲಿ)
ನಿವೇಶನಗಳು/ಕಟ್ಟಡಗಳು, ಸ್ಥಾವರಗಳು ಮತ್ತು ಉಪಕರಣಗಳು	180.78
ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ	3,810.23
ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು	285.02
ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು	0.80
ಇತರೆ ಚಾಲ್ತಿ ಆಸ್ತಿಗಳು	13.23
ಒಟ್ಟು	**4,290.06**

33. ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರ ವರದಿ:

ಕಂಪನಿ ಕಾಯ್ದೆ 2013, ಪರಿಚ್ಛೇದ 143(6)(ಬಿ) ಅಡಿ 2017–18ರ ಸಾಲಿಗೆ ಕಂಪನಿಯ ಲೆಕ್ಕಪತ್ರಗಳ ಮೇಲೆ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನೀಡಿರುವ ವರದಿಯನ್ನು ಈ ವರದಿಯ ಒಂದು ಭಾಗವಾಗಿ ಅಡಕಗೊಳಿಸಲಾಗಿದೆ.

34. ನಿರ್ದೇಶಕರುಗಳ ಮಂಡಳಿ:

ಕಳೆದ ಸರ್ವಸದಸ್ಯರ ಸಭೆಯ ದಿನಾಂಕ ಹಾಗೂ ಈ ವರದಿಯ ದಿನಾಂಕದ ನಡುವೆ ನಿರ್ದೇಶಕರುಗಳ ಮಂಡಳಿಯ ರಚನೆಯಲ್ಲಿ ಈ ಕೆಳಗಿನ ಬದಲಾವಣೆಗಳಾಗಿರುತ್ತವೆ :

i. ಶ್ರೀ ಸಿದ್ದರಾಮಯ್ಯ, ಇವರ ಜಾಗದಲ್ಲಿ ಶ್ರೀ ಎಚ್.ಡಿ.ಕುಮಾರ ಸ್ವಾಮಿ, ಗೌರವಾನ್ವಿತ ಮುಖ್ಯ ಮಂತ್ರಿಯವರು, ಕರ್ನಾಟಕ ಸರ್ಕಾರ,ಇವರನ್ನು 04.06.2018ರಿಂದ ಜಾರಿಗೆ ಬರುವಂತೆ ಕಂಪನಿಯ ನಿರ್ದೇಶಕರು ಮತ್ತು ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ii. ಶ್ರೀ ಎಂ.ಬಿ. ಪಾಟೀಲ್, ಇವರ ಜಾಗದಲ್ಲಿ ಶ್ರೀ ಡಿ.ಕೆ. ಶಿವಕುಮಾರ್, ಗೌರವಾನ್ವಿತ ಜಲಸಂಪನ್ಮೂಲಗಳ ಮಂತ್ರಿಯವರು, ಇವರನ್ನು 03.07.2018ರಿಂದ ಜಾರಿಗೆ ಬರುವಂತೆ ಕಂಪನಿಯ ಉಪಾಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

iii. ಶ್ರೀ ಎಲ್.ಕೆ. ಅಥೀಕ್, ಭಾಆಸೇ, ಇವರ ಜಾಗದಲ್ಲಿ ಶ್ರೀ ಎಂ. ಲಕ್ಷ್ಮೀನಾರಾಯಣ, ಭಾಆಸೇ, ಗೌರವಾನ್ವಿತ ಮುಖ್ಯ ಮಂತ್ರಿಯವರು, ಕರ್ನಾಟಕ ಸರ್ಕಾರ, ಇವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು, ಇವರನ್ನು 04.06.2018ರಿಂದ ಜಾರಿಗೆ ಬರುವಂತೆ ಕಂಪನಿಯ ನಿರ್ದೇಶಕರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

iv. ಶ್ರೀ ಗುರುಪಾದಸ್ವಾಮಿ ಬಿ.ಜಿ., ಇವರ ಜಾಗದಲ್ಲಿ ಶ್ರೀ ಕೆ. ಜೈಪ್ರಕಾಶ್, ಸರ್ಕಾರದ ಕಾರ್ಯದರ್ಶಿಯವರು, ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ, ಇವರನ್ನು 14.06.2018ರಿಂದ ಜಾರಿಗೆ ಬರುವಂತೆ ಕಂಪನಿಯ ನಿರ್ದೇಶಕರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

v. ಶ್ರೀಮತಿ ಕೆ. ರತ್ನಪ್ರಭಾ, ಭಾಆಸೇ ಇವರ ಜಾಗದಲ್ಲಿ ಶ್ರೀ ಟಿ.ಎಂ. ವಿಜಯ್ ಭಾಸ್ಕರ್, ಭಾಆಸೇ, ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ಇವರನ್ನು 18.07.2018ರಿಂದ ಜಾರಿಗೆ ಬರುವಂತೆ ಕಂಪನಿಯ ನಿರ್ದೇಶಕರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

vi. ಶ್ರೀ ಎಂ. ಲಕ್ಷ್ಮೀನಾರಾಯಣ, ಭಾಆಸೇ ಇವರ ಜಾಗದಲ್ಲಿ ಶ್ರೀ ಡಾ. ಇ.ವಿ. ರಮಣ ರೆಡ್ಡಿ, ಭಾಆಸೇ ಎ ಪ್ರಧಾನ ಕಾರ್ಯದರ್ಶಿಯವರು, ಸನ್ಮಾನ್ಯ ಮುಖ್ಯಮಂತ್ರಿ ಅವರು ಇವರನ್ನು 18.07.2018ರಿಂದ ಜಾರಿಗೆ ಬರುವಂತೆ ಕಂಪನಿಯ ನಿರ್ದೇಶಕರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

vii. ಡಾ. ಶಾಲಿನಿ ರಜನೀಶ್, ಭಾಆಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಇಲಾಖೆ, ಇವರನ್ನು 06.08.2018ರಿಂದ ಜಾರಿಗೆ ಬರುವಂತೆ ಕಂಪನಿಯ ಮಹಿಳಾ ನಿರ್ದೇಶಕರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

viii. ಶ್ರೀ ಡಿ.ಎನ್. ದೇಸಾಯಿ ಮತ್ತು ಡಾ. ವಿ.ಪಿ ಹುಗ್ಗಿ, ಇವರುಗಳ ಕಂಪನಿಯ ಸ್ವತಂತ್ರ ನಿರ್ದೇಶಕರ ಹುದ್ದೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ ಜಸಂಇ 124 ಕೆಬಿಎನ್ 2018 ದಿನಾಂಕ 04.06.2018ರ ಅನುಸಾರ, 29.05.2018ರಿಂದ ಜಾರಿಗೆ ಬರುವಂತೆ ಮುಕ್ತಾಯಗೊಂಡಿರುತ್ತದೆ. ತರುವಾಯ, ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಜಸಂಇ 93 vi ಬ್ಯಾಇ 2018 (3) ದಿನಾಂಕ 23.08.2018 (1) ತನ್ನ ಅಧಿಸೂಚನೆ ಸಂಖ್ಯೆ ಜಸಂಇ 93 vi ಬ್ಯಾಇ 2018 (3) ದಿನಾಂಕ 23.08.2018 (2) ಹಾಗೂ ತನ್ನ ಅಧಿಸೂಚನೆ ಸಂಖ್ಯೆ ಜಸಂಇ 93 vi ಬ್ಯಾಇ 2018 (3) ದಿನಾಂಕ 23.08.2018 (3)ರ ಮೂಲಕ ಈ ಕೆಳಗಿನಂತೆ ಸ್ವತಂತ್ರ ನಿರ್ದೇಶಕರುಗಳನ್ನು ನೇಮಕ ಮಾಡಲಾಗಿರುವುದು :

ಎ) ಶ್ರೀ ಡಿ.ಎನ್. ದೇಸಾಯಿ;

ಬಿ) ಶ್ರೀ ಎಸ್.ಎಸ್. ಮಗದಾಳ್; ಹಾಗೂ

ಸಿ) ಪ್ರೊ. ಎಂ.ಎಸ್. ಮೋಹನ್ ಕುಮಾರ್

ಶ್ರೀ ಸಿದ್ದರಾಮಯ್ಯನವರು ನಿರ್ದೇಶಕರು ಮತ್ತು ಅಧ್ಯಕ್ಷರಾಗಿ, ಶ್ರೀ ಎಂ.ಬಿ. ಪಾಟೀಲ್, ಇವರು ನಿರ್ದೇಶಕರು ಮತ್ತು ಉಪಾಧ್ಯಕ್ಷರಾಗಿ ಹಾಗೂ ಶ್ರೀಮತಿ ಕೆ. ರತ್ನ ಪ್ರಭಾ, ಭಾಆಸೇ, ಶ್ರೀ ಎಂ. ಲಕ್ಷ್ಮೀನಾರಾಯಣ,ಭಾಆಸೇ, ಶ್ರೀ ಎಲ್.ಕೆ. ಅಥೀಕ್, ಭಾಆಸೇ, ಶ್ರಿ ಗುರುಪಾದಸ್ವಾಮಿ ಬಿ.ಜಿ ಹಾಗೂ ಡಾ. ವಿ.ಪಿ. ಹುಗ್ಗಿ, ಇವರುಗಳು ನಿರ್ದೇಶಕರುಗಳಾಗಿ ತಮ್ಮ ಅಧಿಕಾರದ ಅವಧಿಯಲ್ಲಿ ಸಲ್ಲಿಸಿದ ಅಮೂಲ್ಯ ಸೇವೆಗಳನ್ನು ಈ ಮೂಲಕ ಸ್ಮರಿಸುತ್ತಿದೆ.

35. ನಿರ್ದೇಶಕರ ಜವಾಬ್ದಾರಿ ತಃಖ್ತೆ:

ಕಂಪನಿ ಕಾಯ್ದೆ, 2013, ಪರಿಚ್ಛೇದ 134 (3)(ಸಿ) ಅನ್ವಯ ನಿರ್ದೇಶಕರು ಹೇಳುವುದೇನೆಂದರೆ:

ಅ) ವಾರ್ಷಿಕ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆಯಲ್ಲಿ ವಾಸ್ತವಿಕ ಪಥಾಂತರಗಳಿಗೆ ಸೂಕ್ತ ವಿವರಣೆಯೊಂದಿಗೆ ಅನ್ವಯವಾಗುವ ಲೆಕ್ಕ ಪ್ರಮಾಣಗಳನ್ನು ಅನುಸರಿಸಲಾಗಿದ್ದು, ಈ ನಿಟ್ಟಿನಲ್ಲಿ, ಈ ವರದಿಯಲ್ಲಿ

ಈ ಮುಂಚೆ ಉತ್ತರಿಸಲಾಗಿರುವ ಶಾಸನಬದ್ಧ ಲೆಕ್ಕಪರಿಶೋಧಕರ ಪರಿಶೀಲನೆಗಳಿಗೆ ಬದ್ಧವಾಗಿ ಕಾರ್ಯನಿರ್ವಹಿಸಲಾಗಿದೆ.

ಆ) ನಿಮ್ಮ ನಿರ್ದೇಶಕರುಗಳು ವಿವೇಕಯುತವಾದ ಲೆಕ್ಕ ಕಾರ್ಯನೀತಿಗಳನ್ನು ಆಯ್ಕೆಮಾಡಿ ಅವನ್ನು ನಿಯತವಾಗಿ ಅನ್ವಯಿಸಿರುತ್ತಾರೆ ಹಾಗೂ ಹಣಕಾಸು ವರ್ಷದ ಕೊನೆಯ ಹೊತ್ತಿಗೆ ಕಂಪನಿಯ ಸ್ಥಿತಿಗತಿಗಳ ಬಗ್ಗೆ ಹಾಗೂ ಅದೇ ಅವಧಿಗಾಗಿ ಹಣಕಾಸು ತಃಖ್ತೆಗಳ ಭಾಗವಾದ ಟಿಪ್ಪಣಿ ಸಂಖ್ಯೆ 1 ಮತ್ತು **ಅನುಸೂಚಿ–2** ರಲ್ಲಿನ ಮಹತ್ವದ ಲೇಖಾ ಕಾರ್ಯನೀತಿಗಳಲ್ಲಿ ವಿವರಿಸಲಾಗಿರುವಂತೆ ಕಂಪನಿಯ ಲಾಭ ಮತ್ತು ನಷ್ಟದ ತಃಖ್ತೆಯ ಬಗ್ಗೆ ನೈಜವಾದ ಮತ್ತು ನಿಷ್ಪಕ್ಷಪಾತವಾದ ಚಿತ್ರಣವನ್ನು ಒದಗಿಸುವಂತಹ ತೀರ್ಮಾನಗಳು ಮತ್ತು ಅಂದಾಜುಗಳನ್ನು ಮಾಡಲಾಗಿದೆ;

ಇ) ಕಂಪನಿಯ ಆಸ್ತಿಗಳನ್ನು ಕಾಪಾಡಿಕೊಳ್ಳಲು ಹಾಗೂ ಮೋಸ ಮತ್ತಿತರ ಅಕ್ರಮಗಳನ್ನು ಪತ್ತೆಮಾಡಲು ಹಾಗೂ ತಡೆಗಟ್ಟಲು ಕಾಯ್ದೆಯ ಉಪಬಂಧಗಳ ಅನ್ವಯ ಪರ್ಯಾಪ್ತವಾದ ಲೆಕ್ಕದಾಖಲೆಗಳ ನಿರ್ವಹಣೆಗೆ ಸೂಕ್ತ ಮತ್ತು ಸಮಂಜಸವಾದ ಕ್ರಮಗಳನ್ನು ನಿಮ್ಮ ನಿರ್ದೇಶಕರು ತೆಗೆದುಕೊಂಡಿರುತ್ತಾರೆ.

ಈ) ನಿಮ್ಮ ನಿರ್ದೇಶಕರು ವಾರ್ಷಿಕ ಹಣಕಾಸು ತಃಖ್ತೆಗಳನ್ನು ಮುಂದುವರೆಯುವ ಆಧಾರದ ಮೇಲೆ ಸಿದ್ಧಪಡಿಸಿರುತ್ತಾರೆ.

36. ಕೃತಜ್ಞತೆಗಳು:

ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿ ಸಲ್ಲಿಸಿದ ಕೊಡುಗೆ ಹಾಗೂ ತೊಡಗಿಸಿದ ಪ್ರಾಮಾಣಿಕ ಪ್ರಯತ್ನಗಳಿಗೆ ನಿಮ್ಮ ನಿರ್ದೇಶಕರು ಕೃತಜ್ಞತೆಗಳನ್ನು ಸಲ್ಲಿಸ ಬಯಸುತ್ತಾರೆ. ನಿಮ್ಮ ನಿರ್ದೇಶಕರು ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ವಿವಿಧ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ನಿರಂತರವಾಗಿ ಒದಗಿಸುತ್ತಾ ಬಂದಿರುವ ಸಹಕಾರ ಮತ್ತು ಬೆಂಬಲಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತಾರೆ.

ನಿರ್ದೇಶಕರುಗಳ ಮಂಡಳಿಗಾಗಿ ಮತ್ತು ಅದರ ಪರವಾಗಿ,

ಸಹಿ/–

ಸ್ಥಳ : ಬೆಂಗಳೂರು **ಹೆಚ್.ಡಿ. ಕುಮಾರಸ್ವಾಮಿ**

ದಿನಾಂಕ : 20.09.2018 ಅಧ್ಯಕ್ಷರು

ನಿರ್ದೇಶಕರುಗಳ ವರದಿಗೆ ಅನುಬಂಧ

ಶಾಸನಬದ್ಧ ಲೆಕ್ಕಪರಿಶೋಧಕರುಗಳ ವರದಿಯಲ್ಲಿ ಗಮನಿಸಲಾಗಿರುವ ಅಂಶಗಳಿಗೆ ಉತ್ತರಗಳು

ಕ್ರ. ಸಂ.	ಉಲ್ಲೇಖ ಸಂಖ್ಯೆ	ಶಾಸನಬದ್ಧ ಲೆಕ್ಕಪರಿಶೋಧಕರುಗಳು ತಮ್ಮ ಲೆಕ್ಕಪರಿಶೋಧನೆಯಲ್ಲಿ ಗಮನಿಸಿರುವ ಅಂಶಗಳು	ಕಂಪನಿಯ ಉತ್ತರ
1	ಟಿಪ್ಪಣಿ ಸಂಖ್ಯೆ 2 ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 2.1	ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 2.1 " ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ" , ಇದರ ಅಡಿಯಲ್ಲಿ ನಿವೃತ್ತಿ ವಯಸ್ಸನ್ನು ತಲುಪಿದಂದು ನಿವೃತ್ತಿಯಾಗುವ ಉದ್ಯೋಗಿಗಳಿಗೆ ಗ್ರಾಚುಯಿಟಿ ಪಾವತಿಗೆ ಸಂಬಂಧಿಸಿದಂತೆ ಲೆಕ್ಕವನ್ನಿಡುವ ಉದ್ದೇಶಕ್ಕಾಗಿ, ಯೋಜನೆಗಳ ವರ್ಗಾವಣೆಯ ಕಾರಣ ಬಾಕಿಯಿರುವ ಕಾಮಗಾರಿಗಳಿಗಾಗಿ ಪಾವತಿಗಳು, ದರ ಹೆಚ್ಚಳಗಳ ಕಾರಣ ಹೆಚ್ಚುವರಿ ಪಾವತಿಗಾಗಿ ಕೋರಿಕೆಗಳು, ಹೆಚ್ಚುವರಿ ಹಣಕಾಸು ವೆಚ್ಚಗಳ ಪ್ರಭಾವ, ಇವೇ ಮುಂತಾದ ವೆಚ್ಚಗಳನ್ನು ನಗದು ಆಧಾರದ ಮೇರೆಗೆ ಲೆಕ್ಕವನ್ನಿಡುತ್ತಿರುವುದು, ಇದು "ಅನುವುಗಳು, ಆಕಸ್ಮಿಕ ಜವಾಬ್ದಾರಿಗಳು ಮತ್ತು ಆಕಸ್ಮಿಕ ಆಸ್ತಿಗಳು" ಇವುಗಳಿಗೆ ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 10ರ ಅನುಸಾರ ಹಾಗೂ "ವರದಿಯು ಸಂಬಂಧಿಸಿರುವ ಅವಧಿಯ ನಂತರದ ಘಟನೆಗಳು" ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 37ರ ಅನುಸಾರ ಆಗಿರುವುದಿಲ್ಲ ಹಾಗೂ ಸವಕಳಿ, ಗೋಚರಿಸುವ/ಸ್ಪರ್ಷಿಸಬಹುದಾದ ಆಸ್ತಿಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಹಾಗೂ ಲಾಭ ಮತ್ತು ನಷ್ಟ ತ:ಖ್ತೆಯ ಮೇಲೆ ಇವುಗಳ ಪ್ರಭಾವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.	(i) ಹೆಚ್ಚುವರಿ ಹಣಕಾಸಿನ ಪ್ರಭಾವ/ಅನುವುಗಳು, ಆಕಸ್ಮಿಕ ಜವಾಬ್ದಾರಿಗಳು ಮತ್ತು ಆಕಸ್ಮಿಕ ಆಸ್ತಿಗಳ ಕಡೆಗೆ ಪಾವತಿಗಳನ್ನು ಸಕ್ಷಮ ಅಧಿಕಾರಿಗಳ ಅನುಮೋದನೆಯನ್ನು ಪಡೆದನಂತರ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಇವುಗಳ ಪ್ರಭಾವವು ಒಂದು ವಿಷಯಕ ಅಂಶವಾಗಿರುವುದಿಲ್ಲ. (ii) ಬೆಳೆ ಪರಿಹಾರ ಹಾಗೂ ನಿವೃತ್ತಿಯ ವಯಸ್ಸನ್ನು ತಲುಪಿದ ಉದ್ಯೋಗಿಗಳು ನಿವೃತ್ತಿಗೊಂಡಾಗ ಪಾವತಿಸಲಾಗುವ ಗ್ರಾಚುಯಿಟಿಯನ್ನು ವಾಸ್ತವಿಕವಾಗಿ ಪಾವತಿಸಿದಂದು ಪರಿಗಣಿಸಲಾಗುವುದು. ಈ ನಿಟ್ಟಿನಲ್ಲಿ ಒಳಗೊಂಡಿರುವ ಮೊತ್ತವು ಒಂದು ವಿಷಯಕ ಅಂಶವಾಗಿರುವುದಿಲ್ಲ.
2	ಟಿಪ್ಪಣಿ ಸಂಖ್ಯೆ 3 – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.10	"ವರಮಾನದ ಪರಿಗಣನೆ ಹಾಗೂ ಇತರೆ ವರಮಾನ" – ಇದರ ಅಡಿಯಲ್ಲಿ ಬಾಡಿಗೆ ಸ್ವೀಕೃತಿಯನ್ನು ನಗದು ಆಧಾರದ ಮೇರೆಗೆ ಲೆಕ್ಕವನ್ನಿಡಲಾಗಿರುವುದು. ಇದು, ವರಮಾನಕ್ಕೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 18ರ ಅನುಸಾರ ಆಗಿರುವುದಿಲ್ಲ ಹಾಗೂ ಇದರ ಪ್ರಭಾವವನ್ನು ತತ್‌ಕ್ಷಣದಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.	ಸ್ವೀಕರಿಸಬೇಕಿರುವ ಬಾಡಿಗೆಯು ಒಂದು ವಿಷಯಕ ಅಂಶವಾಗಿರುವುದಿಲ್ಲವಾದ್ದರಿಂದ ಸ್ವೀಕರಿಸಲಾಗುವ ಬಾಡಿಗೆಯ ಮೊತ್ತವನ್ನು ವಾಸ್ತವಿಕವಾಗಿ ಸ್ವೀಕರಿಸಿದಂದು ಪರಿಗಣಿಸಲಾಗುವುದು.

3	ಟಿಪ್ಪಣಿ ಸಂಖ್ಯೆ 3 – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.4 (v)	ಬಂಡವಾಳೀಕರಿಸಲಾಗುವ ಸಾಲಿಗೆ ಸಂಬಂಧಿತ ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳನ್ನು ಪ್ರಸಕ್ತ ಸಾಲಿನಲ್ಲಿ ಬಂಡವಾಳೀಕರಿಸಲಾದಂತಹ ಆಸ್ತಿಗಳಿಗೆ ಸೇರಿಸಿರುವುದಿಲ್ಲ; ಆ ರೀತಿ ಸೇರಿಸಿರದ ಮೊತ್ತವನ್ನು ತತ್‌ಕ್ಷಣವೇ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ ಹಾಗೂ ಸವಕಳಿ, ಗೋಚರಿಸುವ/ಸ್ಪರ್ಶಿಸಬಹುದಾದ ಆಸ್ತಿಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಹಾಗೂ ಲಾಭ ಮತ್ತು ನಷ್ಟ ತ:ಖ್ತೆಯ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.	ವ್ಯವಹಾರಗಳ ಗಾತ್ರವನ್ನು ಪರಿಗಣಿಸಿದಂತೆ ಒಂದು ನಿರ್ದಿಷ್ಟ ದಿನಾಂಕದ ವೆಚ್ಚವನ್ನು ಗುರುತಿಸುವುದು, ಪರಿಮಾಣೀಕರಿಸುವುದು ಹಾಗೂ ಹಂಚಿಕೆ ಮಾಡುವುದು ಕಾರ್ಯಸಾಧ್ಯವಾಗುವುದಿಲ್ಲ ವಾದ್ದರಿಂದ ಬಂಡವಾಳೀಕರಿಸಲಾದ ಸಾಲಿಗೆ ಸಂಬಂಧಿಸಿರುವ ನಿರ್ಮಾಣದ ವೇಳೆಯಲ್ಲಿನ ವೆಚ್ಚವನ್ನು ಒಂದು ನಿರ್ದಿಷ್ಟ ಸಾಲಿನಲ್ಲಿ ಬಂಡವಾಳೀಕರಿಸಲಾದ ಆಸ್ತಿಗಳಿಗೆ ಹಂಚಿಕೆ ಮಾಡಿರುವುದಿಲ್ಲ. ಬಂಡವಾಳೀಕರಿಸಲಾದ ಆಸ್ತಿಯ ಮೌಲ್ಯವನ್ನು ಪರಿಗಣಿಸಿದಲ್ಲಿ ಒಳಗೊಂಡಿರುವ ಮೌಲ್ಯವು ಒಂದು ವಿಷಯಕ ಅಂಶವಾಗಿರುವುದಿಲ್ಲ.
4	ಟಿಪ್ಪಣಿ ಸಂಖ್ಯೆ 3 – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.5 (iv)	ಇದರ ಅಡಿಯಲ್ಲಿ, ಒಂದು ಗಮನಾರ್ಹ ಮೌಲ್ಯವನ್ನು ಹೊಂದಿರುವಂತಹ ಹಾಗೂ ಮೂಲ ಆಸ್ತಿಗೆ ಸೇರಿಸಲಾಗಿರುವಂತಹ ಒಂದು ಆಸ್ತಿಯ ಭಾಗ/ಭಾಗಗಳಿಗೆ ಸಂಬಂಧಿಸಿದಂತೆ ಬಳಸಬಹುದಾದ ಅವಧಿಯನ್ನು ಪ್ರತ್ಯೇಕವಾಗಿ ನಿರ್ಧಾರಣೆ ಮಾಡಲಾಗಿದ್ದಿತು ಹಾಗೂ ಮೂಲ ಆಸ್ತಿಯ ಶೇಷಾತ್ಮಕ ಬಳಸಬಹುದಾದ ಅವಧಿಯ ಮೇಲೆ ಲೆಕ್ಕಹಾಕುವ ಬದಲು, ಸ್ವತಂತ್ರವಾಗಿ ಅದರ ಬಳಸಬಹುದಾದ ಅಂದಾಜು ಅವಧಿಯ ಮೇಲೆ ಸವಕಳಿಯನ್ನು ಲೆಕ್ಕಹಾಕಲಾಗಿದ್ದಿತು, ಇದು "ಆಸ್ತಿಗಳು, ಸ್ಥಾವರ ಮತ್ತು ಉಪಕರಣಗಳು"– ಇವುಗಳಿಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 16ರ ಅನುಸಾರ ಆಗಿರಲಿಲ್ಲ. ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರಲಿಲ್ಲ.	ಒಂದು ಆಸ್ತಿಯ ಒಂದು ಭಾಗ/ಭಾಗಗಳ ಮೌಲ್ಯವು ಒಂದು ಆಸ್ತಿಯ ಒಟ್ಟಾರೆ ಮೌಲ್ಯಕ್ಕೆ ಹೋಲಿಸಿದಲ್ಲಿ ಗಮನಾರ್ಹವಾಗಿರುತ್ತದೆ ಹಾಗೂ ಅಂತಹ ಭಾಗ/ಭಾಗಗಳ ಬಳಸುವಿಕೆ ಅವಧಿಯು ಉಳಿಕೆ ಆಸ್ತಿಯ ಬಳಸಬಹುದಾದ ಅವಧಿಗಿಂತ ವಿಭಿನ್ನವಾಗಿರುತ್ತದೆ, ಅಂತಹ ಗಮನಾರ್ಹವಾದ ಭಾಗದ ಬಳಸಬಹುದಾದ ಅವಧಿಯನ್ನು ಪ್ರತ್ಯೇಕವಾಗಿ ನಿರ್ಧಾರಣೆ ಮಾಡಲಾಗುವುದು ಹಾಗೂ ಆಸ್ತಿಯ ಅಂತಹ ಗಮನಾರ್ಹವಾದ ಭಾಗಕ್ಕೆ ಅದರ ಅಂದಾಜು ಮಾಡಲ್ಪಟ್ಟ ಬಳಸಬಹುದಾದ ಅವಧಿಗೆ ನೇರ ಮಾರ್ಗ ಪದ್ಧತಿಯಲ್ಲಿ ಸವಕಳಿಯನ್ನು ಅನುವು ಮಾಡಲಾಗುವುದು. ಮೇಲಿನ ವಾಸ್ತವಾಂಶವನ್ನು ಟಿಪ್ಪಣಿ ಸಂಖ್ಯೆ 3 "ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.5 (iv) ಇದರ ಅಡಿಯಲ್ಲಿ ಬಹಿರಂಗಪಡಿಸಲಾಗಿರುವುದು.
5	ಟಿಪ್ಪಣಿ ಸಂಖ್ಯೆ 3 – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.6	ಇದರಲ್ಲಿ ಕಂಪನಿಯು ತಿಳಿಸಿರುವ ಕಾರಣಗಳಿಗಾಗಿ, ಆಸ್ತಿಗಳು ದುರ್ಬಾಲಗೊಂಡಿರುವ ಕಾರಣದಿಂದಾಗಿ ನಷ್ಟಗಳು ಸಂಭವಿಸಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದಾಗಿ ತಿಳಿಸಿರುವುದು. ಆಸ್ತಿಗಳು ದುರ್ಬಾಲಗೊಂಡಿರುವ ಕಾರಣದಿಂದಾಗಿ ಸಂಭವಿಸಿರಬಹುದಾದ ನಷ್ಟಗಳನ್ನು ಖಚಿತಪಡಿಸಿಕೊಳ್ಳದಿರುವುದು "ಆಸ್ತಿಗಳು ದುರ್ಬಲಗೊಳ್ಳುವಿಕೆ" – ಇದಕ್ಕೆ ಸಂಬಂಧಿಸಿದ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 36ರ ಅನುವುಗಳನ್ನು ಅನುಸರಿಸಿರುವಲ್ಲಿ ಪರಿಣಮಿಸಿದ್ದಿತು ಹಾಗೂ ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.	ಈ ನಿಟ್ಟಿನಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತವು, ಟಿಪ್ಪಣಿ ಸಂಖ್ಯೆ 3.6ರಲ್ಲಿ ಬಹಿರಂಗಪಡಿಸಿರುವುದು.

6	ಟಿಪ್ಪಣಿ ಸಂಖ್ಯೆ 5 (i) (ಡಿ)	ಇದರ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಬಂಡವಾಳೀಕರಿಸಲಾದ ರೂ.233.88 ಕೋಟಿ ಮೊತ್ತದಷ್ಟು ಸ್ಪರ್ಶಿಸಬಹುದಾದ/ಗೋಚರ ಆಸ್ತಿಗಳು ಈ ಹಿಂದಿನ ಸಾಲುಗಳಲ್ಲಿ ಪೂರ್ಣಗೊಂಡಂತಹ ಹಾಗೂ ಉದ್ದೇಶಿತ ಬಳಕೆಗೆ ಸಿದ್ಧವಿದ್ದಂತಹ ಆಸ್ತಿಗಳಿಗೆ ಸಂಬಂಧಿಸಿರುವವುಗಳು ಹಾಗೂ ಈ ಆಸ್ತಿಗಳನ್ನು ಬಂಡವಾಳೀಕರಿಸಲಾದ ಸಾಲಿನಿಂದ ಮುಂದಕ್ಕೆ ಅನ್ವಯಿಸುವಂತೆ ಬಳಸಬಹುದಾದ ಉಳಿಕೆ ಅವಧಿಗೆ ಸವಕಳಿಯನ್ನು ಲೆಕ್ಕಹಾಕಲಾಗಿದ್ದಿತು. ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.	ಈ ಹಿಂದಿನ ಸಾಲುಗಳಲ್ಲಿ ಪೂರ್ಣಗೊಂಡಿದ್ದ ಹಾಗೂ ಬಳಕೆಗೆ ಸಿದ್ಧಗೊಂಡಿದ್ದ ಆಸ್ತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು 2017–18 ಹಣಕಾಸು ಸಾಲಿನಲ್ಲಿ ಲಭ್ಯಗೊಳಿಸಲಾಯಿತಾದ್ದರಿಂದ ಅವುಗಳನ್ನು 2017–18 ಹಣಕಾಸು ಸಾಲಿನಲ್ಲಿ ಬಂಡವಾಳೀಕರಿಸಲಾಯಿತು. ಅದರ ತತ್ಪರಿಣಾಮವು ಒಂದು ವಿಷಯಕ ಅಂಶವಾಗಿರುವುದಿಲ್ಲ.
7	ಟಿಪ್ಪಣಿ ಸಂಖ್ಯೆ 5 (i) (ಇ) (1)	ಇದರ ಅಡಿಯಲ್ಲಿ ಬಂಡವಾಳೀಕರಿಸಲಾದ ಭೂಮಿಯ ಮೌಲ್ಯವು ಸಂಬಂಧಿತ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಂದ ಸ್ವೀಕರಿಸಲಾದ ಬಳಕೆ ಪ್ರಮಾಣಪತ್ರಗಳ ಆಧಾರದ ಮೇರೆಗೆ ಆಗಿದ್ದಿತು ಹಾಗೂ ಭೂಸ್ವಾಧೀನ ತೀರ್ಪುಗಳು/ಒಪ್ಪಿಗೆ ತೀರ್ಪುಗಳು/ಬಡ್ಡಿ, ಇತ್ಯಾದಿ ವಿವಿಧ ಕಾರ್ಯವಿಧಾನಗಳು ಅಂತಿಮ ರೂಪಕ್ಕೆ ಬರುವ ಷರತ್ತಿಗೆ ಒಳಪಟ್ಟಿದ್ದಿತು, ಹಾಗೂ ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.	ಭೂಸ್ವಾಧೀನ ದ ಕಡೆಗೆ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ ಬಿಡುಗಡೆಗೊಳಿಸಲಾದ ಮೊತ್ತಗಳನ್ನು, ಸಂಬಂಧಿತ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಂದ ಹಣ ಬಳಕೆ ಪ್ರಮಾಣಪತ್ರಗಳು ಸ್ವೀಕೃತಗೊಂಡ ನಂತರವಷ್ಟೇ ಹೊಂದಾಣಿಕೆ ಮಾಡಲಾಗುವುದು.
	ಟಿಪ್ಪಣಿ ಸಂಖ್ಯೆ 5 (i) (ಇ) (2)	ಇದರ ಅಡಿಯಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ ಮೊತ್ತವನ್ನು ಬಿಡುಗಡೆಗೊಳಿಸುವುದು ಬಾಕಿಯಿದ್ದಂತೆ ಭೂಸ್ವಾಧೀನ ದ ಕಡೆಗೆ ರೂ.235.12 ಕೋಟಿ ಮೊತ್ತವನ್ನು ಲೆಕ್ಕಪತ್ರಗಳಲ್ಲಿ ಖರ್ಚಿಗೆ ಹಾಕಲಾಗಿದ್ದಿತು. ಅಷ್ಟರಮಟ್ಟಿಗೆ ಭೂಮಿ ಮತ್ತು ಚಾಲ್ತಿ ಜವಾಬ್ದಾರಿಗಳ ಮೌಲ್ಯವನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿದ್ದಿತು.	ಲೆಕ್ಕಪತ್ರಗಳ ಮೇಲೆ ಇದರ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲವಾದ್ದರಿಂದ, ಲೆಕ್ಕಪತ್ರಗಳಿಗೆ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳಲ್ಲಿ ಸಮರ್ಪಕವಾಗಿ ಬಹಿರಂಗಪಡಿಸಲಾಗಿರುವುದು. (ದಯವಿಟ್ಟು ಟಿಪ್ಪಣಿ ಸಂಖ್ಯೆ 5(i) (ಇ)(1) ಮತ್ತು 5(ಇ)(2)ನ್ನು ಉಲ್ಲೇಖಿಸುವುದು).
	ಟಿಪ್ಪಣಿ ಸಂಖ್ಯೆ 9(ಎ)	ಇದರ ಅಡಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಭೂಸ್ವಾಧೀನ ಅಧಿಕಾರಿಗಳು/ಸಹಾಯಕ ಆಯುಕ್ತರವರುಗಳಲ್ಲಿ ಉಳಿದಿರುವ ರೂ.102.96 ಕೋಟಿ ಮೊತ್ತದಷ್ಟು ಶಿಲ್ಕುಗಳಿಗೆ ಸಂಬಂಧಿಸಿದಂತೆ ಉಳಿದಿರುವ ಮೊತ್ತಗಳ ಶಿಲ್ಕುಗಳನ್ನು ಖಚಿತಪಡಿಸಿಕೊಳ್ಳುವುದು/ ಹಣ ಬಳಕೆ ವಿವರಗಳನ್ನು ಪಡೆದುಕೊಳ್ಳುವುದು ಬಾಕಿ ಇರುವವು. ಕಂಪನಿಯು ಪ್ರಾರಂಭಗೊಂಡ ದಿನಾಂಕದಿಂದಲೂ ಬಿಡುಗಡೆಗೊಳಿಸಲ್ಪಟ್ಟಿರುವ ಮುಂಗಡಗಳು ಲೆಕ್ಕವನ್ನಿಡದಿರುವ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ ಸಿಬ್ಬಂದಿ ವೆಚ್ಚಗಳ ಕಡೆಗೆ ನೀಡಲಾಗಿರುವ ಮುಂಗಡ ಹಣಕಾಸನ್ನು ಒಳಗೊಂಡಿರುತ್ತವೆ. ಅಷ್ಟರಮಟ್ಟಿಗೆ ಭೂಮಿಯ ಮೌಲ್ಯವನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು ಹಾಗೂ ಇತರೆ ಚಾಲ್ತಿಯೇತರ ಆಸ್ತಿಗಳನ್ನು ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿರುವುದು. ಸಮನ್ವಯಗೊಳಿಸುವಿಕೆ ಮತ್ತು ವಿವರಗಳ ಅನುಪಸ್ಥಿತಿಯಲ್ಲಿ, ಲೆಕ್ಕಪತ್ರಗಳ ಮೇಲೆ ಅವುಗಳ ಪ್ರಭಾವವನ್ನು ಪರಿಮಾಣೀಕರಿಸಲಾಗುವುದಿಲ್ಲ.	ಈ ಮೊತ್ತವು ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ ಬಿಡುಗಡೆಗೊಳಿಸಲ್ಪಟ್ಟಿರುವ ಹಾಗೂ ಹಣ ಬಳಕೆ ಪ್ರಮಾಣಪತ್ರಗಳನ್ನು ಸ್ವೀಕರಿಸದಿರುವ ಹಣಕಾಸನ್ನು ಪ್ರತಿನಿಧಿಸುತ್ತದೆ. ಈ ಮೊತ್ತವು, ಸಿಬ್ಬಂದಿ ವೆಚ್ಚಗಳು ಮತ್ತಿತರೆ ವೆಚ್ಚಗಳಿಗಾಗಿ ಪ್ರಾರಂಭದಿಂದಲೂ ನೀಡಲ್ಪಟ್ಟಿರುವ ಮುಂಗಡಗಳನ್ನೂ ಸಹ ಪ್ರತಿನಿಧಿಸುತ್ತವೆ. ವಿಶೇಷ ಭೂಸ್ವಾಧೀನ ಅಧಿಕಾರಿಗಳಿಂದ ಹಣ ಬಳಕೆ ಪ್ರಮಾಣಪತ್ರಗಳು ಸ್ವೀಕೃತಗೊಂಡನಂತರ ಅಗತ್ಯ ಹೊಂದಾಣಿಕೆಗಳನ್ನು ಮಾಡಲಾಗುವುದು.

8	ಟಿಪ್ಪಣಿ ಸಂಖ್ಯೆ 5 (i) (ಎಫ್)	ಇದರ ಅಡಿಯಲ್ಲಿ 52,507 ಎಕರೆಗಳಷ್ಟು ಭೂಮಿಗೆ ಸಂಬಂಧಿಸಿದಂತೆ ಕಂಪನಿಯ ಪರವಾಗಿ ವರ್ಗಾವಣೆ ನಮೂದುಗಳನ್ನು ಮಾಡುವುದು ಬಾಕಿಯಿದ್ದಿತು.	ಭೂಮಿಯ ಮೇಲಿನ ಹಕ್ಕುಪತ್ರದ ವರ್ಗಾವಣೆಯು ಒಂದು ರೀತಿಯಲ್ಲಿ ಅವಿರತವಾಗಿ ನಡೆದುಕೊಂಡು ಹೋಗುತ್ತಿರುವ ಪ್ರಕ್ರಿಯೆಯಾಗಿರುತ್ತದೆ ಹಾಗೂ ಬಾಕಿಯಿರುವ ಎಲ್ಲಾ ಪ್ರಕರಣಗಳಲ್ಲಿಯೂ ಕಂಪನಿಯ ಪರವಾಗಿ ವರ್ಗಾವಣೆ ನಮೂದುಗಳನ್ನು ಮಾಡುವ ಸಲುವಾಗಿ ಪ್ರಯತ್ನಗಳನ್ನು ಮಾಡುತ್ತಲೇ ಇರುತ್ತದೆ.
9	ಟಿಪ್ಪಣಿ ಸಂಖ್ಯೆ 5 (i) (ಎಚ್)	ಇದರ ಅಡಿಯಲ್ಲಿ "ಭೂಮಿ/ಕಟ್ಟಡಗಳು, ಸ್ಥಾವರಗಳು/ಯಂತ್ರೋಪಕರಣಗಳು ಮತ್ತು ಉಪಕರಣಗಳು, ಇದಕ್ಕೆ ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 16ರ ಅಗತ್ಯತೆಯಂತೆ, ಬಳಸಬಹುದಾದ ವಿವಿಧ ಅವಧಿಗಳನ್ನು ಹೊಂದಿರುವ ಅಣೆಕಟ್ಟೆಗಳು ಮತ್ತು ಮುಳುಗಡೆ ಪ್ರದೇಶಗಳು, ನಾಲೆಗಳು, ಶಾಖಾ ನಾಲೆಗಳು, ವಿತರಣಾ ನಾಲೆಗಳು ಮತ್ತು ಪಾರ್ಶ್ವಸ್ಥ ನಾಲೆಗಳು, ಕೆರೆಗಳು ಮತ್ತು ರಸ್ತೆಗಳು, ಸೇತುವೆಗಳು ಮತ್ತು ಅಡ್ಡಗಾಲುವೆಗಳು/ನೆಲಗಾಲುವೆಗಳು ಸ್ಥಾವರಗಳು ಮತ್ತು ಯಂತ್ರೋಪಕರಣಗಳು, ಮುಂತಾದವುಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಆಸ್ತಿಗಳ ಭಾಗಗಳನ್ನು ಇನ್ನೂ ಗುರುತಿಸಬೇಕಿರುತ್ತದೆ. ಸವಕಳಿ, ಗೋಚರಿಸುವ/ಸ್ಪರ್ಶಿಸಬಹುದಾದ ಆಸ್ತಿಗಳು, ಹಾಗೂ ಲಾಭ ಮತ್ತು ನಷ್ಟ ತ:ಖ್ತೆಯ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.	ಅಣೆಕಟ್ಟೆಗಳು ಮತ್ತು ಮುಳುಗಡೆಗೊಂಡಿರುವ ಪ್ರದೇಶಗಳು, ಏತ ನೀರಾವರಿ ಯೋಜನೆಗಳು, ನಾಲೆಗಳು, ಕೆರೆಗಳು ಮತ್ತು ರಸ್ತೆಗಳು,ಸೇತುವೆಗಳು ಮತ್ತು ನೆಲಗಾಲುವೆ/ಅಡ್ಡಗಾಲುವೆಗಳಿಗೆ ಸಂಬಂಧಿಸಿದಂತೆ ಸಂಯೋಜಿತ ಆಸ್ತಿಗಳ ಭಾಗಗಳನ್ನು ಗುರುತಿಸುವ ಪ್ರಕ್ರಿಯೆಯ ಅಡಿಯಲ್ಲಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅಗತ್ಯವಿರುವಂತೆ ಮುಖ್ಯ ಇಂಜಿನಿಯರುಗಳಿಂದ ಪ್ರಮಾಣೀಕರಣಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಈ ಪ್ರಕ್ರಿಯೆಯು ಪ್ರಗತಿಯಲ್ಲಿರುವುದು ಮತ್ತು ಇದು ಪೂರ್ಣಗೊಂಡನಂತರ ಅಗತ್ಯವಿರುವ ಆಸ್ತಿಗಳನ್ನು ಪುನರ್–ವರ್ಗೀಕರಿಸಲಾಗುವುದು ಮತ್ತು ಅದರಂತೆಯೇ ಸವಕಳಿಯನ್ನು ಪುನರ್–ಲೆಕ್ಕಹಾಕಲಾಗುವುದು ಮತ್ತು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.
10	ಟಿಪ್ಪಣಿ ಸಂಖ್ಯೆ 5 (i) (ಐ)	ಇದರ ಅಡಿಯಲ್ಲಿ, ಸಂಪೂರ್ಣ ವಿವರಗಳನ್ನು ಖಚಿತಪಡಿಸಿಕೊಳ್ಳುವುದು ಬಾಕಿಯಿರುವಂತೆ ಕಟ್ಟಡಗಳು ಮತ್ತು ಕಾಲೋನಿಗಳ ಅಡಿಯಲ್ಲಿ ಸೇರಿಸಲಾಗಿರುವ ಆಂತರಿಕ/ಕಾಲೋನಿ ರಸ್ತೆಗಳು ಮತ್ತು ಕೊಳವೆ ಭಾವಿಗಳಿಗೆ ಕಟ್ಟಡಗಳ ಒಂದು ಭಾಗ ಎಂಬುದಾಗಿ ಭಾವಿಸಿ ಸವಕಳಿಯನ್ನು ಅನುವು ಮಾಡಲಾಗಿರುವುದು ಹಾಗೂ ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.	ಕಟ್ಟಡಗಳು ಮತ್ತು ಕಾಲೋನಿಗಳು ರಸ್ತೆಗಳು ಮತ್ತು ಕೊಳವೆ ಬಾವಿಗಳನ್ನು ಒಳಗೊಂಡಿರುತ್ತವೆ, ಸಂಪೂರ್ಣ ವಿವರಗಳನ್ನು ಖಚಿತಪಡಿಸಿಕೊಳ್ಳುವುದು ಬಾಕಿಯಿರುವಂತೆ, ಇವುಗಳ ಮೇಲೆ ಕಟ್ಟಡದ ಒಂದು ಭಾಗವಾಗಿ ಸವಕಳಿಯನ್ನು ಅನುವು ಮಾಡಲಾಗಿರುವುದು. ಇದರ ತತ್ಪರಿಣಾಮವು ಒಂದು ವಿಷಯಕ ಅಂಶವಾಗಿರುವುದಿಲ್ಲ.
11	ಟಿಪ್ಪಣಿ ಸಂಖ್ಯೆ 5 (ii) (ಎ)	ಇದರ ಅಡಿಯಲ್ಲಿ 1 ಏಪ್ರಿಲ್ 2010ರಲ್ಲಿದ್ದಂತೆ ವೈಯಕ್ತಿಕ ಚರಾಸ್ತಿಗಳು, ಕಟ್ಟಡಗಳು ಮತ್ತು ರಸ್ತೆಗಳ ಪ್ರಾರಂಭಿಕ ಶಿಲ್ಕನ್ನು ದಾಖಲಿಸಲು ಕಂಪನಿಗೆ ಸಾಧ್ಯವಾಗಿರುವುದಿಲ್ಲ ಮತ್ತು ಆದ್ದರಿಂದ ಸವಕಳಿಯನ್ನು ಅಂತಹ ಒಂದು ಆಸ್ತಿಯ ಬಳಸಬಹುದಾದ ಅವಧಿಯು ಮುಕ್ತಾಯಗೊಂಡನಂತರವೂ ಅನುವು ಮಾಡುವುದು ಮುಂದುವರೆದುಕೊಂಡು ಹೋಗಿರಬಹುದು. ಗೋಚರಿಸುವ/ಸ್ಪರ್ಶಾರ್ಹ ಆಸ್ತಿಗಳು ಮತ್ತು ಸವಕಳಿಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.	2011–12 ಹಣಕಾಸು ಸಾಲಿನಲ್ಲಿ, ಕಂಪನಿಯು, ಸ್ಥಿರಾಸ್ತಿಗಳಿಗಾಗಿ ಒಂದು ತಂತ್ರಾಂಶ ಅನ್ವಯ ಪ್ಯಾಕೇಜನ್ನು ಅಳವಡಿಸಿಕೊಂಡಿತು. ಆ ರೀತಿ ಅಳವಡಿಸಿಕೊಳ್ಳಲಾದ ಸಮಯದಲ್ಲಿ, ಕಂಪನಿಯು ವೈಯಕ್ತಿಕ ಚಲಿಸಬಹುದಾದ ಆಸ್ತಿಗಳು, ಕಟ್ಟಡಗಳು ಮತ್ತು ರಸ್ತೆಗಳಿಗೆ ಸಂಬಂದಿಸಿದಂತೆ 1 ಏಪ್ರಿಲ್ 2010ರಲ್ಲಿದ್ದಂತೆ ಪ್ರಾರಂಭಿಕ ಶಿಲ್ಕನ್ನು ಊಡಿಕೆ ಮಾಡಲಾಗಲಿಲ್ಲ. ಅದರಂತೆಯೇ, ಸವಕಳಿಯನು ಬ್ಲಾಕು ಆಸ್ತಿಗಳ ಮೇಲೆ ಅನುವು ಮಾಡಲಾಯಿತು, ಇದರಿಂದಾಗಿ ಅದರ ಬಳಸಬಹುದಾದ ಅವಧಿಯು ಮುಕ್ತಾಯಗೊಂಡಿರುವಂತಹ ಆಸ್ತಿಗಳೂ ಸೇರಿರಬಹುದು. ಇದರ ಪ್ರಭಾವವು ಒಂದು ವಿಷಯಕ ಅಂಶವಾಗಿರುವುದಿಲ್ಲ.

12	ಟಿಪ್ಪಣಿ ಸಂಖ್ಯೆ 5 (i) ಜೆ ಮತ್ತು 6 (ಸಿ)	ಇದರ ಅಡಿಯಲ್ಲಿ ಕಂಪನಿಯು ಅಯಕಟ್ಟು ಮತ್ತು ಅಚ್ಚುಕಟ್ಟು ರಸ್ತೆಗಳನ್ನು ಗುರುತಿಸುವ ಪ್ರಕ್ರಿಯೆಯ ಅಡಿಯಲ್ಲಿರುವುದು ಹಾಗೂ ಮಾಲಿಕತ್ವವನ್ನು ಖಚಿತಪಡಿಸಿಕೊಂಡನಂತರ ಹಾಗೂ ಈ ನಿಟ್ಟಿನಲ್ಲಿ ವೆಚ್ಚವನ್ನು ವರ್ಗೀಕರಿಸಿದನಂತರ ಅಗತ್ಯ ಪರಿಗಣನೆಯನ್ನು ಮಾಡಲಾಗುವುದು. ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.	ಕರ್ನಾಟಕ ನೀರಾವರಿ ನಿಗಮ ನಿಯಮಿತದ ಹೆಸರಿನಲ್ಲಿ ಮಾಲಿಕತ್ವದಲ್ಲಿರುವ ಆಯಕಟ್ಟು/ಅಚ್ಚುಕಟ್ಟು ರಸ್ತೆಗಳನ್ನು ಮಾತ್ರ ಕಂಪನಿಯು 2016–17 ಹಣಕಾಸು ಸಾಲಿನಿಂದ ಬಂಡವಾಳೀಕರಿಸಿರುವುದು. ಕಂಪನಿಯು, 2016–17 ಹಣಕಾಸು ಸಾಲಿಗೆ ಮುಂಚಿನ ಅವಧಿಗಳಲ್ಲಿ ಬಂಡವಾಳೀಕರಿಸಲಾಗಿರುವ ಆಯಕಟ್ಟು ಮತ್ತು ಅಚ್ಚುಕಟ್ಟು ರಸ್ತೆಗಳ ಮಾಲಿಕತ್ವವನ್ನು ಗುರುತಿಸುವ ಪ್ರಕ್ರಿಯೆಯಲ್ಲಿರುವುದು, ಮಾಲಿಕತ್ವ, ವರ್ಗೀಕರಣ ಹಾಗೂ ಭರಿಸಲಾಗಿರುವ ವೆಚ್ಚದ ಸ್ವರೂಪ ಇವುಗಳನ್ನು ಖಚಿತಪಡಿಸಿಕೊಂಡನಂತರ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಅಗತ್ಯ ನಮೂದುಗಳನ್ನು ಮಾಡಲಾಗುವುದು ಹಾಗೂ ಅದರಂತೆಯೇ ಸವಕಳಿಯನ್ನು ಲೆಕ್ಕಹಾಕಲಾಗುವುದು ಮತ್ತು ಅನುವು ಮಾಡಲಾಗುವುದು.
13	ಟಿಪ್ಪಣಿ ಸಂಖ್ಯೆ 5 (1) ಮತ್ತು 6 (ಡಿ)	ಇದರ ಅಡಿಯಲ್ಲಿ ಭೂಮಿ/ಕಟ್ಟಡಗಳು ಮುಂತಾದ ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳು /ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಿಗೆ ಸಂಬಂಧಿತ ಆಸ್ತಿಗಳ ಶೀರ್ಷಿಕೆ "ಕೆರೆಗಳು", ಇವುಗಳ ಅಡಿಯಲ್ಲಿ ಸೇರಿಸಲಾಗಿರುವ ಭಾಗಗಳನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಕಂಪನಿಯು ಇರುವುದು ಹಾಗೂ ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.	ಕಂಪನಿಯು, "ಕೆರೆಗಳು" ಈ ಶೀರ್ಷಿಕೆಯ ಅಡಿಯಲ್ಲಿ ಸೇರಿರುವ ಆಸ್ತಿಗಳ ಭಾಗಗಳನ್ನು ಗುರುತಿಸುವ ಪ್ರಕ್ರಿಯೆಯ ಅಡಿಯಲ್ಲಿರುವುದು. ಇದನ್ನು ಪೂರ್ಣಗೊಳಿಸಿದನಂತರ, ಅಂತಹ ಆಸ್ತಿಗಳನ್ನು ಪುನರ್–ವರ್ಗೀಕರಿಸಲಾಗುವುದು ಹಾಗೂ ಅದರಂತೆಯೇ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು
14	ಟಿಪ್ಪಣಿ ಸಂಖ್ಯೆ 6 (ಇ)	ಇದರ ಅಡಿಯಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಅಡಿಯಲ್ಲಿ "ಇತರೆ ನೀರಾವರಿ ನಿರ್ಮಾಣಗಳು", ಇದರ ಅಡಿಯಲ್ಲಿ ತೋರಿಸಲಾಗಿರುವ ರೂ.10.20 ಕೋಟಿ ಮೊತ್ತದಷ್ಟು ಶಿಲ್ಕನ್ನು ಗುರುತಿಸುವ ಹಾಗೂ ಸಮನ್ವಯಗೊಳಿಸುವ ಪ್ರಕ್ರಿಯೆಯ ಅಡಿಯಲ್ಲಿ ಕಂಪನಿಯು ಇರುವುದು.	ಕಂಪನಿಯು, 2016–17 ಹಣಕಾಸು ಸಾಲಿನಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು, ಇದರ ಅಡಿಯಲ್ಲಿ "ಇತರೆ ನೀರಾವರಿ ನಿರ್ಮಾಣಗಳು" ಈ ಶೀರ್ಷಿಕೆಯ ಅಡಿಯಲ್ಲಿ ಬಹಿರಂಗಪಡಿಸಲಾಗಿರುವ ರೂ.7.12 ಕೋಟಿ ಮೊತ್ತದಷ್ಟು ಆಸ್ತಿಗಳನ್ನು ಸಮೀಕ್ಷಿಸಿತು ಹಾಗೂ ಗುರುತಿಸಿತು. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು, ಇದರ ಅಡಿಯಲ್ಲಿ "ಇತರೆ ನೀರಾವರಿ ನಿರ್ಮಾಣಗಳು" ಈ ಶೀರ್ಷಿಕೆಯ ಅಡಿಯಲ್ಲಿನ ರೂ.10.20 ಕೋಟಿ ಮೊತ್ತದಷ್ಟು ಆಸ್ತಿಗಳು ಸಮನ್ವಯಗೊಳ್ಳುವ ಪ್ರಕ್ರಿಯೆಯ ಅಡಿಯಲ್ಲಿರುತ್ತವೆ. ಈ ಬಗ್ಗೆ ವಾಸ್ತವಾಂಶಗಳನ್ನು ಟಿಪ್ಪಣಿ ಸಂಖ್ಯೆ 6(ಇ)ನಲ್ಲಿ ಬಹಿರಂಗಪಡಿಸಲಾಗಿರುವುದು.

15		2016–17 ಸಾಲಿನಲ್ಲಿ, ಕಂಪನಿಯು ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳನ್ನು ಸಮನ್ವಯಗೊಳಿಸಿತು. ಆ ಪ್ರಕ್ರಿಯೆಯಲ್ಲಿ, ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಶಿಲ್ಕುಗಳ ಆಧಾರದ ಮೇರೆಗೆ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ವಿವಿಧ ಆಸ್ತಿಗಳ ಭಾಗಗಳಿಗೆ ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳನ್ನು ಹಾಕಿದ್ದಿತು. ಸಮನ್ವಯಗೊಳಿಸುವಿಕೆ ಪ್ರಕ್ರಿಯೆಯ ಅಡಿಯಲ್ಲಿರುವ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಶಿಲ್ಕುಗಳ ಯಾವುದೇ ಹೊಂದಾಣಿಕೆಯು, ಈಗಾಗಲೇ ಮಾಡಲಾಗಿರುವ ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳ ಹಂಚಿಕೆಯ ಮೇಲೆ ಪ್ರಭಾವವನ್ನು ಬೀರಬಹುದು.	ಸಮನ್ವಯಗೊಳಿಸಿದ ನಂತರ ಇನ್ನೂ ಬಂಡವಾಳೀಕರಿಸಬೇಕಾಗಿರುವ ಆಸ್ತಿಗಳ ಮೌಲ್ಯವನ್ನು ಪರಿಗಣಿಸಿದಲ್ಲಿ, ಮೊತ್ತವು ಒಂದು ವಿಷಯಕ ಅಂಶವಾಗಿರುವುದಿಲ್ಲ.
16		ನಮ್ಮ ಲೆಕ್ಕಪರಿಶೋಧನೆಯ ವೇಳೆಯಲ್ಲಿ, ಕೆಲವು ವಿಭಾಗಗಳಲ್ಲಿ ನಾವು ಕೆಲವು ಲೋಪದೋಷಗಳನ್ನು ಗಮನಿಸಲಾದಂತೆ, ವ್ಯತ್ಯಯಗಳಿಗಾಗಿ ಮೊತ್ತಗಳನ್ನು ಲೆಕ್ಕ ಹಾಕುವುದು, ನಕಾರಾತ್ಮಕ ದರ ವ್ಯತ್ಯಯಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರುಗಳ ಬಿಲ್ಲಿನಿಂದ ವಸೂಲಾತಿ ಮಾಡಬೇಕಾದ ಮೊತ್ತಗಳನ್ನು ಲೆಕ್ಕಹಾಕುವ ಸಲುವಾಗಿ ಒಂದು ಯಥಾರ್ಥತೆಯಿಂದ ಕೂಡಿದ ಸೂಚ್ಯಾಂಕಗಳನ್ನು ಅಳವಡಿಸಿಕೊಳ್ಳುವಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರರುಗಳ ಬಿಲ್ಲುಗಳ ಸಂಸ್ಕರಣಾ ವ್ಯವಸ್ಥೆಯನ್ನು ಕಂಪನಿಯು ಬಲಪಡಿಸುವ ಅಗತ್ಯತೆಯಿರುತ್ತದೆ. ಆಂತರಿಕ ನಿಯಂತ್ರಣಗಳು ಮತ್ತು ಆಂತರಿಕ ಲೆಕ್ಕಪರಿಶೋಧನಾ ಪ್ರಕ್ರಿಯೆಗಳನ್ನು ಇನ್ನೂ ಬಲಪಡಿಸುವ ಅಗತ್ಯತೆಯಿರುತ್ತದೆ.	ಕಂಪನಿಯು ನಕಾರಾತ್ಮಕ ದರ ವ್ಯತ್ಯಯಗಳನ್ನು ಸಂಬಂಧಿತ ಚಾಲ್ತಿ ಬಿಲ್ಲುಗಳಿಂದಲೇ ವಸೂಲಾತಿ ಮಾಡುತ್ತಿರುವುದು ಹಾಗೂ ಗುತ್ತಿಗೆದಾರರುಗಳಿಂದ ಮಾಡಬೇಕಾದ ಬಾಕಿ ಮೊತ್ತಗಳ ವಸೂಲಾತಿಗಾಗಿ ಕ್ರಮಗಳನ್ನು ಕೈಗೊಳ್ಳಲಾಗಿರುವುದು. ಕಂಪನಿಯು ಈ ವ್ಯವಸ್ಥೆಯನ್ನು ಬಲಪಡಿಸುವುದಕ್ಕಾಗಿ ಹಾಗೂ ಸಂಬಂಧಿತ ಚಾಲ್ತಿ ಬಿಲ್ಲುಗಳಿಂದಲೇ ನಕಾರಾತ್ಮಕ ದರ ವ್ಯತ್ಯಯಗಳ ವಸೂಲಾತಿಗಾಗಿ ಸೂಕ್ತ ಕ್ರಮಗಳನ್ನು ಕೈಗೊಂಡಿರುವುದು.
17	ಟಿಪ್ಪಣಿ ಸಂಖ್ಯೆ 17 (ಸಿ)	ನವಂಬರ್ 01, 2006ಕ್ಕೆ ಮುಂಚಿನ ಅವಧಿಯಲ್ಲಿ ಗುತ್ತಿಗೆದಾರರುಗಳಿಗೆ ವಹಿಸಲಾಗಿದ್ದಂತಹ ಕಾಮಗಾರಿಗಳಿಗಾಗಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ಸಿನ ಕಡೆಗೆ ಅನುವು ಮಾಡಿರುವುದಕ್ಕೆ ಸಂಬಂಧಿಸಿದಂತೆ, ಅದನ್ನು ಅಂದಾಜಿನ ಆಧಾರದ ಮೇರೆಗೆ ಮಾಡಲಾಗಿದ್ದಿತು, ಇದರಿಂದಾಗಿ ಲೆಕ್ಕಪತ್ರಗಳ ಮೇಲೆ ಅವುಗಳ ಪ್ರಭಾವವನ್ನು ಪರಿಮಾಣೀಕರಿಸಲಾಗುವುದಿಲ್ಲ.	1999ರಿಂದ ಅಕ್ಟೋಬರ್ 2006ರ ಅವಧಿಯ ಸಂಬಂಧಿತ ದಾಖಲೆಗಳು ಲಭ್ಯವಿಲ್ಲದಿರುವುದರಿಂದ 31.10.2006 ರಲ್ಲಿದ್ದಂತೆ ಬಿಲ್ಲುವಾರು/ ಗುತ್ತಿಗೆದಾರರವಾರು ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ಸನ್ನು ಖಚಿತಪಡಿಸಿಕೊಳ್ಳಲಾಗಿರುವುದಿಲ್ಲ. ಆದ್ದರಿಂದ ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ಸನ್ನು ಒಂದು ಅಂದಾಜು ಆಧಾರದ ಮೇರೆಗೆ ಲೆಕ್ಕವನ್ನಿಡಲಾಗುವುದು.

18	ಟಿಪ್ಪಣಿ ಸಂಖ್ಯೆ 17 (ಇ)	ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು (ಜಿಎಸ್‌ಟಿ) ಪ್ರಾರಂಭಿಸುವುದಕ್ಕೆ ಮುಂಚಿನ ಅವಧಿಯಲ್ಲಿ ಪ್ರಸಕ್ತ ಸಾಲಿನಲ್ಲಿ ನೀಡಲಾಗಿದ್ದ ಗುತ್ತಿಗೆಗಳಿಗಾಗಿ ಅಂದಾಜುಗಳನ್ನು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪರಿಗಣಿಸದೆಯೇ ಜಲ ಸಂಪನ್ಮೂಲ ಇಲಾಖೆಯ 2016–17 ಸಾಲಿನ ದರಗಳ ಷೆಡ್ಯೂಲಿನ ಆಧಾರದ ಮೇರೆಗೆ ತಯಾರಿಸಲ್ಪಟ್ಟಿದ್ದವು ಹಾಗೂ ಈ ದರಗಳು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪ್ರಾರಂಭಿಸುವುದಕ್ಕೆ ಮುಂಚಿನ ಅವಧಿಯಲ್ಲಿದ್ದಂತಹ ತೆರಿಗೆಗಳನ್ನು ಒಳಗೊಂಡಿದ್ದವು. ಲೆಕ್ಕಪತ್ರಗಳ ಮೇಲೆ ಅವುಗಳ ಪ್ರಭಾವವನ್ನು ಪರಿಮಾಣೀಕರಿಸಲಾಗುವುದಿಲ್ಲ.	ಜಲ ಸಂಪನ್ಮೂಲ ಇಲಾಖೆಯ 2016–17 ಸಾಲಿನ ದರಗಳ ಷೆಡ್ಯೂಲು ತೆರಿಗೆಗಳನ್ನು ಒಳಗೊಂಡಿರುತ್ತದೆ. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸಿದ್ದರ ದೃಷ್ಟಿಯಿಂದ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸಿದ್ದರ ಮುಂಚಿನ ಅವಧಿಯ ಚಲ್ತಿ ಬಿಲ್ಲುಗಳನ್ನು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಪರಿಣಾಮಗಳನ್ನು ಪರಿಗಣಿಸಿದಂತೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ವಸೂಲಾತಿ/ಪಾವತಿಯ ರೀತಿ/ಮೂಲದಲ್ಲಿಯೇ ಕಡಿದುಕೊಳ್ಳುವುದು ಹಾಗೂ ಅನ್ವಯಗೊಳ್ಳುವ ತೆರಿಗೆಗಳು ಯಾವುದಾದರೂ ಇದ್ದಲ್ಲಿ, (ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ಅನ್ವಯಗೊಳ್ಳುವಂತೆ) ಇವುಗಳನ್ನು ಪರಿಗಣಿಸಿದ ನಂತರ ಕರ್ನಾಟಕ ಸರ್ಕಾರವು ಹೊಸ ಮಾರ್ಗಸೂಚಿಗಳನ್ನು ನೀಡುವವರೆಗೆ ಹಳೆಯ ಒಡಂಬಡಿಕೆಯನ್ನು ಪರಿಗಣಿಸಿದಂತೆ ಪ್ರಸ್ತುತ ಇರುವಂತಹ ಪದ್ಧತಿಯಲ್ಲಿಯೇ ಪಾವತಿಸಲಾಗುವುದು. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸಿದ್ದರ ತತ್ಪರಿಣಾಮ ವ್ಯತ್ಯಾಸದ ತೆರಿಗೆಗಳನ್ನು ಕರ್ನಾಟಕ ಸರ್ಕಾರದಿಂದ ಹೊಸ ದರಗಳ ಷೆಡ್ಯೂಲನ್ನು ಹಾಗೂ ಮಾರ್ಗಸೂಚಿಗಳನ್ನು ಸ್ವೀಕರಿಸಿದ ನಂತರ ಗುತ್ತಿಗೆದಾರರುಗಳಿಂದ ವಸೂಲಾತಿ ಮಾಡಲಾಗುವುದು ಅಥವಾ ಅವರಿಗೆ ಪಾವತಿಸಲಾಗುವುದು.
	ಟಿಪ್ಪಣಿ ಸಂಖ್ಯೆ 17 (ಎಫ್)	ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪ್ರಾರಂಭಿಸಿದ ದಿನಾಂಕದಲ್ಲಿದ್ದಂತೆ ಕಾರ್ಯಗತಗೊಳಿಸುವ ಸಲುವಾಗಿ ಬಾಕಿಯಿದ್ದಂತಹ ಕಾಮಗಾರಿಗಳ ಮೌಲ್ಯಕ್ಕೆ ಹಾಗೂ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಸೇರಿಸುವ ಮೂಲಕ ಪ್ರಸಕ್ತ ಇದ್ದಂತಹ ತೆರಿಗೆಗಳನ್ನು ತೆಗೆದುಹಾಕಿ ನ್ಯಾಯಸಮ್ಮತ ಹೊಂದಾಣಿಕೆಗಳನ್ನು ಮಾಡಿರುವುದಿಲ್ಲ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಪ್ರಭಾವಗಳ ಅಧ್ಯಯನ ಹಾಗೂ ಮಾಡಬೇಕಾಗಿರುವ ಅಗತ್ಯತೆಯನ್ನು ಹೊಂದಿರುವ ಹೊಂದಾಣಿಕೆಗಳು ಬಾಕಿಯಿರುವುದರಿಂದ ಲೆಕ್ಕಪತ್ರಗಳ ಮೇಲೆ ಅವುಗಳ ಪ್ರಭಾವವನ್ನು ಪರಿಮಾಣೀಕರಿಸಲಾಗುವುದಿಲ್ಲ.	ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸಿದ ನಂತರದ ಅವಧಿಯಲ್ಲಿ ನೀಡಲಾಗಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜುಗಳನ್ನು ಪುನರ್–ಲೆಕ್ಕಹಾಕುವ ಕ್ರಮವನ್ನು ಪ್ರಾರಂಭಿಸಿರುವುದು. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಪ್ರಭಾವವನ್ನು ನಿರ್ಧಾರಣೆ ಮಾಡಲಾಗುವುದು ಹಾಗೂ ಗುತ್ತಿಗೆದಾರರುಗಳಿಗೆ ಲಭ್ಯವಿರುವ ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ವಸೂಲಾತಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು.

19	ಟಿಪ್ಪಣಿ ಸಂಖ್ಯೆ 18	ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006ರ ಅಡಿಯಲ್ಲಿ ಮಾರಾಟಗಾರರುಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ತಿಳಿಯಪಡಿಸಿರುವುದಕ್ಕೆ ಸಂಬಂಧಿಸಿದಂತೆ. ಸಂಬಂಧಿತ ವಿವರಗಳ ಅನುಪಸ್ಥಿತಿಯಲ್ಲಿ, ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.	ಕ್ಷೇತ್ರ ಕಚೇರಿಗಳಿಂದ ಪಡೆಯಲಾದ ಮಾಹಿತಿಯ ಅನುಸಾರ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006ರ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿರುವ ಮಾರಾಟಗಾರರುಗಳು ಯಾರೂ ಇರುವುದಿಲ್ಲ. ಮುಂದುವರೆದು, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006ರ ಅಡಿಯಲ್ಲಿನ ತಮ್ಮ ಸ್ಥಾನಮಾನದ ಬಗ್ಗೆ ಮಾರಾಟಗಾರರುಗಳಿಂದ ಕಂಪನಿಯು ಯಾವುದೇ ಮಾಹಿತಿಯನ್ನೂ ಸ್ವೀಕರಿಸಿರುವುದಿಲ್ಲ ಮತ್ತು ಆದ್ದರಿಂದ ಈ ನಿಟ್ಟಿನಲ್ಲಿ ಯಾವುದೇ ಬಹಿರಂಗಪಡಿಸುವಿಕೆಗಳನ್ನೂ ಮಾಡಿರುವುದಿಲ್ಲ.
20	ಟಿಪ್ಪಣಿ ಸಂಖ್ಯೆ 19 (ಡಿ)	"ಇತರೆ ಹಣಕಾಸು ಜವಾಬ್ದಾರಿಗಳು" ಅಡಿಯಲ್ಲಿ "ಗುತ್ತಿಗೆದಾರರುಗಳಿಗೆ ಪಾವತಿಗಳು – ಉಳಿಸಿಕೊಳ್ಳಲ್ಪಟ್ಟಿರುವ ಹಣಕಾಸಿಗೆ" ಸಂಬಂಧಿಸಿದಂತೆ ನ್ಯಾಯಸಮ್ಮತ ಮೌಲ್ಯಮಾಪನವನ್ನು ಮಾಡಿರುವುದಿಲ್ಲ – ಇದು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 109 "ಹಣಕಾಸು ಸಾಧನಗಳು" / ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 113 "ನ್ಯಾಯಸಮ್ಮತ ಮೌಲ್ಯ ನಿರ್ಧಾರಣೆಯ" ಅನುಸಾರ ಆಗಿರುವುದಿಲ್ಲ. ಅಲ್ಲದೆಯೇ, ಉಳಿಸಿಕೊಂಡಿರುವ/ತಡೆಹಿಡಿಯಲಾಗಿರುವ ಹಣಕಾಸಿನ ಪಾವತಿಗಳಿಗೆ ಸಂಬಂಧಿಸಿದಂತೆ ಅಲ್ಪಾವಧಿ ಮತ್ತು ದೀರ್ಘಾವಧಿ ಜವಾಬ್ದಾರಿಗಳನ್ನು ಗುರುತಿಸುವುದು ಇನ್ನೂ ಪ್ರಗತಿಯಲ್ಲಿರುತ್ತದೆ. ಚಾಲ್ತಿ ಮತ್ತು ಚಾಲ್ತಿಯೇತರ ವರ್ಗೀಕರಣ ಹಾಗೂ ಮೌಲ್ಯಮಾಪನದ ಅನುಪಸ್ಥಿತಿಯಲ್ಲಿ, ಈ ಜವಾಬ್ದಾರಿಗಳ ವರ್ಗೀಕರಣದ ಬಗ್ಗೆ ನಾವು ಯಾವುದೇ ಟೀಕೆ ಟಿಪ್ಪಣಿಗಳನ್ನು ಮಾಡಲು ಸಾಧ್ಯವಾಗುವುದಿಲ್ಲ ಹಾಗೂ ಇದರಿಂದ ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.	ಗುತ್ತಿಗೆದಾರರುಗಳಿಗೆ ಪಾವತಿಸಬೇಕಿರುವ ಬಾಕಿ – ಕಾಮಗಾರಿಗಳು – ಇದು ಗುತ್ತಿಗೆ ಷರತ್ತುಗಳ ಆಧಾರದ ಮೇರೆಗೆ ನಿರ್ಧಾರಣೆ ಮಾಡಲಾದ ಹಾಗೂ ಸಂಕಲಿಸಲಾದ ಉಳಿಸಿಕೊಳ್ಳಲ್ಪಟ್ಟಿರುವ ಹಣವನ್ನು ಒಳಗೊಂಡಿರುತ್ತದೆ ಹಾಗೂ ಇದನ್ನು ಅಲ್ಪಾವಧಿ ಜವಾಬ್ದಾರಿ ಎಂಬುದಾಗಿ ವರ್ಗೀಕರಿಸಲಾಗಿರುತ್ತದೆ. ಉಳಿಸಿಕೊಳ್ಳಲ್ಪಟ್ಟಿರುವ ಹಣಕಾಸಿನ ಕಡೆಗೆ ಅಲ್ಪಾವಧಿ ಹಾಗೂ ದೀರ್ಘಾವಧಿ ಜವಾಬ್ದಾರಿಗಳನ್ನು ಗುರುತಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ಈ ಕಾರಣದಿಂದ, ದೀರ್ಘಾವಧಿ ಜವಾಬ್ದಾರಿಗಳ ಒಂದು ನ್ಯಾಯಸಮ್ಮತ ಮೌಲ್ಯಮಾಪನವನ್ನು ಮಾಡಲಾಗಲಿಲ್ಲ.
21	ಟಿಪ್ಪಣಿ ಸಂಖ್ಯೆ 19 (ಇ)	ಕರ್ನಾಟಕ ಸರ್ಕಾರದ ಸ್ಪಷ್ಟನೆಯು ಬಾಕಿಯಿರುವಂತೆ, ಜಲನಾಯನ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕ್ಷೇತ್ರ ನೀರಾವರಿ ನಾಲೆಗಳ ಮೇಲೆ ಭರಿಸಲಾಗಿರುವ ವೆಚ್ಚಗಳ ಶೇಕಡಾ 10ರಷ್ಟನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವ ಬಗ್ಗೆ. ಇದರಿಂದ ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.	ಕರ್ನಾಟಕ ನೀರಾವರಿ ನಿಗಮ ನಿಯಮಿತವು ಈ ನಿಟ್ಟಿನಲ್ಲಿ ಟಿಪ್ಪಣಿ ಸಂಖ್ಯೆ 19 (ಇ) ನಲ್ಲಿ ಸೂಕ್ತ ಬಹಿರಂಗಪಡಿಸುವಿಕೆಯನ್ನು ಮಾಡಿರುತ್ತದೆ.

22	ಟಿಪ್ಪಣಿ ಸಂಖ್ಯೆ 21	ರೈತರುಗಳು ಮತ್ತು ನೀರು ಬಳಕೆದಾರರ ಸಹಕಾರ ಸಂಘಗಳಿಂದ ನೀರಿನ ದರಗಳನ್ನು ಸಂಗ್ರಹಿಸುವ ಸಲುವಾಗಿ ತಗಾದೆಗಳನ್ನು ಸೃಷ್ಟಿಸುವ ಹಾಗೂ ನೀರಿನ ದರಗಳನ್ನು ಲೆಕ್ಕ ಇಡುವುದಕ್ಕೆ ಅಗತ್ಯ ಬದಲಾವಣೆಗಳನ್ನು ಮಾಡುವುದಕ್ಕೆ ಸಂಬಂಧಿಸಿದಂತೆ ವ್ಯವಸ್ಥೆಯನ್ನು ಸುಗಮಗೊಳಿಸುವುದಕ್ಕೆ ಸಂಬಂಧಿಸಿದಂತೆ. ಇದರ ಅನುಪಸ್ಥಿತಿಯಲ್ಲಿಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.	ರೈತರುಗಳಿಂದ ಮತ್ತು ನೀರು ಬಳಕೆದಾರರುಗಳ ಸಹಕಾರಿ ಸಂಘಗಳಿಂದ ವಸೂಲಾತಿ ಮಾಡಬೇಕಾದ ನೀರಿನ ದರಗಳ ವಸೂಲಾತಿಗಾಗಿನ ತಗಾದೆಗಳನ್ನು ಸೃಷ್ಟಿಸುವ ಸಲುವಾಗಿನ ವ್ಯವಸ್ಥೆಯನ್ನು ಕಂಪನಿಯು ಸರಳ/ಸುಗಮಗೊಳಿಸುತ್ತಿದೆ ಹಾಗೂ ಈ ಪ್ರಕ್ರಿಯೆ ಹಾಗೂ ದಾಖಲೆಗಳ ಪರಿಶೀಲನೆಗಾಗಿ ಓರ್ವ ಚಾರ್ಟರ್ಡ್ ಅಕೌಂಟೆಂಟ್‌ರವರನ್ನು ನೇಮಕ ಮಾಡಲಾಗಿದೆ. ಅವರ ವರದಿಯ ಆಧಾರದ ಮೇರೆಗೆ ಲೆಕ್ಕವನ್ನಿಡುವಿಕೆಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಲಾಗುವುದು.
23	ಟಿಪ್ಪಣಿ ಸಂಖ್ಯೆ 22	"ಇತರೆ ವರಮಾನ"ವು ಪರಿಶಿಷ್ಟ ಜಾತಿಗಳ ಯೋಜನೆ/ಪರಿಶಿಷ್ಟ ಪಂಗಡಗಳ ಉಪ–ಯೋಜನೆಗಳ ಕಾಮಗಾರಿಗಳ ಕಡೆಗೆ ರೂ.306.78 ಕೋಟಿ ಮೊತ್ತದಷ್ಟು ಅನುದಾನಗಳನ್ನು ಒಳಗೊಂಡಿರುತ್ತದೆ. ಈ ಆಸ್ತಿಗಳನ್ನು ಕಂಪನಿಯು ನಿಯಂತ್ರಿಸುವುದಿಲ್ಲವಾದ್ದರಿಂದ, ಇದೇ ಸ್ವರೂಪದ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಮತ್ತೊಂದು ಕಂಪನಿಯು ಪಡೆದುಕೊಂಡಿರುವಂತಹ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯ ತಜ್ಞರುಗಳ ಸಲಹಾ ಸಮಿತಿಯ ಅಭಿಪ್ರಾಯದಂತೆ, ಕಾರ್ಯಗತಗೊಳಿಸುವ ಸಂಸ್ಥೆಯಾಗಿ ಸರ್ಕಾರದ ಪರವಾಗಿ ಸ್ವೀಕರಿಸಲಾದ ಅನುದಾನ ಮತ್ತು ಭರಿಸಲಾದ ವೆಚ್ಚಗಳನ್ನು ಕಂಪನಿಯ ಲಾಭ ಮತ್ತು ನಷ್ಟ ತ:ಖ್ತೆಯ ಮೂಲಕ ಲೆಕ್ಕಪತ್ರಗಳಲ್ಲಿ ತೋರಿಸಬಾರದಿದ್ದಿತು. ತತ್ಪರಿಣಾಮವಾಗಿ, ಪ್ರಸಕ್ತ ಸಾಲಿನ ಆದಾಯ ಮತ್ತು ವೆಚ್ಚಗಳನ್ನು ಅಷ್ಟರ ಮಟ್ಟಿಗಿನ ಮೊತ್ತದಿಂದ ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿರುವುದು.	ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳ ಕಡೆಗೆ ಸ್ವೀಕರಿಸಲಾಗುವ ಅನುದಾನಗಳನ್ನು ಪ್ರಸಕ್ತ ಸಾಲಿನಲ್ಲಿ ವಾಸ್ತವಿಕವಾಗಿ ಭರಿಸಲಾದ ವೆಚ್ಚಗಳಷ್ಟರ ಮಟ್ಟಿಗೆ ವರಮಾನ ಅನುದಾನ ಎಂಬುದಾಗಿ ಪರಿಗಣಿಸಲಾಗುವುದಾದಲ್ಲಿ, ಲೆಕ್ಕಪತ್ರ ಪುಸ್ತಕಗಳ ಅನುಸಾರ ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳ ಕಡೆಗಿನ ವೆಚ್ಚವು ಪ್ರತೀ ವರ್ಷವೂ 31 ಮಾರ್ಚ್‌ನಲ್ಲಿದ್ದಂತೆ ಅನುವುಗಳನ್ನು ಹೊಂದಾಣಿಕೆ ಮಾಡಿದನಂತರ ಆಗಿರುತ್ತದೆ. ಆದ್ದರಿಂದ ಈರೀಯ ವ್ಯತ್ಯಾಸವು ಸಂಭವಿಸುತ್ತದೆ.
24	ಟಿಪ್ಪಣಿ ಸಂಖ್ಯೆ 25	"ಇತರೆ ವೆಚ್ಚಗಳು" ಜಲಾನಯನ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಡೆಗೆ ಭರಿಸಲಾದ ರೂ.48.24 ಕೋಟಿ (ಹಿಂದಿನ ಸಾಲಿನಲ್ಲಿ ರೂ.65.76 ಕೋಟಿ) ಮೊತ್ತದಷ್ಟು ವೆಚ್ಚಗಳನ್ನು ಒಳಗೊಂಡಿರುತ್ತದೆ. ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯ ತಜ್ಞರುಗಳ ಸಲಹಾ ಸಮಿತಿಯ ಅಭಿಪ್ರಾಯದಂತೆ, ಕ್ಷೇತ್ರ ನೀರಾವರಿ ನಾಲೆಗಳನ್ನು, ಸಂಬಂಧಿತ ನೀರಾವರಿ ಯೋಜನೆಯ ನೇರ ಕಾರಣಗಳಿಂದ ವೆಚ್ಚಗಳು ಸಂಭವಿಸಿದ್ದಲ್ಲಿ, ಸಂಬಂಧಿತ ನೀರಾವರಿ ಆಸ್ತಿಗಳ ಜೊತೆಯಲ್ಲಿ ಬಂಡವಾಳೀಕರಿಸಬಹುದು. ಆದಾಗ್ಯೂ, ಕಂಪನಿಯು ತನ್ನ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಅಂತಹ ವೆಚ್ಚಗಳು ಬಂಡವಾಳ ಸ್ವರೂಪದವೋ ಅಥವಾ ವರಮಾನ ಸ್ವರೂಪದವೋ ಎಂಬುದರ ಬಗ್ಗೆ ಯಾವುದೇ ವರ್ಗೀಕರಣವನ್ನೂ ಮಾಡಿರುವುದಿಲ್ಲ. ಅಷ್ಟರಮಟ್ಟಿಗೆ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಖರ್ಚಿಗೆ ಹಾಕಲಾಗಿರುವ ಬಂಡವಾಳ ವೆಚ್ಚದಿಂದಾಗಿ, ನಷ್ಟವನ್ನು ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿರುವುದು ಹಾಗೂ ಸ್ಪರ್ಷಿಸಬಹುದದ/ಗೋಚರ ಆಸ್ತಿಗಳು/ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು.	ಕ್ಷೇತ್ರ ನೀರಾವರಿ ನಾಲೆಗಳ (ಜಲಾನಯನ ಪ್ರದೇಶಗಳ ಅಭಿವೃದ್ಧಿ ಪ್ರಾಧಿಕಾರ) ಮೇಲಿನ ವೆಚ್ಚಗಳನ್ನು ಪರಿಗಣಿಸುವುದಕ್ಕೆ ಸಂಬಂಧಿಸಿದಂತೆ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವು ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯ ತಜ್ಞ ಸಲಹಾ ಸಮಿತಿಯ ಅಭಿಪ್ರಾಯವನ್ನು ಪಡೆದಿರುವುದು, ಇದನ್ನು ಸಮೀಕ್ಷಿಸಲಾಗುತ್ತಿದೆ ಹಾಗೂ ಬಂಡವಾಳೀಕರಿಸಬೇಕೋ ಅಥವಾ ಬೇಡವೋ ಎಂಬುದರ ಬಗ್ಗೆ ಅಗತ್ಯ ಕ್ರಮವನ್ನು ತೆಗೆದುಕೊಳ್ಳಲಾಗುವುದು.

25	ಟಿಪ್ಪಣಿ ಸಂಖ್ಯೆ 5 (i) (ಎ)	ಇದರ ಅಡಿಯಲ್ಲಿ ತುಂಗಾ ಮೇಲ್ದಂಡೆ ಯೋಜನೆ (ಪ್ರಸ್ತುತ ಇರುವಂತಹ ನಾಲೆಗಳನ್ನು ಹೊರತುಪಡಿಸಿ), ಘಟಪ್ರಭಾ, ಮಲಪ್ರಭಾ, ಮತ್ತು ಹರಿನಲ ಯೋಜನೆಗಳಿಗೆ ಸಂಬಂಧಿತ ಕರ್ನಾಟಕ ಸರ್ಕಾರದ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ತನ್ಮೂಲಕ ಕಂಪನಿಯ ಲೆಕ್ಕಪತ್ರಗಳ ಪುಸ್ತಕಗಳಿಗೆ ತೆಗೆದುಕೊಳ್ಳಲಾಗಿದ್ದಿತು ಹಾಗೂ ವರಾಹಿ ಯೋಜನೆಗಳ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಕರ್ನಾಟಕ ಸರ್ಕಾರದ ಅನುಮೋದನೆಯು ಬಾಕಿ ಇದ್ದುದರಿಂದ ಕಂಪನಿಯು ತನ್ನ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರಲಿಲ್ಲ.	ಕಂಪನಿಯು ಕಲಬುರಗಿ ವಲಯದ ಅಡಿಯಲ್ಲಿ ಬರುವ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಗುರುತಿಸಿರುವುದು. ಈ ನಿಟ್ಟಿನಲ್ಲಿ ತ:ಖ್ತೆಗಳು ಸಮನ್ವಯಗೊಳ್ಳುವಿಕೆಯ ಅಡಿಯಲ್ಲಿರುತ್ತವೆ ಹಾಗೂ ಇದು ಪೂರ್ಣಗೊಂಡನಂತರ, ಇದಕ್ಕೆ ಸರ್ಕಾರದ ಆದೇಶವನ್ನು ಪಡೆಯುವುದಕ್ಕಾಗಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಮುನಿರಾಬಾದ್ ವಲಯದ ಆಸ್ತಿಗಳು ಬಹಳಷ್ಟು ಹಳೆಯದಾಗಿರುತ್ತವೆ ಹಾಗೂ ಆದ್ದರಿಂದ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಸಂಕಲಿಸುವ ಸಲುವಾಗಿ ಸಂಬಂಧಿತ ದಾಖಲೆಗಳು ತತ್‌ಕ್ಷಣದಲ್ಲಿ ಲಭ್ಯವಿರುವುದಿಲ್ಲ. ಆದ್ದರಿಂದ ಕಂಪನಿಯು ಈ ಆಸ್ತಿಗಳು ಮತ್ತು ಜವಬ್ದಾರಿಗಳನ್ನು ನಿರ್ಧಾರಣೆ ಮಾಡುವುದಕ್ಕಾಗಿ ಮೌಲ್ಯಮಾಪಕರನ್ನು ನೇಮಕ ಮಾಡುವ ಪ್ರಕ್ರಿಯೆಯ ಅಡಿಯಲ್ಲಿರುತ್ತದೆ.

ಅ. ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣ

ಎ	ಕಂಪನಿಯು ಚಿಲ್ಲರೆ ಸಾಲಗಾರರುಗಳಿಗೆ / ಸಾಲದಾತರುಗಳಿಗೆ ಸಂಬಂಧಿಸಿದಂತೆ ಅವರುಗಳಿಗೆ ಪಾವತಿಸಬೇಕಿರುವ ಉಳಿಕೆ ಮೊತ್ತ, ಸರ್ಕಾರದಿಂದ ಬರಬೇಕಿರುವ ಬಾಕಿಗಳು/ ಸರ್ಕಾರಕ್ಕೆ ಪಾವತಿಸಬೇಕಿರುವ ಬಾಕಿಗಳು, ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ /ಇತರೆ ತಂಡಗಳಿಗೆ ಪಾವತಿಸಬೇಕಿರುವ / ವಿಶೇಷ ಭೂಸ್ವಾಧೀನ ಅಧಿಕಾರಿಗಳಿಂದ/ಇತರೆ ತಂಡಗಳಿಂದ ಬರಬೇಕಿರುವ ಬಾಕಿಗಳು, ಇವುಗಳ ಬಗ್ಗೆ ಖಚಿತಪಡಿಸಿಕೊಂಡಿರುವುದಿಲ್ಲ ಹಾಗೂ ಸಮನ್ವಯಗೊಳಿಸಿರುವುದಿಲ್ಲ. ಇದು, ಕಂಪನಿಯು ಚಿಲ್ಲರೆ ಸಾಲಗಾರರು/ಸಾಲದಾತರುಗಳು ಮತ್ತು ಇತರೆ ತಂಡಗಳನ್ನು ವಿಷಯಕವಾಗಿ ತಪ್ಪಾಗಿ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಾಧ್ಯತೆಯಿರುತ್ತದೆ.	*ಚಿಲ್ಲರೆ ಸಾಲಗಾರರುಗಳಿಗೆ /ಸಾಲದಾತರುಗಳಿಗೆ ಸಂಬಂಧಿಸಿದಂತೆ ಅವರುಗಳಿಗೆ ಪಾವತಿಸಬೇಕಿರುವ ಉಳಿಕೆ ಮೊತ್ತಕ್ಕೆ ಸಂಬಂಧಿಸಿದಂತೆ ಖಚಿತಪಡಿಸಿಕೊಂಡಿಲ್ಲವಾದರೂ ವರ್ಷದ ಅಂತ್ಯದಲ್ಲಿ ಸಮನ್ವಯಗೊಳಿಸುವಿಕೆಯನ್ನು ಮಾಡಾಲಾಗಿರುವುದು. ಸರ್ಕಾರದಿಂದ ಬರಬೇಕಿರುವ ಬಾಕಿಗಳು / ಸರ್ಕಾರಕ್ಕೆ ಪಾವತಿಸಬೇಕಿರುವ ಬಾಕಿಗಳು, ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ /ಇತರೆ ತಂಡಗಳಿಗೆ ಪಾವತಿಸಬೇಕಿರುವ / ವಿಶೇಷ ಭೂಸ್ವಾಧೀನ ಅಧಿಕಾರಿಗಳಿಂದ/ ಇತರೆ ತಂಡಗಳಿಂದ ಬರಬೇಕಿರುವ ಬಾಕಿಗಳು, ಇವುಗಳು ಸರ್ಕಾರ/ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳು ಇವುಗಳಿಗೆ ಸಂಬಂಧಿಸಿರುತ್ತವೆ.* *ಆದ್ದರಿಂದ ಚಿಲ್ಲರೆ ಸಾಲಗಾರರಿಗೆ ಸಂಬಂಧಿಸಿದಂತೆ ಯಾವುದೇ ವಿಷಯಕ ತಪ್ಪು ಹೇಳಿಕೆಗಳನ್ನು ನೀಡಲಾಗಿರುವುದಿಲ್ಲ.*
ಆ	ಕಂಪನಿಯು ಈಕ್ವಿಟಿ ಷೇರುಗಳ ಹಂಚಿಕೆಯ ಕಡೆಗೆ ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾದ ಹಣಕಾಸಿನ ವಿನಿಯೋಗಕ್ಕೆ ಸಂಬಂಧಿಸಿದಂತೆ ಹಾಗೂ ಪರಿಶಿಷ್ಟ ಜಾತಿ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ ಕಾಮಗಾರಿಗಳಿಗಾಗಿ ಪ್ರಾರಂಭಿಕವಾಗಿ ಈಕ್ವಿಟಿಯ ಪ್ರತಿಯಾಗಿ ಮುಂಗಡ ಮೊತ್ತವನ್ನಾಗಿ ಸ್ವೀಕರಿಸಲಾದ ಅನುದಾನಗಳಿಗೆ ಸಂಬಂಧಿಸಿದಂತೆ ಯಾವುದೇ ಸೂಕ್ತ ಕಾರ್ಯನೀತಿ ಮತ್ತು ಕಾರ್ಯವಿಧಾನವನ್ನು ಹೊಂದಿರಲಿಲ್ಲ.	*ಎಸ್‌ಸಿಪಿ/ಟಿಎಸ್‌ಪಿ ಕಡೆಗೆ ಸರ್ಕಾರದಿಂದ ಸ್ವೀಕರಿಸಲಾಗುವ ಅನುದಾನಗಳು ಈಕ್ವಿಟಿಯ ಕಡೆಗೆ ಆಗಿರುತ್ತವೆ. ಎಸ್‌ಸಿಪಿ/ ಟಿಎಸ್‌ಪಿಗಳ ಮೇಲಿನ ವರಮಾನ ವೆಚ್ಚವನ್ನು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ವರಮಾನ ಅನುದಾನಗಳು ಎಂಬುದಾಗಿ ಪರಿಗಣಿಸಲಾಗುವುದು, ಆದ್ದರಿಂದ ಕಂಪನಿಯ ಅನುದಾನಗಳ ಇತರೆ ವರಮಾನವನ್ನು ಪರಿಗಣಿಸುವಿಕೆಯಲ್ಲಿ ಯಾವುದೇ ವಿಷಯಕ ತಪ್ಪು ಹೇಳಿಕೆಗಳನ್ನು ನೀಡಲಾಗಿರುವುದಿಲ್ಲ.*

ಸಿ	ಗುತ್ತಿಗೆದಾರರುಗಳ ಬಿಲ್ಲುಗಳ ಸಂಸ್ಕರಣೆಗೆ ಸಂಬಂಧಿಸಿದಂತೆ ಆಂತರಿಕ ನಿಯಂತ್ರಣ ವ್ಯವಸ್ಥೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ. ದರ ವ್ಯತ್ಯಯಗಳಿಗಾಗಿ ಒಂದು ಯಥಾರ್ಥತೆಯಿಂದ ಕೂಡಿದ ಸೂಚ್ಯಾಂಕಗಳನ್ನು ಅಳವಡಿಸಿಕೊಳ್ಳುವುದು ಹಾಗೂ ಬೆಲೆಗಳು ಇಳಿಮುಖಗೊಂಡಲ್ಲಿ ನಕಾರಾತ್ಮಕ ದರ ವ್ಯತ್ಯಾಗಳ ಕಾರಣ ಗುತ್ತಿಗೆದಾರರುಗಳಿಂದ ಮಾಡಬೇಕಾದ ವಸೂಲಾತಿಗಾಗಿ ವ್ಯವಸ್ಥೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿರಲಿಲ್ಲ. ಇದು ಕಂಪನಿಯ ಜವಾಬ್ದಾರಿಗಳು ಮತ್ತು ಅನುವುಗಳಲ್ಲಿ, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ, ಸ್ಪರ್ಶಿಸಬಹುದಾದ/ಗೋಚರ ಆಸ್ತಿಗಳಲ್ಲಿ, ಇಡಿಸಿ ಹಂಚಿಕೆ ಹಾಗೂ ಸವಕಳಿಯ ಮೇಲೆ ವಿಷಯಕ ಸಂಭಾವ್ಯ ತಪ್ಪು ಹೇಳಿಕೆ ನೀಡುವಲ್ಲಿ ಪರಿಣಮಿಸಬಹುದು.	*ಕಂಪನಿಯು ನಕಾರಾತ್ಮಕ ದರ ವ್ಯತ್ಯಯಗಳನ್ನು ಸಂಬಂಧಿತ ಚಾಲ್ತಿ ಬಿಲ್ಲುಗಳಲ್ಲಿಯೇ ಹೊಂದಾಣಿಕೆ ಮಾಡಿಕೊಳ್ಳುವ ಸಲುವಾಗಿ ಕ್ರಮಗಳನ್ನು ಕೈಗೊಂಡಿರುವುದು.*
ಡಿ	1 ಜುಲೈ, 2017ರಿಂದ ಜಾರಿಗೆ ಬಂದಿರುವ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸುವಿಕೆಯ ಕಾರಣ ಆ ದಿನಾಂಕದಿಂದ ಗುತ್ತಿಗೆದಾರರುಗಳಿಗೆ ನೀಡಲಾಗಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಕಾರ್ಯಗತಗೊಳಿಸುವಿಕೆಯಿಂದ ಉಂಟಾಗುವ ಪ್ರಭಾವವನ್ನು ಕಂಪನಿಯು ಇನ್ನೂ ಖಚಿತಪಡಿಸಿಕೊಳ್ಳಬೇಕಾಗಿದೆ. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪ್ರಾರಂಭಿಕ ದಿನಾಂಕದಲ್ಲಿದ್ದಂತೆ ಕಾರ್ಯಗತಗೊಳಿಸುವ ಸಲುವಾಗಿ ಬಾಕಿಯಿದ್ದಂತಹ ಕಾಮಗಾರಿಗಳ ಮೌಲ್ಯಕ್ಕೆ ಹಾಗೂ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಸೇರಿಸುವ ಮೂಲಕ ಪ್ರಸಕ್ತ ಇದ್ದಂತಹ ತೆರಿಗೆಗಳನ್ನು ತೆಗೆದುಹಾಕಿ ನ್ಯಾಯಸಮ್ಮತ ಹೊಂದಾಣಿಕೆಗಳನ್ನು ಮಾಡಿರುವುದಿಲ್ಲ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಪ್ರಭಾವಗಳ ಅಧ್ಯಯನ ಹಾಗೂ ಮಾಡಬೇಕಾಗಿರುವ ಅಗತ್ಯತೆಯನ್ನು ಹೊಂದಿರುವ ಹೊಂದಾಣಿಕೆಗಳು ಬಾಕಿಯಿರುವುದರಿಂದ ಲೆಕ್ಕಪತ್ರಗಳ ಮೇಲೆ ಅವುಗಳ ಪ್ರಭಾವವನ್ನು ಪರಿಮಾಣೀಕರಿಸಲಾಗುವುದಿಲ್ಲ.	*ಜಲ ಸಂಪನ್ಮೂಲ ಇಲಾಖೆಯ 2016–17 ಸಾಲಿನ ದರಗಳ ಷೆಡ್ಯೂಲು ತೆರಿಗೆಗಳನ್ನು ಒಳಗೊಂಡಿರುತ್ತದೆ, ಕಂಪನಿಯು ಟೆಂಡರು ಷರತ್ತುಗಳು ಮತ್ತು ಒಡಂಬಡಿಕೆಗಳಲ್ಲಿ ಈ ಕೆಳಗಿನ ಷರತ್ತುಗಳನ್ನು ಸೇರಿಸಿರುವುದು :* *"ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸಿದ್ದರ ಗಮನದಲ್ಲಿರಿಸಿಕೊಂಡು, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸಿದ್ದರ ಮುಂಚಿನ ಅವಧಿಯ ಚಲ್ತಿ ಬಿಲ್ಲುಗಳನ್ನು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಪರಿಣಾಮಗಳನ್ನು ಪರಿಗಣಿಸಿದಂತೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ವಸೂಲಾತಿ/ಪಾವತಿಯ ರೀತಿ/ಮೂಲದಲ್ಲಿಯೇ ಕಡಿದುಕೊಳ್ಳುವುದು ಹಾಗೂ ಅನ್ವಯಗೊಳ್ಳುವ ತೆರಿಗೆಗಳು ಯಾವುದಾದರೂ ಇದ್ದಲ್ಲಿ, (ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ಅನ್ವಯಗೊಳ್ಳುವಂತೆ) ಇವುಗಳನ್ನು ಪರಿಗಣಿಸಿದ ನಂತರ ಕರ್ನಾಟಕ ಸರ್ಕಾರವು ಹೊಸ ಮಾರ್ಗಸೂಚಿಗಳನ್ನು ನೀಡುವವರೆಗೆ ಹಳೆಯ ಒಡಂಬಡಿಕೆಯನ್ನು ಪರಿಗಣಿಸಿದಂತೆ ಪ್ರಸ್ತುತ ಇರುವಂತಹ ಪದ್ಧತಿಯಲ್ಲಿಯೇ ಪಾವತಿಸಲಾಗುವುದು. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸಿದ್ದರ ತತ್ಪರಿಣಾಮ ವ್ಯತ್ಯಾಸದ ತೆರಿಗೆಗಳನ್ನು, ಕರ್ನಾಟಕ ಸರ್ಕಾರದಿಂದ ಹೊಸ ದರಗಳ ಷೆಡ್ಯೂಲನ್ನು ಹಾಗೂ ಮಾರ್ಗಸೂಚಿಗಳನ್ನು ಸ್ವೀಕರಿಸಿದ ನಂತರ ಗುತ್ತಿಗೆದಾರರುಗಳಿಂದ ವಸೂಲಾತಿ ಮಾಡಲಾಗುವುದು ಅಥವಾ ಅವರಿಗೆ ಪಾವತಿಸಲಾಗುವುದು".*
ಇ	ಪ್ರಸಕ್ತ ಸಾಲಿನಲ್ಲಿ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯು ಜಾರಿಗೆ ಬಂದ ಅವಧಿಯಲ್ಲಿ ನೀಡಲಾಗಿರುವ ಹಾಗೂ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪ್ರಾರಂಭಿಸುವುದಕ್ಕೆ ಮುಂಚಿತ ವಾಗಿ ಇದ್ದಂತಹ ಜಲ ಸಂಪನ್ಮೂಲ ಇಲಾಖೆಯ 2016–17 ಸಾಲಿನ ದರಗಳ ಷೆಡ್ಯೂಲಿನ ಅನುಸಾರ ಮಾಡಲಾಗಿದ್ದು ಕಾಮಗಾರಿಗಳಿಗಾಗಿ ಅಂದಾಜುಗಳ ತಯಾರಿಕೆಗೆ ಆಧಾರವನ್ನು ಇನ್ನೂ ಮಾರ್ಪಾಡು ಮಾಡಬೇಕಿದೆ. ಇದು ಕಾಮಗಾರಿಗಳ ಮೌಲ್ಯ ಮತ್ತು ಜವಾಬ್ದಾರಿಗಳು ಸಂಭಾವ್ಯ ತಪ್ಪು ಹೇಳಿಕೆಗಳಿಂದ ಕೂಡಿರುವಲ್ಲಿ ಪರಿಣಮಿಸಿದ್ದಿತು.	*ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸಿದ ನಂತರದ ಅವಧಿಯಲ್ಲಿ ನೀಡಲಾಗಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜುಗಳನ್ನು ಪುನರ್–ಲೆಕ್ಕಹಾಕುವ ಕ್ರಮವನ್ನು ಪ್ರಾರಂಭಿಸಿರುವುದು. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಪ್ರಭಾವವನ್ನು ನಿರ್ಧಾರಣೆ ಮಾಡಲಾಗುವುದು ಹಾಗೂ ಗುತ್ತಿಗೆದಾರರುಗಳಿಗೆ ಲಭ್ಯವಿರುವ ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ವಸೂಲಾತಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು.*

ಎಫ್	ಸ್ಪರ್ಶಾರ್ಹ/ಗೋಚರಿಸಬಹುದಾದ ಆಸ್ತಿಗಳ ಭೌತಿಕ ತಪಾಸಣೆಗಾಗಿ ಒಂದು ನಿಯತ ಕಾರ್ಯಕ್ರಮವು ಇರುವುದಿಲ್ಲ, ಇದರಿಂದಾಗಿ ಕಂಪನಿಯು ತನ್ನ ಹಣಕಾಸು ತ:ಖ್ತೆಗಳಲ್ಲಿ ಸ್ಪರ್ಶಾರ್ಹ/ಗೋಚರಿಸಬಹುದಾದ ಆಸ್ತಿಗಳಿಗೆ ಸಂಬಂಧಿಸಿದಂತೆ ವಿಷಯಕ ತಪ್ಪು ಹೇಳಿಕೆಗಳನ್ನು ನೀಡಬಹುದಾದ ಸಂಭಾವ್ಯತೆಯಿರುತ್ತದೆ.	*ಸ್ಪರ್ಶಾರ್ಹ/ಗೋಚರಿಸಬಹುದಾದ ಆಸ್ತಿಗಳ ಭೌತಿಕ ತಪಾಸಣೆಗಾಗಿ ಮುಂದಿನ ಹಣಕಾಸು ಸಾಲಿನಲ್ಲಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳಲಾಗುವುದು.*
ಜಿ	ನಿರ್ಮಾಣದ ವೇಳೆಯಲ್ಲಿ ಹಂಚಿಕೆ ಮಾಡಲಾದ ವೆಚ್ಚವನ್ನೂ ಒಳಗೊಂಡಂತೆ ಪ್ರತಿಯೊಂದು ಆಸ್ತಿಗಾಗಿಯೂ ಸ್ಥಿರಾಸ್ತಿಗಳ ವಹಿಯನ್ನು ಇಂದಿನದಿನದನ್ನಾಗಿ ಮಾಡುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಒಂದು ಪರಿಣಾಮಕಾರಿತ್ವದಿಂದ ಕೂಡಿದ ಕಾರ್ಯವಿಧಾನ ಹಾಗೂ ಆಂತರಿಕ ಹಣಕಾಸು ನಿಯಂತ್ರಣವನ್ನು ಕಂಡುಕೊಳ್ಳಬೇಕು. ಇಲ್ಲವಾದಲ್ಲಿ ಕಂಪನಿಯು ತನ್ನ ಹಣಕಾಸು ತ:ಖ್ತೆಗಳಲ್ಲಿ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ವಿಷಯಕ ತಪ್ಪು ಹೇಳಿಕೆಗಳನ್ನು ನೀಡಬಹುದಾದ ಸಂಭಾವ್ಯತೆಯಿರುತ್ತದೆ.	*ಎಲ್ಲಾ ಸ್ಥಿರಾಸ್ತಿಗಳ ನಿರ್ವಹಣೆಗಾಗಿ ಹಾಗೂ ಸವಕಳಿಯನ್ನು ಲೆಕ್ಕಹಾಕುವ ಸಲುವಾಗಿ ನಿರ್ವಹಿಸಲಾಗಿರುವ ಸ್ಥಿರಾಸ್ತಿ ತಂತ್ರಾಂಶ ಅನ್ವಯದಲ್ಲಿ ಎಲ್ಲಾ ಸೇರ್ಪಡೆಗಳು/ ತೆಗೆದುಹಾಕಿರುವವುಗಳಿಗಾಗಿ ಸ್ಥಿರಾಸ್ತಿ ವಹಿಯನ್ನು ಇಂದಿನದಿನದನ್ನಾಗಿ (ಅಪ್‌ಡೇಟ್) ಮಾಡಲಾಗಿರುವುದು. ಆದಾಗ್ಯೂ, ಬೃಹತ್ ಪ್ರಮಾಣದ ವ್ಯವಹಾರಗಳ ಕಾರಣ, ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳನ್ನು ಸಂಬಂಧಿತ ಹಣಕಾಸು ಸಾಲಿನಲ್ಲಿ ಪ್ರತಿಯೊಂದು ಆಸ್ತಿಯ ಅಡಿಯಲ್ಲಿ ಒಂದು ಪ್ರತ್ಯೇಕ ಬಾಬಿನಂತೆ ತೋರಿಸಲಾಗಿರುವುದು.* *ಆದ್ದರಿಂದ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಹಣಕಾಸು ತ:ಖ್ತೆಗಳಲ್ಲಿ ಯಾವುದೇ ವಿಷಯಕ ತಪ್ಪು ಹೇಳಿಕೆಗಳನ್ನು ನೀಡಲಾಗಿರುವುದಿಲ್ಲ.*
ಎಚ್	ಆಸ್ತಿಗಳು ದುರ್ಬಲಗೊಳ್ಳುವಿಕೆಯನ್ನು ಗುರುತಿಸುವ ಸಲುವಾಗಿ ಕಂಪನಿಯು ಒಂದು ಸೂಕ್ತ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಇದರಿಂದಾಗಿ ಕಂಪನಿಯು ತನ್ನ ಹಣಕಾಸು ತ:ಖ್ತೆಗಳಲ್ಲಿ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ವಿಷಯಕ ತಪ್ಪು ಹೇಳಿಕೆಗಳನ್ನು ನೀಡಬಹುದಾದ ಸಂಭಾವ್ಯತೆಯಿರುತ್ತದೆ.	*ಕರ್ನಾಟಕ ನೀರಾವರಿ ನಿಗಮ ನಿಯಮಿತವು ಟಿಪ್ಪಣಿ ಸಂಖ್ಯೆ 3.6ರಲ್ಲಿ ಈ ನಿಟ್ಟಿನಲ್ಲಿ ಬಹಿರಂಗಪಡಿಸಿರುವುದು.*
ಐ	ಕಂಪನಿಯು ಸೇವಾ ತೆರಿಗೆ, ರಾಜಧನ, ಮೂಲದಲ್ಲಿಯೇ ಕಡಿದುಕೊಳ್ಳಲಾಗುವ ತೆರಿಗೆ ಹಾಗೂ ವಸೂಲಾತಿ ಮಾಡಬೇಕಾದ / ಪಾವತಿಸಬೇಕಾದ ಇತರೆ ಶಾಸನಬದ್ಧ ಬಾಕಿಗಳನ್ನು ಲೆಕ್ಕಹಾಕುವ, ಸಮನ್ವಯಗೊಳಿಸುವ, ಸಮಯೋಚಿತವಾಗಿ ಪಾವತಿಸುವ ಹಾಗೂ ಯಥಾರ್ಥತೆಯಿಂದ ಮೂಲದಲ್ಲಿಯೇ ಕಡಿದುಕೊಳ್ಳುವ/ವಸೂಲಾತಿ ಮಾಡುವ ಸಲುವಾಗಿ ಆಂತರಿಕ ನಿಯಂತ್ರಣ ವ್ಯವಸ್ಥೆಯ ಮೇಲೆ ಸುಧಾರಣೆಗಳನ್ನು ಮಾಡುವ ಅಗತ್ಯತೆಯು ಇರುತ್ತದೆ.	*ಕಂಪನಿಯು, ಸೇವಾ ತೆರಿಗೆ, ಮೂಲದಲ್ಲಿಯೇ ಕಡಿದುಕೊಳ್ಳಲಾದ ತೆರಿಗೆ ಮತ್ತಿತರೆ ಶಾಸನಬದ್ಧ ಬಾಕಿಗಳ ವಸೂಲಾತಿ/ಪಾವತಿಗಳನ್ನು ಲೆಕ್ಕಹಾಕುವ, ಸಮನ್ವಯಗೊಳಿಸುವ, ಸಮಯೋಚಿತವಾಗಿ ಪಾವತಿಸುವ ಹಾಗೂ ಯಥಾರ್ಥತೆಯಿಂದ ಕಡಿದುಕೊಳ್ಳುವ/ಸಂಗ್ರಹಿಸುವ ಸಲುವಾಗಿ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯೊಂದರ ಸೇವೆಯನ್ನು ಬಳಸಿಕೊಳ್ಳುತ್ತಿದೆ.*
ಜೆ	ನೀರಿನ ದರಗಳ ಪಾವತಿಗಾಗಿ ತಗಾದೆಗಳನ್ನು ಸೃಷಿಸುವಲ್ಲಿ ಕಂಪನಿಯ ಕಾರ್ಯವಿಧಾನವು ಹಾಗೂ ಆಂತರಿಕ ನಿಯಂತ್ರಣವು ಪರಿಣಾಮಕಾರಿತ್ವದಿಂದ ಕಾರ್ಯನಿರ್ವಹಿಸುತ್ತಿರಲಿಲ್ಲ. ಮುಂದುವರೆದು, ಬಾಕಿಯಿರುವ ಶಿಲ್ಕುಗಳ ಬಗ್ಗೆ ಖಚಿತಪಡಿಸಿಕೊಳ್ಳುವ ಹಾಗೂ ವರಮಾನ ದಾಖಲೆಗಳ ಹಾಗೂ ಅಲ್ಲದೆಯೇ ಸಾಮಾನ್ಯ ಲೆಡ್ಜರುಗಳ ಸಂಬಂಧಿತ ಲೆಡ್ಜರು ಶಿಲ್ಕುಗಳ ಜೊತೆಯಲ್ಲಿ ಉಪ–ದಾಖಲೆಗಳ ಜೊತೆಗೆ ಸಮನ್ವಯಗೊಳಿಸುವ ಒಂದು ವ್ಯವಸ್ಥೆಯನ್ನು ಹೊಂದಿರಲಿಲ್ಲ. ಇದು ವಸೂಲಾತಿಗಳನ್ನು ದಾಖಲಿಸದಿರುವಲ್ಲಿ/ವಿಳಂಬವಾಗಿ ದಾಖಲಿಸುವಲ್ಲಿ ಹಾಗೂ ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳನ್ನು ವಿಷಯಕ ತಪ್ಪು ಹೇಳಿಕೆಗಳಿಂದ ಹೇಳುವ ಸಂಭಾವ್ಯತೆಯಿಂದ ಕೂಡಿರುತ್ತದೆ.	*ನೀರಿನ ದರಗಳಿಗೆ ಸಂಬಂಧಿಸಿದಂತೆ ಪ್ರತಿಯೋರ್ವ ರೈತರಿಂದಲೂ ಅವರಿಂದ ಬರಬೇಕಿರುವ ಬಾಕಿಗಳಿಗೆ ಸಂಬಂಧಿಸಿದಂತೆ ಖಚಿತಪಡಿಸಿಕೊಳ್ಳುವುದು ಕಾರ್ಯತ: ಕಷ್ಟಸಾಧ್ಯ. ಆದಾಗ್ಯೂ, ವಿಭಾಗ/ಉಪ–ವಿಭಾಗ ಮಟ್ಟದಲ್ಲಿ ನಿರ್ವಹಿಸಲಾಗಿರುವ ವರಮಾನ ದಾಖಲೆಗಳು ಹಾಗೂ ಅಲ್ಲದೆಯೇ ಲೆಡ್ಜರುಗಳಲ್ಲಿರುವ ಎಲ್ಲಾ ಬಾಕಿಗಳಿಗಾಗಿ ರೈತವಾರು/ಕಾಲವಾರು ನೀರಿನ ದರಗಳ ಬಾಕಿಗಳನ್ನು ಸಮನ್ವಯಗೊಳಿಸಲಾಗುತ್ತಿದೆ.*

ಕೆ	ಕಂಪನಿಯು ಮುನ್ನೆಚ್ಚರಿಕೆ ಹಣದ ಭದ್ರತಾ ಠೇವಣಿ, ಭದ್ರತಾ ಠೇವಣಿ ಮತ್ತು ಇತರೆ ಠೇವಣಿಗಳ ಬಗ್ಗೆ ಖಚಿತಪಡಿಸಿಕೊಳ್ಳುವಿಕೆಗಾಗಿ ಸೂಕ್ತ ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ, ಇದರಿಂದಾಗಿ ಕಂಪನಿಯು ಚಾಲ್ತಿ ಆಸ್ತಿಗಳು ಮತ್ತು ಚಾಲ್ತಿ ಜವಾಬ್ದಾರಿಗಳನ್ನು ವಿಷಯಕವಾಗಿ ತಪ್ಪಾಗಿ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಾಧ್ಯತೆಯಿರುತ್ತದೆ.	*ಮುನ್ನೆಚ್ಚರಿಕೆ ಹಣದ ಭದ್ರತಾ ಠೇವಣಿ, ಭದ್ರತಾ ಠೇವಣಿ ಮತ್ತು ಇತರೆ ಠೇವಣಿಗಳನ್ನು ನಿಯತಕಾಲಿಕವಾಗಿ ಸಮನ್ವಯಗೊಳಿಸಲಾಗುತ್ತಿರುವುದು ಹಾಗೂ ಕೇಂದ್ರ ಕಚೇರಿಯಲ್ಲಿ ಹಾಗೂ ಅಲ್ಲದೆಯೇ ಎಲ್ಲಾ ವಿಭಾಗೀಯ ಕಚೇರಿಗಳಲ್ಲಿ ದಾಖಲೆಗಳನ್ನು ನಿರ್ವಹಿಸಲಾಗಿರುವುದು.*
ಎಲ್	ಅಂದಾಜುಗಳ ಅನುಮೋದನೆ ಮತ್ತು ಟೆಂಡರುಗಳ ಮೌಲ್ಯಮಾಪನವು ಮುಖ್ಯ ಇಂಜಿನಿಯರ್‌ಗಳು/ಅಂದಾಜು ಸಮೀಕ್ಷಾ ಸಮಿತಿ/ಟೆಂಡರು ಪರಿಶೀಲನಾ ಸಮಿತಿ, ಈ ರೀತಿಯಾಗಿ ಅಧಿಕಾರದತ್ತವಾಗಿರುವ ಸಂಬಂಧಿತ ಅಧಿಕಾರಿಗಳ ಮೂಲಕ ನಡೆಯುತ್ತವೆ. ಆದಾಗ್ಯೂ, ಹಣಕಾಸು ವಿಭಾಗಕ್ಕೆ ಸಂಬಂಧಿತ ವ್ಯಕ್ತಿಗಳು ಯಾವುದೇ ಸಮಿತಿಗಳಲ್ಲಿ ಭಾಗಿಗಳಾಗಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಇದು ತೆರಿಗೆಗಳು, ಇತ್ಯಾದಿ ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನವನ್ನು ಸಮರ್ಪಕವಾಗಿ ಮಾಡದಿರುವಲ್ಲಿ ಪರಿಣಮಿಸಬಹುದು.	*ಈ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವ ಸಲುವಾಗಿ ಸೂಕ್ತ ಮಟ್ಟದಲ್ಲಿ ಕೈಗೆತ್ತಿಕೊಳ್ಳಲಾಗುವುದು.*
ಎಂ	ನಕಾರಾತ್ಮಕ ದರ ವ್ಯತ್ಯಯದ ಕಾರಣ ವಿಳಂಬಕ್ಕೆ ಗುತ್ತಿಗೆದಾರರು ಜವಾಬ್ದಾರರಾಗಿದ್ದಲ್ಲಿ ದರ ಹೊಂದಾಣಿಕೆ ಷರತ್ತನ್ನು ಕಂಪನಿಯು ಗುತ್ತಿಗೆದಾರರುಗಳ ಜೊತೆಯಲ್ಲಿ ತನ್ನ ಒಡಂಬಡಿಕೆಗಳಲ್ಲಿ ಸೇರಿಸುವ ಅಗತ್ಯತೆಯಿರುತ್ತದೆ. ವಿಸ್ತರಿಸಲ್ಪಟ್ಟ ಕಾಲಾವಧಿಗೆ ದರ ಹೊಂದಾಣಿಕೆಯನ್ನು ಅನ್ವಯಗೊಳಿಸದಿರುವ ಷರತ್ತಿನ ಮೇಲೆ ಗುತ್ತಿಗೆದಾರರುಗಳಿಗೆ ಕಾಲವಧಿ ವಿಸ್ತರಣೆಯನ್ನು ನೀಡಲಾಗುವುದು. ಕಾಲಾವಧಿಯ ವಿಸ್ತರಣೆಯ ಅವಧಿಯಲ್ಲಿ ದರಗಳ ಇಳಿಕೆಯ ಕಾರಣ ಬಾಬುಗಳ ದರಗಳಲ್ಲಿನ ಇಳಿಕೆಯ ಕಾರಣದ ದರ ವ್ಯತ್ಯಯವನ್ನು ಗುತ್ತಿಗೆದಾರರುಗಳಿಂದ ಎಲ್ಲಾ ಪ್ರಕರಣಗಳಲ್ಲಿಯೂ ವಸೂಲಾತಿ ಮಾಡತಕ್ಕದ್ದು. ಗುತ್ತಿಗೆದಾರರ ಕಾರಣದಿಂದ ಕಾಲಾವಧಿಯ ವಿಸ್ತರಣೆಯನ್ನು ನೀಡಿದ್ದಲ್ಲಿ ಮೂಲ ಅವಧಿಯನ್ನು ಮೀರಿದ ಅವಧಿಯಲ್ಲಿ ನಕಾರಾತ್ಮಕ ದರ ವ್ಯತ್ಯಯಗಳ ಕಾರಣ ಮೊತ್ತಗಳ ವಸೂಲಾತಿಗಾಗಿ ಒಡಂಬಡಿಕೆಗಳಲ್ಲಿ ಷರತ್ತುಗಳನ್ನು ವಿಧಿಸಿರುವುದಿಲ್ಲ. ಅಂತಹ ಷರತ್ತನ್ನು ವಿಧಿಸದಿರುವುದು ಗುತ್ತಿಗೆದಾರರಿಗೆ ಅಧಿಕ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಬಹುದು.	*ಈ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವ ಸಲುವಾಗಿ ಸೂಕ್ತ ಮಟ್ಟದಲ್ಲಿ ಕೈಗೆತ್ತಿಕೊಳ್ಳಲಾಗುವುದು.*
	ವಲಯವಾರು ದರಗಳ ಷೆಡ್ಯೂಲಿನ ತಯಾರಿಕೆ – ಜಲ ಸಂಪನ್ಮೂಲ ಇಲಾಖೆಯು ಉಕ್ಕು ಮತ್ತು ಬೆಂಗಳೂರಿನಿಂದ ಸಾಗಣೆ ವೆಚ್ಚಗಳು ಮುಂತಾದ ಒಟ್ಟಾರೆ ಸಂಪೂರ್ಣ ರಾಜ್ಯಕ್ಕಾಗಿ ದರಗಳ ಷೆಡ್ಯೂಲನ್ನು ತಯಾರಿಸುತ್ತದೆ ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಯಿತು. ಅಲ್ಲದೆಯೇ, ಕೂಲಿ ವೆಚ್ಚಕ್ಕಾಗಿ, ಅದು ಇರುವ ನಿರ್ದಿಷ್ಟ ವಲಯಕ್ಕೆ ಬದಲಾಗಿ ಕರ್ನಾಟಕ ರಾಜ್ಯದ ವಾರ್ಷಿಕ ಸರಾಸರಿ ದರ ಸೂಚ್ಯಾಂಕವನ್ನು ಗಣನೆಗೆ ತೆಗೆದುಕೊಳ್ಳಲಾಗಿದ್ದಿತು. ಇದು ದರಗಳನ್ನು ತಿರುಚುವಲ್ಲಿ ಪರಿಣಮಿಸಬಹುದು ಹಾಗೂ ಅಂದಾಜುಗಳ ತಯಾರಿಕೆಯು ಯಥಾರ್ಥತೆಯಿಂದ ಕೂಡಿಲ್ಲದಿರುವಲ್ಲಿಗೆ ಹಾಗೂ ಉಬ್ಬಿಸಿದ ದರಗಳಲ್ಲಿ ಅಂದಾಜುಗಳನ್ನು ತಯಾರಿಸುವಲ್ಲಿಗೆ ದಾರಿ ಮಾಡಿಕೊಡಬಹುದು. ಅಂದಾಜುಗಳನ್ನು ಸ್ಥಳೀಯ ಸ್ಥಿತಿಗತಿಗಳನ್ನು ಹಾಗೂ ಕಾಮಗಾರಿಗೆ ಸಾಧ್ಯವಾದಷ್ಟು ಅತೀ ಸಮೀಪದಲ್ಲಿ ಲಭ್ಯವಿರುವ ಸಾಮಗ್ರಿಗಳು ಮತ್ತು ಕೂಲಿಗಳನ್ನು ಪರಿಗಣಿಸಿದಂತೆ ತಯಾರಿಸಬೇಕು.	*ಈ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವ ಸಲುವಾಗಿ ಸೂಕ್ತ ಮಟ್ಟದಲ್ಲಿ ಕೈಗೆತ್ತಿಕೊಳ್ಳಲಾಗುವುದು.*

ಹಣಕಾಸು ವರ್ಷ 2017-18ನೇ ಸಾಲಿನ
ಕಾರ್ಯದರ್ಶಿಯ ಪರಿಶೋಧಕರ ವರದಿಯಲ್ಲಿನ ಪರಿಶೀಲನೆಗಳಿಗೆ ಉತ್ತರಗಳು

ಕ್ರ. ಸಂ.	ಕಂಡಿಕೆ ಸಂಖ್ಯೆ	ಪರಿಶೋಧಕರ ವರದಿಯಲ್ಲಿನ ಪರಿಶೀಲನೆಗಳು	ಉತ್ತರಗಳು
1	8	ಕಂಪೆನಿಯು ಕರ್ನಾಟಕದುದ್ದಕ್ಕೂ ತನ್ನ ವಿವಿಧ ವಲಯಗಳಲ್ಲಿನ ಹಾಗೂ ಕಾಮಗಾರಿ ನೆಲೆಗಳಲ್ಲಿನ ನೀರಾವರಿ ಮತ್ತು ನಿರ್ಮಾಣ ಯೋಜನೆಗಳನ್ನು ಪೂರ್ಣಗೊಳಿಸಲು ಅನೇಕ ಗುತ್ತಿಗೆದಾರರನ್ನು ತೊಡಗಿಸಿದೆ. ಗುತ್ತಿಗೆದಾರರು ನಿರ್ಮಾಣ ಮತ್ತು ಸಿವಿಲ್ ಕಾಮಗಾರಿ ಹಾಗೂ ಇತರ ಕಾರ್ಮಿಕ ಗುತ್ತಿಗೆಯನ್ನು ಜಾರಿಗೊಳಿಸಲು ನೌಕರರನ್ನು ತೊಡಗಿಸುತ್ತಾರೆ. ಕಂಪೆನಿಯು ಪ್ರಧಾನ ಉದ್ಯೋಗದಾತನಾಗಿ ಗುತ್ತಿಗೆ ಕೂಲಿ (ನಿಬಂಧನೆ ಮತ್ತು ನಿಷೇಧ) ಕಾಯ್ದೆ, 1970 ಮತ್ತು ಸಂವಾದಿ ಕರ್ನಾಟಕ ಅಧಿನಿಯಮಗಳು, 1974 – ಇವುಗಳ ಉಪಬಂಧಗಳ ಅನುಸರಣೆಯನ್ನು, ವಿಶೇಷವಾಗಿ ತನ್ನ ವಲಯ, ಯೋಜನಾ ಮತ್ತು ಕಾಮಗಾರಿ ನೆಲೆಯ ಕಛೇರಿಗಳಲ್ಲಿ, ಸುಧಾರಿಸಬೇಕಿದೆ.	*ಕಾರ್ಮಿಕ ಗುತ್ತಿಗೆ (ನಿಬಂಧನೆ ಮತ್ತು ನಿಷೇಧ) ಕಾಯ್ದೆ, 1970 ಹಾಗೂ ತತ್ಸಂಬಂಧಿತ ಕರ್ನಾಟಕ ಅಧಿನಿಯಮಗಳು, 1974ರ ಉಪಬಂಧಗಳ ಅನುಸಾರ ಕ್ರಮ ತೆಗೆದುಕೊಳ್ಳುವಂತೆ ಎಲ್ಲಾ ಮುಖ್ಯ ಇಂಜಿನಿಯರ್‌ಗಳು, ಅಧೀಕ್ಷಕ ಇಂಜಿನಿಯರ್‌ಗಳು, ಕಾರ್ಯಪಾಲಕ ಇಂಜಿನಿಯರ್‌ಗಳು ಹಾಗೂ ಇತರೇ ಅಧಿಕಾರಿಗಳಿಗೆ ಸುತ್ತೋಲೆ ಸಂಖ್ಯೆ: ಕನೀನಿ/ಸಿ.ಎಸ್/07/ ಎಜಿಎನ್/2018/0005, ದಿನಾಂಕ : 26.02.2018 ರಲ್ಲಿ ತಿಳಿಸಲಾಗಿದೆ. ಕರ್ನಾಟಕದಾದ್ಯಂತ ಇರುವ ನಿಗಮದ ಕ್ಷೇತ್ರ ಮತ್ತಿತರೆ ಕಛೇರಿಗಳು ಈ ರೀತಿಯ ಅನುಸರಣಾ ಕ್ರಮವನ್ನು ಅನುಷ್ಠಾನಗೊಳಿಸುವಂತೆ ಒತ್ತಾಯಿಸಲಾಗುತ್ತಿದೆ.*

ಮಂಡಳಿಯ ಪರವಾಗಿ,

ಸಹಿ/-

ಹೆಚ್.ಡಿ. ಕುಮಾರಸ್ವಾಮಿ

ಅಧ್ಯಕ್ಷರು

ಸ್ಥಳ : ಬೆಂಗಳೂರು

ದಿನಾಂಕ : 20.09.2018

2017–18ರ ಸಾಲಿನ ನಿರ್ದೇಶಕರ ವರದಿಗೆ ಅನುಬಂಧ – 1
ನಾಮನಿರ್ದೇಶನ ಮತ್ತು ಸಂಭಾವನೆ ಕಾರ್ಯನೀತಿ
(ಕಂಪನಿ ಕಾಯ್ದೆ, 2013ರ ಪರಿಚ್ಛೇದ 178(3) ಅನ್ವಯ ರೂಪಿಸಲಾದದ್ದು)

1. ಪೀಠಿಕೆ:

1.1. ಕಂಪನಿ ಕಾಯ್ದೆ, 2013, ಪರಿಚ್ಛೇದ 178ರ ಉಪಪರಿಚ್ಛೇದ (3) ತಿಳಿಸುವಂತೆ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯು ಅರ್ಹತೆಗಳ, ಸಕಾರಾತ್ಮಕವಾದ ಗುಣಧರ್ಮಗಳ ನಿರ್ಧಾರಣಕ್ಕೆ ಮಾನದಂಡಗಳನ್ನು ರೂಪಿಸಿ ಸರ್ಕಾರದ ಮಾತೃ ಇಲಾಖೆಯ ವ್ಯಾಪ್ತಿಗೆ ಬರುವ ಮತ್ತು ಸರ್ಕಾರ ಹಾಗೂ ಆಡಳಿತಾತ್ಮಕ ಇಲಾಖೆ (ಜಲ ಸಂಪನ್ಮೂಲ ಇಲಾಖೆ) ನಿಯೋಜಿಸುವ ಹಿರಿಯ ಅಧಿಕಾರಿಗಳನ್ನು ಹೊರತುಪಡಿಸಿ ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ ಮತ್ತು ಇತರೇ ನೌಕರರ ಸಂಭಾವನೆಗೆ ಸಂಬಂಧಿಸಿದಂತೆ ಮಂಡಳಿಗೆ ಕಾರ್ಯನೀತಿಯೊಂದನ್ನು ಶಿಫಾರಸ್ಸು ಮಾಡುತ್ತದೆ.

1.2. ನಾಮನಿರ್ದೇಶನ ಮತ್ತು ಸಂಭಾವನೆ ಕಾರ್ಯನೀತಿಯನ್ನು (“ಕಾರ್ಯನೀತಿ”) ಕಾಯ್ದೆಯ ಪರಿಚ್ಛೇದ 178(3)ರ ಉಪಬಂಧಗಳು ಹಾಗೂ ಅದರ ಅಡಿ ನಿಗದಿಪಡಿಸಲಾದ ನಿಯಮಗಳ ಅನುಸಾರ ರೂಪಿಸಲಾಗಿದೆ.

1.3. ಕಾರ್ಯನೀತಿಯು ಕಂಪನಿಯ ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ (“ಕೆಎಂಪಿ”) ಮತ್ತು ಹಿರಿಯ ವ್ಯವಸ್ಥಾಪನಾ ಸಿಬ್ಬಂದಿಯ (ಎಸ್‌ಎಂಪಿ) (ಒಟ್ಟಾಗಿ “ಕಾರ್ಯನಿರ್ವಾಹಕರು” ಎಂದು ಸಂಬೋಧಿತರು) ಸಂಭಾವನೆಯ ಚೌಕಟ್ಟನ್ನು ಒದಗಿಸುತ್ತದೆ.

ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ ವಿತ್ತಾಧಿಕಾರಿ, ಇವರುಗಳು ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ (“ಕೆಎಂಪಿ” ಎಂದು ಕರೆಸಿಕೊಳ್ಳುತ್ತಾರೆ. “ಹಿರಿಯ ವ್ಯವಸ್ಥಾಪನಾ ಸಿಬ್ಬಂದಿ” ಎಂದರೆ ನಿರ್ದೇಶಕರುಗಳನ್ನು ಹೊರತುಪಡಿಸಿ ಕೇಂದ್ರ ವ್ಯವಸ್ಥಾಪನಾ ತಂಡದಲ್ಲಿನ ಕಂಪನಿಯ ನೌಕರರು ಕಾರ್ಯಕಾರಿ ನಿರ್ದೇಶಕರಿಗಿಂತ ಒಂದು ಹಂತ ಕೆಳಗಿನ ಆಡಳಿತ ಮಂಡಳಿಯ ಎಲ್ಲಾ ಸದಸ್ಯರೂ ಹಾಗೂ ಕಾರ್ಯಕಾರಿ ಮುಖ್ಯಸ್ಥರೂ ಇದರಲ್ಲಿ ಸೇರುತ್ತಾರೆ.

1.4. ಈ ಕಾರ್ಯನೀತಿಯನ್ನು “ಕೆಎನ್‌ಎನ್‌ಎಲ್ ನಾಮನಿರ್ದೇಶನ & ಸಂಭಾವನೆ ಸಮಿತಿ” ಎಂದು ಕರೆಯಲಾಗುವುದು ಹಾಗೂ ಇದನ್ನು “ಕಾರ್ಯನೀತಿ” ಎಂದು ಉಲ್ಲೇಖಿಸಲಾಗುವುದು.

1.5. ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ ಯೋಗ್ಯವೆಂದು ಪರಿಗಣಿಸುವ ಅಂತರಗಳಲ್ಲಿ ಕಾರ್ಯನೀತಿಯನ್ನು ಪರಿಶೀಲಿಸಲಾಗುವುದು.

2. ಉದ್ದೇಶಗಳು

2.1 ಕಾರ್ಯನೀತಿಯ ಉದ್ದೇಶಗಳು ಕೆಳಗಿನಂತಿವೆ:

2.1.1 ಕಾರ್ಯನಿರ್ವಾಹಕ ಅಧಿಕಾರಿಗಳ ಅರ್ಹತೆಗಳು, ಸಕಾರಾತ್ಮಕ ಗುಣಧರ್ಮಗಳು ಮತ್ತು ಸಂಭಾವನೆಯ ನಿರ್ಧಾರಣೆಗೆ ಮಾನದಂಡಗಳನ್ನು ನಿಗದಿಪಡಿಸುವುದು.

2.1.2 ಕಂಪನಿಯನ್ನು ಯಶಸ್ವಿಯಾಗಿ ನಡೆಸುವಂತೆ ಕಂಪನಿಯ ಅತ್ಯಂತ ಅರ್ಹರಾದ ಕಾರ್ಯಕಾರಿ ಅಧಿಕಾರಿಗಳನ್ನು ಕಂಪನಿ ಆಕರ್ಷಿಸಿ, ಉಳಿಸಿಕೊಂಡು ಉತ್ತೇಜಿಸಲು ಸಾಧ್ಯವಾಗುವಂತೆ ಮಾಡುವುದು.

2.1.3 ಕೈಗಾರಿಕಾ ಪ್ರಮಾಣಗಳು ಮತ್ತು ಸೂಕ್ತ ಭಾರತೀಯ ಕಾರ್ಪೊರೇಟ್ ನಿಬಂಧನೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಕಂಪನಿ ಉತ್ತಮವಾದ ಸಮತೋಲನ ಹೊಂದಿರುವ ಹಾಗೂ ಸಾಧನೆ–ಆಧಾರಿತ ಪರಿಹಾರ ಪ್ಯಾಕೇಜ್ ಒದಗಿಸಲು ಸಾಧ್ಯವಾಗುಂತೆ ಮಾಡುವುದು.

2.1.4 ಹಿರಿಯ ಕಾರ್ಯನಿವಾಹಕ ಅಧಿಕಾರಿಗಳ ಹಿತಾಸಕ್ತಿಗಳು ಕಂಪನಿಯ ವ್ಯಾಪಾರ ಕಾರ್ಯತಂತ್ರ ಮತ್ತು ಅಪಾಯ ಸಹಿಷ್ಣುತೆ, ಉದ್ದೇಶಗಳು, ಮೌಲ್ಯಗಳು ಮತ್ತು ದೀರ್ಘಕಾಲೀನ ಹಿತಾಸಕ್ತಿಗಳೊಂದಿಗೆ ಹೊಂದುವುದನ್ನು ಖಚಿತಗೊಳಿಸಿ ಕೊಳ್ಳುವುದು.

3. ಸಂಭಾವನೆ ಸಿದ್ಧಾಂತಗಳು

3.1 **ಕಾರ್ಯತಂತ್ರದ ಉದ್ದೇಶಗಳಿಗೆ ಬೆಂಬಲ:** ಸಂಭಾವನೆ ಮತ್ತು ಪುರಸ್ಕಾರ ಚೌಕಟ್ಟುಗಳು ಹಾಗೂ ನಿರ್ಧಾರಗಳನ್ನು ಕಂಪನಿಯ ದೃಷ್ಟಿ ಮತ್ತು ಕಾರ್ಯತಂತ್ರದ ಸಾಧನೆಗೆ ಪೂರಕವಾಗಿ, ಬೆಂಬಲವಾಗಿ ಮತ್ತು ಅವನ್ನು ಬಲಪಡಿಸುವಂತೆ ಅಭಿವೃದ್ಧಿಪಡಿಸುವುದು.

3.2 **ಪಾರದರ್ಶಕತೆ:** ಸಂಭಾವನೆ ನಿರ್ವಹಣೆಯ ಪ್ರಕ್ರಿಯೆ ಪಾರದರ್ಶಕವಾಗಿ, ಉತ್ತಮವಾದ ವಿಶ್ವಾಸಾರ್ಹತೆಯಲ್ಲಿ ಹಾಗೂ ಗೌಪ್ಯತೆಯ ಸೂಕ್ತ ಶ್ರೇಣಿಗಳಿಗೆ ಅನುಸಾರವಾಗಿ ಇರಬೇಕಾಗುತ್ತದೆ.

3.3 **ಆಂತರಿಕ ಸಮಾನತೆ:** ಕಂಪನಿಯು ನಿರ್ವಾಹಕರುಗಳ ಸಂಭಾವನೆಯನ್ನು ಸಂಸ್ಥೆಯಲ್ಲಿ ಅವರ ಕಾರ್ಯತತ್ಪರತೆಗೆ ಅನುಗುಣವಾಗಿ ನೀಡುವುದು. ಸದರಿಯವರ ಸ್ಥಾನಮಾನವನ್ನು ಸಾಮಾನ್ಯವಾಗಿ ಕಂಪನಿಯಲ್ಲಿನ ಇತರೇ ಅಧಿಕಾರಿಗಳೊಂದಿಗೆ ನಿರ್ಧರಿಸುವುದು.

3.4 **ಒದಗುವಿಕೆ ಮತ್ತು ಊರ್ಜಿತ ಸಾಧ್ಯತೆ:** ಸಂಭಾವನೆ ಊರ್ಜಿತ ಸಾಧ್ಯತೆಯ ನೆಲೆಯಲ್ಲಿ ತನಗೆ ಕಾರ್ಯ ಸಾಧ್ಯವೇ ಎನ್ನುವುದನ್ನು ಕಂಪನಿ ಖಚಿತಪಡಿಸಿಕೊಳ್ಳಬೇಕು.

4. ಸಮಿತಿಯ ಉಲ್ಲೇಖಾ ನಿಬಂಧನೆಗಳು ಮತ್ತು ಪಾತ್ರ

4.1 ನಿರ್ದೇಶಕ ಮಂಡಳಿ ನಿಗದಿಪಡಿಸಿರುವಂತೆ ಸಮಿತಿಯ ಉಲ್ಲೇಖಾ ನಿಬಂಧನೆಗಳು ಮತ್ತು ಪಾತ್ರ ಕೆಳಗಿನಂತಿವೆ:

4.1.1 ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ (ಕೆಎಂಪಿ) ಮತ್ತು ಕಂಪನಿಯ ಇತರ ನೌಕರರ ಸಂಭಾವನೆಗೆ ಸಂಬಂಧಿಸಿದಂತೆ ಅರ್ಹತೆಗಳು, ಸಕಾರಾತ್ಮಕವಾದ ಗುಣಧರ್ಮಗಳ ನಿರ್ಧಾರಣಕ್ಕೆ ಮಾನದಂಡಗಳನ್ನು ರೂಪಿಸಿ ಮಂಡಳಿಗೆ ಕಾರ್ಯನೀತಿಯೊಂದನ್ನು ಶಿಫಾರಸ್ಸು ಮಾಡುವುದು.

4.1.2 ಕಾಲದಿಂದ ಕಾಲಕ್ಕೆ ನಿರ್ದೇಶಕ ಮಂಡಳಿಯು ಉಲ್ಲೇಖಿಸುವ ವಿಷಯಗಳನ್ನು ಪರಿಗಣಿಸುವುದು.

4.2 ಸಮಿತಿಯು:

4.2.1 ಪಿಂಚಣಿ, ರಜೆ ನಗದೀಕರಣ, ಗ್ರಾಚ್ಯುಯಿಟಿ ಮುಂತಾದವು ಸೇರಿದಂತೆ ಸಂಭಾವನೆಯ ಪ್ರಕಟಣೆಗೆ ಸಂಬಂಧಿಸಿದಂತೆ ಎಲ್ಲ ಉಪಬಂಧಗಳ ಅನುಸರಣೆಯನ್ನು ಖಚಿತಪಡಿಸುವುದು.

4.2.2 ಯಾವ ಕಾರ್ಯನಿರ್ವಾಹಕ ಅಧಿಕಾರಿಯೂ ತಮ್ಮದೇ ಆದ ಸಂಭಾವನೆಗೆ ಸಂಬಂಧಿಸಿದ ನಿರ್ಧಾರ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದಿರುವುದನ್ನು ಖಚಿತಪಡಿಸುವುದು.

5. ಕೆಎಂಪಿ ಮತ್ತು ಎಸ್‌ಎಂಪಿ ಗಳ ಆಯ್ಕೆ ಹಾಗೂ ನಾಮನಿರ್ದೇಶನ ಪ್ರಕ್ರಿಯೆ

ಶೈಕ್ಷಣಿಕ, ವೃತ್ತಿಪರ ಅರ್ಹತೆಗಳು, ವೃತ್ತಿ ಅನುಭವ, ಕೌಶಲ್ಯ ಮತ್ತು ಇತರ ಸಾಮರ್ಥ್ಯಗಳ ಆಧಾರದ ಮೇಲೆ ಕೆಎಂಪಿ ಮತ್ತು ಎಸ್‌ಎಂಪಿಗಳ ಸ್ಥಾನಕ್ಕೆ ಸೂಕ್ತವಾಗುವ ಅಭ್ಯರ್ಥಿಗಳನ್ನು ಸಮಿತಿಯ ಅಧ್ಯಕ್ಷರು ಹಾಗೂ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಗುರುತಿಸಿ ಅವರನ್ನು ಆ ಸ್ಥಾನಗಳಿಗೆ ನೇಮಿಸಬೇಕು.

ಮುಂದುವರೆದು, ಕೆಎಂಪಿ ನೇಮಕಾತಿಗೆ ಸಂಬಂಧಿಸಿದಂತೆ, ನೇಮಕಾತಿಯ ದಿನಾಂಕದಂದು ಇದ್ದಂತೆ ಪ್ರಸ್ತುತ ಕಾಯ್ದೆ, ಶಾಸನ, ನಿಬಂಧನೆ ಮುಂತಾದವುಗಳ ಉಪಬಂಧಗಳ ಅನುಸಾರ ನಿರ್ದೇಶಕ ಮಂಡಳಿ/ ಸಂಬಂಧಪಟ್ಟ ಸಮಿತಿಯ ಅಂಗೀಕಾರವನ್ನು ಪಡೆಯಬೇಕು. ಕೆಎಂಪಿ ನೇಮಕಾತಿ ಮತ್ತು/ ಅಥವಾ ಸ್ಥಾನದಿಂದ ತೆಗೆಯುವಿಕೆಯನ್ನು ಎನ್‌ಆರ್‌ಸಿ ಮತ್ತು/ ಅಥವಾ ನಿರ್ದೇಶಕ ಮಂಡಳಿಯ ಮುಂದೆ ಕಾಲಕಾಲಕ್ಕೆ ಇರಿಸಬೇಕು.

ಜೊತೆಗೆ ಎಸ್‌ಎಂಪಿಗಳ ನೇಮಕಾತಿಯನ್ನು (ಕೆಎಂಪಿ ಹೊರತುಪಡಿಸಿ) ಕಂಪನಿಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಅಂಗೀಕರಿಸಬೇಕು ಹಾಗೂ ಈ ವಿಷಯವನ್ನು ಎನ್‌ಆರ್‌ಸಿ ಮುಂದೆ ಕಾಲಕಾಲಕ್ಕೆ ಇರಿಸಬೇಕು.

6. ಪರಿಹಾರ ರಚನೆ:

6.1 **ಕಾರ್ಯಕಾರಿಯಲ್ಲದ ನಿರ್ದೇಶಕರಿಗೆ ಸಂಭಾವನೆ:**

ಕಂಪನಿಯ ಕಾರ್ಯಕಾರಿಯಲ್ಲದ ನಿರ್ದೇಶಕರಿಗೆ ನಿರ್ದೇಶಕ ಮಂಡಳಿಯ ಹಾಗೂ ಸಮಿತಿಗಳ ಸಭೆಯಲ್ಲಿ ಹಾಜರಿರುವುದಕ್ಕೆ ಸಭಾ ಭತ್ಯೆಯ ಮೂಲಕ ಮಾತ್ರ ಸಂಭಾವನೆಯನ್ನು ಪಾವತಿಸಲಾಗುತ್ತದೆ. ಕಾರ್ಯಕಾರಿಯಲ್ಲದ ನಿರ್ದೇಶಕರಿಗೆ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಹಾಜರಿರುವುದಕ್ಕೆ ಪಾವತಿಸುವ ಸಭಾ ಭತ್ಯೆಯು ಅಧಿಸೂಚನೆಗಳು/ ಸುತ್ತೋಲೆಗಳ ಮೂಲಕ ಸಾರ್ವಜನಿಕ ಉದ್ಯಮಗಳ ಇಲಾಖೆಯು ನಿಗದಿಪಡಿಸುವ ಸಭಾ ಭತ್ಯೆಯಾಗಿರುತ್ತದೆ. ಆದರೆ, ಲೆಕ್ಕಪರಿಶೋಧನಾ ಸಮಿತಿ, ತಾಂತ್ರಿಕ ಉಪಸಮಿತಿ, ಹಣಕಾಸು ಮತ್ತು ಸಂಭಾವನೆ ಸಮಿತಿ ಮುಂತಾದ ಇತರ ಸಮಿತಿಯ ಸಭೆಗಳಲ್ಲಿ ಹಾಜರಿರುವುದಕ್ಕೆ ಸಭಾ ಭತ್ಯೆಯನ್ನು ಮಂಡಳಿ ಕಾಲದಿಂದ ಕಾಲಕ್ಕೆ ನಿಗದಿಪಡಿಸುತ್ತದೆ ಹಾಗೂ ಈ ಸಭಾ ಭತ್ಯೆಯು ಕಂಪನಿ ಕಾಯ್ದೆ, 2013 ಮತ್ತು ಅದರ ಅಡಿಯ ನಿಯಮಗಳು ನಿಗದಿಪಡಿಸುವ ಸಭಾ ಭತ್ಯೆಗಿಂತ ಹೆಚ್ಚಿರುವಂತಿಲ್ಲ.

ಕಾರ್ಯಕಾರಿಯಲ್ಲದ ನಿರ್ದೇಶಕರಿಗೆ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಹಾಗೂ ಇತರ ಸಮಿತಿಗಳ ಸಭೆಗಳಲ್ಲಿ ಹಾಜರಿರುವುದಕ್ಕೆ ಪಾವತಿಸುವ ಸಭಾ ಭತ್ಯೆಯನ್ನು ಕಂಪನಿ ಕಾಯ್ದೆ, 2013ರ ಉಪಬಂಧಗಳ ಅನುಸಾರ ಮಂಡಳಿಯ ಅಂಗೀಕಾರದೊಂದಿಗೆ ಮಾತ್ರ ಕಾಲದಿಂದ ಕಾಲಕ್ಕೆ ಮಾರ್ಪಡಿಸಬಹುದಾಗಿದೆ ಮತ್ತು ಪರಿಷ್ಕರಿಸಬಹುದಾಗಿದೆ.

6.2 ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ (ಕೆಎಂಪಿ) ಮತ್ತು ಹಿರಿಯ ವ್ಯವಸ್ಥಾಪನಾ ಸಿಬ್ಬಂದಿಯ (ಎಸ್‌ಎಂಪಿ) ಸಂಭಾವನೆ:

ಕಂಪನಿಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ (ಕೆಎಂಪಿ) ಮತ್ತು ಹಿರಿಯ ವ್ಯವಸ್ಥಾಪನಾ ಸಿಬ್ಬಂದಿಯ (ಎಸ್‌ಎಂಪಿ) ಸಂಭಾವನೆಯನ್ನು ನಿರ್ಧರಿಸಿ ಲೆಕ್ಕಕ್ಕೆ ತೆಗೆದುಕೊಳ್ಳಲು ಕಂಪನಿಯು ವಿಶ್ವಾಸಾರ್ಹವಾದ ಮತ್ತು ಪಾರದರ್ಶಕವಾದ ಕಾರ್ಯಚೌಕಟ್ಟನ್ನು ಹೊಂದಿದೆ. ಜೊತೆಗೆ, ಕೆಎಂಪಿಗಳ ಸಂಭಾವನೆಯು ನಿರ್ದೇಶಕ ಮಂಡಳಿ/ಯಾವುದೇ ಕಾಯ್ದೆ, ಶಾಸನ, ನಿಬಂಧನೆಗಳು ಮುಂತಾದವುಗಳಿಂದ ನಿಗದಿಯಾಗಿದ್ದಲ್ಲಿ ಸಂಬಂಧಪಟ್ಟ ಸಮಿತಿಯ ಅಂಗೀಕಾರಕ್ಕೆ ಸಹ ಬದ್ಧವಾಗಿರುತ್ತದೆ.

7. ಸಮಿತಿಯ ಅಧಿಕಾರಗಳು ಹಾಗೂ ಸಮಿತಿ ಸಭೆಗಳು:

ಸಮಿತಿಯು ಇತರ ಅಧಿಕಾರಗಳೊಂದಿಗೆ ಕೆಳಗಿನ ಅಧಿಕಾರಗಳನ್ನೂ ಹೊಂದಿರುತ್ತದೆ:

7.1 ಕಂಪನಿಯ ಎಲ್ಲಾ ಪುಸ್ತಕಗಳು, ದಾಖಲೆಗಳು, ಸೌಲಭ್ಯಗಳು ಮತ್ತು ಸಿಬ್ಬಂದಿಯ ಪೂರ್ಣ ಲಭ್ಯಾವಕಾಶವನ್ನು ಹೊಂದಿರುತ್ತದೆ. ಸಮಿತಿಯ ವ್ಯಾಪ್ತಿಗೆ ಬರುವ ವಿಷಯಗಳ ಅಧ್ಯಯನ ನಡೆಸುವುದು ಅಥವಾ ಅಧ್ಯಯನದ ಆಧಿಕಾರವನ್ನು ವಹಿಸವುದು;

7.2 ಸದರಿ ಕಾರ್ಯನೀತಿಯ ಅಡಿ ತಮ್ಮ ಪಾತ್ರನಿರ್ವಹಣೆಗೆ ಸಂಬಂಧಿಸಿದಂತೆ ಸಮಾಲೋಚಕರ ಸಲಹೆಯನ್ನು ಉಳಿಸಿಕೊಳ್ಳುವುದು ಅಥವಾ ಪಡೆದುಕೊಳ್ಳುವುದು ಮತ್ತು ಈ ಸಂಬಂಧದ ವೆಚ್ಚಗಳನ್ನು ಕಂಪನಿ ಭರಿಸಬೇಕಾಗುತ್ತದೆ.

7.3 ಸದರಿ ಕಾರ್ಯನೀತಿಯ ಅಡಿಯಲ್ಲಿನ ಯಾವುದೇ ಕಾರ್ಯ ಅಥವಾ ಪಾತ್ರವನ್ನು ನಿರ್ವಹಿಸಲು ಸಮಿತಿಯ ಯಾವುದೇ ಸದಸ್ಯರಿಗೆ ಅಥವಾ ಕಂಪನಿಯ ಯಾವುದೇ ಕೆಎಂಪಿಗೆ ಅಥವಾ ಉಪ–ಸಮಿತಿಗಳಿಗೆ ಅಧಿಕಾರವನ್ನು ವರ್ಗಾಯಿಸುವುದು, ಸಮಿತಿಯು ಅಗತ್ಯಕ್ಕೆ ತಕ್ಕಂತೆ ಸಭೆ ಸೇರುತ್ತದೆ.

8. ಅನುಮೋದನೆ ಮತ್ತು ಪ್ರಕಾಶನ

8.1 ಸಮಿತಿಯು ರೂಪಿಸಿದ ಕಾರ್ಯನೀತಿಯನ್ನು ಅಂಗೀಕಾರಕ್ಕಾಗಿ ನಿರ್ದೇಶಕ ಮಂಡಳಿಗೆ ಶಿಫಾರಸ್ಸು ಮಾಡಲಾಗುತ್ತದೆ.

8.2 ಕಾರ್ಯನೀತಿಯು ಕಂಪನಿ ಕಾಯ್ದೆ, 2013 ಪರಿಚ್ಛೇದ 178(4) ಅಡಿ ಅಗತ್ಯವಿರುವಂತೆ ನಿರ್ದೇಶಕರ ವರದಿಯ ಭಾಗವಾಗಿರುತ್ತದೆ.

9. ಪೂರಕ ಉಪಬಂಧಗಳು:

9.1 ನಿರ್ದೇಶಕ ಮಂಡಳಿಯ ಗೊತ್ತುವಳಿಯಂತೆ ಕಾರ್ಯನೀತಿಯನ್ನು ಅಳವಡಿಸಿಕೊಂಡ ದಿನಾಂಕದಿಂದ ಅದು ಔಪಚಾರಿಕವಾಗಿ ಜಾರಿಗೊಳ್ಳುತ್ತದೆ.

9.2 ಈ ಕಾರ್ಯನೀತಿಯ ಭಾಗವಾಗದ ಯಾವುದೇ ವಿಷಯವನ್ನು ಸಂಬಂಧಿತ ಕಾನೂನುಗಳು ಮತ್ತು ನಿಬಂಧನೆಗಳ ಪ್ರಕಾರ ಹಾಗೂ ಕಂಪನಿಯ ಸಂಘ ನಿಯಮಾವಳಿಯ ಪ್ರಕಾರ ನಿರ್ವಹಿಸಲಾಗುವುದು.

9.3 ಈ ಕಾರ್ಯನೀತಿಯನ್ನು ಅರ್ಥೈಸುವ ಹಕ್ಕನ್ನು ಕಂಪನಿಯ ನಿರ್ದೇಶಕ ಮಂಡಳಿಯು ಮಾತ್ರ ಹೊಂದಿರುತ್ತದೆ.

2017–18ರ ಸಾಲಿನ ನಿರ್ದೇಶಕರ ವರದಿಗೆ ಅನುಬಂಧ – 2

CS

ಎಸ್ ವಿಶ್ವನಾಥನ್ ವಿ ಎನ್ ಅಂಡ್ ಅಸೋಸಿಯೇಟ್ಸ್

ಕಂಪನಿ ಕಾರ್ಯದರ್ಶಿಗಳು

ಫ್ಲಾಟ್ ಬಿ, ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್ಸ್,
17ನೇ 'ಎ' ಕ್ರಾಸ್, 10ನೇ 'ಎ' ಮುಖ್ಯರಸ್ತೆ,
ಮಲ್ಲೇಶ್ವರಂ, ಬೆಂಗಳೂರು –560055
ಇ–ಮೇಲ್: **cs_viswanathan@yahoo.com**
ದೂರವಾಣಿ : **080-23440934; 080-41674875;**
ಮೊಬೈಲ್ : **+91 98450 50333 +91 98452 20950**

ಕಾರ್ಯದರ್ಶೀಯ ಪರಿಶೋಧನಾ ವರದಿ
31 ಮಾರ್ಚ್ 2018ರಂದು ಕೊನೆಗೊಂಡ ಹಣಕಾಸು ವರ್ಷದ್ದು

[(ಕಂಪನಿ ಕಾಯ್ದೆ, 2013ರ ಪರಿಚ್ಛೇದ 204(1)ರ ಅನುಸಾರ ಮತ್ತು ಕಂಪನಿ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು 2014, ನಿಯಮ ಸಂಖ್ಯೆ 9ಕ್ಕೆ ಹೊಂದುವಂತೆ]

ಕರ್ನಾಟಕ ನೀರಾವರಿ ನಿಗಮ ನಿಯಮಿತದ ಸದಸ್ಯರಿಗೆ,

1. ಕರ್ನಾಟಕ ನೀರಾವರಿ ನಿಗಮ ನಿಯಮಿತ (ಇನ್ನು ಮುಂದೆ "ಕಂಪನಿ" ಎಂದು ಕರೆಯಲಾಗುತ್ತದೆ) ಸಂಸ್ಥೆಯ ಅನ್ವಯವಾಗುವ ಶಾಸನಬದ್ಧ ಉಪಬಂಧಗಳ ಅನುಸರಣೆ ಹಾಗೂ ಉತ್ತಮ ಕಾರ್ಪೊರೇಟ್ ಆಚರಣೆಗಳ ಬಗೆಗಿನ ಬದ್ಧತೆಯ ಕಾರ್ಯದರ್ಶೀಯ ಪರಿಶೋಧನೆಯನ್ನು ನಾವು ಕೈಗೊಂಡಿದ್ದೇವೆ. ಕಾರ್ಪೊರೇಟ್ ನಡವಳಿಕೆ/ ಶಾಸನಬದ್ಧ ಅನುಸರಣೆಯನ್ನು ಮೌಲ್ಯಮಾಪನ ಮಾಡಲು ಮತ್ತು ಆ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸೂಕ್ತವಾದ ಆಧಾರವನ್ನು ಒದಗಿಸುವ ರೀತಿಯಲ್ಲಿ ಪರಿಶೋಧನೆಯನ್ನು ನಡೆಸಲಾಯಿತು.

2. ಕಂಪನಿಯ ಪುಸ್ತಕಗಳು, ದಾಖಲೆಗಳು, ನಡಾವಳಿ ಪುಸ್ತಕಗಳು, ಸಲ್ಲಿಸಲಾದ ನಮೂನೆ ಮತ್ತು ಸಲ್ಲಿಕೆಗಳು ಹಾಗೂ ಕಂಪನಿ ನಿರ್ವಹಿಸಿರುವ ಇತರ ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ ಮತ್ತು ಕಂಪನಿ, ಅದರ ಅಧಿಕಾರಿಗಳು, ಅಭಿಕರ್ತರು ಮತ್ತು ಅಧಿಕೃತ ಪ್ರತಿನಿಧಿಗಳು ಕಾರ್ಯದರ್ಶೀಯ ಪರಿಶೋಧನೆಯನ್ನು ನಡೆಸುವಾಗ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಇದರೊಂದಿಗೆ ಅನುಬಂಧದಲ್ಲಿ ಲಗತ್ತಿಸಲಾದ ನಮ್ಮ ಪ್ರತ್ಯೇಕ ಪತ್ರಕ್ಕೆ ಬದ್ಧವಾಗಿದ್ದು, ನಾವು ಹೀಗೆ ವರದಿ ಮಾಡುತ್ತಿದ್ದೇವೆ. ನಮ್ಮ ಅಭಿಪ್ರಾಯದಲ್ಲಿ, 31 ಮಾರ್ಚ್, 2018ಕ್ಕೆ ಕೊನೆಗೊಂಡ ಹಣಕಾಸು ವರ್ಷವನ್ನು ಒಳಗೊಳ್ಳುವ ಪರಿಶೋಧನೆಯ ಅವಧಿಯಲ್ಲಿ ಕೆಳಗೆ ಪಟ್ಟಿ ಮಾಡಲಾಗಿರುವ ಶಾಸನಬದ್ಧ ಉಪಬಂಧಗಳನ್ನು ಅನುಸರಿಸಿದೆ ಮತ್ತು ಇಲ್ಲಿಂದಾಚೆಗೆ ಮಾಡಿರುವ ವರದಿಗೆ ಬದ್ಧವಾಗಿ ಮತ್ತು ಆ ಮಟ್ಟಿಗೆ ಸೂಕ್ತವಾದ ಮಂಡಳಿ–ಪ್ರಕ್ರಿಯೆಗಳು ಮತ್ತು ಅನುಸರಣಾ ಕಾರ್ಯತಂತ್ರವನ್ನು ಸಹ ಹೊಂದಿದೆ.

3. ನಾವು ಕಂಪನಿಯ ದಿನಾಂಕ: 31.03.2018ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಪುಸ್ತಕಗಳು, ದಾಖಲೆಗಳು, ನಡಾವಳಿ ಪುಸ್ತಕಗಳು, ಸಲ್ಲಿಸಲಾದ ನಮೂನೆ ಮತ್ತು ಸಲ್ಲಿಕೆಗಳು ಹಾಗೂ ಕಂಪನಿ ನಿರ್ವಹಿಸಿರುವ ಇತರೆ ದಾಖಲೆಗಳ ಕೆಳಗಿನ ಉಪಬಂಧಗಳ ಅನ್ವಯ ಪರಿಶೀಲಿಸಿರುತ್ತೇವೆ:

   (ಅ) ಕಂಪನಿ ಕಾಯ್ದೆ, 2013 (ಕಾಯ್ದೆ) ಮತ್ತು ತತ್ಸಂಬಂಧಿತ ನಿಯಮಗಳು;

   (ಆ) ಭದ್ರತಾ ಕರಾರುಗಳ (ನಿಬಂಧನೆ) ಕಾಯ್ದೆ, 1956 ('ಎಸ್‌ಸಿಆರ್‌ಎ) ಮತ್ತು ಅದರಡಿ ರೂಪಿಸಲಾದ ನಿಯಮಗಳು;

   (ಇ) ಡೆಪಾಸಿಟರೀಸ್ ಕಾಯ್ದೆ, 1996 ಮತ್ತು ಅದರಡಿ ರೂಪಿಸಲಾದ ನಿಬಂಧನೆಗಳು ಮತ್ತು ಉಪಕಾನೂನುಗಳು;

   (ಈ) ವಿದೇಶಿ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಮತ್ತು ಬಾಹ್ಯ ವಾಣಿಜ್ಯಕ ಸಾಲಗಳ ಮಟ್ಟಿಗೆ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ, 1999 ಹಾಗೂ ಅದರಡಿ ರೂಪಿಸಲಾದ ನಿಯಮಗಳು ಮತ್ತು ನಿಬಂಧನೆಗಳು;

   (ಉ) ಕರ್ನಾಟಕ ಸಾರ್ವಜನಿಕ ಸಂಗ್ರಹ ಪಾರದರ್ಶಕತೆ ಕಾಯ್ದೆ, 1999 ಹಾಗೂ ಅದರಡಿ ರೂಪಿಸಲಾದ ನಿಯಮಗಳು.

4. ನಿಗಮದ ನಿರ್ದೇಶಕರ ಮಂಡಳಿ ಸಭೆಗಳ ಹಾಗೂ ಸಾಮಾನ್ಯ ಸಭೆಗಳ ಮೇಲಿನ ಪಾಲನೆಗಳನ್ನೂ ಸಹ ಭಾರತದ ಕಂಪನಿ ಕಾರ್ಯದರ್ಶಿಗಳ ಇನ್ಸ್ಟಿಟ್ಯೂಟ್ ಹೊರಡಿಸಿದ ಕಾರ್ಯದರ್ಶೀಯ ಮಾನದಂಡಗಳನ್ವಯ ನಾವು ಪರಿವೀಕ್ಷಿಸಲಾಯಿತು.

5. ಅನ್ವಯವಾಗುವ ಹಣಕಾಸು ಕಾನೂನುಗಳಾದ ನೇರ ಮತ್ತು ಪರೋಕ್ಷ ತೆರಿಗೆ ಕಾನೂನುಗಳನ್ನು ನಿಗಮ ಪಾಲಿಸಿರುವುದನ್ನು ನಾವು ಪರಿವೀಕ್ಷಣೆ ಮಾಡಿರುವುದಿಲ್ಲ, ಏಕೆಂದರೆ ಅದು ಶಾಸನಬದ್ಧ ಹಣಕಾಸು ಲೆಕ್ಕಪರಿಶೋಧನೆ ಮತ್ತು ಇತರೆ ಗೊತ್ತುಪಡಿಸಿದ ವೃತ್ತಿಪರರಿಂದ ಪರಿಶೀಲನೆಗೆ ಒಳಪಟ್ಟಿರುತ್ತದೆ.

6. ಪರಿಶೀಲನೆಯಲ್ಲಿರುವ ಅವಧಿಯಲ್ಲಿ ಕಂಪನಿಯು ಕೆಳಗಿನ ಕಂಡಿಕೆ 8ರಲ್ಲಿ ಸೂಚಿಸಿರುವ ಪರಿಶೀಲನೆಗಳಿಗೆ ಬದ್ಧವಾಗಿ, ಮೇಲೆ ಹೇಳಿರುವ ಕಾಯ್ದೆ, ನಿಯಮಗಳು, ನಿಬಂಧನೆಗಳು, ಮಾರ್ಗಸೂಚಿಗಳು ಮುಂತಾದವುಗಳನ್ನು ಅನುಸರಿಸಿದೆ.

7. ಕಂಡಿಕೆ 8ರಲ್ಲಿ ಸೂಚಿಸಲಾಗಿರುವ ಪರಿಶೀಲನೆಗಳಿಗೆ ಬದ್ಧವಾಗಿ, ನಾವು ಮತ್ತೆ ಕೆಳಗಿನಂತೆ ವರದಿ ಮಾಡುತ್ತಿದ್ದೇವೆ:

7.1 **ಅವುಗಳೆಂದರೆ:–**

(ಎ) ಸದರಿ ವರ್ಷದಲ್ಲಿ ಮಂಡಳಿ ಮತ್ತು ಸಮಿತಿ ಸಭೆಗಳನ್ನು ನಡೆಸುವ ಬಗೆಗಿನ ನೋಟೀಸನ್ನು ಪೂರ್ವಭಾವಿಯಾಗಿ ಎಲ್ಲಾ ನಿರ್ದೇಶಕರಿಗೆ ನೀಡಲಾಗಿತ್ತು, ಕಾರ್ಯಸೂಚಿ ಮತ್ತು ಕಾರ್ಯಸೂಚಿಯ ಮೇಲಿನ ವಿವರವಾದ ಟಿಪ್ಪಣಿಗಳನ್ನು ಮುಂಚಿತವಾಗಿಯೇ ತಲುಪಿಸಲಾಗಿತ್ತು ಹಾಗೂ ಸಭೆಗೆ ಮುಂಚೆಯೇ ಕಾರ್ಯಸೂಚಿಯ ಅಂಗಗಳ ಮೇಲೆ ಹೆಚ್ಚಿನ ಮಾಹಿತಿ ಮತ್ತು ಸ್ಪಷ್ಟನೆಯನ್ನು ಬೇಡುವ ಹಾಗೂ ಪಡೆದುಕೊಳ್ಳುವ ಮತ್ತು ಸಭೆಯಲ್ಲಿ ಅರ್ಥಪೂರ್ಣವಾಗಿ ಪಾಲ್ಗೊಳ್ಳುವುದನ್ನು ಸಾಧ್ಯವಾಗಿಸುವ ವ್ಯವಸ್ಥೆಯೊಂದನ್ನು ಕಂಪನಿ ಹೊಂದಿದೆ. ಬಹುಮತದ ನಿರ್ಣಯವನ್ನು ಸಭೆಗಳಲ್ಲಿ ಅಂಗೀಕರಿಸಲಾಗಿದೆ ಹಾಗೂ ಸಭೆಗಳಲ್ಲಿ ಸದಸ್ಯರ ಭಿನ್ನಮತ ಯಾವುದಾದರೂ ಇದ್ದ ಪಕ್ಷದಲ್ಲಿ, ನಡಾವಳಿಯ ಭಾಗವಾಗಿ ದಾಖಲಿಸಲಾಗಿದೆ.

(ಬಿ) ಸದಸ್ಯರ ಮತ್ತು ನಿರ್ದೇಶಕರ ಸಭೆಗಳನ್ನು ಕರೆಯುವಲ್ಲಿ ಹಾಗೂ ನಡೆಸುವಲ್ಲಿ ಕಂಪನಿ ಸೂಕ್ತ ಮಂಡಳಿ ಪ್ರಕ್ರಿಯೆಗಳನ್ನು ನಡೆಸಿರುತ್ತದೆ, ಸದಸ್ಯರ ಸಾಮಾನ್ಯ ಸಭೆಗಳ ನಡಾವಳಿಗಳು, ಮಂಡಳಿ ಮತ್ತು ನಿರ್ದೇಶಕರ ಸಮಿತಿಯ ಸಭೆಗಳ ನಡಾವಳಿಗಳನ್ನು ದಾಖಲಿಸಲು ಕಂಪನಿ ಸೂಕ್ತ ಪುಸ್ತಕಗಳನ್ನು ನಿರ್ವಹಿಸಿದೆ; ಇ–ಮತದಾನದ ಮೂಲಕ ಅಂಗೀಕರಿಸಲಾದ ಗೊತ್ತುವಳಿಯನ್ನು ಸಾಮಾನ್ಯ ಸಭೆಗಳ ನಡಾವಳಿ ಪುಸ್ತಕಗಳಲ್ಲಿ ದಾಖಲಿಸಲಾಗಿದೆ.

7.2 ಪರಿಶೀಲನೆಯಲ್ಲಿರುವ ವರ್ಷದಲ್ಲಿ ನಿರ್ದೇಶಕರ ಮಂಡಳಿಯ ರಚನೆಯಲ್ಲಿ ಆದ ಬದಲಾವಣೆಗಳನ್ನು ಕಾಯ್ದೆಯ ಉಪಬಂಧಗಳ ಅನುಸಾರ ಮಾಡಲಾಗಿದೆ;

7.3 (i) ಪ್ರಸಕ್ತ ವರ್ಷದಲ್ಲಿ ಕಂಪನಿಯು ಪ್ರತಿ ಈಕ್ವಿಟಿ ಷೇರಿನ ಮೌಲ್ಯ ರೂ.1,000/– ರಂತೆ 1,81,45,808 ಈಕ್ವಿಟಿ ಷೇರುಗಳ ನೀಡಿಕೆ ಮಾಡಿದ್ದು, ಇದರ ಒಟ್ಟಾರೆ ಮೊತ್ತ ರೂ.1814.58 ಕೋಟಿಗಳಷ್ಟಿರುತ್ತದೆ. ಈ ರೀತಿಯ ಬಂಡವಾಳ ನೀಡಿಕೆಯನ್ನು ಹೊರತುಪಡಿಸಿ, ಸಾರ್ವಜನಿಕ, ಪ್ರಿಫರೆನ್ಷಿಯಲ್ ಷೇರುಗಳ ನೀಡಿಕೆ ಅಥವಾ ಡಿಬೆಂಚರ್‌ಗಳು ಅಥವಾ ಶ್ರಮ ಈಕ್ವಿಟಿ, ಇವ್ಯಾವುಗಳ ನೀಡಿಕೆ ಮಾಡಿರುವುದಿಲ್ಲ.

(ii) ಭದ್ರತೆಗಳ ವಿಮೋಚನೆ / ಹಿಂದಕ್ಕೆ ಖರೀದಿ ಇನ್ಯಾವುಗಳು ಇರುವುದಿಲ್ಲ.

(iii) ಕಂಪನಿ ಕಾಯ್ದೆ, 2013, ಪರಿಚ್ಛೇದ 180ರ ಅನುಸಾರ ಸದಸ್ಯರಿಂದ ಪಡೆದ ಪ್ರಧಾನ ನಿರ್ಧಾರಗಳು;

(iv) ವಿಲೀನ, ಸಂಯೋಜನೆ, ಪುನರ್‌ನಿರ್ಮಾಣ ಮುಂತಾದವುಗಳು ಇರುವುದಿಲ್ಲ.

(v) ಕಂಪನಿಯು ವಿದೇಶ ತಾಂತ್ರಿಕ ಸಹಯೋಗ ಮಾಡಿಕೊಂಡಿಲ್ಲ.

8. ಪರಿಶೀಲನೆಗಳ ಕಂಡಿಕೆ:

ಕರ್ನಾಟಕದ ನಿರ್ಮಾಣ ಯೋಜನೆಗಳನ್ನು ಸೈಟ್ಸ್ ನೀರಾವರಿ ಮತ್ತು ವಲಯಗಳನ್ನು ಪೂರ್ಣಗೊಳಿಸಲು ಕಂಪನಿಯು ಗುತ್ತಿಗೆದಾರರನ್ನು ತೊಡಗಿಸಿಕೊಂಡಿದೆ. ಗುತ್ತಿಗೆದಾರರು ನಿರ್ಮಾಣ, ನಾಗರಿಕ ಮತ್ತು ಇತರೆ ಕಾರ್ಮಿಕ ಒಪ್ಪಂದವನ್ನು ಕಾರ್ಯಗತಗೊಳಿಸಲು ತಮ್ಮ ಪಾತ್ರಗಳಲ್ಲಿ ನೌಕರರನ್ನು ತೊಡಗಿಸಿಕೊಂಡಿದ್ದಾರೆ. ಪ್ರಧಾನ ಒಡೆತನ ಹೊಂದಿರುವ ಕಂಪನಿಯು ಕಾಂಟ್ರಾಕ್ಟ್ ಲೇಬರ್ (ನಿಯಂತ್ರಣ ಮತ್ತು ನಿರ್ಮೂಲನೆ) ಕಾಯ್ದೆ, 1970 ಮತ್ತು ಇದಕ್ಕನುಗುಣವಾದ ಕರ್ನಾಟಕ ನಿಯಮಗಳು, 1974 ಗಳನ್ವಯ ಇದರ ನಿಬಂಧನೆಗಳನ್ನು ಅನುಸರಿಸಬೇಕಿರುತ್ತದೆ.

ಕೆ.ಎನ್.ನಾಗೇಶ ರಾವ್
ಎಫ್‌ಸಿಎಸ್ 3000 ಸಿಪಿ 12861
ಪಾಲುದಾರ

ಸ್ಥಳ : ಬೆಂಗಳೂರು
ದಿನಾಂಕ : 20.09.2018

ಎಸ್ ವಿಶ್ವನಾಥನ್ ಏ ಎನ್ ಅಂಡ್ ಅಸೋಸಿಯೇಟ್ಸ್
ಕಂಪನಿ ಕಾರ್ಯದರ್ಶಿಗಳು

ಫ್ಲಾಟ್ ಬಿ, ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್ಸ್,
17ನೇ 'ಎ' ಕ್ರಾಸ್, 10ನೇ 'ಎ' ಮುಖ್ಯರಸ್ತೆ,
ಮಲ್ಲೇಶ್ವರಂ, ಬೆಂಗಳೂರು –560055
ಇ–ಮೇಲ್: **cs_viswanathan@yahoo.com**
ದೂರವಾಣಿ : **080-23440934; 080-41674875;**
ಮೊಬೈಲ್ : **+91 98450 50333 +91 98452 20950**

2017–18ರ ಸಾಲಿನ ಹಣಕಾಸು ವರ್ಷದ ಕಾರ್ಯದರ್ಶೀಯ ಪರಿಶೋಧನಾ ವರದಿಗೆ ಅನುಬಂಧ

ಕರ್ನಾಟಕ ನೀರಾವರಿ ನಿಗಮ ನಿಯಮಿತದ ಸದಸ್ಯರಿಗೆ,

ನಮ್ಮ ಇದೇ ದಿನಾಂಕದ ಕಾರ್ಯದರ್ಶೀಯ ಪರಿಶೋಧನಾ ವರದಿಯನ್ನು ಈ ಪತ್ರದೊಂದಿಗೆ ಓದುವುದು.

1. ಕಾರ್ಯದರ್ಶೀಯ ದಾಖಲೆಗಳ ನಿರ್ವಹಣೆಯ ಮತ್ತು ಕಾರ್ಪೊರೇಟ್‌ನ ನಿಬಂಧನೆಗಳು ಹಾಗೂ ಅನ್ವಯಿಸುವ ಇತರೆ ಕಾನೂನಾತ್ಮಕ ಅಂಶಗಳು, ನಿಯಮಗಳು, ವಿಧಾಯಕಗಳು, ಮಾನದಂಡಗಳು, ಇವುಗಳ ಪಾಲನೆಯು ಕಂಪನಿಯ ಆಡಳಿತ ನಿರ್ವಹಣೆಯ ಜವಾಬ್ದಾರಿಯಾಗಿರುತ್ತದೆ. ಮೇಲಿನ ಕಾರ್ಯದರ್ಶೀಯ ದಾಖಲೆಗಳ ಮತ್ತು ಅವುಗಳ ಪಾಲನೆಗಳ ಮೇಲೆ ನಮ್ಮ ಪರಿಶೋಧನೆಯ ಆಧಾರದ ಮೇರೆಗೆ ನಾವು ವ್ಯಕ್ತಪಡಿಸಿರುವ ಅಭಿಪ್ರಾಯ ನಮ್ಮ ಜವಾಬ್ದಾರಿಯಾಗಿರುತ್ತದೆ.

2. ಕಾರ್ಯದರ್ಶೀಯ ದಾಖಲೆಗಳು ಸರಿಯಾಗಿರುವ ಬಗ್ಗೆ ಸಮಂಜಸವಾದ ಭರವಸೆ ಪಡೆಯಲು ಸೂಕ್ತವಾದ ಆಡಿಟ್ ಅಭ್ಯಾಸಗಳು ಮತ್ತು ಪ್ರಕ್ರಿಯೆಯನ್ನು ಅನುಸರಿಸಿದ್ದೇವೆ. ಕಾರ್ಯದರ್ಶೀಯ ದಾಖಲೆಗಳಲ್ಲಿ ಸರಿಯಾದ ಸಂಗತಿಗಳು ಪ್ರತಿಬಿಂಬಿತವಾಗುವುದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷೆಯ ಆಧಾರದ ಮೇಲೆ ಪರಿಶೀಲನೆ ಮಾಡಲಾಯಿತು. ನಾವು ಅನುಸರಿಸಿದ ಪ್ರಕ್ರಿಯೆಗಳು ಮತ್ತು ಅಭ್ಯಾಸಗಳು ನಮ್ಮ ಅಭಿಪ್ರಾಯಕ್ಕೆ ಸಮಂಜಸವಾದ ಆಧಾರವನ್ನು ಒದಗಿಸುತ್ತವೆ ಎಂದು ನಾವು ನಂಬುತ್ತೇವೆ.

3. ಕಂಪನಿಯ ಹಣಕಾಸಿನ ದಾಖಲೆಗಳು ಮತ್ತು ಲೆಕ್ಕಪತ್ರ ಪುಸ್ತಕಗಳು ಸರಿಯಾಗಿರುವುದನ್ನು ಹಾಗೂ ಸೂಕ್ತವಾಗಿರುವುದನ್ನು ನಾವು ಪರಿಶೀಲಿಸಿರುವುದಿಲ್ಲ.

4. ಕಾನೂನಾತ್ಮಕ ಅಂಶಗಳ, ನಿಯಮಗಳ ಮತ್ತು ವಿಧಾಯಕಗಳ ಪಾಲನೆಯಲ್ಲಿ ಅವಶ್ಯಕತೆವಿದ್ದ ಕಡೆ ಆಡಳಿತ ನಿರ್ವಹಣೆಯ ನಿರೂಪಣೆಯನ್ನು ಪಡೆಯಲಾಗಿದೆ.

ಕೆ.ಎನ್.ನಾಗೇಶ ರಾವ್
ಎಫ್‌ಸಿಎಸ್ 3000 ಸಿಪಿ 12861
ಪಾಲುದಾರ

ಸ್ಥಳ : ಬೆಂಗಳೂರು
ದಿನಾಂಕ : 20ನೇ ಸಪ್ಟೆಂಬರ್, 2018

2017-18ರ ಸಾಲಿನ ನಿರ್ದೇಶಕರ ವರದಿಗೆ ಅನುಬಂಧ - 3

ಆಪತ್ತು ನಿರ್ವಹಣಾ ಕಾರ್ಯತಂತ್ರ

ಪೀಠಿಕೆ:

ಕಂಪೆನಿ ಕಾಯ್ದೆ, 2013 ಪರಿಚ್ಛೇದ 134(3) ನಿಗದಿಪಡಿಸುವಂತೆ ಸರ್ವ ಸದಸ್ಯರ ಸಭೆಯಲ್ಲಿ ಕಂಪನಿಯ ಮುಂದೆ ಇರಿಸಲಾದ (ಹಣಕಾಸು) ತಃಖ್ತೆಗಳಿಗೆ ನಿರ್ದೇಶಕ ಮಂಡಳಿಯು ಕಂಪನಿಗಾಗಿ ಆಪತ್ತು ನಿರ್ವಹಣಾ ಕಾರ್ಯತಂತ್ರದ ಅಭಿವೃದ್ಧಿ ಮತ್ತು ಅನುಷ್ಠಾನವನ್ನು ಸೂಚಿಸುವ ವರದಿಯೊಂದನ್ನು ಲಗತ್ತಿಸಬೇಕಾಗುತ್ತದೆ. ಈ ವರದಿಯು ಕಂಪನಿಯ ಅಸ್ತಿತ್ವಕ್ಕೆ ಮುಳುವಾಗುವ ಸಾಧ್ಯತೆ ಇರುವ ಆಪತ್ತಿನ ಅಂಶಗಳನ್ನು, ಅವು ಇದ್ದ ಪಕ್ಷದಲ್ಲಿ ಗುರುತಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಕಂಪನಿಯ ಆಪತ್ತು ನಿರ್ವಹಣಾ ಕಾರ್ಯತಂತ್ರವನ್ನು ರೂಪಿಸುವುದು ಕಂಪನಿಗೆ ಯುಕ್ತವಾದ ವಿಷಯವಾಗಿದೆ.

1.1 ನಿರ್ವಚನಗಳು:

1.1.1 ಅಪಾಯ:

ಸಂಸ್ಥೆಯ ವ್ಯಾಪಾರಿ ಉದ್ದೇಶಗಳನ್ನು ನಕಾರಾತ್ಮಕವಾಗಿ ಪ್ರಭಾವಿಸುವ ಘಟನೆಗಳು ಅಥವಾ ಸ್ಥಿತಿಗಳನ್ನು ಆಪತ್ತುಗಳೆಂದು ನಿರ್ವಹಿಸಲಾಗುತ್ತದೆ. ಇಂತಹ ಘಟನೆಗಳಿಂದ ಉದ್ಭವಿಸುವ ಅನಿಶ್ಚಿತತೆಯ ಪರಿಣಾಮಗಳಿಗೆ ಕಂಪನಿ ತೆರೆದುಕೊಳ್ಳುವುದೇ ಆಪತ್ತು ಎನ್ನುವುದಾಗಿದೆ. ಕಂಪನಿಯ ಅಸ್ತಿತ್ವಕ್ಕೆ ಮುಳುವಾಗುವ ಸಾಧ್ಯತೆ ಇರುವ ಆಪತ್ತಿನ ಅಂಶಗಳು ನಿರ್ದೇಶಕರ ಮಂಡಳಿಯ ದೃಷ್ಟಿಯಲ್ಲಿ ಅಪಾಯಗಳಾಗಿವೆ.

1.1.2 ಆಪತ್ತು ನಿರ್ವಹಣೆ:

ಅಪಾಯದ ಆಪತ್ತಿನ ಅಂಶಗಳನ್ನು ವ್ಯವಸ್ಥಿತವಾಗಿ ಗುರುತಿಸುವುದು, ಕಂಪನಿಯನ್ನು ಯಾವ ಉದ್ದೇಶಗಳೊಂದಿಗೆ ಆರಂಭಿಸಲಾಗಿದೆಯೋ ಅದರ ಮೇಲಿನ ಆಪತ್ತಿನ ಅಂಶಗಳ ಪ್ರಭಾವ ಮತ್ತು ಕಂಪನಿಯ ಅಸ್ತಿತ್ವಕ್ಕೆ ಮುಳುವಾಗಬಲ್ಲ ಅಂಶಗಳನ್ನು ಅಂದಾಜು ಮಾಡುವ ಪ್ರಕ್ರಿಯೆಯೇ ಆಪತ್ತು ನಿರ್ವಹಣೆ.

1.1.3 ಆಪತ್ತಿನ ಅಂದಾಜು:

ಆಪತ್ತಿನ ವಿಶ್ಲೇಷಣೆ ಮತ್ತು ಗ್ರಹಿಸಲಾದ ಆಪತ್ತುಗಳ ಮೌಲ್ಯಮಾಪನದ ಒಟ್ಟಾರೆ ಪ್ರಕ್ರಿಯೆಯೇ ಅಪಾಯದ ಅಂದಾಜು.

1.2 ಕಾರ್ಯನೀತಿಯ ಉದ್ದೇಶಗಳು

ಕಂಪನಿಯನ್ನು ಯಾವ ಮುಖ್ಯ ಉದ್ದೇಶಗಳೊಂದಿಗೆ ಆರಂಭಿಸಲಾಗಿದೆಯೊ ಅದರ ಮೇಲಿನ ಆಪತ್ತಿನ ಅಂಶಗಳನ್ನು ಗುರಿತಿಸುವ, ಮೌಲ್ಯಮಾಪನಮಾಡುವ ಮತ್ತು ಪರಿಹರಿಸುವ ಮೂಲಕ ಕಂಪನಿಯ ಕಾರ್ಯಸಾಧ್ಯ ಮುಂದುವರಿಕೆಯನ್ನು ಖಚಿತಗೊಳಿಸುವುದು ಕಾರ್ಯನೀತಿಯ ಪ್ರಧಾನ ಉದ್ದೇಶವಾಗಿದೆ. ಕಾರ್ಯನೀತಿಯು ಈ ಮುಂದಿನ ಕಾರ್ಯಗಳಿಗೆ ಅಗತ್ಯ ಕಾರ್ಯತಷತ್ರವನ್ನು ಸ್ಥಾಪಿಸಲು ಉದ್ದೇಶಿಸುತ್ತದೆ.

1.2.1 ಕಂಪನಿಯ ಎಲ್ಲಾ ಸದ್ಯದ ಮತ್ತು ಮುಂದೆ ಒದಗಬಹುದೆಂದು ಅಂದಾಜು ಮಾಡಿರುವ ಅಪಾಯಗಳನ್ನು ಗುರುತಿಸಿ ಆ ಆಪತ್ತುಗಳನ್ನು ತಗ್ಗಿಸುವ ಕಾರ್ಯತಂತ್ರಗಳನ್ನು ಸ್ಥಾಪಿಸುವುದು.

1.2.2 ಅನ್ವಯವಾಗುವ ನಿಬಂಧನೆಗಳ ಅನುಸರಣೆ ಆಗದಿರುವ ಸಂದರ್ಭಗಳನ್ನು ನಿರಂತರವಾಗಿ ಪರಿಶೀಲಿಸಿ ಗುರುತಿಸುವುದು ಹಾಗೂ ಅನುಸರಣೆ ಇಲ್ಲದಿರುವ ಅಪಾಯವನ್ನು ತಗ್ಗಿಸುವುದು.

2. ಅಪಾಯ ನಿರ್ವಹಣಾ ಕಾರ್ಯನೀತಿ:

ಸಂಘ ನಿಯಮಾವಳಿಯಲ್ಲಿ ಗುರುತು ಮಾಡಲಾದ ಕಂಪನಿಯ ಉದ್ದೇಶಗಳನ್ನು ಸಾಧಿಸುವ ಕಂಪನಿಯ ಪ್ರಯತ್ನಗಳ ಹಿನ್ನೆಲೆಯಲ್ಲಿ ಕಾರ್ಯನೀತಿಯನ್ನು ರೂಪಿಸಲಾಗುತ್ತದೆ ಹಾಗೂ ಅದು ಆಪತ್ತು ನಿರ್ವಹಣೆಯ ಕೆಳಗಿನ ಮಾರ್ಗದರ್ಶಿ ಸಿದ್ಧಾಂತಗಳನ್ನು ಒಳಗೊಳ್ಳುತ್ತದೆ:

2.1 ಆಪತ್ತು ನಿರ್ವಹಣೆಯ ತತ್ವಗಳು:

2.1.1 ಕಂಪನಿಯ ಗುರಿಗಳನ್ನು ಸಾಧಿಸುವ ಉದ್ದೇಶದಿಂದ ತೆಗೆದುಕೊಳ್ಳುವ ಎಲ್ಲ ನಿರ್ಧಾರಗಳನ್ನೂ ಆ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಇರುವ ಆಪತ್ತುಗಳ ಗ್ರಹಿಕೆಯೊಂದಿಗೆ ತೆಗದುಕೊಳ್ಳಬೇಕು.

2.1.2 ಆಪತ್ತುಗಳನ್ನು ನಿಯತವಾಗಿ ಪರಿಶೀಲಿಸಬೇಕಾಗುತ್ತದೆ ಮತ್ತು ಅಪಾಯ ತಗ್ಗಿಸುವಿಕೆ ಪ್ರಕ್ರಿಯೆಗಳನ್ನು ಅಭಿವೃದ್ಧಿಪಡಿಸಿ ಅನುಷ್ಠಾನ ಗೊಳಿಸಲು ಮಾರ್ಗ ನಕ್ಷೆಗಳನ್ನು ಸಾಧ್ಯವಾದಷ್ಟು ಬೇಗ ಕಾರ್ಯಪ್ರವೃತ್ತ ಗೊಳಿಸಬೇಕು.

2.1.3 ಗುರುತಿಸಲಾದ ಆಪತ್ತುಗಳ ಸ್ಥಿತಿಗತಿ, ಇಂತಹ ಆಪತ್ತುಗಳ ತಗ್ಗಿಸುವಿಕೆಯ ಸ್ಥಿತಿಗತಿಯ ಬಗ್ಗೆ ವರ್ಷಕ್ಕೆ ಒಮ್ಮೆಯಾದರೂ ತಪ್ಪದೇ ಮಂಡಳಿಗೆ ವರದಿ ಮಾಡಬೇಕು.

3. ಆಪತ್ತು ಗುರುತಿಸುವಿಕೆ, ನಿರ್ಧರಿಸುವಿಕೆ ಮತ್ತು ಆಪತ್ತುಗಳ ವರ್ಗೀಕರಣ:

3.1 ಆಪತ್ತು ಅಂದಾಜು ಪ್ರಕ್ರಿಯೆಯ ವ್ಯಾಪ್ತಿ:

3.1.1 ಆಪತ್ತು ಗುರುತಿಸುವಿಕೆ: ಇವು ಅಸ್ತಿತ್ವದಲ್ಲಿರುವ ಅಥವಾ ಘಟಿಸುವ ಸಂಗತಿಗಳು ಅಥವಾ ಆಗುವಿಕೆಗಳಾಗಿದ್ದು, ಇವು ಘಟಿಸಿದ ಸಂದರ್ಭದಲ್ಲಿ ತನ್ನ ಗುರಿಗಳನ್ನು ಸಾಧಿಸುವಲ್ಲಿನ ಕೆಎನ್‌ಎನ್‌ಎಲ್ ಸಾಮರ್ಥ್ಯದ ಮೇಲೆ ಅಥವಾ ಅದರ ಅಸ್ತಿತ್ವದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ.

3.1.2 ಆಪತ್ತಿನ ಅಂದಾಜು: ತನ್ನ ಗುರಿಗಳನ್ನು ಸಾಧಿಸುವಲ್ಲಿನ ಕೆಎನ್‌ಎನ್‌ಎಲ್ ಸಾಮರ್ಥ್ಯದ ಮೇಲೆ ಅಥವಾ ಅದರ ಅಸ್ತಿತ್ವದ ಮೇಲೆ ಗುರುತಿಸಲಾದ ಆಪತ್ತುಗಳು ಎಷ್ಟರ ಮಟ್ಟಿಗೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ ಎನ್ನುವುದನ್ನು ತಿಳಿದುಕೊಳ್ಳುವ ಪ್ರಕ್ರಿಯೆಯೇ ಆಪತ್ತಿನ ಅಂದಾಜು ಪ್ರಕ್ರಿಯೆ.

3.1.3 ಆಪತ್ತುಗಳ ವರ್ಗೀಕರಣ: ಕೆಎನ್‌ಎನ್‌ಎಲ್‌ಗೆ ಎದುರಾಗಬಹುದಾದ ಆಪತ್ತುಗಳನ್ನು ಕೆಳಗಿನಂತೆ ವರ್ಗೀಕರಿಸಬಹುದಾಗಿದೆ:

3.1.4 ಕಾರ್ಯತಂತ್ರದ ಅಪಾಯ ಆಪತ್ತುಗಳು: ಸರ್ಕಾರದ ಕಾರ್ಯನೀತಿಗಳು, ನ್ಯಾಯಾಲಯದ ಆದೇಶಗಳು, ಅಂತರ ರಾಜ್ಯ ಜಲ ವಿವಾದ, ನ್ಯಾಯಾಧಿಕರಣದ ಐ–ತೀರ್ಪುಗಳು ಮುಂತಾದವು.

3.1.5 ಹಣಕಾಸಿನ ಅಪಾಯಗಳು: ಯೋಜನೆಗಳ ಅನುಷ್ಠಾನಕ್ಕಾಗಿ ಹಣಕಾಸು ಸಂಪನ್ಮೂಲಗಳ ಕ್ರೋಢೀಕರಣ ಹಾಗೂ ಸಾಲ ಸೇವೆಯಲ್ಲಿನ ಅಸಾಮರ್ಥ್ಯ.

3.1.6 ಅನುಷ್ಠಾನದ ಆಪತ್ತುಗಳು: ಯೋಜನೆಗಳಿಗೆ ಅಗತ್ಯವಾದ ಅರಣ್ಯ ತೀರುವಳಿ, ಪರಿಸರ ತೀರುವಳಿ ಮತ್ತು ಸಿಡಬ್ಲ್ಯೂಸಿ ತೀರುವಳಿ ಮುಂತಾದ ಶಾಸನಬದ್ಧ ತೀರುವಳಿಗಳ ಹಿನ್ನೆಲೆಯಲ್ಲಿ ಕಾಲದಿಂದ ಕಾಲಕ್ಕೆ ಸರ್ಕಾರವು ವಹಿಸುವ ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವಲ್ಲಿನ ಕಂಪನಿಯ ಸಾಮರ್ಥ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುವ ಮತ್ತು ಕಂಪನಿಗೆ ನಿರ್ದಿಷ್ಟವಾಗಿ ಸಂಬಂಧಿಸಿರುವ ಆಪತ್ತುಗಳು.

3.1.7 ಕಾರ್ಯಾಚರಣೆಯ ಆಪತ್ತುಗಳು: ಅಣೆಕಟ್ಟು ಒಡೆಯುವಿಕೆ, ಕಾಲುವೆ ಬಿರುಕು, ಯಂತ್ರೋಪಕರಣಗಳ ಕೆಟ್ಟುಹೋಗುವಿಕೆ ಮುಂತಾದ ಕಾರ್ಯಾಚರಣೆ ಅನಿಶ್ಚಿತತೆಗಳೊಂದಿಗೆ ಸಂಬಂಧ ಹೊಂದಿರುವ ಆಪತ್ತುಗಳು.

4. ಆಪತ್ತು ಮಾತೃಕೆ:

4.1 ಕೆಳಗಿನ ವಿವರಗಳನ್ನು ಒಳಗೊಳ್ಳುವ ಆಪತ್ತು ಮಾತೃಕೆಯೊಂದನ್ನು ಅಭಿವೃದ್ಧಿಪಡಿಸಲಾಗುವುದು:

4.1.1 ಆಪತ್ತಿನ ಹೆಸರು ಹಾಗೂ ಆಪತ್ತನ್ನು ಹೇಗೆ ಉಲ್ಲೇಖಿಸಬಹುದೆಂಬ ಬಗ್ಗೆ ಸಂಕ್ಷಿಪ್ತ ವಿವರಣೆ

4.1.2 ಆಪತ್ತು ಸ್ವರೂಪ: ಕಾರ್ಯತಂತ್ರದ ನೆಲೆ/ ಹಣಕಾಸಿನ ನೆಲೆ/ ಅನಷ್ಠಾನದ ನೆಲೆ/ ಕಾರ್ಯಾಚರಣೆಯ ನೆಲೆ

4.1.3 ಬಾಧಿತ ಹಿತಾಸಕ್ತಿಯುಳ್ಳವರ ಪಟ್ಟಿ ಮತ್ತು ಹಿತಾಸಕ್ತಿಯುಳ್ಳವರ ನಿರೀಕ್ಷೆಗಳ ಮೇಲೆ ಆಪತ್ತಿನ ಪರಿಣಾಮಗಳು.

4.1.4 ಆಪತ್ತು ವಾಸ್ತವವಾದರೆ ಆಪತ್ತು ಪರಿಮಾಣೀಕರಣ, ಪರಿಣಾಮದ ವೆಚ್ಚ.

5. ಆಪತ್ತು ತಗ್ಗಿಸುವಿಕೆಯಲ್ಲಿ ಪ್ರಧಾನ ಅನುಷ್ಠಾನ ಕ್ಷೇತ್ರಗಳು:

5.1 ಆಪತ್ತು ತಗ್ಗಿಸುವಿಕೆ ಕ್ರಮಗಳನ್ನು ಅನುಷ್ಠಾನಗೊಳಿಸ ಬೇಕಿರುವ ಪ್ರಧಾನ ಕ್ಷೇತ್ರಗಳು ಕೆಳಗಿನಂತಿವೆ:

5.1.1 ನಿಬಂಧನಾ ಅಗತ್ಯಗಳ ಪೂರೈಕೆ ಅಗತ್ಯವಿರುವ ಯೋಜನೆಗಳನ್ನು ಗುರುತಿಸಲು ಸರ್ಕಾರದೊಂದಿಗೆ ಸಕ್ರಿಯವಾಗಿ ಮಾತುಕತೆ ನಡೆಸುವುದು ಹಾಗೂ ನಿಬಂಧನಾ ಅಗತ್ಯಗಳು/ತೀರುವಳಿಗಳ ಅನುಸರಣೆಗಾಗಿ ತ್ವರಿತವಾಗಿ ಕ್ರಮಗಳನ್ನು ಕೈಗೊಳ್ಳುವುದು.

5.1.2 ನಿಬಂಧನಾ ತೀರುವಳಿಗಳ ಅಗತ್ಯವಿರುವ ಯೋಜನೆಗಳನ್ನು ಗುರುತಿಸಿ ಅಗತ್ಯ ತೀರುವಳಿ ದೊರೆಯದ ಹೊರತು ಹೊಸ ಯೋಜನೆಗಳ ಜಾರಿಗೆ ಕ್ರಮಗಳನ್ನು ಪ್ರಾರಂಭಿಸದಿರುವುದು.

5.1.3 ವ್ಯಾಜ್ಯಗಳನ್ನು ನಿವಾರಿಸುವ ದೃಷ್ಟಿಯಿಂದ ಸರ್ಕಾರ ರೂಪಿಸಿರುವ ಪ್ರಮಾಣಿತ ಬಿಡ್ಡಿಂಗ್ ದಸ್ತಾವೇಜನ್ನು ಅಳವಡಿಸಿಕೊಳ್ಳುವುದು ಮತ್ತು ಬಿಡ್ಡಿಂಗ್ ಪ್ರಕ್ರಿಯೆಯನ್ನು ಪ್ರಮಾಣಿತಗೊಳಿಸುವುದು.

5.1.4 ಪ್ರಮಾಣಿತ ಗುಣಮಟ್ಟ ನಿಯಂತ್ರಣ ಪ್ರಕ್ರಿಯೆಯನ್ನು ಸ್ಥಾಪಿಸುವುದು ಹಾಗೂ ಕಳಪೆ ಗುಣಮಟ್ಟದ ಕಾಮಗಾರಿಗಳು ಆಗದಂತೆ ತಡೆಯಲು ಗುಣಮಟ್ಟ ನಿಯಂತ್ರಣ ವಿಭಾಗವನ್ನು ಪರ್ಯಾಪ್ತ ಸಿಬ್ಬಂದಿ ಮತ್ತು ಸಾಧನ, ಸಲಕರಣೆಗಳಿಂದ ಶಕ್ತಗೊಳಿಸುವುದು.

5.1.5 ಆಂತರಿಕ ಪ್ರಕ್ರಿಯೆಗಳನ್ನು ಬಲಪಡಿಸುವುದು:

ಎ) **ಆಂತರಿಕ ನಿಯಂತ್ರಣಗಳು:** ಅಕ್ರಮಗಳನ್ನು ಕನಿಷ್ಠಗೊಳಿಸುವ ಸಲುವಾಗಿ ಆಂತರಿಕ ಪ್ರಕ್ರಿಯೆಗಳನ್ನು ಬಲಪಡಿಸಲು ಆಂತರಿಕ ನಿಯಂತ್ರಣ ಕೈಪಿಡಿಯನ್ನು ಜಾರಿಗೊಳಿಸುವುದು.

ಬಿ) **ಪರಿಣಾಮಕಾರಿ ಆಯವ್ಯಯ ನಿಯಂತ್ರಣ:** ಅನುಷ್ಠಾನ ಅನುಸೂಚಿಯನ್ನು ಪ್ರಭಾವಿಸುವ ನಗದು–ರಾಹಿತ್ಯ ಸ್ಥಿತಿಯನ್ನು ನಿವಾರಿಸಲು ಯೋಜನೆಯ ಉಳಿಕೆ ವೆಚ್ಚಕ್ಕಾಗಿ ನಿಧಿಕೂಡಿಸುವಿಕೆ ಯೋಜನೆಯನ್ನು ಪರಿಣಾಮಕಾರಿ ಆಯವ್ಯಯ ನಿಯಂತ್ರಣದೊಂದಿಗೆ ಜೊತೆಯಾಗಿಸುವುದು.

ಸಿ) **ಯೋಜನೆ ಮೇಲ್ವಿಚಾರಣೆ ವ್ಯವಸ್ಥೆ:** ತ್ವರಿತ ಪ್ರತಿಸ್ಪಂದನೆ ಮತ್ತು ತತ್‌ಕ್ಷಣದ ನಿರ್ಧಾರ ತೆಗೆದುಕೊಳ್ಳುವಿಕೆ ಮಾತ್ರವಲ್ಲದೆ ಕೊರತೆಯ ಕ್ಷೇತ್ರಗಳನ್ನು ಗಮನಕ್ಕೆ ತರುವ ಮತ್ತು ವಿಳಂಬಗಳನ್ನು ಪತ್ತೆಹಚ್ಚುವ ದೃಷ್ಟಿಯಿಂದ ಸೀಮಾತೀತವಾದ ತಾಕ್ಷಣಿಕ ಯೋಜನಾ ಮೇಲ್ವಿಚಾರಣೆ ವ್ಯವಸ್ಥೆಯ ಅಗತ್ಯವಿರುತ್ತದೆ.

6. ಆಪತ್ತು ನಿರ್ವಹಣೆಯ ಸಾಂಸ್ಥಿಕ ರಚನೆ:

ಅಪಾಯ ನಿರ್ವಹಣೆ ಕಾರ್ಯತಂತ್ರವನ್ನು ಆಪತ್ತು ನಿರ್ವಹಣೆಯ ಸಾಂಸ್ಥಿಕ ರಚನೆಯ ಮೂಲಕ ಅನುಷ್ಠಾನ– ಗೊಳಿಸಲಾಗುವುದು. ಪ್ರತಿ ವಲಯದಲ್ಲೂ ಒಂದು ಅಪಾಯ ನಿರ್ವಹಣಾ ಘಟಕವನ್ನು ರಚಿಸಿ ಅದಕ್ಕೆ ಮುಖ್ಯ ಆಪತ್ತು ನಿರ್ವಹಣಾ ಅಧಿಕಾರಿಯನ್ನು (ಸಿಆರ್‌ಓ) ಮುಖ್ಯಸ್ಥರನ್ನಾಗಿಸಬೇಕು. ಮುಖ್ಯ ಅಭಿಯಂತರರು ಆ ವಲಯದ ಸಿಆರ್‌ಓ ಆಗಿರುತ್ತಾರೆ.



ಅನುಕ್ರಮವಾದ ವಲಯಗಳ ಅಧೀಕ್ಷಕ ಅಭಿಯಂತರರು ಆ ವಲಯದ ಆಪತ್ತು ನಿರ್ವಹಣೆ ವ್ಯವಸ್ಥಾಪಕರಾಗಿರುತ್ತಾರೆ. ಪ್ರತಿ ವಿಭಾಗದಲ್ಲಿ ಕಾರ್ಯನಿರ್ವಹಿಸುವ ಮತ್ತು ಲೈನ್ ಅಧೀಕ್ಷಕ ಇಂಜಿನಿಯರ್‌ಗಳಿಗೆ ವರದಿ ಮಾಡಿಕೊಳ್ಳುವ ಕಾರ್ಯಕಾರಿ ಅಭಿಯಂತರರು ಆಪತ್ತು ನಿರ್ವಹಣಾಧಿಕಾರಿಯಾಗಿರುತ್ತಾರೆ. ಮೇಲಿನ ಎಲ್ಲರೂ ತಮಗೆ ವಹಿಸಲಾದ ವೈಯಕ್ತಿಕ ಲೈನ್ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜೊತೆಗೆ ಆಪತ್ತು ನಿರ್ವಹಣಾ ಘಟಕದ ಕಾರ್ಯದಲ್ಲೂ ನೆರವಾಗುತ್ತಾರೆ. ಆರ್‌ಎಂ ಗಳು ಮತ್ತು ಆರ್‌ಓ ಗಳು ಹಾಗಾಗಿ ತಮ್ಮ ಲೈನ್ ಕರ್ತವ್ಯಗಳ ಜೊತೆಗೆ ಹೆಚ್ಚುವರಿ ಜವಾಬ್ದಾರಿಗಳನ್ನು ಹೊಂದಿರುತ್ತಾರೆ. ಪ್ರತಿ ವಲಯದಲ್ಲಿನ ಆಪತ್ತು ನಿರ್ವಹಣಾ ಘಟಕದ ಒಟ್ಟಾರೆ ಕಾರ್ಯಾಚರಣೆಯ ಮೇಲ್ವಿಚಾರಣೆಯನ್ನು ಕೆಎನ್‌ಎನ್‌ಎಲ್‌ನ ನೋಂದಾಯಿತ ಕಛೇರಿ, ಬೆಂಗಳೂರು, ಇಲ್ಲಿನ ಅಧೀಕ್ಷಕ ಇಂಜಿನಿಯರ್ (ತಾಂತ್ರಿಕ) ನೋಡಿಕೊಳ್ಳುತ್ತಾರೆ ಮತ್ತು ಆಪತ್ತು ತಗ್ಗಿಸುವಿಕೆಯ ಪ್ರಧಾನ ಅನುಷ್ಠಾನ ಕ್ಷೇತ್ರಗಳಾದ 5.1.1. ಮತ್ತು 5.1.2 ಗಳಿಗೆ ಸಂಬಂಧಿಸಿದ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.

7. ಪಾತ್ರಗಳು ಮತ್ತು ಜವಾಬ್ದಾರಿಗಳು:

7.1 ಮಂಡಳಿಯು ಆಪತ್ತು ನಿರ್ವಹಣೆ ಕಾರ್ಯತಂತ್ರಗಳು ಮತ್ತು ವ್ಯವಸ್ಥೆಗಳನ್ನು ವಾರ್ಷಿಕವಾಗಿ ಪರಿಶೀಲಿಸುತ್ತದೆ.

7.2 ಈ ಕಾರ್ಯನೀತಿಗೆ ಅನುಸಾರವಾಗಿ ಆಪತ್ತು ನಿರ್ವಹಣೆ ವ್ಯವಸ್ಥೆಯು ಸ್ಥಾಪನೆಗೊಂಡು, ಜಾರಿಯಾಗಿ, ನಿರ್ವಹಣೆ ಗೊಳ್ಳುತ್ತಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು, ಮುಖ್ಯ ಆಪತ್ತು ನಿರ್ವಹಣಾ ಅಧಿಕಾರಿಗಳ ಮೂಲಕ ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

7.3 ಆಪತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಜವಬ್ದಾರಿಗಳನ್ನು ನಿಗದಿಪಡಿಸುವುದು ಮುಖ್ಯ ಆಪತ್ತು ನಿರ್ವಹಣಾ ಅಧಿಕಾರಿಗಳ ಅಧಿಕಾರವಾಗಿದೆ.

7.4 ಆಪತ್ತು ನಿರ್ವಹಣೆ ವ್ಯವಸ್ಥಾಪಕರು (ಆರ್‌ಎಂ) ತಮ್ಮ ಜವಾಬ್ದಾರಿಗಳ ಅನುಕ್ರಮ ಕ್ಷೇತ್ರಗಳಲ್ಲಿ ಈ ಕಾರ್ಯನೀತಿಯ ಜಾರಿಯ ಬಗ್ಗೆ ಸಿಆರ್‌ಓಗೆ ವರದಿ ಮಾಡುತ್ತಾರೆ.

7.5 ಆಪತ್ತು ನಿರ್ವಹಣಾ ಅಧಿಕಾರಿಗಳು (ಆರ್‌ಓ) ತಮ್ಮ ವೈಯಕ್ತಿಕ ಯೋಜನೆಗಳಿಗೆ ಸಂಬಂಧಿಸಿದ ಆಪತ್ತುಗಳ ಗುರುತಿಸುವಿಕೆ, ಪ್ರಾರಂಭಿಕ ಅಂದಾಜು, ವರದಿ ಮಾಡುವಿಕೆ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ.

7.6 ಪ್ರತಿಯೊಬ್ಬ ಆಪತ್ತು ನಿರ್ವಹಣೆ ಪ್ರಬಂಧಕರೂ ತಮ್ಮ ನಿಯಂತ್ರಣದ ವ್ಯಾಪ್ತಿಯಲ್ಲಿನ ಎಲ್ಲಾ ಆಪತ್ತು ನಿರ್ವಹಣಾ ಅಧಿಕಾರಿಗಳ ಆಪತ್ತಿನ ರಿಜಿಸ್ಟರುಗಳ ಲಭ್ಯತೆಯನ್ನು ಹೊಂದಿರುತ್ತಾರೆ ಹಾಗೂ ಅವುಗಳ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಸಿಆರ್‌ಓ ಆಪತ್ತು ನಿರ್ವಹಣಾ ಪ್ರಬಂಧಕರ ಹಂತದಲ್ಲಿ ಎಲ್ಲ ಆಪತ್ತುಗಳ ಮೇಲ್ವಿಚಾರಣೆಯ ಜವಾಬ್ದಾರಿ ಹೊಂದಿರುತ್ತಾರೆ.

7.6.1 'ಆಪತ್ತಿನ ರಿಜಿಸ್ಟರ್' ಕೆಳಗಿನ ಮಾಹಿತಿಯನ್ನು ಹೊಂದಿರ ಬೇಕಾಗುತ್ತದೆ:

1. ಆಪತ್ತಿನ ವಿವರಣೆ
2. ಒಂದು ವೇಳೆ ಆಪತ್ತಿನ ಘಟನೆ ನಡೆದರೆ ಅದರ ಪರಿಣಾಮ

3. ಒಂದು ವೇಳೆ ಆಪತ್ತಿನ ಘಟನೆ ನಡೆದರೆ ಅದಕ್ಕೆ ಯೋಜಿತ ಪ್ರತಿಕ್ರಿಯೆಯ ಸಾರ

4. ಆಪತ್ತಿನ ತಗ್ಗಿಸುವಿಕೆ ಯೋಜನೆಯ ಸಾರ (ಅರ್ಥಾತ್ ಆಪತ್ತಿ ಘಟನೆಯ ಸಂಭಾವ್ಯತೆ ಮತ್ತು/ಅಥವಾ ಪರಿಣಾಮವನ್ನು ತಗ್ಗಿಸಲು ಮುಂಚಿತವಾಗಿಯೇ ತೆಗೆದುಕೊಳ್ಳಲಾದ ಕ್ರಮಗಳು)

5. ಹೊಂದಿರುವ ನಿಯೋಗ/ ವ್ಯಕ್ತಿ

8. ಆಪತ್ತು ನಿರ್ವಹಣೆಯ ಕಾರ್ಯವಿಧಾನ:

8.1 ಮುಂದುವರೆಯುವ ಸಂಸ್ಥೆಯಾಗಿ ಕಂಪನಿಯ ಅಸ್ತಿತ್ವಕ್ಕೆ ಧಕ್ಕೆತರಬಹುದಾದ ಸಂಭಾವ್ಯ ಆಪತ್ತುಗಳು, ನಿಬಂಧನಾ ಅಗತ್ಯಗಳಿಗೆ ಸಂಬಂಧಿಸಿದ ಆಪತ್ತುಗಳು, ಕಂಪನಿಯ ಸಾಧನೆಗಳು ಮತ್ತು ಉದ್ದೇಶಗಳನ್ನು ಪ್ರಭಾವಿಸಬಹುದಾದ ಆಪತ್ತುಗಳು, ಕಾರ್ಯಾಚರಣೆಯಿಂದ ಆದಾಯ ನಷ್ಟದ ಆಪತ್ತುಗಳು, ಕಂಪನಿಯ ಅಸ್ತಿಗಳು ಮತ್ತು ಸ್ವತ್ತುಗಳಿಗೆ ತಗಲುವ ಆಪತ್ತುಗಳನ್ನು ಆಂತರಿಕ ಲೆಕ್ಕಪರಿಶೋಧನಾ ಕೈಪಿಡಿಯಲ್ಲಿ ನಿಗದಿಪಡಿಸಲಾಗಿರುವಂತೆ ಅಪಾಯ ಸೂಚಕಗಳ ಆಧಾರದ ಮೇಲೆ ಅಂಕಗಳನ್ನು ನೀಡುವ ಮೂಲಕ ವಿಶ್ಲೇಷಿಸಲಾಗುವುದು ಹಾಗೂ ತನ್ಮೂಲಕ ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳಲಾಗುವುದು.

8.2 ಪ್ರತಿ ವಲಯದಲ್ಲಿನ ಆಪತ್ತು ನಿರ್ವಹಣಾ ಘಟಕಗಳು ಕಂಪನಿಯ ಆಪತ್ತುಗಳನ್ನು ತಗ್ಗಿಸುವ ಸಲುವಾಗಿ ಈ ಕಾರ್ಯನೀತಿಯ ಚೌಕಟ್ಟಿನಲ್ಲಿ ಬರುವ ಆಪತ್ತುಗಳ ಆಧಾರದ ಮೇಲೆ ನಿರಂತರ ನೆಲೆಯಲ್ಲಿ ಕಾರ್ಯನಿರ್ವಹಿಸುವ ಪ್ರಧಾನ ಗುಂಪುಗಳಾಗಿವೆ.

9. ಆಪತ್ತುಗಳ ಗುರುತಿಸುವಿಕೆ ಮತ್ತು ಮೌಲ್ಯಮಾಪನ:

ನಿರ್ದಿಷ್ಟ ಆಪತ್ತುಗಳನ್ನು ಗುರುತಿಸುವ ಮತ್ತು ಆಪತ್ತುಗಳು ಘಟಿಸಿದಲ್ಲಿ ಪರಿಣಾಮಗಳ ನೆಲೆಯಲ್ಲಿ ಆಪತ್ತುಗಳನ್ನು ವಿಶ್ಲೇಷಿಸುವ ಉದ್ದೇಶದಿಂದ ಆಪತ್ತು ನಿರ್ವಹಣಾ ಘಟಕಗಳು ಮುಖ್ಯ ಆಪತ್ತು ನಿರ್ವಹಣಾ ಆಧಿಕಾರಿಯ (ಸಿಆರ್‌ಓ) ಮಾರ್ಗದರ್ಶನದಲ್ಲಿ ಆಪತ್ತು ನಿರ್ವಹಣಾ ಪ್ರಬಂಧಕರು (ಆರ್‌ಎಂ) ಮತ್ತು ಆಪತ್ತು ನಿರ್ವಹಣಾ ಅಧಿಕಾರಿಗಳನ್ನು (ಆರ್‌ಓ) ಕಾಲಕಾಲಕ್ಕೆ ಸಂಧಿಸಿ ಸಭೆ ನಡೆಸುತ್ತಾರೆ.

10. ಆಪತ್ತುಗಳ ನಿರ್ವಹಣೆಯಲ್ಲಿ ಆದ್ಯತೆ:

ಗುರುತಿಸಲಾದ ಎಲ್ಲ ಆಪತ್ತುಗಳಲ್ಲಿ ಅಪಾಯ ನಿರ್ವಹಣಾ ಘಟಕವು ಪ್ರಧಾನ ಆಪತ್ತುಗಳ ಮೇಲೆ ಗಮನವನ್ನು ಕೇಂದ್ರೀಕರಿಸಿ ಅವುಗಳನ್ನು ತಗ್ಗಿಸುವ ಕ್ರಮಗಳಿಗೆ ಆದ್ಯತೆಯನ್ನು ನೀಡುತ್ತದೆ.

11. ಮೌಲ್ಯಮಾಪನ ಮತ್ತು ನಿಯಂತ್ರಣ:

11.1 ಗುರುತಿಸಲಾದ ಅಪಾಯಗಳನ್ನು, ಅವು ವಾಸ್ತವವಾದ ಪಕ್ಷದಲ್ಲಿ, ಗ್ರಹಿಸಬಹುದಾದ ಪರಿಣಾಮಗಳ ಹಾಗೂ ಆರ್ಥಿಕ ಪರಿಣಾಮಗಳ ನೆಲೆಯಲ್ಲಿ ನಿರ್ಧರಣೆ ಮಾಡಲಾಗುತ್ತದೆ.

11.2 ಆಪತ್ತುಗಳ ಸ್ಥಾನವನ್ನು ಅವು ಯೋಜನೆಗಳ ಮೇಲೆ ಬೀರಲು ಸಾಧ್ಯವಿರುವ ಪರಿಣಾಮಗಳ ಅನುಸಾರವಾಗಿ ನಿಗದಿಮಾಡಲಾಗುತ್ತದೆ.

11.3 ಪ್ರತಿಯೊಂದು ವಾಸ್ತವಿಕ ಅಪಾಯವನ್ನು ತೊಡೆದುಹಾಕಲು, ತಗ್ಗಿಸಲು ಅಥವಾ ನಿರ್ವಹಿಸಲು ಕಾರ್ಯ ಯೋಜನೆಗಳನ್ನು ಪರಿಗಣಿಸಿ ಅಂತಿಮ ಗೊಳಿಸಲಾಗುವುದು.

11.4 ಪ್ರತಿ ಆಪತ್ತಿನ ನಿರ್ವಹಣೆಯ ಜವಾಬ್ದಾರಿಗಳನ್ನು ಸೂಕ್ತ ಲೈನ್ ವ್ಯವಸ್ಥಾಪಕರಿಗೆ ವಹಿಸಲಾಗುವುದು.

12. ಮೇಲ್ವಿಚಾರಣೆ:

12.1 ಸರ್ಕಾರದ ಮತ್ತು ಇತರೆ ಕಾರ್ಯನೀತಿಗಳಲ್ಲಿನ ಬದಲಾವಣೆಗಳ ಫಲವಾಗಿ ವ್ಯಾಪಾರದ ವಾತಾವರಣದಲ್ಲಿ ಉಂಟಾಗುವ ಬದಲಾವಣೆ ಹಾಗೂ ಅದರ ಕಾರಣದಿಂದಾಗಿ ಆಪತ್ತಿಗೆ ತೆರೆದುಕೊಳ್ಳುವ ಬಗೆಯಲ್ಲಿನ ಬದಲಾವಣೆಯನ್ನು ದೃಷ್ಟಿಯಲ್ಲಿರಿಸಿ ಆಪತ್ತು ಮಾತೃಕೆಯನ್ನು ಪರಿಷ್ಕರಿಸಬೇಕಾಗುತ್ತದೆ. ಹಾಗಾಗಿ ಆಪತ್ತು ಮಾತೃಕೆಯನ್ನು ನಿಯತವಾಗಿ ಪರಿಷ್ಕರಿಸಲಾಗುವುದು. ಪರಿಶೀಲನೆ ಮತ್ತು ಪರಿಷ್ಕರಣೆಯ ಎಷ್ಟು ಅಂತರಗಳಲ್ಲಿ ಆಗಬೇಕೆನ್ನುವುದನ್ನು ಕೆಳಗಿನಂತೆ ನಿರ್ಧರಿಸಲಾಗುವುದು:

12.2.1 ಮಾಸಿಕ ಎಂಎಂಆರ್ ಸಭೆಗಳಲ್ಲಿ ನಿಯತವಾದ ಕಾರ್ಯಸೂಚಿ ವಿಷಯವಾಗಿ ಅಪಾಯ ನಿರ್ವಹಣಾ ಘಟಕದ ವರದಿಯು ಚರ್ಚೆಗೆ ಬರುತ್ತದೆ. ಆಪತ್ತು ನಿರ್ವಹಣಾ ಪ್ರಬಂಧಕರು ಇಲಾಖಾ ಮುಖ್ಯಸ್ಥರೊಂದಿಗೆ ತಮ್ಮ ಅನುಕ್ರಮವಾದ ಕ್ಷೇತ್ರಗಳಲ್ಲಿನ ಆಪತ್ತುಗಳ ಸ್ಥಿತಿಗತಿ ಹಾಗೂ ತೆಗೆದುಕೊಳ್ಳಲಾದ ಕ್ರಮಗಳನ್ನು ಪರಿಶೀಲಿಸುತ್ತಾರೆ.

12.2.2 ಯಾವುದೇ ಹೊಸದಾದ ಅಥವಾ ಬದಲಾವಣೆಗೊಂಡ ಆಪತ್ತನ್ನು ಗುರುತಿಸಿ ಆ ಬಗೆಗಿನ ವಿವರಗಳನ್ನು ಮುಖ್ಯ ಆಪತ್ತು ನಿರ್ವಹಣಾ ಅಧಿಕಾರಿಗೆ ಹಾಗೂ ಸಿಆರ್‌ಓ ಲೆಕ್ಕಪರಿಶೋಧನಾ ಸಮಿತಿಗೆ, ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚಿಸಿದ ನಂತರ ತಲುಪಿಸಲಾಗುವುದು.

12.2.3 ಅತಿ ಹೆಚ್ಚಿನ ಆಪತ್ತಿನ ಅಂಕಗಳನ್ನು ಹೊಂದಿರುವ ಆಪತ್ತುಗಳು ಮತ್ತು ಅವುಗಳಿಗೆ ಸಂಬಂಧಿಸಿದ ಸರಿಪಡಿಸುವಿಕೆ ಕಾರ್ಯಗಳನ್ನು ಅವುಗಳ ಗ್ರಹಿಕೆಯ ನಂತರ ಒಡನೆಯೇ ಲೆಕ್ಕಪರಿಶೋಧನಾ ಸಮಿತಿಗೆ ವರದಿ ಮಾಡಬೇಕಾಗುತ್ತದೆ.

12.2.4 ಆಪತ್ತು ನಿರ್ವಹಣಾ ಪ್ರಕ್ರಿಯೆಯನ್ನು ಅದರ ಸಾಮರ್ಥ್ಯ ಮತ್ತು ಪರಿಣಾಮಕಾರಿ ಗುಣದ ನೆಲೆಯಲ್ಲಿ ಮಂಡಳಿಯು ಕಾಲಕಾಲಕ್ಕೆ ಪರಿಶೀಲಿಸುತ್ತದೆ.

13. ಸಾಮೂಹಿಕ ಜವಾಬ್ದಾರಿ:

13.1 ಆಪತ್ತಿನ ಪರಿಣಾಮಕಾರಿ ನಿರ್ವಹಣೆಗೆ ಕಂಪನಿಯ ಪ್ರತಿಯೊಬ್ಬರೂ ಜವಾಬ್ದಾರರಾಗಿರುತ್ತಾರೆ.

13.2 ಪ್ರತಿಯೋರ್ವ ಸಿಬ್ಬಂದಿಯೂ ತಮ್ಮ ಕಾರ್ಯಕ್ಷೇತ್ರದಲ್ಲಿನ ಸಂಭಾವ್ಯ ಆಪತ್ತುಗಳನ್ನು ಗುರುತಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಆಪತ್ತು ತಗ್ಗಿಸುವಿಕೆ ಯೋಜನೆಗಳನ್ನು ಅಭಿವೃದ್ಧಿಪಡಿಸಿ ಆಪತ್ತು ತಗ್ಗಿಸುವಿಕೆ ಕಾರ್ಯತಂತ್ರಗಳನ್ನು ಜಾರಿಗೊಳಿಸುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ.

13.3 ಆಪತ್ತು ನಿರ್ವಹಣಾ ಪ್ರಕ್ರಿಯೆಯನ್ನು ಇತರೆ ಯೋಜನಾ ಪ್ರಕ್ರಿಯೆಗಳು ಮತ್ತು ನಿರ್ವಹಣಾ ಚಟುವಟಿಕೆಗಳೊಂದಿಗೆ ಸಮಗ್ರಗೊಳಿಸಲಾಗುವುದು.

14. ಕಾರ್ಯನೀತಿಗೆ ಅನುಮೋದನೆ:

14.1 ಕಂಪನಿಯ ಒಟ್ಟಾರೆ ಆಪತ್ತು ನಿರ್ವಹಣಾ ವ್ಯವಸ್ಥೆಯನ್ನು ಅನುಮೋದಿಸುವ ಪ್ರಾಧಿಕಾರ ಮಂಡಳಿಯಾಗಿರುತ್ತದೆ. ಮಂಡಳಿಯು ಅನುಸರಣೆಯ ಮೇಲ್ವಿಚಾರಣೆ ನಡೆಸಿ ಆಪತ್ತು ನಿರ್ವಹಣಾ ವ್ಯವಸ್ಥೆಯನ್ನು ಹಾಗೂ ಕಾಲದಿಂದ ಕಾಲಕ್ಕೆ ಮಾಡಲಾಗುವ ತಿದ್ದುಪಡಿಗಳನ್ನು ಅನುಮೋದಿಸುತ್ತದೆ.

15. ಕಾರ್ಯನೀತಿಯ ಪರಿಶೀಲನೆ:

ಈ ಕಾರ್ಯನೀತಿಯು ಕೆಎನ್ಎನ್ಎಲ್‌ನಲ್ಲಿ ಆಪತ್ತು ನಿರ್ವಹಣೆಗೆ ಮಾರ್ಗಸೂಚಿಗಳನ್ನು ರೂಪಿಸುತ್ತದೆ. ಆಪತ್ತು ನಿರ್ವಹಣೆ ನಿಬಂಧನೆಗಳು/ ಪ್ರಮಾಣಗಳು/ ಅತ್ಯುತ್ತಮ ಆಚರಣೆಗಳಲ್ಲಿ ಬದಲಾವಣೆಗಳು ಘಟಿಸಿದಾಗ ತತ್ಕಾರಣದ ಬದಲಾವಣೆಗಳು ಅಗತ್ಯವೆನಿಸಿದಂತೆ ಕಾರ್ಯನೀತಿಯನ್ನು ಪುನರ್‌ಪರಿಶೀಲಿಸಲಾಗುವುದು.

2017-18ನೇ ಸಾಲಿನ ನಿರ್ದೇಶಕರ ವರದಿಗೆ ಅನುಬಂಧ - 4

ನಮೂನೆ ಸಂಖ್ಯೆ: ಎಂಜಿಟಿ 9

ವಾರ್ಷಿಕ ಸಲ್ಲಿಕೆಯ ಸಾರ 31.03.2018ರಂದು ಕೊನೆಗೊಂಡ ಹಣಕಾಸು ವರ್ಷಕ್ಕೆ

ಕಂಪನಿ ಕಾಯ್ದೆ 2013, ಪರಿಚ್ಛೇದ 92(3)ರ ಅನುಸಾರ ಮತ್ತು ಕಂಪನಿ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1)ಕ್ಕೆ ಹೊಂದುವಂತೆ

I. ನೋಂದಣಿ ಮತ್ತು ಇತರ ವಿವರಗಳು:

i	ಸಿಐಎನ್	ಯು85110ಕೆಎ1998ಎಸ್‌ಜಿಸಿ024503
ii	ನೋಂದಣಿ ದಿನಾಂಕ	9ನೇ ಡಿಸೆಂಬರ್, 1998
iii	ಕಂಪನಿಯ ಹೆಸರು	ಕರ್ನಾಟಕ ನೀರಾವರಿ ನಿಗಮ ನಿಯಮಿತ
iv	ಕಂಪನಿಯ ವರ್ಗ/ ಉಪವರ್ಗ	ರಾಜ್ಯ ಸರ್ಕಾರಿ ಕಂಪನಿ
v	ನೋಂದಾಯಿತ ಕಛೇರಿಯ ವಿಳಾಸ ಮತ್ತು ಸಂಪರ್ಕ ವಿವರಗಳು	4ನೇ ಮಹಡಿ, ಕಾಫಿ ಮಂಡಳಿ ಕಟ್ಟಡ, ನಂ 1, ಡಾ. ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001.
vi	ಕಂಪನಿಯನ್ನು ಪಟ್ಟಿ ಮಾಡಲಾಗಿದೆಯೇ	ಕಂಪನಿಯನ್ನು ಸೀಮಿತ ಈಕ್ವಿಟಿ ಷೇರುಗಳು ಪಟ್ಟಿಯಾಗಿಲ್ಲ. ಡಿಬೆಂಚರುಗಳು ಪಟ್ಟಿಯಾಗಿವೆ.
vii	ನೋಂದಣಿ ಅಧಿಕಾರಿ ಮತ್ತು ವರ್ಗಾವಣೆ ಅಭಿಕರ್ತರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು, ಅವು ಇದ್ದ ಪಕ್ಷದಲ್ಲಿ.	ಮೆ. ಲಿಂಕ್‌ಇನ್‌ಟೈಮ್ ಇಂಡಿಯಾ ಪ್ರೈ.ಲಿ., ಸಿ-13, ಪನ್ನಾಲಾಲ್ ಸಿಲ್ಕ್ ಮಿಲ್ಸ್ ಕಾಂಪೌಂಡ್, ಎಲ್.ಬಿ.ಎಸ್ ಮಾರ್ಗ್, ಭಾಂಡಪ್, (ಪೂರ್ವ), ಮುಂಬೈ-400078. ದೂರವಾಣಿ: +91-22-25963838, ಇ-ಮೇಲ್: ganesh.jadhav@linkintime.co.in ಸರಣಿ VIII ಬಾಂಡುಗಳ ನೀಡಿಕೆಗಾಗಿ.

II. ಕಂಪನಿಯ ಪ್ರಧಾನ ವ್ಯಾಪಾರಿ ಚಟುವಟಿಕೆಗಳು:

ಕಂಪನಿಯ ಒಟ್ಟು ವಹಿವಾಟಿನಲ್ಲಿ 10%ಕ್ಕಿಂತ ಹೆಚ್ಚಿನ ಕೊಡುಗೆಯನ್ನು ನೀಡುವ ಕಂಪನಿಯ ಪ್ರಧಾನ ವ್ಯಾಪಾರಿ ಚಟುವಟಿಕೆಗಳನ್ನು ಒದಗಿಸುವುದು:

ಕ್ರ. ಸಂ	ಪ್ರಧಾನ ಉತ್ಪನ್ನಗಳು/ ಸೇವೆಗಳ ಹೆಸರು ಮತ್ತು ವಿವರ	ಉತ್ಪನ್ನಗಳು/ ಸೇವೆಗಳ ಎನ್‌ಐಸಿ ಸಂಕೇತ	ಕಂಪೆನಿಯ ಒಟ್ಟು ವಹಿವಾಟಿನಲ್ಲಿ %
1	ಕರ್ನಾಟಕ ಸರ್ಕಾರ ವಹಿಸಿರುವ ನೀರಾವರಿ ಯೋಜನೆಗಳ ಅನುಷ್ಠಾನ	42,204	100%

III. ಹೋಲ್ಡಿಂಗ್, ಅಧೀನ ಮತ್ತು ಸಹಯೋಗಿ ಕಂಪೆನಿಗಳ ವಿವರಗಳು:

Sl. No.	ಕಂಪೆನಿಯ ಹೆಸರು& ವಿಳಾಸ	ಸಿಐಎನ್/ ಜಿಎಲ್‌ಎನ್	ಹೋಲ್ಡಿಂಗ್/ ಅಧೀನ/ಸಹಯೋಗಿ	ಇರಿಸಿಕೊಳ್ಳಲಾದ ಷೇರುಗಳ %	ಅನ್ವಯವಾಗುವ ಪರಿಚ್ಛೇದ
1	ಅನ್ವಯವಾಗುವುದಿಲ್ಲ				
2	ಅನ್ವಯವಾಗುವುದಿಲ್ಲ				
3	ಅನ್ವಯವಾಗುವುದಿಲ್ಲ				

IV. ಷೇರುದಾರಿಕೆ ಮಾದರಿ (ಒಟ್ಟು ಈಕ್ವಿಟಿಯ % ಆಗಿ ಈಕ್ವಿಟಿ ಷೇರು ಬಂಡವಾಳದ ವಿಭಾಗಗಳ ವಿಂಗಡಣೆ)

(i) ವರ್ಗಾವಾರು ಷೇರುದಾರಿಕೆ:

ಷೇರುದಾರರ ವರ್ಗ	ವರ್ಷದ ಪ್ರಾರಂಭದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ				ವರ್ಷದ ಅಂತ್ಯದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ				ವರ್ಷದಲ್ಲಿನ ಬದಲಾವಣೆಯ %	
	ಡಿಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ %	ಡಿಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ %		
ಎ. ಪ್ರೋತ್ಸಾಹಕರು										
(1) ಭಾರತೀಯ										
ಎ) ವ್ಯಕ್ತಿ/ಎಚ್‌ಯುಎಫ್										
ಬಿ) ರಾಜ್ಯ ಸರ್ಕಾರ	NIL	236285343	236285343	100%	NIL	254449151	254449151	100%		8.00%
ಸಿ) ಕಾರ್ಪೊರೇಟ್ ಕಾಯಗಳು										
ಡಿ) ಬ್ಯಾಂಕ್ ಹಣಕಾಸು ಸಂಸ್ಥೆಗಳು										
ಇ) ಇತರೆ ಯಾವುದೇ										
ಉಪ ಮೊತ್ತ: (ಎ) (1)		**236285343**	**236285343**	**100%**	NIL	**254449151**	**254449151**	**100%**		**8.00%**
(2) ವಿದೇಶಿ										
ಎ) ಅನಿವಾಸಿ ವ್ಯಕ್ತಿಗಳು										
ಬಿ) ಇತರ ವ್ಯಕ್ತಿಗಳು										
ಸಿ) ಕಾರ್ಪೊರೇಟ್ ಕಾಯಗಳು										
ಡಿ) ಬ್ಯಾಂಕ್ ಹಣಕಾಸು ಸಂಸ್ಥೆಗಳು										
ಇ) ಇತರೆ ಯಾವುದೇ										
ಉಪ ಮೊತ್ತ: (ಎ) (2)										
ಪ್ರೋತ್ಸಾಹಕರು ಹೊಂದಿರುವ ಒಟ್ಟು ಷೇರು (ಎ)=(ಎ)(1) + (ಎ)(2)		**236285343**	**236285343**	**100%**	NIL	**254449151**	**254449151**	**100%**		**8.00%**
ಬಿ. ಸಾರ್ವಜನಿಕ ಷೇರುದಾರಿಕೆ										
1) ಸಂಸ್ಥೆಗಳು										
ಎ) ಮ್ಯೂಚುಯಲ್ ನಿಧಿಗಳು										
ಬಿ) ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು										
ಸಿ) ಕೇಂದ್ರ ಸರ್ಕಾರ										
ಡಿ) ರಾಜ್ಯ ಸರ್ಕಾರ										
ಇ) ಉದ್ಯಮ ಬಂಡವಾಳ ನಿಧಿ										
ಎಫ್) ವಿಮಾ ಕಂಪನಿಗಳು										
ಜಿ) ಎಫ್‌ಐಐಎಸ್										
ಎಚ್) ವಿದೇಶಿ ಉದ್ಯಮ ಬಂಡವಾಳ ನಿಧಿ										
ಐ) ಇತರೆ (ನಿರ್ದಿಷ್ಟಗೊಳಿಸಿ)										
ಉಪ ಮೊತ್ತ (ಬಿ)(1):										

2. ಸಂಸ್ಥೆಯೇತರ										
ಎ) ಕಾರ್ಪೊರೇಟ್ ಕಾಯಗಳು										
1) ಭಾರತೀಯ										
2) ವಿದೇಶಿ										
ಬಿ) ವ್ಯಕ್ತಿಗಳು										
i) 1 ಲಕ್ಷದವರೆಗೆ ನಾಮ ಮಾತ್ರದ ಷೇರು ಬಂಡವಾಳ ಹೊಂದಿರುವ ಷೇರುದಾರರು										
ii) ವ್ಯಕ್ತಿಗಳು ಪಾಲುದಾರರು 1 ಲಕ್ಷಕ್ಕೂ ಅಧಿಕ ನಾಮವಾಚಕ ಪಾಲು ಬಂಡವಾಳವನ್ನು ಹೊಂದಿರುವವರು										
ಸಿ) ಇತರೆ (ನಿರ್ದಿಷ್ಟಗೊಳಿಸಿ)										
ಉಪ ಮೊತ್ತ (ಬಿ)(2):										
ಒಟ್ಟು ಸಾರ್ವಜನಿಕ ಷೇರುದಾರಿಕೆ (ಬಿ)=(ಬಿ)(1)+(ಬಿ)(2)										
ಸಿ. ಜಿಡಿಆರ್‌ಗಳು ಮತ್ತು ಎಡಿಆರ್‌ಗಳ ಸಂರಕ್ಷಕರು ಹೊಂದಿರುವ ಷೇರುಗಳು										
ಒಟ್ಟು ಮೊತ್ತ (ಎ+ಬಿ+ಸಿ)		**236285343**	**236285343**	**100%**	NIL	**254449151**	**254449151**	**100%**		**8.00%**

(ii) ಪ್ರವರ್ತಕ ಷೇರುದಾರಿಕೆ:

ಕ್ರ.ಸಂ	ಷೇರುದಾರರ ಹೆಸರು	ವರ್ಷದ ಪ್ರಾರಂಭದ ಹೊತ್ತಿಗೆ ಷೇರುದಾರಿಕೆ			ವರ್ಷದ ಕೊನೆಯ ಹೊತ್ತಿಗೆ ಷೇರುದಾರಿಕೆ			ವರ್ಷದಲ್ಲಿ ಷೇರುದಾರಿಕೆಯಲ್ಲಿನ ಬದಲಾವಣೆಯ %ಷೇರು
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %	ಒಟ್ಟು ಷೇರುಗಳಲ್ಲಿ ಒತ್ತೆ ಇರಿಸಿದ, ಋಣಭಾರ ಹಾಕಿದ ಷೇರುಗಳ %	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %	ಒಟ್ಟು ಷೇರುಗಳಲ್ಲಿ ಒತ್ತೆ ಇರಿಸಿದ, ಋಣಭಾರ ಹಾಕಿದ ಷೇರುಗಳ %	
1	ಸರ್ಕಾರದ ಮೂಲಕ ಕರ್ನಾಟಕ ರಾಜ್ಯ ಹಣಕಾಸು ನಿಗಮಕ್ಕೆ ಹಂಚಲಾದ ಷೇರುಗಳೂ ಸೇರಿದಂತೆ ಕರ್ನಾಟಕ ರಾಜ್ಯ ಸರ್ಕಾರ							
	ಒಟ್ಟು	**236285343**	**100.00%**	**-**	**254449151**	**100.00%**		**8%**

(iii) ಪ್ರವರ್ತಕ ಷೇರುದಾರಿಕೆಯಲ್ಲಿ ಬದಲಾವಣೆ (ಬದಲಾವಣೆಯಿದ್ದರೆ ನಿರ್ದಿಷ್ಟಗೊಳಿಸಿ):

ಕ್ರ.ಸಂ		ವರ್ಷದ ಪ್ರಾರಂಭದ ಹೊತ್ತಿಗೆ ಷೇರುದಾರಿಕೆ		ವರ್ಷದಲ್ಲಿನ ಸಂಚಯಿತ ಷೇರುದಾರಿಕೆ	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %
		ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ

(iv) ಮೇಲಿನ ಹತ್ತು ಷೇರುದಾರರ ಷೇರುದಾರಿಕೆ ಮಾದರಿ (ನಿರ್ದೇಶಕರು, ಪ್ರವರ್ತಕ, ಜಿಡಿಆರ್ & ಎಡಿಆರ್ ಹೊಂದಿರುವವರನ್ನು ಹೊರತುಪಡಿಸಿ):

ಕ್ರ.ಸಂ		ವರ್ಷದ ಪ್ರಾರಂಭದ ಹೊತ್ತಿಗೆ ಷೇರುದಾರಿಕೆ		ವರ್ಷದಲ್ಲಿನ ಸಂಚಯಿತ ಷೇರುದಾರಿಕೆ	
	ಮೇಲಿನ ಹತ್ತು ಷೇರುದಾರರಲ್ಲಿ ಷೇರುಗಳ ಸಂಖ್ಯೆ ಪ್ರತಿಯೋರ್ವರಿಗೆ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %
	ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ

(v) ನಿರ್ದೇಶಕರು & ಕೆಎಂಪಿ ಷೇರುದಾರಿಕೆ:

ಕ್ರಸಂ	ನಿರ್ದೇಶಕರು & ಕೆಎಂಪಿ ಪೈಕಿ ಪ್ರತಿಯೋರ್ವರಿಗೆ*	ವರ್ಷದ ಪ್ರಾರಂಭದ ಹೊತ್ತಿಗೆ ಷೇರುದಾರಿಕೆ		ವರ್ಷದಲ್ಲಿನ ಸಂಚಯಿತ ಷೇರುದಾರಿಕೆ	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %
1	ಶ್ರೀಮತಿ ಕೆ. ರತ್ನ ಪ್ರಭಾ, ಭಾ.ಆ.ಸೇ.	1	0.00%	1	0.00%
2	ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ.	1	0.00%	1	0.00%
3	ಶ್ರೀ ಎಲ್.ಕೆ. ಅತೀಕ್, ಭಾ.ಆ.ಸೇ.	1	0.00%	1	0.00%
4	ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ.	1	0.00%	1	0.00%
5	ಶ್ರೀ ಬಿ.ಜಿ. ಗುರುಪಾದಸ್ವಾಮಿ	1	0.00%	1	0.00%
6	ಶ್ರೀ ಮಲ್ಲಿಕಾರ್ಜುನ ಬಿ. ಗುಂಗೆ	3	0.00%	3	0.00%
7	ಶ್ರೀ ಡಿ.ಎನ್. ದೇಸಾಯಿ	1	0.00%	1	0.00%
8	ಡಾ. ವಿ.ಪಿ. ಹುಗ್ಗಿ	1	0.00%	1	0.00%

* ಕೆಎಂಪಿಗೆ ಷೇರು ಹಂಚಿಕೆ ಇರುವುದಿಲ್ಲ.
ಇಬ್ಬರು ಕರ್ನಾಟಕ ಸರ್ಕಾರದ ನಾಮನಿರ್ದೇಶಿತ ಷೇರುದಾರರಿಗೆ ತಲಾ ಒಂದು ಷೇರನ್ನು ಹಂಚಲಾಗಿದೆ.

V. ಋಣಬದ್ಧತೆ:

(ಮೊತ್ತ ₹ ಗಳಲ್ಲಿ)

ಬಾಕಿ ಇರುವ/ ಪ್ರಾಪ್ತವಾದ ಆದರೆ ಪಾವತಿಗೆ ಬಾಕಿ ಇರದ ಬಡ್ಡಿಯೂ ಸೇರಿದಂತೆ ಕಂಪನಿಯ ಋಣ ಬದ್ಧತೆ				
	ಠೇವಣಿಗಳನ್ನು ಹೊರತು ಪಡಿಸಿ ಆಧಾರಿತ ಸಾಲಗಳು	ಆಧಾರ ರಹಿತ ಸಾಲಗಳು	ಠೇವಣಿಗಳು	ಒಟ್ಟು ಋಣ ಬದ್ಧತೆ
ಹಣಕಾಸು ವರ್ಷದ ಪ್ರಾರಂಭದ ಹೊತ್ತಿಗೆ ಋಣ ಬದ್ಧತೆ				
1) ಅಸಲು ಮೊತ್ತ	21,73,73,59,694.00	-	-	21,73,73,59,694.00
2) ಬಾಕಿ ಇರುವ ಆದರೆ ಪಾವತಿಯಾಗದ ಬಡ್ಡಿ	98,55,880.00	-	-	98,55,880.00
3) ಪ್ರಾಪ್ತವಾದ ಆದರೆ ಬಾಕಿ ಇರದ ಬಡ್ಡಿ	11,95,355.00	-	-	11,95,355.00
ಒಟ್ಟು (1+2+3)	**21,74,84,10,929.00**	**-**	**-**	**21,74,84,10,929.00**
ಹಣಕಾಸು ವರ್ಷದಲ್ಲಿ ಋಣ ಬದ್ಧತೆಯಲ್ಲಿನ ಬದಲಾವಣೆ				
ಸೇರ್ಪಡೆಗಳು	7,65,00,00,000.00	-	-	7,65,00,00,000.00
ಕಳೆಯುವಿಕೆ	3,03,84,42,312.00	-	-	3,03,84,42,312.00
ನಿವ್ವಳ ಬದಲಾವಣೆ	**4,61,15,57,688.00**	**-**	**-**	**4,61,15,57,688.00**
ಹಣಕಾಸು ವರ್ಷದ ಕೊನೆಯ ಹೊತ್ತಿಗೆ ಋಣ ಬದ್ಧತೆ				
1) ಅಸಲು ಮೊತ್ತ	26,35,58,13,823.00	-	-	26,35,58,13,823.00
2) ಬಾಕಿ ಇರುವ ಆದರೆ ಪಾವತಿಯಾಗದ ಬಡ್ಡಿ	29,56,164.00	-	-	29,56,164.00
3) ಪ್ರಾಪ್ತವಾದ ಆದರೆ ಬಾಕಿ ಇರದ ಬಡ್ಡಿ	11,98,630.00	–	–	11,98,630.00
ಒಟ್ಟು (1+2+3)	**26,35,99,68,617.00**	**-**	**-**	**26,35,99,68,617.00**

VI. ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿಗಳ ಸಂಭಾವನೆ:

ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರ ಸಂಭಾವನೆ:

ಕ್ರ.ಸಂ	ಸಂಭಾವನೆಯ ವಿವರಗಳು		ಎಂಡಿ/ಡಬ್ಲ್ಯೂಟಿಡಿ/ವ್ಯವಸ್ಥಾಪಕರ ಹೆಸರು	ಮೊತ್ತ
1	ಒಟ್ಟು ವೇತನ			
	ಎ) ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(1)ರಲ್ಲಿನ ಉಪಬಂಧಗಳ ಅನ್ವಯ ವೇತನ	13,01,214.00	ಶ್ರೀ ಮಲ್ಲಿಕಾರ್ಜುನ ಬಿ. ಗುಂಗೆ, ವ್ಯವಸ್ಥಾಪಕ ನಿರ್ದೇಶಕರು	12,97,942.00
	ಬಿ) ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(2)ರಲ್ಲಿನ ಉಪಬಂಧಗಳ ಅನ್ವಯ ವಿಶೇಷ ಸವಲತ್ತುಗಳು.		ಶ್ರೀ ಆರ್. ರುದ್ರಯ್ಯ, ವ್ಯವಸ್ಥಾಪಕ ನಿರ್ದೇಶಕರು (2016–17 ರಿಂದ 2017–18)	3,272.00
	ಸಿ) ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(3)ರಲ್ಲಿನ ಉಪಬಂಧಗಳ ಅನ್ವಯ ವೇತನದ ಬದಲಿಗೆ ಲಾಭಗಳು		-	-
2	ಸ್ಟಾಕ್ ಆಯ್ಕೆ		-	-
3	ಸ್ವೆಟ್ ಈಕ್ವಿಟಿ		-	-
4	ಲಾಭದ ಪ್ರತಿಶತವಾಗಿ ದಲ್ಲಾಳಿ ಮತ್ತಿತರೆ		-	-
5	ಇತರೆ, ದಯವಿಟ್ಟು ನಿರ್ದಿಷ್ಟಗೊಳಿಸಿ		-	-
	ಒಟ್ಟು (ಎ)	**13,01,214.00**		**13,01,214.00**
	ಕಾಯ್ದೆಯ ಪ್ರಕಾರ ಮೇಲ್ಮಿತಿ			

ಬಿ. ಇತರೇ ನಿರ್ದೇಶಕರಿಗೆ ಸಂಭಾವನೆ:

ಕ್ರ.ಸಂ	ಸಂಭಾವನೆಯ ವಿವರಗಳು	ನಿರ್ದೇಶಕರ ಹೆಸರು	ಒಟ್ಟು ಮೊತ್ತ
1	ಸ್ವತಂತ್ರ ನಿರ್ದೇಶಕರು		
	ಎ) ಮಂಡಳಿ ಸಭೆಗಳಲ್ಲಿ ಭಾಗವಹಿಸಿದ್ದಕ್ಕೆ ಸಭಾ ಭತ್ಯೆ	-	-
	ಬಿ) ದಲ್ಲಾಳಿ	-	-
	ಸಿ) ಇತರೆ, ದಯವಿಟ್ಟು ನಿರ್ದಿಷ್ಟಗೊಳಿಸಿ	-	-
	ನಿರ್ದೇಶಕರ ಸಂಭಾವನೆ		
	ನಿರ್ದೇಶಕರ ಸಂಭಾವನೆ		
	ಒಟ್ಟು (1)	-	-
2	ಇತರ ಕಾರ್ಯಕಾರಿಯಲ್ಲದ ನಿರ್ದೇಶಕರು		
	ಎ) ಮಂಡಳಿ ಸಮಿತಿ ಸಭೆಗಳಲ್ಲಿ ಭಾಗವಹಿಸಿದ್ದಕ್ಕೆ ಸಭಾ ಭತ್ಯೆ	-	76,000.00
	ಬಿ) ದಲ್ಲಾಳಿ	-	-
	ಸಿ) ಇತರೆ, ದಯವಿಟ್ಟು ನಿರ್ದಿಷ್ಟಗೊಳಿಸಿ	-	-
	ಒಟ್ಟು (2)	-	-
	ಒಟ್ಟು (ಬಿ)=(1+2)	-	**76,000.00**
	ಒಟ್ಟು ವ್ಯವಸ್ಥಾಪನಾ ಸಂಭಾವನೆ		
	ಕಾಯ್ದೆಯ ಪ್ರಕಾರ ಒಟ್ಟಾರೆ ಮೇಲ್ಮಿತಿ		

ಸಿ. ಎಂಡಿ/ವ್ಯವಸ್ಥಾಪಕರು/ಡಬ್ಲ್ಯೂಟಿಡಿ ಹೊರತುಪಡಿಸಿ ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿಗಳ ಸಂಭಾವನೆ:

ಕ್ರಸಂ	ಸಂಭಾವನೆಯ ವಿವರಗಳು		ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ			
1	ಒಟ್ಟು ವೇತನ		ಸಿಇಓ	ಕಂಪೆನಿ ಕಾರ್ಯದರ್ಶಿ	ಸಿಎಫ್‌ಓ	ಒಟ್ಟು
	ಎ) ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(1)ರಲ್ಲಿನ ಉಪಬಂಧಗಳ ಅನ್ವಯ ವೇತನ	ರೂ.13,12,150.00 (ಒಟ್ಟು ವೇತನ)	-	ಎಸ್.ಆರ್. ಗೋಪಾಲ್		ರೂ.13,12,150.00
	ಬಿ) ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(2)ರಲ್ಲಿನ ಉಪಬಂಧಗಳ ಅನ್ವಯ ವಿಶೇಷ ಸವಲತ್ತುಗಳು.	ರೂ.14,07,402.00 (ಒಟ್ಟು ವೇತನ)	-	-	ಆರ್. ರವೀಂದ್ರನ್	ರೂ.14,07,402.00
	ಸಿ) ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(3)ರಲ್ಲಿನ ಉಪಬಂಧಗಳ ಅನ್ವಯ ವೇತನದ ಬದಲಿಗೆ ಲಾಭಗಳು		-	-		
2	ಸ್ಟಾಕ್ ಆಯ್ಕೆ		-	-	-	-
3	ಸ್ವೆಟ್ ಈಕ್ವಿಟಿ		-	-	-	-
4	ಲಾಭದ ಪ್ರತಿಶತವಾಗಿ ದಲ್ಲಾಳಿ		-	-	-	-
5	ಇತರೆ, ದಯವಿಟ್ಟು ನಿರ್ದಿಷ್ಟಗೊಳಿಸಿ	ರೂ.1,62,708.00	-	ಎಸ್.ಆರ್. ಗೋಪಾಲ್	-	-
	ಒಟ್ಟು	**ರೂ.27,19,552.00**	**-**	**-**	**-**	**ರೂ.27,19,552.00**

VII. ಅಪರಾಧಗಳಿಗೆ ದಂಡ/ ಶಿಕ್ಷೆ/ ರಾಜಿ ಕಬೂಲಿ – ಇಲ್ಲ.

ವಿಧ	ಕಂಪನಿ ಕಾಯ್ದೆಯ ಪರಿಚ್ಛೇದ	ಸಂಕ್ಷಿಪ್ತ ವಿವರಣೆ	ವಿಧಿಸಲಾದ ದಂಡ/ಶಿಕ್ಷೆ/ ರಾಜಿ ಕಬೂಲಿ ಶುಲ್ಕಗಳ ವಿವರ	ಪ್ರಾಧಿಕಾರ (ಆರ್‌ಡಿ/ ಎನ್‌ಸಿಎಲ್‌ಟಿ/ ನ್ಯಾಯಾಲಯ)	ಸಲ್ಲಿಸಲಾದ ಮೇಲ್ಮನವಿ (ಯಾವುದಾದರೂ ಇದ್ದ ಪಕ್ಷದಲ್ಲಿ)
ಎ. ಕಂಪನಿ		ಇಲ್ಲ			
ದಂಡ					
ಶಿಕ್ಷೆ					
ರಾಜಿ ಕಬೂಲಿ ಶುಲ್ಕ					
ಬಿ. ನಿರ್ದೇಶಕರು		ಇಲ್ಲ			
ದಂಡ					
ಶಿಕ್ಷೆ					
ರಾಜಿ ಕಬೂಲಿ ಶುಲ್ಕ					
ಸಿ. ತಪ್ಪು ಮಾಡಿರುವ ಇತರೆ ಅಧಿಕಾರಿಗಳು					
ದಂಡ		ಇಲ್ಲ			
ಶಿಕ್ಷೆ					
ರಾಜಿ ಕಬೂಲಿ ಶುಲ್ಕ					

2017-18ರ ಸಾಲಿನ ನಿರ್ದೇಶಕರ ವರದಿಗೆ ಅನುಬಂಧ – 5
ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿ 2014

1.0 ಪರಿಚಯ

1.1 ಪಾರದರ್ಶಕವೂ ನೀತಿಯುಕ್ತವೂ ಆದ ಹಾಗೂ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಪರಿಸರಾತ್ಮಕವಾಗಿ ಕಾರ್ಯಸಾಧ್ಯವಾದ ವಿಧದಲ್ಲಿ ಕಂಪನಿಯಲ್ಲಿ ಹಿತಾಸಕ್ತಿಯನ್ನು ಹೊಂದಿದವರು ವ್ಯಾಪಾರವನ್ನು ನಡೆಸುವ ಅವಕಾಶ ಕಲ್ಪಿಸುವ ಕಂಪನಿಯ ಬದ್ಧತೆಯೇ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್).

ಕರ್ನಾಟಕ ನೀರಾವರಿ ನಿಗಮ ನಿಯಮಿತದಲ್ಲಿ (ಕೆಎನ್‌ಎನ್‌ಎಲ್) ಹಿತಾಸಕ್ತಿಯನ್ನು ಹೊಂದಿದವರಲ್ಲಿ ಕಂಪನಿಯ ನೌಕರರ ಚಟುವಟಿಕೆಗಳಿಂದ ನೇರವಾಗಿ ಪರಿಣಾಮ ಹೊಂದಿದವರು, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು, ಸ್ಥಳೀಯ ಸಮುದಾಯ ಮತ್ತು ಅವುಗಳ ಸಾರ್ವಜನಿಕ ಪ್ರತಿನಿಧಿಗಳು, ಗ್ರಾಮ ಸಭೆಗಳು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳು ಹಾಗೂ ಒಟ್ಟಾರೆ ಸಮಾಜ ಸೇರಿದೆ.

1.2 ಕೆಎನ್‌ಎನ್‌ಎಲ್ ಒಂದು ಕರ್ನಾಟಕ ಸರ್ಕಾರದ ಸ್ವಾಮ್ಯದಲ್ಲಿರುವ ಸಂಸ್ಥೆಯಾಗಿದ್ದು, ರಾಜ್ಯದಲ್ಲಿನ ಅತಿ ದೊಡ್ಡ ನೀರಾವರಿ ಮೂಲ ಸೌಕರ್ಯ ಸಂಸ್ಥೆಗಳಲ್ಲಿ ಒಂದಾಗಿದೆ.

1.3 ಕಂಪನಿ ಕಾಯ್ದೆ 2013 ಸೆಪ್ಟೆಂಬರ್ 2013ರಲ್ಲಿ ಅಧಿಸೂಚನೆಗೊಂಡಿತು. ಸಿಎಸ್‌ಆರ್ ಚಟುವಟಿಕೆಗಳನ್ನು ಕುರಿತಾದ ಪರಿಚ್ಛೇದ 135 ಏಪ್ರಿಲ್ 1, 2014ರಿಂದ ಜಾರಿಗೆ ಬಂದಿತು. ಸಿಎಸ್‌ಆರ್ ನಿಯಮಗಳೂ ಸಹ ಏಪ್ರಿಲ್ 1, 2014ರಿಂದ ಜಾರಿಗೆ ಬಂದಿತು. ಕಂಪನಿಯ ಸಿಎಸ್‌ಆರ್ ಕಾರ್ಯನೀತಿಯನ್ನು ಕಂಪನಿ ಕಾಯ್ದೆ 2013 ಮತ್ತು ಸಂವಾದಿ ನಿಯಮಗಳ ಅನುಸಾರ ರೂಪಿಸಲಾಗಿದೆ.

2.0 ಸಿಎಸ್‌ಆರ್ ಅಡಿ ಕೈಗೊಳ್ಳಬೇಕಿರುವ ಚಟುವಟಿಕೆಗಳು:

2.1 ಸಿಎಸ್‌ಆರ್ ಅಡಿ ಕೈಗೊಳ್ಳಬೇಕೆಂದು ಪ್ರಸ್ತಾಪಿಸಲಾಗಿದರುವ ಚಟುವಟಿಕೆಗಳಲ್ಲಿ ಕಂಪನಿ ಕಾಯ್ದೆ 2013 ಪರಿಚ್ಛೇದ 135(3)ರಲ್ಲಿ ಸೂಚಿಸಲಾಗಿರುವ ಅನುಸೂಚಿ–7ರಲ್ಲಿ ಹೇಳಲಾಗಿರುವ ಚಟುವಟಿಕೆಗಳು ಸೇರುತ್ತವೆ. (ಇಲ್ಲಿಂದ ಮುಂದೆ ಕಂಪನಿ ಕಾಯ್ದೆ 2013 – ಇದನ್ನು 'ಕಾಯ್ದೆ 2013' ಎಂದು ಉಲ್ಲೇಖಿಸಲಾಗುತ್ತದೆ).

2.2 ಕಂಪನಿಯಲ್ಲಿ ಹಿತಾಸಕ್ತಿ ಹೊಂದಿರುವ ಹಾಗೂ ತನ್ನ ಚಟುವಟಿಕೆಗಳಿಂದ ನೇರವಾಗಿ ಪ್ರಭಾವಿತವಾಗುವವರಿಗೆ ನಿಗಮವು ಸಿಎಸ್‌ಆರ್ ಚಟುವಟಿಕೆಗಳಲ್ಲಿ ಆದ್ಯತೆಯನ್ನು ನೀಡುತ್ತದೆ. ಹೀಗೆ ಹಿತಾಸಕ್ತಿ ಹೊಂದಿರುವವರು ನಿಗಮದ ಯೋಜನೆಗಳ ಅಂಚಿನಲ್ಲೇ ವಾಸ್ತವ್ಯ ಹೊಂದಿರುವ ಕಾರಣಕ್ಕೆ ಎನ್‌ಎನ್‌ಎಲ್ ಕಾರ್ಯಾಚರಣೆ ನಡೆದಿರುವ ಸ್ಥಳೀಯ ಪ್ರದೇಶ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಸಿಎಸ್‌ಆರ್ ಚಟುವಟಿಕೆಗಳಿಗೆ ಆದ್ಯತೆ ನೀಡುತ್ತದೆ.

2.3 ಕಾಯ್ದೆ 2013ರ ಅಡಿ ಸಿಎಸ್‌ಆರ್ ಚಟುವಟಿಕೆಗಳೆಂದು ಅರ್ಹತೆಯನ್ನು ಪಡೆದಲ್ಲಿ, ಅಂತಹ ಸಿಎಸ್‌ಆರ್ ಚಟುವಟಿಕೆಗಳನ್ನು ಆಯ್ಕೆ ಮಾಡುವಾಗ ಕಂಪನಿಯು ತನ್ನಲ್ಲಿ ಹಿತಾಸಕ್ತಿ ಹೊಂದಿರುವವರಿಗೆ ಪ್ರತಿಯಾಗಿ ತನ್ನ ಬದ್ಧತೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ.

2.4 ಕೆಎನ್‌ಎನ್‌ಎಲ್ ಯೋಜನೆಗಳು ಅನುಷ್ಠಾನ ಗೊಳ್ಳುತ್ತಿರುವ ಉತ್ತರ ಕನಾಟಕದ ಜಿಲ್ಲೆಗಳಲ್ಲಿ ಸಿಎಸ್‌ಆರ್ ಚಟುವಟಿಕೆಗಳಿಗೆ ಆದ್ಯತೆಯನ್ನು ನೀಡಲಾಗುತ್ತದೆ.

2.5 ಸಿಎಸ್‌ಆರ್ ಚಟುವಟಿಕೆಗಳನ್ನು ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಾಗಿ ಜರುಗಿಸಲಾಗುತ್ತದೆ.

2.6 ಆದರೆ, ಕೆಳಗಿನ ಚಟುವಟಿಕೆಗಳನ್ನು ಸಿಎಸ್‌ಆರ್ ಚಟುವಟಿಕೆಗಳೆಂದು ಪರಿಗಣಿಸಲಾಗುವುದಿಲ್ಲ:

(i) ನಿಗಮದ ಸಾಮಾನ್ಯ ವ್ಯಾಪಾರ ನಡೆಯಲ್ಲಿ ಕೈಗೊಳ್ಳಲಾಗುವ ಚಟುವಟಿಕೆಗಳು.

(ii) ನಿಗಮದ ನೌಕರರಿಗೆ ಮಾತ್ರ ಲಾಭವನ್ನು ತಂದು ಕೊಡುವ ಚಟುವಟಿಕೆಗಳು.

(iii) ಆರ್&ಆರ್ ಅಡಿ ಕೈಗೊಳ್ಳುವ ಚಟುವಟಿಕೆಗಳು.

(iv) ಯಾವುದೇ ರಾಜಕೀಯ ಪಕ್ಷಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ನೀಡಲಾಗುವ ಯಾವುದೇ ಮೊತ್ತದ ಕೊಡುಗೆ.

(v) ಮಂಡಳಿ ತಾತ್ಪೂರ್ತಿಕ ಮತ್ತು ಲೋಕೋಪಕಾರದ ಸ್ವರೂಪದ್ದೆಂದು ಪರಿಗಣಿಸುವ ಚಟುವಟಿಕೆಗಳು.

(vi) ಮಂಡಳಿ ಅಥವಾ ಸಿಎಸ್‌ಆರ್ ಸಮಿತಿಯ ಅನುಮೋದನೆ ಪಡೆಯದ ಯಾವುದೇ ಚಟುವಟಿಕೆ.

3.0 ಆಡಳಿತಾತ್ಮಕ ರಚನೆ:

3.1 ನಿರ್ದೇಶಕ ಮಂಡಳಿಯ ಪಾತ್ರ:

(i) ಮೂರು ಅಥವಾ ಅದಕ್ಕಿಂತ ಹೆಚ್ಚಿನ ನಿರ್ದೇಶಕರುಗಳನ್ನುಳ್ಳ ಹಾಗೂ ಈ ಪೈಕಿ ಕನಿಷ್ಠ ಒಬ್ಬ ಸ್ವತಂತ್ರ ನಿರ್ದೇಶಕರನ್ನುಳ್ಳ ಒಂದು ಸಿಎಸ್‌ಆರ್ ಸಮಿತಿಯನ್ನು ಮಂಡಳಿ ರಚಿಸುತ್ತದೆ.

(ii) ನಿಗಮದ ಸಿಎಸ್‌ಆರ್ ಕಾರ್ಯನೀತಿಯನ್ನು ಅನುಮೋದಿಸುವುದು.

(iii) ನಿರ್ದೇಶಕ ಮಂಡಳಿಯ ವರದಿಯಲ್ಲಿ ನಿಗಮದ ಸಿಎಸ್‌ಆರ್ ಕಾರ್ಯನೀತಿಯ ಅಂಶಗಳನ್ನು ಪ್ರಕಟಿಸುವುದು.

(iv) ನಿಗಮದ ವೆಬ್‌ಸೈಟಿನಲ್ಲಿ ನಿಗಮದ ಸಿಎಸ್‌ಆರ್ ಕಾರ್ಯನೀತಿಯ ಅಂಶಗಳು ಪ್ರಕಟಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವದು.

(v) ಸಿಎಸ್‌ಆರ್ ಕಾರ್ಯನೀತಿ ಅನುಷ್ಠಾನಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು.

(vi) ಸಿಎಸ್‌ಆರ್ ಚಟುವಟಿಕೆಗಳ ಅನುಷ್ಠಾನದ ಪ್ರಗತಿಯ ಪಾರದರ್ಶಕ ಮೇಲ್ವಿಚಾರಣೆಗಾಗಿ ಸಿಎಸ್‌ಆರ್ ಸಮಿತಿ ಪ್ರಸ್ತಾಪಿಸುವ ಕಾರ್ಯ ವಿಧಾನವನ್ನು ಅನುಮೋದಿಸುವುದು.

(vii) ಸಿಎಸ್‌ಆರ್ ಕಾರ್ಯನೀತಿಯ ಮೇಲೆ ಹಿಂದಿನ ತಕ್ಷಣದ ಮೂರು ಹಣಕಾಸು ವರ್ಷಗಳಲ್ಲಿ ಕಂಪನಿಯು ಸಾಧಿಸಿರುವ ಸರಾಸರಿ ನಿವ್ವಳ ಲಾಭದ ಕನಿಷ್ಠ ಎರಡು ಪ್ರತಿಶತದಷ್ಟು ಮೊತ್ತವನ್ನು ನಿಗಮವು ವ್ಯಯಿಸುವುದನ್ನು ಖಚಿತಪಡಿಸಿಕೊಳ್ಳುವುದು [ಸರಾಸರಿ ನಿವ್ವಳ ಲಾಭವನ್ನು ಕಾಯ್ದೆ 2013ರ ಪರಿಚ್ಛೇದ 198ರಲ್ಲಿ ಹೇಳಲಾಗಿರುವಂತೆ ಲೆಕ್ಕಹಾಕಬೇಕಾಗುತ್ತದೆ].

(viii) ನಿರ್ದೇಶಕ ಮಂಡಳಿಯ ವರದಿಯಲ್ಲಿ ಸಿಎಸ್‌ಆರ್ ರಚನೆಯನ್ನು ಪ್ರಕಟಿಸುವುದು.

(ix) ನಿರ್ದೇಶಕ ಮಂಡಳಿಯ ವರದಿಯಲ್ಲಿ ಸಿಎಸ್‌ಆರ್ ಕಾರ್ಯನೀತಿಯ ಹಾಗೂ ವರ್ಷದಲ್ಲಿನ ಅದರ ಅನುಷ್ಠಾನದ ಬಗ್ಗೆ ವಿವರವಾಗಿ ತಿಳಿಸುವುದು.

(x) ನಿಗಮವು ನಿವ್ವಳ ಲಾಭಗಳಿಂದ ಸಿಎಸ್‌ಆರ್ ಚಟುವಟಿಕೆಗಳಿಗಾಗಿ ನಿಗದಿತ ಮೊತ್ತವನ್ನು ವ್ಯಯಿಸಲು ವಿಫಲವಾದಾಗ ಮಂಡಳಿಯು ಆ ಮೊತ್ತವನ್ನು ನಿಗದಿತ ಉದ್ದೇಶಕ್ಕಾಗಿ ಬಳಸಲು ವಿಫಲವಾದದ್ದಕ್ಕೆ ಮೇಲೆ ಹೇಳಿದ ನಿರ್ದೇಶಕ ಮಂಡಳಿಯ ವರದಿಯಲ್ಲಿ ಕಾರಣಗಳನ್ನು ತಿಳಿಸಬೇಕು.

(xi) ಮಂಡಳಿಯು ತನಗೆ ಅಗತ್ಯವಾಗಿ ಕಂಡರೆ, ಸಿಎಸ್‌ಆರ್ ಕಾರ್ಯನೀತಿಯ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಸಿಎಸ್‌ಆರ್ ಸಮಿತಿಗೆ ಅಧಿಕಾರವನ್ನು ನೀಡಬಹುದಾಗಿದೆ.

3.2 ಸಿಎಸ್‌ಆರ್ ಸಮಿತಿಯ ಪಾತ್ರ:

(i) ಸಿಎಸ್‌ಆರ್ ಕಾರ್ಯನೀತಿಯೊಂದನ್ನು ರೂಪಿಸಿ ಅದನ್ನು ಮಂಡಳಿಗೆ ಶಿಫಾರಸ್ಸು ಮಾಡುವುದು.

(ii) ಅನುಸೂಚಿ–7ರಲ್ಲಿ ನಿರ್ದಿಷ್ಟಗೊಳಿಸಿರುವಂತೆ ನಿಗಮವು ಕೈಗೊಳ್ಳಬೇಕಿರುವ ಚಟುವಟಿಕೆಗಳನ್ನು ಸೂಚಿಸುವುದು.

(iii) ಸಿಎಸ್‌ಆರ್ ಯೋಜನೆ/ಕಾರ್ಯಕ್ರಮ/ಚಟುವಟಿಕೆಗಳಿಗಾಗಿ ಅಗತ್ಯವಾದ ಅಂದಾಜನ್ನು ಸಮೀಕ್ಷೆಯ/ನಿಗಮದ ಪರಿಣಿತರಿಂದ ಅಥವಾ ಬಾಹ್ಯ ತಜ್ಞರ ಮೂಲಕ ಸಿಎಸ್‌ಆರ್ ಸಮಿತಿಯು ನಡೆಸಬಹುದು. ಅಲ್ಲದೆ, ಸಿಎಸ್‌ಆರ್ ಅಡಿ ಚಟುವಟಿಕೆಗಳು /ಯೋಜನೆಗಳನ್ನು ಕೈಗೊಳ್ಳಲು ರಾಜ್ಯ / ಜಿಲ್ಲಾ ಆಡಳಿತ / ಪಂಚಾಯತ್ ರಾಜ್ ಸಂಸ್ಥೆಗಳು, ಕರ್ನಾಟಕ ಸರ್ಕಾರದ ಜಲ ಸಂಪನ್ಮೂಲ ಇಲಾಖೆ ಮತ್ತು ಹಿತಾಸಕ್ತಿಯುಳ್ಳ ಇತರ ಸಂಸ್ಥೆ / ವ್ಯಕ್ತಿಗಳ ಶಿಫಾರಸ್ಸುಗಳನ್ನು ಪರಿಗಣಿಸಬಹುದು. ಸಮುದಾಯದ ಅಗತ್ಯವನ್ನು ಗುರುತಿಸಿದ ನಂತರ ಸಮುದಾಯ ಅಭಿವೃದ್ಧಿ ಚಟುವಟಿಕೆ, ಅನುಷ್ಠಾನದ ಕಾಲಚೌಕಟ್ಟು, ಕ್ರಿಯಾ ಯೋಜನೆ, ಆಯವ್ಯಯ ಅಗತ್ಯ ಮುಂತಾದವುಗಳನ್ನು ಸೂಚಿಸುವ ಯೋಜನೆಯೊಂದನ್ನು ಸಿದ್ಧಪಡಿಸಲಾಗುವುದು. ದೀರ್ಘಾವಧಿ ಯೋಜನೆಗಳನ್ನು ಮಧ್ಯಮ ಮತ್ತು ಅಲ್ಪಾವಧಿ ಯೋಜನೆಗಳಾಗಿ, ವಾರ್ಷಿಕ ಯೋಜನೆಗಳಾಗಿ ಒಡೆಯಲಾಗುವುದು.

(iv) ನಿಗಮದ ನಿವ್ವಳ ಲಾಭವನ್ನು ಆಧರಿಸಿ ಕಾಯ್ದೆಯ ಉಪಬಂಧಗಳ ಅನುಸಾರ ಸಿಎಸ್‌ಆರ್ ಮೇಲೆ ವ್ಯಯಿಸಬೇಕಿರುವ ವೆಚ್ಚವನ್ನು ಶಿಫಾರಸ್ಸು ಮಾಡುವುದು.

(v) ಅನುಮೋದಿತ ಸಿಎಸ್‌ಆರ್ ಕಾರ್ಯನೀತಿಗೆ ಅನುಸಾರವಾಗಿ ನಿಗಮವು ಕೈಗೊಳ್ಳಬೇಕಿರುವ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಅನುಮೋದಿಸುವುದು.

4.0 ಸಿಎಸ್‌ಆರ್ ಚಟುವಟಿಕೆಗಳ ಜಾರಿಗೆ ಕಾರ್ಯ ವಿಧಾನ:

4.1 ಸಿಎಸ್‌ಆರ್ ಚಟುವಟಿಕೆಗಳನ್ನು ಯೋಜನಾ ವಿಧಾನದಲ್ಲಿಯೇ ಅನುಷ್ಠಾನಗೊಳಿಸಲು ಆದ್ಯತೆಯನ್ನು ನೀಡಲಾಗುವುದು. ವಿವಿಧ ಚಟುವಟಿಕೆಗಳ ಅನುಷ್ಠಾನವನ್ನು ಸಾಮಾನ್ಯವಾಗಿ ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಕಾಯ್ದೆ, 1999 ಮತ್ತು ಅದರಡಿಯ ನಿಯಮಗಳ ಅನುಸಾರ ಪಾರದರ್ಶಕ ಪ್ರಕ್ರಿಯೆಯ ಪ್ರಕಾರ ನಡೆಸಲಾಗುವುದು.

4.2 ಸಿಎಸ್‌ಆರ್ ಚಟುವಟಿಕೆಗಳು ಅಥವಾ ಯೋಜನೆಗಳು ಅಥವಾ ಕಾರ್ಯಕ್ರಮಗಳನ್ನು ಕೈಗೊಳ್ಳುವಲ್ಲಿ ನಿಗಮವು ಇತರೆ ನಿಗಮಗಳು/ ಕಂಪನಿಗಳು/ ಕರ್ನಾಟಕದ ಸಾರ್ವಜನಿಕ ವಲಯ ಉದ್ಯಮಗಳ ಸಹಯೋಗದಲ್ಲಿ ಕಾರ್ಯನಿರ್ವಹಿಸಬಹುದು. [ಆದರೆ, ಕಂಪನಿಗಳ (ಸಿಎಸ್‌ಆರ್) ನಿಯಮಗಳ ಅನುಸಾರ ಅನುಕ್ರಮವಾದ ಸಾರ್ವಜನಿಕ ವಲಯ ಉದ್ಯಮಗಳ/ ಕಂಪೆನಿಗಳ ಸಿಎಸ್‌ಆರ್ ಸಮಿತಿಗಳು ಇಂತಹ ಯೋಜನೆಗಳ ಅಥವಾ ಕಾರ್ಯಕ್ರಮಗಳ ಮೇಲೆ ಪ್ರತ್ಯೇಕವಾಗಿ ವರದಿ ಮಾಡುವ ಸ್ಥಿತಿಯಲ್ಲಿರಬೇಕು].

4.3 ಕಾರ್ಯನೀತಿಯ ವಿಷಯವಾಗಿ ಎಂಬಂತೆ ಲಾಭಗಳನ್ನು ಪಡೆದುಕೊಳ್ಳಲು ಗುರುತಿಸಲಾದ ಸಮುದಾಯಗಳೊಂದಿಗೆ ಸಿಎಸ್‌ಆರ್ ಚಟುವಟಿಕೆಗಳ ಗುರುತಿಸುವಿಕೆ, ಯೋಜನೆ ಮತ್ತು ಅನುಷ್ಠಾನದ ಪ್ರಕ್ರಿಯೆಯ ಸಂದರ್ಭಗಳಲ್ಲಿ ಸಮಾಲೋಚಿಸಿ ಅವುಗಳನ್ನು ತೊಡಗಿಸಿಕೊಳ್ಳಬೇಕು. ಸಾಧ್ಯವಿರುವೆಡೆಗಳಲ್ಲಿ ಸ್ಥಳೀಯ ಪ್ರಾಧಿಕಾರಗಳು ಮತ್ತು ವಿಶೇಷ ಅಭಿಕರಣಗಳೊಂದಿಗೆ ಇದೇ ರೀತಿ ಸಮಾಲೋಚಿಸಿ ಅವುಗಳನ್ನು ತೊಡಗಿಸಿಕೊಳ್ಳಬೇಕು.

5.0 ಸಿಎಸ್‌ಆರ್ ಚಟುವಟಿಕೆಗಳ ಮೇಲ್ವಿಚಾರಣೆ:

5.1 ನಿಗಮದ ಸಿಎಸ್‌ಆರ್ ಚಟುವಟಿಕೆಗಳ ಪಾರದರ್ಶಕ ಮೇಲ್ವಿಚಾರಣಾ ವ್ಯವಸ್ಥೆಯನ್ನು ಸ್ಥಾಪಿಸುವ ಜವಾಬ್ದಾರಿ ಸಿಎಸ್‌ಆರ್ ಸಮಿತಿಯದ್ದಾಗಿದೆ.

5.2 ಸಿಎಸ್‌ಆರ್ ಕಾರ್ಯನೀತಿ ಹಾಗೂ ಅದರ ಚಟುವಟಿಕೆಗಳ ಅನುಷ್ಠಾನದಪ್ರಗತಿಯ ಬಗ್ಗೆ ಮಂಡಳಿಗೆ ಮಾಹಿತಿ ಒದಗುತ್ತಿರಬೇಕು.

6.0 ವರದಿ ಮಾಡುವುದು:

6.1 ಮಂಡಳಿಯ ಪಾತ್ರ:

(i) ಏಪ್ರಿಲ್ ತಿಂಗಳ 1ನೇ ದಿನಾಂಕದಿಂದ ಪ್ರಾರಂಭವಾಗುವ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಸಿಎಸ್‌ಆರ್ ಚಟುವಟಿಕೆಗಳ ಮೇಲಿನ ಮಂಡಳಿಯ ವರದಿಯು ಕಂಪನಿ (ಸಿಎಸ್‌ಆರ್) ನಿಯಮಗಳಲ್ಲಿ ನಿಗದಿ ಮಾಡಿರುವ ವಿವರಗಳನ್ನು ಒಳಗೊಂಡಿರುವ ಸಿಎಸ್‌ಆರ್ ಚಟುವಟಿಕೆಗಳ ವಾರ್ಷಿಕ ವರದಿಯನ್ನು ಒಳಗೊಳ್ಳಬೇಕು.

(ii) ಮಂಡಳಿಯು ತನ್ನ ವರದಿಯಲ್ಲಿ ಸಿಎಸ್‌ಆರ್ ಕಾರ್ಯನೀತಿಯ ಅಂಶಗಳನ್ನು ಪ್ರಕಟಿಸಬೇಕು ಹಾಗೂ ನಿಯಮಗಳ ಅನುಬಂಧದಲ್ಲಿ ನಿಗದಿಪಡಿಸಿರುವಂತೆ ನಿಗಮದ ವೆಬ್‌ಸೈಟಿನಲ್ಲಿಯೂ ಅದನ್ನು ಪ್ರಕಟಿಸಬೇಕು.

(iii) ನಿಗಮವು ನಿವ್ವಳ ಲಾಭಗಳಿಂದ ಸಿಎಸ್‌ಆರ್ ಚಟುವಟಿಕೆಗಳಿಗಾಗಿ ನಿಗಧಿತ ಮೊತ್ತವನ್ನು ವ್ಯಯಿಸಲು ವಿಫಲವಾದಾಗ ಮಂಡಳಿಯು ಆ ಮೊತ್ತವನ್ನು ನಿಗಧಿತ ಉದ್ದೇಶಕ್ಕಾಗಿ ಬಳಸಲು ವಿಫಲವಾದದ್ದಕ್ಕೆ ಮೇಲೆ ಹೇಳಿದ ನಿರ್ದೇಶಕ ಮಂಡಳಿಯ ವರದಿಯಲ್ಲಿ ಕಾರಣಗಳನ್ನು ತಿಳಿಸಬೇಕು.

6.2 ಸಿಎಸ್‌ಆರ್ ಸಮಿತಿಯ ಪಾತ್ರ:

(i) ಸಿಎಸ್‌ಆರ್ ಸಮಿತಿಯು ಮಂಡಳಿಯ ನಿರ್ದೇಶನದಂತೆ ಸಿಎಸ್‌ಆರ್ ಕಾರ್ಯನೀತಿಯ ಅನುಷ್ಠಾನದ ಬಗ್ಗೆ ನಿರ್ದೇಶಕರ ಮಂಡಳಿಗೆ ವರದಿಗಳನ್ನು ಸಲ್ಲಿಸಬೇಕು.

7.0 ಸಿಎಸ್‌ಆರ್ ಚಟುವಟಿಕೆಗಳಿ ನಿಧಿಗಳು:

7.1 ಸಿಎಸ್‌ಆರ್ ಕಾರ್ಯನೀತಿಯ ಮೇಲೆ ಹಿಂದಿನ ತಕ್ಷಣದ ಮೂರು ಹಣಕಾಸು ವರ್ಷಗಳಲ್ಲಿ ಕಂಪನಿಯು ಸಾಧಿಸಿರುವ ಸರಾಸರಿ ನಿವ್ವಳ ಲಾಭದ ಕನಿಷ್ಠ ಎರಡು ಪ್ರತಿಶತದಷ್ಟು ಮೊತ್ತವನ್ನು ನಿಗಮವು ವ್ಯಯಿಸುವುದನ್ನು ಖಚಿತಪಡಿಸಿಕೊಳ್ಳುವುದು. [ಸರಾಸರಿ ನಿವ್ವಳ ಲಾಭವನ್ನು ಕಾಯ್ದೆ 2013ರ ಪರಿಚ್ಛೇದ 198ರಲ್ಲಿ ಹೇಳಲಾಗಿರುವಂತೆ ಲೆಕ್ಕ ಹಾಕಬೇಕಾಗುತ್ತದೆ.]

7.2 ಕನಿಷ್ಠ ಮೂರು ಹಣಕಾಸು ವರ್ಷಗಳ ಸ್ಥಾಪಿತ ಪೂರ್ವಸಾಧನೆಗಳುಳ್ಳ ಸಂಸ್ಥೆಗಳ ಮೂಲಕ ನಿಗಮದ ಸಿಬ್ಬಂದಿಯ ಹಾಗೂ ಅನುಷ್ಠಾನಗೊಳಿಸುವ ಅಭಿಕರಣಗಳ ಸಿಎಸ್‌ಆರ್ ಸಾಮರ್ಥ್ಯದ ಅಭಿವೃದ್ಧಿಯ ಮೇಲಿನ ವೆಚ್ಚವನ್ನು ಯುಕ್ತವಾದ ಸಿಎಸ್‌ಆರ್ ವೆಚ್ಚವೆಂದು ಪರಿಗಣಿಸಲಾಗುತ್ತದೆ. ಆದರೆ, ಇಂತಹ ವೆಚ್ಚ ಯಾವುದೇ ಒಂದು ಹಣಕಾಸು ವರ್ಷದಲ್ಲಿನ ಒಟ್ಟು ಸಿಎಸ್‌ಆರ್ ವೆಚ್ಚದ ಐದು ಪ್ರತಿಶತಕ್ಕಿಂತ ಹೆಚ್ಚಿರಬಾರದು.

7.3 ಸಿಎಸ್‌ಆರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಪ್ರಾಪ್ತವಾಗುವ ಹೆಚ್ಚಿನ ನಿಧಿಗಳನ್ನು ನಿಗಮದ ವ್ಯಾಪಾರದ ಭಾಗವಾಗಿಸುವಂತಿಲ್ಲ. ಇಂತಹ ನಿಧಿಗಳನ್ನು ಸಿಎಸ್‌ಆರ್ ಚಟುವಟಿಕೆಗಳಿಗೆ ಬಳಸುವಂತೆ ಮಂಡಳಿಯ ಅನುಮೋದನೆಗೆ ಸಿಎಸ್‌ಆರ್ ಸಮಿತಿಯು ಶಿಫಾರಸ್ಸು ಮಾಡಬಹುದಾಗಿದೆ.

7.4 ಯೋಜನೆಗಳ ಅಗತ್ಯದ ಅಂದಾಜು/ ಮೂಲಚೌಕಟ್ಟಿನ ಅಧ್ಯಯನ, ಯೋಜಿಸುವಿಕೆ, ಅನುಷ್ಠಾನ, ಮೇಲ್ವಿಚಾರಣೆ ಮತ್ತು ಪರಿಣಾಮದ ಅಂದಾಜಿನ ಪ್ರಕ್ರಿಯೆಯಲ್ಲಿ ವ್ಯಯವಾಗುವ ಎಲ್ಲ ವೆಚ್ಚಗಳೂ ಸಿಎಸ್‌ಆರ್ ವೆಚ್ಚದ ಭಾಗವಾಗುತ್ತದೆ. ಆದರೆ, ಇಂತಹ ವೆಚ್ಚಗಳನ್ನು ಅಗತ್ಯಕ್ಕೆ ತಕ್ಕಂತೆ ಅತ್ಯಂತ ಕನಿಷ್ಠಗೊಳಿಸಲು ಪ್ರಾಮಾಣಿಕ ಪ್ರಯತ್ನಗಳನ್ನು ತೊಡಗಿಸಬೇಕು.

7.5 ಸಿಎಸ್‌ಆರ್ ವೆಚ್ಚವು ಸಿಎಸ್‌ಆರ್ ಸಮಿತಿಯ ಶಿಫಾರಸ್ಸಿನ ಮೇಲೆ ಮಂಡಳಿಯು ಅನುಮೋದಿಸಿದ ಸಿಎಸ್‌ಆರ್ ಚಟುವಟಿಕೆಗಳಿಗೆ ಸಂಬಂಧಿಸಿದ ಯೋಜನೆಗಳು ಅಥವಾ ಕಾರ್ಯಕ್ರಮಗಳಿಗಾಗಿನ ಮೂಲಧನಕ್ಕೆ ನೀಡಲಾಗುವ ಕೊಡುಗೆಯೂ ಸೇರಿ ಎಲ್ಲಾ ವೆಚ್ಚವನ್ನು ಒಳಗೊಳ್ಳುತ್ತದೆ. ಆದರೆ ಕಾಯ್ದೆಯ ಅನುಸೂಚಿ–7ರ ಪರಿಧಿಗೆ ಬಾರದ ಅಥವಾ ಅದರ ಅನುಸಾರ ಇಲ್ಲದಿರುವಂತಹ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ವೆಚ್ಚವೂ ಸಿಎಸ್‌ಆರ್ ವೆಚ್ಚದಲ್ಲಿ ಸೇರುವುದಿಲ್ಲ.

8.0 ಸಾಮಾನ್ಯ:

8.1 ಈ ಕಾರ್ಯನೀತಿಯು ಕಾಲದಿಂದ ಕಾಲಕ್ಕೆ ತಿದ್ದುಪಡಿಯಾಗುವ ಕಂಪನಿ ಕಾಯ್ದೆ/ ಕಂಪನಿಗಳ (ಸಿಎಸ್‌ಆರ್) ನಿಯಮಗಳ ಉಪಬಂಧಗಳು ಹಾಗೂ ಸರ್ಕಾರದ ಮಾರ್ಗಸೂಚಿಗಳ ಅನುಸಾರ, ಅವು ರೂಪುಗೊಂಡು ಜಾರಿಗೆ ಬಂದಂತೆಲ್ಲ, ಮಾರ್ಪಾಡುಗಳಿಗೆ ಬದ್ಧವಾಗಿರುತ್ತವೆ.

8.2 ಈ ಕಾರ್ಯನೀತಿಯು ಸಿಎಸ್‌ಆರ್ ಚಟುವಟಿಕೆಗಳ ಯೋಜನೆ ಮತ್ತು ಆಯ್ಕೆಗೆ ಒಂದು ಉಲ್ಲೇಖನೀಯ ದಸ್ತಾವೇಜಾಗಿ ಅಸ್ತಿತ್ವದಲ್ಲಿರುತ್ತದೆ. ಸಂದೇಹಗಳು ಉದ್ಭವಿಸಿದ ಪಕ್ಷದಲ್ಲಿ, ಕಾಯ್ದೆ ಮತ್ತು ಅದರಡಿಯ ನಿಯಮಗಳೊಂದಿಗೆ ಹೊಂದದಿರುವ ಸಂದರ್ಭಗಳಲ್ಲಿ ಕಂಪನಿ ಕಾಯ್ದೆ ಮತ್ತು ಕಂಪನಿಗಳ (ಸಿಎಸ್‌ಆರ್) ನಿಯಮಗಳನ್ನು ಪರಾಮರ್ಶಿಸಲು ಸಲಹೆ ಮಾಡಲಾಗಿದೆ.

8.3 ಸಿಎಸ್‌ಆರ್ ಕಾರ್ಯನೀತಿಯ ಮಾರ್ಪಾಡು/ ತಿದ್ದುಪಡಿಯ ಅಧಿಕಾರವನ್ನು ನಿರ್ದೇಶಕ ಮಂಡಳಿ ಹೊಂದಿರುತ್ತದೆ.

8.4 ಮಂಡಳಿಯು ಕಾಲದಿಂದ ಕಾಲಕ್ಕೆ ಅನುಮೋದಿಸಿದಂತೆ ಮತ್ತು ತಿದ್ದುಪಡಿ ಮಾಡಿದಂತೆ, ಸಿಎಸ್‌ಆರ್ ಕಾರ್ಯನೀತಿ 2014ರ ಅನುಸಾರ ನಿಯಮಗಳ ರೂಪಿಸುವಿಕೆ ಹಾಗೂ ಕೆಎನ್‌ಎನ್‌ಎಲ್‌ನಲ್ಲಿ 2015ರ ಸಿಎಸ್‌ಆರ್ ಕಾರ್ಯನೀತಿಯ ಒಟ್ಟಾರೆ ಅನುಷ್ಠಾನ ವ್ಯವಸ್ಥಾಪಕ ನಿರ್ದೇಶಕರ ಜವಾಬ್ದಾರಿಯಾಗಿರುತ್ತದೆ.

2017-18ನೇ ಸಾಲಿನ ನಿರ್ದೇಶಕರ ವರದಿಗೆ ಅನುಬಂಧ- 6
ಸ್ವತಂತ್ರತೆಯ ಘೋಷಣೆ

(ಕಂಪನಿ ಕಾಯ್ದೆ 2013, ಪರಿಚ್ಛೇದ 149ರ ಉಪ ಪರಿಚ್ಛೇದ(7)ರ ಅನುಸಾರ)

ದಿನಾಂಕ:.....

ಗೆ,
ಮಂಡಳಿಯ ನಿರ್ದೇಶಕರುಗಳು
ಕರ್ನಾಟಕ ನೀರಾವರಿ ನಿಗಮ ನಿಯಮಿತ,
4ನೇ ಮಹಡಿ, ಕಾಫೀ ಬೋರ್ಡ್ ಕಟಡ,
#.1, ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560 001.

ಮಾನ್ಯರುಗಳೆ,

ಶ್ರೀ ..... ಆದ ನಾನು ಕಂಪನಿ ಕಾಯ್ದೆ 2013ರ ಪರಿಚ್ಛೇದ 149 ಉಪ ಪರಿಚ್ಛೇದ 7ರ ಅನುಸಾರ ಪರಿಚ್ಛೇದ 149ರ ಉಪ ಪರಿಚ್ಛೇದ (6)ರ ಪ್ರಕಾರ ಸ್ವತಂತ್ರ್ಯದ ಮಾನದಂಡಗಳನ್ನು ಪೂರೈಸುತ್ತಿದ್ದೇನೆ ಎಂದು ಈ ಮೂಲಕ ಘೋಷಿಸುತ್ತೇನೆ.

ಅ) ನಾನು ಇಂದಿಗೂ / ಹಿಂದೆಯೂ ಕಂಪನಿಯ ಅಥವಾ ಅದರ ಹಿಡುವಳಿ, ಅಂಗಸಂಸ್ಥೆ ಅಥವಾ ಸಹಾಯಕ ಕಂಪನಿಯ ಪ್ರವರ್ತಕನಾಗಿಲ್ಲ.

ಆ) ನಾನು ಇಂದಿಗೂ / ಹಿಂದೆಯೂ ಕಂಪನಿಯ ಅಥವಾ ಅದರ ಹಿಡುವಳಿ, ಅಂಗಸಂಸ್ಥೆ ಅಥವಾ ಸಹಾಯಕ ಕಂಪನಿಯ ಪ್ರವರ್ತಕರಿಗೆ ಅಥವಾ ನಿರ್ದೇಶಕರಿಗೆ ಸಂಬಂಧಿಕನಲ್ಲ.

ಇ) ಪ್ರಸ್ತುತ ವರ್ಷದಲ್ಲಾಗಲಿ ಅಥವಾ ಹಿಂದಿನ ಎರಡು ಆರ್ಥಿಕ ವರ್ಷಗಳಲ್ಲಾಗಲೀ ಯಾವುದೇ ಕಂಪನಿಯ ಅಥವಾ ಅದರ ಹಿಡುವಳಿ, ಅಂಗಸಂಸ್ಥೆ ಅಥವಾ ಸಹಾಯಕ ಕಂಪನಿಯ ಪ್ರವರ್ತಕರ ಅಥವಾ ನಿರ್ದೇಶಕರ ಜೊತೆ ಹಣದುಬ್ಬರದ ಸಂಬಂಧವನ್ನು ಹೊಂದಿರುವುದಿಲ್ಲ.

ಈ) ನನ್ನ ಮನೆಯ ಸದಸ್ಯರು ಮತ್ತು ನನ್ನ ಯಾವ ಸಂಬಂಧಿಕರು ಯಾವುದೇ ಕಂಪನಿಯ ಅಥವಾ ಅದರ ಹಿಡುವಳಿ, ಅಂಗಸಂಸ್ಥೆ ಅಥವಾ ಸಹಾಯಕ ಕಂಪನಿಯ ಪ್ರವರ್ತಕರ ಅಥವಾ ನಿರ್ದೇಶಕರ ಜೊತೆ ಹಣದುಬ್ಬರದ ಅಥವಾ ಪ್ರಸ್ತುತ ವರ್ಷ ಅಥವಾ ಹಿಂದಿನ ಎರಡು ಆರ್ಥಿಕ ವರ್ಷಗಳಲಾಗಲ್ಲಿ ಕಂಪನಿಯ 2% ಅಥವಾ ಅದಕ್ಕಿಂತ ಹೆಚ್ಚಿನ ಒಟ್ಟಾರೆ ವಹಿವಾಟ್ಟಿನಲ್ಲಿ, ಅಥವಾ ಒಟ್ಟಾರೆ ಆದಾಯದಲ್ಲಿ, ಅಥವಾ 50 ಲಕ್ಷಗಳ, ಇವುಗಳಲ್ಲಿ ಯಾವುದೇ ಕಡಿಮೆ ಇರುವ ವಹಿವಾಟ್ಟಿನಲೂ ಸಂಬಂದವಿರುವುದಿಲ್ಲ.

ಉ) ನಾನು, ಸ್ವತಃ ನಾನಾಗಲಿ ಅಥವಾ ನನ್ನ ಸಂಬಂಧಿಕರಾಗಲಿ-

(i) ಪ್ರಸ್ತುತ 2018-19ಕ್ಕೆ ಹಿಂದಿನ 3 ವರ್ಷಗಳಲ್ಲಿ ನಾನು ಯಾವುದೇ ಕಂಪನಿ ಅಥವಾ ಅದರ ಹಿಡುವಳಿ, ಅಂಗಸಂಸ್ಥೆ ಅಥವಾ ಸಹಾಯಕ ಕಂಪನಿಯಲ್ಲಿ ಪ್ರದಾನ ವ್ಯವಸ್ಥಾಪನಾ ಸಿಬ್ಬಂದಿಯ ಹುದ್ದೆಯನ್ನು ಹೊಂದಿರುವುದಿಲ್ಲ ಅಥವಾ ಕಾರ್ಯನಿರ್ವಹಿಸಿರುವುದಿಲ್ಲ ಅಥವಾ ಕಾರ್ಯನಿರ್ವಹಿಸುತ್ತಿರುವುದಿಲ್ಲ, ಅಂದರೆ:-

(ii) ಪ್ರಸ್ತುತ 2018-19ಕ್ಕೆ ಹಿಂದಿನ 3 ವರ್ಷಗಳಲ್ಲಿ ಮತ್ತು ಪ್ರಸ್ತುತ ವರ್ಷದಲಾಗಲ್ಲಿ, ನಾನು ಯಾವುದೇ ಕಂಪನಿಯ ಉದ್ಯೋಗಿಯಗಗಲ್ಲಿ, ಮಾಲೀಕನಾಗಿಯಾಗಲ್ಲಿ ಅಥವಾ ಪಾಲುದಾರನಾಗಿಯಾಗಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಅಥವಾ ಕಾರ್ಯನಿರ್ವಹಿಸಿರುವುದಿಲ್ಲ.

ಅ) ಕಂಪನಿಯ ಅಥವಾ ಅದರ ಹಿಡುವಳಿ, ಅಂಗಸಂಸ್ಥೆ ಅಥವಾ ಸಹಾಯಕ ಕಂಪನಿಯ ಲೆಕ್ಕಪರಿಶೋಧಕರು ಅಥವಾ ಕಾರ್ಯನಿರತ ಕಂಪನಿ ಕಾರ್ಯದರ್ಶಿಗಳು ಅಥವಾ ಕಂಪನಿಯ ಕಾಸ್ಟ್ ಲೆಕ್ಕಪರಿಶೋಧಕರಾಗಿರುವುದಿಲ್ಲ ಅಥವಾ

ಆ) ಕಂಪನಿಯ ಅಥವಾ ಅದರ ಹಿಡುವಳಿ, ಅಂಗಸಂಸ್ಥೆ ಅಥವಾ ಸಹಾಯಕ ಕಂಪನಿಯ ಯಾವುದೇ ಕಾನೂನಾತ್ಮಕ ಅಥವಾ ಸಲಹಾ ಸಂಸ್ಥೆಯು ಒಟ್ಟಾರೆ ವಹಿವಾಟಿನ ಮೊತ್ತದ ಶೇಕಡ 10% ಅಥವಾ ಅದಕ್ಕೂ ಮೇಲ್ಪಟ್ಟ ಮೊತ್ತವನ್ನು ಹೊಂದಿರುದಿಲ್ಲ.

(iii) ಯಾವುದೇ ಕಂಪನಿಯ 2% ಅಥವಾ ಅದಕ್ಕಿಂತ ಜಾಸ್ತಿ ಮತದಾನದ ಹಕ್ಕುಗಳನ್ನು ನಾನಾಗಲಿ ಅಥವಾ ನನ್ನ ಸಂಬಂಧಿಕರಾಗಲಿ ಹೋದಿರುವುದಿಲ್ಲ; ಅಥವಾ

(iv) ಕಂಪನಿಯಿಂದ, ಇದರ ಯಾವುದೇ ಪ್ರವರ್ತಕರಿಂದ, ನಿರ್ದೇಶಕರಿಂದ ಅಥವಾ ಆ ಕಂಪನಿಯ ಹಿಡುವಳಿ, ಅಂಗಸಂಸ್ಥೆ ಅಥವಾ ಸಹಾಯಕ ಕಂಪನಿಯಿಂದ 25% ಅಥವಾ ಇದಕ್ಕಿಂತ ಜಾಸ್ತಿ ಹಣ ಪಡೆಯುವ ಲಾಭೋದ್ದೇಶವಿಲ್ಲದ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಥವಾ ನಿರ್ದೇಶಕ, ಈ ರೀತಿಯ ಹೆಸರಿನ ಮೂಲಕ ಕರೆಯಲ್ಪಡುವ ಯಾವುದೇ ಅಧಿಕಾರತ್ವದ 2% ಅಥವಾ ಅದಕ್ಕಿಂತ ಹೆಚ್ಚು ಮತದಾನದ ಹಕ್ಕುಗಳನ್ನು ಹೊಂದಿರುವುದಿಲ್ಲ.

(v) ಕಂಪನಿಯ ವಸ್ತು ಸರಬರಾಜುದಾರ, ಸೇವೆ ಒದಗಿಸುವ ಅಥವಾ ಗ್ರಾಹಕ ಅಥವಾ ಗೇಣಿದಾರರ ಅಥವಾ ಗೇಣಿದಾತನಾಗಿರುವುದಿಲ್ಲ.

ಊ) ನನ್ನ ವಯಸ್ಸು 21 ವರ್ಷಕಿಂತ ಕಡಿಮೆಯಿರುವುದಿಲ್ಲ.

ಸ್ವತಂತ್ರ ನಿರ್ದೇಶಕರುಗಳ ನೇಮಕದ ನಿಯಮ ಮತ್ತು ಷರತ್ತುಗಳು:

ಕಂಪನಿಗಳ ಕಾಯ್ದೆಯ ಪರಿಚ್ಛೇದ 149ರಡಿ ಮತ್ತು ಇದರಡಿ ರೂಪಿಸಲಾದ ನಿಯಮದ ಅನ್ವಯ ಮಂಡಳಿಯು ತನ್ನ ಸಂಯೋಜನೆಯನ್ನು ನಿರ್ಧರಿಸಲು ಮಂಡಳಿ ಸಕ್ರಿಯೆಗೊಳಿಸಲು ಈ ಘೋಷಣೆಯನ್ನು ನಾನು ನೀಡುತ್ತಿದ್ದೇನೆ.

ಕಂಪನಿ ಕಾಯ್ದೆಯ ಷೆಡ್ಯೂಲ್ 6ರಲ್ಲಿ ನಮೂದಿಸಿರುವಂತೆ ಸ್ವತಂತ್ರ ನಿರ್ದೇಶಕರಿಗಾಗಿರುವ ನೀತಿ ಸಂಹಿತೆಯ ಮಾನದಂಡಗಳಿಗನುಗುಣಕ್ಕೆ ನಾನು ಬದ್ಧನಾಗಿರುತ್ತದೆಂದು ಈ ಮೂಲಕ ಸ್ಥಿರೀಕರಿಸುತ್ತೇನೆ.

ಕಂಪನಿ ಕಾಯ್ದೆ ಪರಿಚ್ಛೇದ 149(6) ರ ಪ್ರಕಾರ, ನನ್ನ ಸ್ವತಂತ್ರಕ್ಕೆ ದಕ್ಕೆ ತರುವ ಯಾವುದೇ ಬದಲಾವಣೆಗಳು ನಡೆದಲ್ಲಿ, ಅದರ ಬಗ್ಗೆ ಮಂಡಳಿಗೆ ತಕ್ಷಣವೇ ನಾನು ತಿಳಿಸುತ್ತೇನೆ.

ಸಹಿ:.....

ಪದನಾಮ: ಸ್ವತಂತ್ರ ನಿರ್ದೇಶಕ

ಮಣಿಯನ್ ಅಂಡ್ ರಾವ್
ಸನದಿ ಲೆಕ್ಕಿಗರು

ಸಂಖ್ಯೆ 361, 1ನೇ ಮಹಡಿ, 7ನೇ ಅಡ್ಡ ರಸ್ತೆ,
1ನೇ ಬ್ಲಾಕು, ಜಯನಗರ, ಬೆಂಗಳೂರು,–11.
ದೂರವಾಣಿ : **080 – 26569500**
ಫ್ಯಾಕ್ಸ್ : **080 - 26569501**
ಇ–ಮೇಲ್ : **contact@manian-rao.com**

ಸ್ವತಂತ್ರ ಲೆಕ್ಕಪರಿಶೋಧಕರ ವರದಿ

ಕರ್ನಾಟಕ ನೀರಾವರಿ ನಿಗಮ ನಿಯಮಿತದ ಸದಸ್ಯರುಗಳಿಗೆ,

ನಾವು ಕರ್ನಾಟಕ ನೀರಾವರಿ ನಿಗಮ ನಿಯಮಿತದ (ಕಂಪನಿ) ಈ ವರದಿಗೆ ಲಗತ್ತಿಸಲಾಗಿರುವ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವ ಹಾಗೂ 31 ಮಾರ್ಚ್ 2018ರಲ್ಲಿದ್ದಂತೆ ಆಸ್ತಿ–ಜವಾಬ್ದಾರಿ ತ:ಖ್ತೆ, ಆ ದಿನಾಂಕಕ್ಕೆ ಅಂತ್ಯಗೊಂಡ ಸಾಲಿನ ಲಾಭ ಮತ್ತು ನಷ್ಟ ತ:ಖ್ತೆ, (ಇತರೆ ಸಮಗ್ರ ವರಮಾನವು ಒಳಗೊಂಡಂತೆ) ಹಣಕಾಸು ಹರಿವಿನ ತ:ಖ್ತೆ ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು ಹಾಗೂ ಅದಕ್ಕೆ ಲಗತ್ತಿಸಲಾಗಿರುವ ವಿವರಣಾತ್ಮಕ ಮಾಹಿತಿಯ ಸಂಕ್ಷಿಪ್ತ ವರದಿಯನ್ನು ಒಳಗೊಂಡಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತದ (ಈ ವರದಿಗೆ ಲಗತ್ತಿಸಲಾಗಿರುವ) ಹಣಕಾಸು ತ:ಖ್ತೆಗಳನ್ನು ನಾವು ಲೆಕ್ಕಪರಿಶೋಧನೆ ಮಾಡಿರುವೆವು.

ಹಣಕಾಸು ತ:ಖ್ತೆಗಳಿಗೆ ವ್ಯವಸ್ಥಾಪನೆ/ಆಡಳಿತ ಮಂಡಳಿಯ ಜವಾಬ್ದಾರಿ

ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡಗಳು) 2015ರ ತಿದ್ದುಪಡಿ ಅಧಿನಿಯಮದ ಜೊತೆಯಲ್ಲಿ ಓದಲ್ಪಡುವಂತಹ ಅಧಿನಿಯಮ 2013ರ (ಅಧಿನಿಯಮ) ಪರಿಚ್ಛೇದ 134(5)ರಲ್ಲಿ ತಿಳಿಸಲಾಗಿರುವ ವಿಷಯಗಳೂ ಒಳಗೊಂಡಂತೆ, ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಕಂಪನಿಯ ಹಣಕಾಸಿನ ಸ್ಥಿತಿಗತಿ, ಹಣಕಾಸಿಗೆ ಸಂಬಂಧಿತ ಕಾರ್ಯನಿರ್ವಹಣೆ ಮತ್ತು ಹಣಕಾಸಿನ ಹರಿವಿನ ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಅಭಿಪ್ರಾಯವನ್ನು ನೀಡುವ ರೀತಿಯಲ್ಲಿ ಈ ಹಣಕಾಸು ತ:ಖ್ತೆಗಳನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134(5)ರ ಅಡಿಯಲ್ಲಿ ತಿಳಿಸಲಾಗಿರುವಂತಹ ವಿಷಯಗಳಿಗೆ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ. ಈ ಜವಾಬ್ದಾರಿಯು ಒಂದು ಸತ್ಯಾಸತ್ಯತೆಯಿಂದ ಮತ್ತು ನ್ಯಾಯಸಮ್ಮತತೆಯಿಂದ ಕೂಡಿದ ಮತ್ತು ವಂಚನೆಗಳು ಅಥವಾ ತಪ್ಪುಗಳನ್ನು ಎಸಗುವುದರ ಕಾರಣ ವಿಷಯಕ ತಪ್ಪು ಹೇಳಿಕೆಗಳಿಂದ ಹೊರತಾದ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವ ಮತ್ತು ಮಂಡಿಸುವುದಕ್ಕೆ ಸೂಕ್ತವಾದಂತಹ ನಿಗಮದ ಆಸ್ತಿಗಳ ಸಂರಕ್ಷಣೆಗಾಗಿ ಅಧಿನಿಯಮದ ಅನುವುಗಳ ಅನುಸಾರ ಸಮರ್ಪಕವಾದಂತಹ ರೀತಿಯಲ್ಲಿ ಲೆಕ್ಕಪತ್ರಗಳ ನಿರ್ವಹಣೆಗಾಗಿ ಮತ್ತು ವಂಚನೆಗಳನ್ನು ತಡೆಯುವುದು ಮತ್ತು ಪತ್ತೆಹಚ್ಚುವುದು, ಒಂದು ಸೂಕ್ತ ಲೆಕ್ಕವನ್ನಿಡುವಿಕೆಯ ಕಾರ್ಯನೀತಿಯ ಆಯ್ಕೆ ಮತ್ತು ಅದನ್ನು ಅನ್ವಯಗೊಳಿಸುವುದು, ನ್ಯಾಯಸಮ್ಮತತೆಯಿಂದ ಮತ್ತು ವಿವೇಚನೆಯಿಂದ ಕೂಡಿದ ತೀರ್ಮಾನಗಳನ್ನು ಕೈಗೊಳ್ಳುವುದು ಮತ್ತು ಅಂದಾಜುಗಳನ್ನು ಮಾಡುವುದು ಹಾಗೂ ಸಮರ್ಪಕವಾದ ರೀತಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಹಾಗೂ ನಿರ್ವಹಣೆ, ಇವುಗಳನ್ನೂ ಸಹ ಒಳಗೊಂಡಿರುತ್ತದೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ, ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸಿನ ತ:ಖ್ತೆಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಲೆಕ್ಕಪರಿಶೋಧನೆಯನ್ನು ನಡೆಸುವ ವೇಳೆಯಲ್ಲಿ, ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸುವ ಅಗತ್ಯತೆಯನ್ನು ಹೊಂದಿರುವ ಅಧಿನಿಯಮದ ಅನುವುಗಳು, ಲೆಕ್ಕವನ್ನಿಡುವಿಕೆಯ ಮತ್ತು ಲೆಕ್ಕಪರಿಶೋಧನೆಯ ಮಾನದಂಡಗಳು ಮತ್ತು ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅನುವುಗಳ ಅನುಸಾರ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಅಗತ್ಯವಿರುವ ವಿಷಯಗಳನ್ನು ನಾವು ಪರಿಗಣಿಸಿರುವೆವು.

ಅಧಿನಿಯಮದ ಪರಿಚ್ಛೇದ 143(10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸಿನ ತ:ಖ್ತೆಗಳನ್ನು ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವ ಸಲುವಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹೊಂದಿರುತ್ತವೆ.

ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳಲ್ಲಿ ತೋರಿಸಿರುವ ಮೊತ್ತಗಳು ಮತ್ತು ಬಹಿರಂಗಪಡಿಸುವಿಕೆಗಳ ಬಗ್ಗೆ ಲೆಕ್ಕ ಪರಿಶೋಧನೆಗೆ ಅಗತ್ಯವಿರುವ ದಾಖಲೆಗಳ ಸಾಕ್ಷಾಧಾರಗಳನ್ನು ಪಡೆದುಕೊಳ್ಳುವ ಸಲುವಾಗಿ ಕಾರ್ಯವಿಧಾನಗಳನ್ನು ನಡೆಸುವುದನ್ನು ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ಆಯ್ಕೆ ಮಾಡಿಕೊಳ್ಳಲಾದ ಕಾರ್ಯವಿಧಾನವು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳಲ್ಲಿನ ವಂಚನೆಗಳ ಕಾರಣವಾಗಿರಲಿ ಅಥವಾ ತಪ್ಪುಗಳನ್ನು ಎಸಗುವ ಕಾರಣದಿಂದಾಗಲೀ ವಿಷಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ. ಅಂತಹ ಸಂಭಾವ್ಯ ಅಪಾಯಗಳ ನಿರ್ಧಾರಣೆ ಮಾಡುವಲ್ಲಿ, ಪ್ರಸ್ತುತ ಸಂದರ್ಭದಲ್ಲಿ ಸೂಕ್ತವಾಗಬಹುದಾದಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನವನ್ನು ರೂಪಿಸುವ ಉದ್ದೇಶದಿಂದ, ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳ ನ್ಯಾಯಸಮ್ಮತ ಮಂಡಿಸುವಿಕೆಗೆ ಕಂಪನಿಯ ಸಿದ್ದತೆಗೆ ಸೂಕ್ತವೆನಿಸುವ ಆಂತರಿಕ ನಿಯಂತ್ರಣವನ್ನು ಲೆಕ್ಕಪರಿಶೋಧಕರು ಪರಿಗಣಿಸುತ್ತಾರೆ. ಒಂದು ಲೆಕ್ಕಪರಿಶೋಧನೆಯು ಬಳಸಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಸೂಕ್ತತೆಯನ್ನು ಮೌಲ್ಯಮಾಪನ ಮಾಡುವುದನ್ನು ಮತ್ತು ಕಂಪನಿಯ ನಿರ್ದೇಶಕರುಗಳು ಮಾಡಿದಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಅಂದಾಜುಗಳ ನ್ಯಾಯಸಮ್ಮತತೆಯನ್ನು ಹಾಗೂ ಅಲ್ಲದೆಯೇ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳ ಒಟ್ಟಾರೆ ಮಂಡನೆಯನ್ನು ಮೌಲ್ಯಮಾಪನ ಮಾಡುವುದನ್ನೂ ಕೂಡ ಒಳಗೊಂಡಿರುತ್ತದೆ.

ನಾವು ಪಡೆದುಕೊಂಡಿರುವಂತಹ ಲೆಕ್ಕಪರಿಶೋಧನಾ ಸಾಕ್ಷಾಧಾರಗಳು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವಂತಹ ಈ ಹಣಕಾಸು ತ:ಖ್ತೆಗಳ ಮೇಲೆ ನಮ್ಮ ಷರತ್ತುಬದ್ಧ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಒಂದು ಆಧಾರವನ್ನು ಒದಗಿಸುವುದಕ್ಕಾಗಿ ಸಮರ್ಪಕವಾಗಿರುತ್ತವೆ ಹಾಗೂ ಸೂಕ್ತವಾಗಿರುತ್ತವೆ ಎಂಬ ವಿಶ್ವಾಸವು ನಮಗಿರುವುದು.

ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರಗಳು:

i) ಟಿಪ್ಪಣಿ ಸಂಖ್ಯೆ 2 – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 2.1 " ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ", ಹೆಚ್ಚುವರಿ ಹುದ್ದೆಗಳ ಉದ್ಯೋಗಿಗಳಿಗೆ ಗ್ರಾಚ್ಯುಯಿಟಿ ಪಾವತಿಗೆ ಸಂಬಂಧಿಸಿದಂತೆ ಲೆಕ್ಕವನ್ನಿಡುವ ಉದ್ದೇಶಕ್ಕಾಗಿ, ಯೋಜನೆಗಳ ವರ್ಗಾವಣೆಯ ಕಾರಣ ಬಾಕಿಯಿರುವ ಕಾಮಗಾರಿಗಳಿಗಾಗಿ ಪಾವತಿಗಳು, ದರ ಹೆಚ್ಚಳಗಳ ಕಾರಣ ಹೆಚ್ಚುವರಿ ಪಾವತಿಗಾಗಿ ಕೋರಿಕೆಗಳು, ಹೆಚ್ಚುವರಿ ಹಣಕಾಸು ವೆಚ್ಚಗಳ ಪ್ರಭಾವ, ಇವೇ ಮುಂತಾದ ವೆಚ್ಚಗಳನ್ನು ನಗದು ಆಧಾರದ ಮೇರೆಗೆ ಲೆಕ್ಕವನ್ನಿಡುತ್ತಿರುವುದು, ಇದು "ಅನುವುಗಳು, ಆಕಸ್ಮಿಕ ಜವಾಬ್ದಾರಿಗಳು ಮತ್ತು ಆಕಸ್ಮಿಕ ಆಸ್ತಿಗಳು" ಇವುಗಳಿಗೆ ಇದಕ್ಕೆ ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 37ರ ಅನುಸಾರ ಹಾಗೂ "ವರದಿಯು ಸಂಬಂಧಿಸಿರುವ ಅವಧಿಯ ನಂತರದ ಘಟನೆಗಳು" ಇದಕ್ಕೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 10ರ ಅನುಸಾರ ಆಗಿರುವುದಿಲ್ಲ ಹಾಗೂ ಸವಕಳಿ, ಗೋಚರಿಸುವ/ಸ್ಪರ್ಷ ಆಸ್ತಿಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಹಾಗೂ ಲಾಭ ಮತ್ತು ನಷ್ಟ ತ:ಖ್ತೆಯ ಮೇಲೆ ಇವುಗಳ ಪ್ರಭಾವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ii) ಟಿಪ್ಪಣಿ ಸಂಖ್ಯೆ 3 – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.10 – "ವರಮಾನದ ಪರಿಗಣನೆ ಹಾಗೂ ಇತರೆ ವರಮಾನ" – ಇದರ ಅಡಿಯಲ್ಲಿ ಬಾಡಿಗೆ ಸ್ವೀಕೃತಿಯನ್ನು ನಗದು ಆಧಾರದ ಮೇರೆಗೆ ಲೆಕ್ಕವನ್ನಿಡಲಾಗಿರುವುದು. ಇದು, ವರಮಾನಕ್ಕೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 18ರ ಅನುಸಾರ ಆಗಿರುವುದಿಲ್ಲ ಹಾಗೂ ಇದರ ಪ್ರಭಾವವನ್ನು ತತ್‌ಕ್ಷಣದಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

iii) ಟಿಪ್ಪಣಿ ಸಂಖ್ಯೆ 3 – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.4(v), ಇದರ ಅಡಿಯಲ್ಲಿ ಬಂಡವಾಳೀಕರಿಸಲಾಗುವ ಸಾಲಿಗೆ ಸಂಬಂಧಿತ ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳನ್ನು ಪ್ರಸಕ್ತ ಸಾಲಿನಲ್ಲಿ ಬಂಡವಾಳೀಕರಿಸಲಾದಂತಹ ಆಸ್ತಿಗಳಿಗೆ ಸೇರಿಸಿರುವುದಿಲ್ಲ; ಆ ರೀತಿ ಹಂಚಿಕೆ ಮೊತ್ತವನ್ನು ತತ್‌ಕ್ಷಣವೇ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ ಹಾಗೂ ಸವಕಳಿ, ಗೋಚರಿಸುವ/ಸ್ಪರ್ಶಿಸಬಹುದಾದ ಆಸ್ತಿಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಹಾಗೂ ಲಾಭ ಮತ್ತು ನಷ್ಟ ತ:ಖ್ತೆಯ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

iv) ಟಿಪ್ಪಣಿ ಸಂಖ್ಯೆ 3 – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.5(iv), ಇದರ ಅಡಿಯಲ್ಲಿ, ಒಂದು ಗಮನಾರ್ಹ ಮೌಲ್ಯವನ್ನು ಹೊಂದಿರುವಂತಹ ಹಾಗೂ ಮೂಲ ಆಸ್ತಿಗೆ ಸೇರಿಸಲಾಗಿರುವಂತಹ ಒಂದು ಆಸ್ತಿಯ ಭಾಗ/ಭಾಗಗಳಿಗೆ ಸಂಬಂಧಿಸಿದಂತೆ ಬಳಸಬಹುದಾದ ಅವಧಿಯನ್ನು ಪ್ರತ್ಯೇಕವಾಗಿ ನಿರ್ಧಾರಣೆ ಮಾಡಲಾಗಿದ್ದಿತು ಹಾಗೂ ಮೂಲ ಆಸ್ತಿಯ ಬಳಸಬಹುದಾದ ಅವಧಿಯ ಮೇಲೆ ಲೆಕ್ಕಹಾಕುವ ಬದಲು, ಸ್ವತಂತ್ರವಾಗಿ ಅದರ ಬಳಸಬಹುದಾದ ಅಂದಾಜು ಅವಧಿಯ

ಮೇಲೆ ಸವಕಳಿಯನ್ನು ಲೆಕ್ಕಹಾಕಲಾಗಿದ್ದಿತು, ಇದು "ಆಸ್ತಿಗಳು, ಸ್ಥಾವರ ಮತ್ತು ಉಪಕರಣಗಳು"– ಇವುಗಳಿಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 16ರ ಅನುಸಾರ ಆಗಿರಲಿಲ್ಲ. ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರಲಿಲ್ಲ.

v) ಟಿಪ್ಪಣಿ ಸಂಖ್ಯೆ 3 – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿ 3.6 – ಇದರಲ್ಲಿ ಕಂಪನಿಯು ತಿಳಿಸಿರುವ ಕಾರಣಗಳಿಗಾಗಿ, ಆಸ್ತಿಗಳು ದುರ್ಬಾಲಗೊಂಡಿರುವ ಕಾರಣದಿಂದಾಗಿ ನಷ್ಟಗಳು ಸಂಭವಿಸಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದಾಗಿ ತಿಳಿಸಿರುವುದು. ಆಸ್ತಿಗಳು ದುರ್ಬಾಲಗೊಂಡಿರುವ ಕಾರಣದಿಂದಾಗಿ ಸಂಭವಿಸಿರಬಹುದಾದ ನಷ್ಟಗಳನ್ನು ಖಚಿತಪಡಿಸಿಕೊಳ್ಳದಿರುವುದು "ಆಸ್ತಿಗಳ ಮೌಲ್ಯಗಳು ದುರ್ಬಲಗೊಳ್ಳುವಿಕೆ" – ಇದಕ್ಕೆ ಸಂಬಂಧಿಸಿದ 'ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 36ರ ಅನುವುಗಳನ್ನು ಅನುಸರಿಸಿರುವಲ್ಲಿ ಪರಿಣಮಿಸಿದ್ದಿತು ಹಾಗೂ ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

vi) ಟಿಪ್ಪಣಿ ಸಂಖ್ಯೆ 5 (i) (ಡಿ) – ಪ್ರಸಕ್ತ ಸಾಲಿನಲ್ಲಿ ಬಂಡವಾಳೀಕರಿಸಲಾದ ರೂ.233.88 ಕೋಟಿ ಮೊತ್ತದಷ್ಟು ಸ್ಪರ್ಶಿಸಬಹುದಾದ/ಗೋಚರ ಆಸ್ತಿಗಳು ಈ ಹಿಂದಿನ ಸಾಲುಗಳಲ್ಲಿ ಪೂರ್ಣಗೊಂಡಂತಹ ಹಾಗೂ ಉದ್ದೇಶಿತ ಬಳಕೆಗೆ ಸಿದ್ಧವಿದ್ದಂತಹ ಆಸ್ತಿಗಳಿಗೆ ಸಂಬಂಧಿಸಿರುವವುಗಳು ಹಾಗೂ ಈ ಆಸ್ತಿಗಳನ್ನು ಬಂಡವಾಳೀಕರಿಸಲಾದ ಸಾಲಿನಿಂದ ಮುಂದಕ್ಕೆ ಅವಧಿಗಳಿಗೆ ಪ್ರಾಸ್ಪೆಕ್ಟಿವ್ ಬಳಸಬಹುದಾದ ಉಳಿಕೆ ಅವಧಿಗೆ ಸವಕಳಿಯನ್ನು ಲೆಕ್ಕಹಾಕಲಾಗಿದ್ದಿತು. ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

vii) ಟಿಪ್ಪಣಿ ಸಂಖ್ಯೆ 5 (i) (ಇ) (1) – ಇದರ ಅಡಿಯಲ್ಲಿ ಬಂಡವಾಳೀಕರಿಸಲಾದ ಭೂಮಿಯ ಮೌಲ್ಯವು ಸಂಬಂಧಿತ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಂದ ಸ್ವೀಕರಿಸಲಾದ ಬಳಕೆ ಪ್ರಮಾಣಪತ್ರಗಳ ಆಧಾರದ ಮೇರೆಗೆ ಆಗಿದ್ದಿತು ಹಾಗೂ ಭೂಸ್ವಾಧೀನ ತೀರ್ಪುಗಳು/ಒಪ್ಪಿಗೆ ತೀರ್ಪುಗಳು/ಬಡ್ಡಿ, ಇತ್ಯಾದಿ ವಿವಿಧ ಕಾರ್ಯವಿಧಾನಗಳು ಅಂತಿಮ ರೂಪಕ್ಕೆ ಬರುವ ಷರತ್ತಿಗೆ ಒಳಪಟ್ಟಿದ್ದಿತು, ಹಾಗೂ ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

viii) ಟಿಪ್ಪಣಿ ಸಂಖ್ಯೆ 5 (i) (ಇ) (2) – ಇದರ ಅಡಿಯಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ ಮೊತ್ತವನ್ನು ಬಿಡುಗಡೆಗೊಳಿಸುವುದು ಬಾಕಿಯಿದ್ದಂತೆ ಭೂಸ್ವಾಧೀನ ದ ಕಡೆಗೆ ರೂ.235.12 ಕೋಟಿ ಮೊತ್ತವನ್ನು ಲೆಕ್ಕಪತ್ರಗಳಲ್ಲಿ ಖರ್ಚಿಗೆ ಹಾಕಲಾಗಿದ್ದಿತು. ಅಷ್ಟರಮಟ್ಟಿಗೆ ಭೂಮಿ ಮತ್ತು ಚಾಲ್ತಿ ಜವಾಬ್ದಾರಿಗಳ ಮೌಲ್ಯವನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿದ್ದಿತು.

ix) ಟಿಪ್ಪಣಿ ಸಂಖ್ಯೆ 5 (i) (ಎಫ್) – ಇದರ ಅಡಿಯಲ್ಲಿ 52,507 ಎಕರೆಗಳಷ್ಟು ಭೂಮಿಗೆ ಸಂಬಂಧಿಸಿದಂತೆ ಕಂಪನಿಯ ಪರವಾಗಿ ವರ್ಗಾವಣೆ ನಮೂದುಗಳನ್ನು ಮಾಡುವುದು ಬಾಕಿಯಿದ್ದಿತು.

x) ಟಿಪ್ಪಣಿ ಸಂಖ್ಯೆ 5 (i) (ಎಚ್) – ಇದರ ಅಡಿಯಲ್ಲಿ "ಭೂಮಿ/ಕಟ್ಟಡಗಳು, ಸ್ಥಾವರಗಳು/ಯಂತ್ರೋಪಕರಣಗಳು ಮತ್ತು ಉಪಕರಣಗಳು, ಇದಕ್ಕೆ ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 16ರ ಅಗತ್ಯತೆಯಂತೆ, ಬಳಸಬಹುದಾದ ವಿವಿಧ ಅವಧಿಗಳನ್ನು ಹೊಂದಿರುವ ಅಣೆಕಟ್ಟೆಗಳು ಮತ್ತು ಮುಳುಗಡೆ ಪ್ರದೇಶಗಳು, ನಾಲೆಗಳು, ಶಾಖಾ ನಾಲೆಗಳು, ವಿತರಣಾ ನಾಲೆಗಳು ಮತ್ತು ಪಾರ್ಶ್ವಸ್ಥ ನಾಲೆಗಳು, ಕೆರೆಗಳು ಮತ್ತು ರಸ್ತೆಗಳು, ಸೇತುವೆಗಳು ಮತ್ತು ಅಡ್ಡಗಾಲುವೆಗಳು/ನೆಲಗಾಲುವೆಗಳು ಸ್ಥಾವರಗಳು ಮತ್ತು ಯಂತ್ರೋಪಕರಣಗಳು, ಮುಂತಾದವುಗಳಿಗೆ ಸಂಬಂಧಿಸಿದಂತೆ ಸಂಯೋಜಿತ ಆಸ್ತಿಗಳ ಭಾಗಗಳನ್ನು ಇನ್ನೂ ಗುರುತಿಸಬೇಕಿರುತ್ತದೆ. ಸವಕಳಿ, ಗೋಚರಿಸುವ/ಸ್ಪರ್ಶಿಸಬಹುದಾದ ಆಸ್ತಿಗಳು, ಹಾಗೂ ಲಾಭ ಮತ್ತು ನಷ್ಟ ತ:ಖ್ತೆಯ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

xi) ಟಿಪ್ಪಣಿ ಸಂಖ್ಯೆ 5 (i) (ಐ) ಇದರ ಅಡಿಯಲ್ಲಿ, ಸಂಪೂರ್ಣ ವಿವರಗಳನ್ನು ಖಚಿತಪಡಿಸಿಕೊಳ್ಳುವುದು ಬಾಕಿಯಿರುವಂತೆ ಕಟ್ಟಡಗಳು ಮತ್ತು ಕಾಲೋನಿಗಳ ಅಡಿಯಲ್ಲಿ ಸೇರಿಸಲಾಗಿರುವ ಆಂತರಿಕ/ಕಾಲೋನಿ ರಸ್ತೆಗಳು ಮತ್ತು ಕೊಳವೆ ಭಾವಿಗಳಿಗೆ ಕಟ್ಟಡಗಳ ಒಂದು ಭಾಗ ಎಂಬುದಾಗಿ ಭಾವಿಸಿ ಸವಕಳಿಯನ್ನು ಅನುವು ಮಾಡಲಾಗಿರುವುದು ಹಾಗೂ ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

xii) ಟಿಪ್ಪಣಿ ಸಂಖ್ಯೆ 5 (ii) (ಎ) ಇದರ ಅಡಿಯಲ್ಲಿ 1 ಏಪ್ರಿಲ್ 2010ರಲ್ಲಿದ್ದಂತೆ ವೈಯಕ್ತಿಕ ಚರಾಸ್ತಿಗಳು, ಕಟ್ಟಡಗಳು ಮತ್ತು ರಸ್ತೆಗಳ ಪ್ರಾರಂಭಿಕ ಶಿಲ್ಕನ್ನು ದಾಖಲಿಸಲು ಕಂಪನಿಗೆ ಸಾಧ್ಯವಾಗಿರುವುದಿಲ್ಲ ಮತ್ತು ಆದ್ದರಿಂದ ಸವಕಳಿಯನ್ನು ಅಂತಹ ಒಂದು ಆಸ್ತಿಯ ಬಳಸಬಹುದಾದ ಅವಧಿಯು ಮುಕ್ತಾಯಗೊಂಡನಂತರವೂ ಅನುವು ಮಾಡುವುದು ಮುಂದುವರೆದುಕೊಂಡು ಹೋಗಿರಬಹುದು. ಗೋಚರಿಸುವ/ಸ್ಪರ್ಶಾರ್ಹ ಆಸ್ತಿಗಳು ಮತ್ತು ಸವಕಳಿಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

xiii) ಟಿಪ್ಪಣಿ ಸಂಖ್ಯೆ 5 (i) ಜೆ ಮತ್ತು 6 (ಸಿ) – ಇದರ ಅಡಿಯಲ್ಲಿ ಕಂಪನಿಯು ಅಯಕಟ್ಟು ಮತ್ತು ಅಚ್ಚುಕಟ್ಟು ರಸ್ತೆಗಳನ್ನು ಗುರುತಿಸುವ ಪ್ರಕ್ರಿಯೆಯ ಅಡಿಯಲ್ಲಿರುವುದು ಹಾಗೂ ಮಾಲಿಕತ್ವವನ್ನು ಖಚಿತಪಡಿಸಿಕೊಂಡನಂತರ ಹಾಗೂ ಈ ನಿಟ್ಟಿನಲ್ಲಿ ವೆಚ್ಚವನ್ನು ವರ್ಗೀಕರಿಸಿದನಂತರ

ಅಗತ್ಯ ಪರಿಗಣನೆಯನ್ನು ಮಾಡಲಾಗುವುದು. ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

xiv) ಟಿಪ್ಪಣಿ ಸಂಖ್ಯೆ 5 (1) ಮತ್ತು 6 (ಡಿ) – ಇದರ ಅಡಿಯಲ್ಲಿ ಮುಂತಾದ ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳು / ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಿಗೆ ಸಂಬಂಧಿತ ಆಸ್ತಿಗಳ ಶೀರ್ಷಿಕೆ "ಕೆರೆಗಳು", ಇವುಗಳ ಅಡಿಯಲ್ಲಿ ಸೇರಿಸಲಾಗಿರುವ ಭಾಗಗಳನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಕಂಪನಿಯು ಇರುವುದು ಹಾಗೂ ಲೆಕ್ಕಪತ್ರಗಳ ಮೇಲೆ ಇದರ ತತ್ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

xv) ಟಿಪ್ಪಣಿ ಸಂಖ್ಯೆ 6 (ಇ) ಇದರ ಅಡಿಯಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಅಡಿಯಲ್ಲಿ "ಇತರೆ ನೀರಾವರಿ ನಿರ್ಮಾಣಗಳು", ಇದರ ಅಡಿಯಲ್ಲಿ ತೋರಿಸಲಾಗಿರುವ ರೂ.10.20 ಕೋಟಿ ಮೊತ್ತದಷ್ಟು ಶಿಲ್ಕನ್ನು ಗುರುತಿಸುವ ಹಾಗೂ ಸಮನ್ವಯಗೊಳಿಸುವ ಪ್ರಕ್ರಿಯೆಯ ಅಡಿಯಲ್ಲಿ ಕಂಪನಿಯು ಇರುವುದು.

xvi) 2016–17 ಸಾಲಿನಲ್ಲಿ, ಕಂಪನಿಯು ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳನ್ನು ಸಮನ್ವಯಗೊಳಿಸಿತು. ಆ ಪ್ರಕ್ರಿಯೆಯಲ್ಲಿ, ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಶಿಲ್ಕುಗಳ ಆಧಾರದ ಮೇರೆಗೆ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ವಿವಿಧ ಆಸ್ತಿಗಳ ಭಾಗಗಳಿಗೆ ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳನ್ನು ಹಾಕಿದ್ದಿತು. ಸಮನ್ವಯಗೊಳಿಸುವಿಕೆ ಪ್ರಕ್ರಿಯೆಯ ಅಡಿಯಲ್ಲಿರುವ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಶಿಲ್ಕುಗಳ ಯಾವುದೇ ಹೊಂದಾಣಿಕೆಯು, ಈಗಾಗಲೇ ಮಾಡಲಾಗಿರುವ ನಿರ್ಮಾಣದ ವೇಳೆಯಲ್ಲಿನ ವೆಚ್ಚಗಳ ಹಂಚಿಕೆಯ ಮೇಲೆ ಪ್ರಭಾವವನ್ನು ಬೀರಬಹುದು.

xvii) ಟಿಪ್ಪಣಿ ಸಂಖ್ಯೆ 9(ಎ) ಇದರ ಅಡಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಭೂಸ್ವಾಧೀನ ಅಧಿಕಾರಿಗಳು/ಸಹಾಯಕ ಆಯುಕ್ತರವರುಗಳಲ್ಲಿ ಉಳಿದಿರುವ ರೂ.102.96 ಕೋಟಿ ಮೊತ್ತದಷ್ಟು ಶಿಲ್ಕುಗಳಿಗೆ ಸಂಬಂಧಿಸಿದಂತೆ ಉಳಿದಿರುವ ಮೊತ್ತಗಳ ಶಿಲ್ಕುಗಳನ್ನು ಖಚಿತಪಡಿಸಿಕೊಳ್ಳುವುದು/ಹಣ ಬಳಕೆ ವಿವರಗಳನ್ನು ಪಡೆದುಕೊಳ್ಳುವುದು ಬಾಕಿ ಇರುವವು. ಕಂಪನಿಯು ಪ್ರಾರಂಭಗೊಂಡ ದಿನಾಂಕದಿಂದಲೂ ಬಿಡುಗಡೆಗೊಳಿಸಲ್ಪಟ್ಟಿರುವ ಮುಂಗಡಗಳು ಲೆಕ್ಕವನ್ನಿಡದಿರುವ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ ಸಿಬ್ಬಂದಿ ವೆಚ್ಚಗಳ ಕಡೆಗೆ ನೀಡಲಾಗಿರುವ ಮುಂಗಡ ಹಣಕಾಸನ್ನು ಒಳಗೊಂಡಿರುತ್ತವೆ. ಅಷ್ಟರಮಟ್ಟಿಗೆ ಭೂಮಿಯ ಮೌಲ್ಯವನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು ಹಾಗೂ ಇತರೆ ಚಾಲ್ತಿಯೇತರ ಆಸ್ತಿಗಳನ್ನು ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿರುವುದು. ಸಮನ್ವಯಗೊಳಿಸುವಿಕೆ ಮತ್ತು ವಿವರಗಳ ಅನುಪಸ್ಥಿತಿಯಲ್ಲಿ, ಲೆಕ್ಕಪತ್ರಗಳ ಮೇಲೆ ಅವುಗಳ ಪ್ರಭಾವವನ್ನು ಪರಿಮಾಣೀಕರಿಸಲಾಗುವುದಿಲ್ಲ.

xviii) ನಮ್ಮ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಕೆಲವು ವಿಭಾಗಗಳಲ್ಲಿ ಕೆಲವು ವಿಭಾಗಗಳಲ್ಲಿ ಲೋಪದೋಷಗಳನ್ನು ನಾವು ಗಮನಿಸಲಾದಂತೆ, ಕಂಪನಿಯು, ದರ ವ್ಯತ್ಯಯಗಳಿಗಾಗಿ ಮೊತ್ತಗಳನ್ನು ಲೆಕ್ಕಹಾಕುವ ಸಲುವಾಗಿ ಯಥಾರ್ಥತೆಯಿಂದ ಕೂಡಿದ ಸೂಚಕಗಳನ್ನು ಅಳವಡಿಸಿಕೊಳ್ಳುವುದು ಮುಂತಾದ ಅಂಶಗಳ ಬಗ್ಗೆ ಗಮನಹರಿಸುವ ಸಲುವಾಗಿ ಗುತ್ತಿಗೆದಾರರುಗಳ ಬಿಲ್ಲುಗಳ ಪಾವತಿ ಸಂಸ್ಕರಣೆಯ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯತೆಯಿರುತ್ತದೆ.

xix) ಟಿಪ್ಪಣಿ ಸಂಖ್ಯೆ 17 (ಸಿ) ನವಂಬರ್ 01, 2006ಕ್ಕೆ ಮುಂಚಿನ ಅವಧಿಯಲ್ಲಿ ಗುತ್ತಿಗೆದಾರರುಗಳಿಗೆ ವಹಿಸಲಾಗಿದ್ದಂತಹ ಕಾಮಗಾರಿಗಳಿಗಾಗಿ ಶೇಕಡ 1ರ ದರದಲ್ಲಿ (1%) ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ಸಿನ ಕಡೆಗೆ ಅನುವು ಮಾಡಿರುವುದಕ್ಕೆ ಸಂಬಂಧಿಸಿದಂತೆ, ಅದನ್ನು ಅಂದಾಜಿನ ಆಧಾರದ ಮೇರೆಗೆ ಮಾಡಲಾಗಿದ್ದಿತು, ಇದರಿಂದಾಗಿ ಲೆಕ್ಕಪತ್ರಗಳ ಮೇಲೆ ಅವುಗಳ ಪ್ರಭಾವವನ್ನು ಪರಿಮಾಣೀಕರಿಸಲಾಗುವುದಿಲ್ಲ.

xx) ಟಿಪ್ಪಣಿ ಸಂಖ್ಯೆ 17 (ಇ) ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು (ಜಿಎಸ್‌ಟಿ) ಪ್ರಾರಂಭಿಸುವುದಕ್ಕೆ ಮುಂಚಿನ ಅವಧಿಯಲ್ಲಿ ಪ್ರಸಕ್ತ ಸಾಲಿನಲ್ಲಿ ನೀಡಲಾಗಿದ್ದ ಗುತ್ತಿಗೆಗಳಿಗಾಗಿ ಅಂದಾಜುಗಳನ್ನು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪರಿಗಣಿಸದೆಯೇ ಜಲ ಸಂಪನ್ಮೂಲ ಇಲಾಖೆಯ 2016–17 ಸಾಲಿನ ದರಗಳ ಷೆಡ್ಯೂಲಿನ ಆಧಾರದ ಮೇರೆಗೆ ತಯಾರಿಸಲ್ಪಟ್ಟಿದ್ದವು ಹಾಗೂ ಈ ದರಗಳು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪ್ರಾರಂಭಿಸುವುದಕ್ಕೆ ಮುಂಚಿನ ಅವಧಿಯಲ್ಲಿದ್ದಂತಹ ತೆರಿಗೆಗಳನ್ನು ಒಳಗೊಂಡಿದ್ದವು. ಲೆಕ್ಕಪತ್ರಗಳ ಮೇಲೆ ಅವುಗಳ ಪ್ರಭಾವವನ್ನು ಪರಿಮಾಣೀಕರಿಸಲಾಗುವುದಿಲ್ಲ.

xxi) ಟಿಪ್ಪಣಿ ಸಂಖ್ಯೆ 17 (ಎಫ್) ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪ್ರಾರಂಭಿಸಿದ ದಿನಾಂಕದಲ್ಲಿದ್ದಂತೆ ಕಾರ್ಯಗತಗೊಳಿಸುವ ಸಲುವಾಗಿ ಬಾಕಿಯಿದ್ದಂತಹ ಕಾಮಗಾರಿಗಳ ಮೌಲ್ಯಕ್ಕೆ ಹಾಗೂ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಸೇರಿಸುವ ಮೂಲಕ ಪ್ರಸಕ್ತ ಇದ್ದಂತಹ ತೆರಿಗೆಗಳನ್ನು ತೆಗೆದುಹಾಕಿ ನ್ಯಾಯಸಮ್ಮತ ಹೊಂದಾಣಿಕೆಗಳನ್ನು ಮಾಡಿರುವುದಿಲ್ಲ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಪ್ರಭಾವಗಳ ಅಧ್ಯಯನ ಹಾಗೂ ಮಾಡಬೇಕಾಗಿರುವ ಅಗತ್ಯತೆಯನ್ನು ಹೊಂದಿರುವ ಹೊಂದಾಣಿಕೆಗಳು ಬಾಕಿಯಿರುವುದರಿಂದ ಲೆಕ್ಕಪತ್ರಗಳ ಮೇಲೆ ಅವುಗಳ ಪ್ರಭಾವವನ್ನು ಪರಿಮಾಣೀಕರಿಸಲಾಗುವುದಿಲ್ಲ.

xxii) ಟಿಪ್ಪಣಿ ಸಂಖ್ಯೆ 18 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006ರ ಅಡಿಯಲ್ಲಿ ಮಾರಾಟಗಾರರುಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ತಿಳಿಯಪಡಿಸಿರುವುದಕ್ಕೆ ಸಂಬಂಧಿಸಿದಂತೆ. ಸಂಬಂಧಿತ ವಿವರಗಳ ಅನುಪಸ್ಥಿತಿಯಲ್ಲಿ, ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

xxiii) ಟಿಪ್ಪಣಿ ಸಂಖ್ಯೆ 19 (ಡಿ) "ಇತರೆ ಹಣಕಾಸು ಜವಾಬ್ದಾರಿಗಳು" ಅಡಿಯಲ್ಲಿ "ಗುತ್ತಿಗೆದಾರರುಗಳಿಗೆ ಪಾವತಿಗಳು – ಉಳಿಸಿಕೊಳ್ಳಲ್ಪಟ್ಟಿರುವ ಹಣಕಾಸಿಗೆ" ಸಂಬಂಧಿಸಿದಂತೆ ನ್ಯಾಯಸಮ್ಮತ ಮೌಲ್ಯಮಾಪನವನ್ನು ಮಾಡಿರುವುದಿಲ್ಲ – ಇದು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 109 "ಹಣಕಾಸು ಸಾಧನಗಳು" / ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 113 " ನ್ಯಾಯಸಮ್ಮತ ಮೌಲ್ಯ ನಿರ್ಧಾರಣೆಯ" ಅನುಸಾರ ಆಗಿರುವುದಿಲ್ಲ. ಅಲ್ಲದೆಯೇ, ಉಳಿಸಿಕೊಂಡಿರುವ/ತಡೆಹಿಡಿಯಲಾಗಿರುವ ಹಣಕಾಸಿನ ಪಾವತಿಗಳಿಗೆ ಸಂಬಂಧಿಸಿದಂತೆ ಅಲ್ಪಾವಧಿ ಮತ್ತು ದೀರ್ಘಾವಧಿ ಜವಾಬ್ದಾರಿಗಳನ್ನು ಗುರುತಿಸುವುದು ಇನ್ನೂ ಪ್ರಗತಿಯಲ್ಲಿರುತ್ತದೆ. ಚಾಲ್ತಿ ಮತ್ತು ಚಾಲ್ತಿಯೇತರ ವರ್ಗೀಕರಣ ಹಾಗೂ ಮೌಲ್ಯಮಾಪನದ ಅನುಪಸ್ಥಿತಿಯಲ್ಲಿ, ಈ ಜವಾಬ್ದಾರಿಗಳ ವರ್ಗೀಕರಣದ ಬಗ್ಗೆ ನಾವು ಯಾವುದೇ ಟೀಕೆಟಿಪ್ಪಣಿಗಳನ್ನು ಮಾಡಲು ಸಾಧ್ಯವಾಗುವುದಿಲ್ಲ ಹಾಗೂ ಇದರಿಂದ ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

xxiv) ಟಿಪ್ಪಣಿ ಸಂಖ್ಯೆ 19 (ಇ) ಕರ್ನಾಟಕ ಸರ್ಕಾರದ ಸ್ಪಷ್ಟನೆಯು ಬಾಕಿಯಿರುವಂತೆ, ಜಲನಾಯನ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕ್ಷೇತ್ರ ನೀರಾವರಿ ನಾಲೆಗಳ ಮೇಲೆ ಭರಿಸಲಾಗಿರುವ ವೆಚ್ಚಗಳ ಶೇಕಡಾ 10ರಷ್ಟನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವ ಬಗ್ಗೆ. ಇದರಿಂದ ಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

xxv) ಟಿಪ್ಪಣಿ ಸಂಖ್ಯೆ 21 ರೈತರುಗಳು ಮತ್ತು ನೀರು ಬಳಕೆದಾರರ ಸಹಕಾರ ಸಂಘಗಳಿಂದ ನೀರಿನ ದರಗಳನ್ನು ಸಂಗ್ರಹಿಸುವ ಸಲುವಾಗಿ ತಗಾದೆಗಳನ್ನು ಸೃಷ್ಟಿಸುವ ಹಾಗೂ ನೀರಿನ ದರಗಳನ್ನು ಲೆಕ್ಕ ಇಡುವುದಕ್ಕೆ ಅಗತ್ಯ ಬದಲಾವಣೆಗಳನ್ನು ಮಾಡುವುದಕ್ಕೆ ಸಂಬಂಧಿಸಿದಂತೆ ವ್ಯವಸ್ಥೆಯನ್ನು ಸುಗಮಗೊಳಿಸುವುದಕ್ಕೆ ಸಂಬಂಧಿಸಿದಂತೆ. ಇದರ ಅನುಪಸ್ಥಿತಿಯಲ್ಲಿಲೆಕ್ಕಪತ್ರಗಳ ಮೇಲೆ ಆಗಬಹುದಾದ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

xxvi) ಟಿಪ್ಪಣಿ ಸಂಖ್ಯೆ 22 "ಇತರೆ ವರಮಾನ"ವು ಪರಿಶಿಷ್ಟ ಜಾತಿಗಳ ಯೋಜನೆ/ಪರಿಶಿಷ್ಟ ಪಂಗಡಗಳ ಉಪ–ಯೋಜನೆಗಳ ಕಾಮಗಾರಿಗಳ ಕಡೆಗೆ ರೂ.306.78 ಕೋಟಿ ಮೊತ್ತದಷ್ಟು ಅನುದಾನಗಳನ್ನು ಒಳಗೊಂಡಿರುತ್ತದೆ. ಈ ಆಸ್ತಿಗಳನ್ನು ಕಂಪನಿಯು ನಿಯಂತ್ರಿಸುವುದಿಲ್ಲವಾದ್ದರಿಂದ, ಇದೇ ಸ್ವರೂಪದ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಮತ್ತೊಂದು ಕಂಪನಿಯು ಪಡೆದುಕೊಂಡಿರುವಂತಹ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯ (EAC) ತಜ್ಞರುಗಳ ಸಲಹಾ ಸಮಿತಿಯ ಅಭಿಪ್ರಾಯದಂತೆ, ಕಾರ್ಯಗತಗೊಳಿಸುವ ಸಂಸ್ಥೆಯಾಗಿ ಸರ್ಕಾರದ ಪರವಾಗಿ ಸ್ವೀಕರಿಸಲಾದ ಅನುದಾನ ಮತ್ತು ಭರಿಸಲಾದ ವೆಚ್ಚಗಳನ್ನು ಕಂಪನಿಯ ಲಾಭ ಮತ್ತು ನಷ್ಟ ತ:ಖ್ತೆಯ ಮೂಲಕ ಲೆಕ್ಕಪತ್ರಗಳಲ್ಲಿ ತೋರಿಸಬಾರದಿದ್ದಿತು. ತತ್ಪರಿಣಾಮವಾಗಿ, ಪ್ರಸಕ್ತ ಸಾಲಿನ ಆದಾಯ ಮತ್ತು ವೆಚ್ಚಗಳನ್ನು ಅಷ್ಟರ ಮಟ್ಟಿಗಿನ ಮೊತ್ತದಿಂದ ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿರುವುದು.

xxvii) ಟಿಪ್ಪಣಿ ಸಂಖ್ಯೆ 25 – "ಇತರೆ ವೆಚ್ಚಗಳು" ಜಲಾನಯನ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಡೆಗೆ ಭರಿಸಲಾದ ರೂ.48.24 ಕೋಟಿ (ಹಿಂದಿನ ಸಾಲಿನಲ್ಲಿ ರೂ.65.76 ಕೋಟಿ) ಮೊತ್ತದಷ್ಟು ವೆಚ್ಚಗಳನ್ನು ಒಳಗೊಂಡಿರುತ್ತದೆ. ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯ ತಜ್ಞರುಗಳ ಸಲಹಾ ಸಮಿತಿಯ ಅಭಿಪ್ರಾಯದಂತೆ, ಕ್ಷೇತ್ರ ನೀರಾವರಿ ನಾಲೆಗಳನ್ನು, ಸಂಬಂಧಿತ ನೀರಾವರಿ ಯೋಜನೆಯ ನೇರ ಕಾರಣಗಳಿಂದ ವೆಚ್ಚಗಳು ಸಂಭವಿಸಿದ್ದಲ್ಲಿ, ಸಂಬಂಧಿತ ನೀರಾವರಿ ಆಸ್ತಿಗಳ ಜೊತೆಯಲ್ಲಿ ಬಂಡವಾಳೀಕರಿಸಬಹುದು. ಆದಾಗ್ಯೂ, ಕಂಪನಿಯು ತನ್ನ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಅಂತಹ ವೆಚ್ಚಗಳು ಬಂಡವಾಳ ಸ್ವರೂಪದವೋ ಅಥವಾ ವರಮಾನ ಸ್ವರೂಪದವೋ ಎಂಬುದರ ಬಗ್ಗೆ ಯಾವುದೇ ವರ್ಗೀಕರಣವನ್ನೂ ಮಾಡಿರುವುದಿಲ್ಲ. ಅಷ್ಟರಮಟ್ಟಿಗೆ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಖರ್ಚಿಗೆ ಹಾಕಲಾಗಿರುವ ಬಂಡವಾಳ ವೆಚ್ಚದಿಂದಾಗಿ, ನಷ್ಟವನ್ನು ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿರುವುದು ಹಾಗೂ ಸ್ಪರ್ಷಿಸಬಹುದದ/ಗೋಚರ ಆಸ್ತಿಗಳು/ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು.

ಪ್ರಸಕ್ತ ಸಾಲಿನ ಆದಾಯ ಮತ್ತು ವೆಚ್ಚಗಳನ್ನು ರೂ.306.78 ಕೋಟಿ ಮೊತ್ತದಷ್ಟು ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿರುವುದು ಹಾಗೂ ಭೂಮಿ ಮತ್ತು ಚಾಲ್ತಿ ಜವಾಬ್ದಾರಿಗಳನ್ನು ರೂ.235.12 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸಿರುವುದನ್ನು ಹೊರತುಪಡಿಸಿದಂತೆ (ಷರತ್ತು xxvi ಮತ್ತು ಷರತ್ತು viii), ಮೇಲೆ ತಿಳಿಸಲಾಗಿರುವ ನಮ್ಮ ಟೀಕೆಟಿಪ್ಪಣಿಗಳ ತತ್ಪರಿಣಾಮವಾದಂತಹ ಪ್ರಭಾವಗಳನ್ನು ತತ್‌ಕ್ಷಣದಲ್ಲಿ ಪರಿಮಾಣೀಕರಿಸಲಾಗಲಿಲ್ಲ,

ಷರತ್ತುಬದ್ಧ ಅಭಿಪ್ರಾಯಗಳು :

ಈ ಮೇಲಿನ ಕಂಡಿಕೆಗಳಲ್ಲಿ ನೀಡಲಾಗಿರುವ ನಮ್ಮ ಟೀಕೆಟಿಪ್ಪಣಿಗಳ ಷರತ್ತಿಗೆ ಒಳಪಟ್ಟಂತೆ, 'ನಮ್ಮ ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರ'

ಇದರ ಅಡಿಯಲ್ಲಿ ವಿವರಿಸಲಾಗಿರುವಂತಹ ಲೆಕ್ಕಪತ್ರಗಳ ಮೇಲಿನ ಪ್ರಭಾವಗಳನ್ನು ಹೊರತುಪಡಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ದೊರೆತಿರುವ ಅತ್ಯುತ್ತಮ ಮಾಹಿತಿಯ ಪ್ರಕಾರ ಹಾಗೂ ನಮಗೆ ನೀಡಲಾಗಿರುವ ವಿವರಣೆಗಳ ಪ್ರಕಾರ, ಮೇಲೆ ತಿಳಿಸಲಾಗಿರುವ ಹಣಕಾಸು ತ:ಖ್ತೆಗಳು ಅಧಿನಿಯಮದ ಅಗತ್ಯತೆಗಳ ಪ್ರಕಾರ, 31 ಮಾರ್ಚ್ 2018ರಲ್ಲಿದ್ದಂತೆ ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಹಾಗೂ ಅದೇ ದಿನಾಂಕದಂದು ಅಂತ್ಯಗೊಂಡ ಸಾಲಿಗೆ ಅದು ಭರಿಸಿದ ನಷ್ಟ (ಇತರೆ ಸಮಗ್ರ ವರಮಾನವೂ ಸೇರಿದಂತೆ ಹಣಕಾಸು ಚಟುವಟಿಕೆಗಳಿಗೆ ಸಂಬಂಧಿತ ಕಾರ್ಯನಿರ್ವಹಣೆ) ಹಾಗೂ ಅದರ ಹಣಕಾಸಿನ ಹರಿವಿನ ಮೇಲೆ ಭಾರತದಲ್ಲಿ ಸರ್ವೇಸಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಒಂದು ಸತ್ಯಾಸತ್ಯತೆಯಿಂದ ಹಾಗೂ ನ್ಯಾಯಸಮ್ಮತತೆಯಿಂದ ಕೂಡಿದ ಅಭಿಪ್ರಾಯವನ್ನು ನೀಡುತ್ತವೆ.

ಮಹತ್ವಪೂರ್ಣ ವಿಷಯಗಳು

ಹಣಕಾಸು ತ:ಖ್ತೆಗಳಿಗೆ ಅವಿಭಾಜ್ಯ ಭಾಗಗಳಾಗಿರುವಂತಹ ಟಿಪ್ಪಣಿಗಳಲ್ಲಿನ ಈ ಕೆಳಗಿನ ವಿಷಯಗಳ ಕಡೆಗೆ ನಾವು ನಿಮ್ಮ ಗಮನವನ್ನು ಈ ಮೂಲಕ ಸೆಳೆಯುತ್ತಿರುವೆವು :

ಎ) ಟಿಪ್ಪಣಿ ಸಂಖ್ಯೆ 29 (II) (ಸಿ) ಇದರ ಅಡಿಯಲ್ಲಿ, "ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳು, ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಅಂದಾಜುಗಳು ಮತ್ತು ತಪ್ಪುಗಳು", ಇವುಗಳಿಗೆ ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 8ರ ಅಡಿಯಲ್ಲಿ ಅಗತ್ಯತೆಯಿರುವಂತೆ, ಪೂರ್ವಾವಧಿಯ ಕೆಲವು ತಪ್ಪುಗಳನ್ನು ಆ ಹಿಂದಿನ ಅವಧಿಯಿಂದ ಜಾರಿಗೆ ಬರುವಂತೆ ಸರಿಪಡಿಸುವ ಸಲುವಾಗಿ ಕಂಪನಿಯ ತುಲನಾತ್ಮಕ ಹಣಕಾಸು ತ:ಖ್ತೆಗಳಿಗೆ ಕೆಲವು ಪುನರ್–ತ:ಖ್ತೆಗಳನ್ನು ಮಾಡಲಾಗಿದ್ದುದರ ಬಗ್ಗೆ ಹಾಗೂ ಕೆಲವು ಪ್ರತ್ಯೇಕವಾಗಿ ಪರಿಗಣಿಸಲ್ಪಟ್ಟಿರುವ ಬಾಬುಗಳನ್ನು 01.04.2016ರಲ್ಲಿದ್ದಂತೆ ಮತ್ತು 31.03.2017ರಲ್ಲಿದ್ದಂತೆ ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಹಾಗೂ 31.03.2017ಕ್ಕೆ ಅಂತ್ಯಗೊಂಡ ಸಾಲಿನ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಪುನರ್–ತಿಳಿಸಲಾಗಿದ್ದಿತು.

ಬಿ) ಟಿಪ್ಪಣಿ ಸಂಖ್ಯೆ 5 (i) (ಎ) – ಇದರ ಅಡಿಯಲ್ಲಿ ತುಂಗಾ ಮೇಲ್ದಂಡೆ ಯೋಜನೆ (ಪ್ರಸ್ತುತ ಇರುವಂತಹ ನಾಲೆಗಳನ್ನು ಹೊರತುಪಡಿಸಿ), ಘಟಪ್ರಭಾ, ಮಲಪ್ರಭಾ, ಮತ್ತು ಹರಿನಲ ಯೋಜನೆಗಳಿಗೆ ಸಂಬಂಧಿತ ಕರ್ನಾಟಕ ಸರ್ಕಾರದ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ತನ್ಮೂಲಕ ಕಂಪನಿಯ ಲೆಕ್ಕಪತ್ರಗಳ ಪುಸ್ತಕಗಳಿಗೆ ತೆಗೆದುಕೊಳ್ಳಲಾಗಿದ್ದಿತು ಹಾಗೂ ವರಾಹಿ ಯೋಜನೆಗಳ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಕರ್ನಾಟಕ ಸರ್ಕಾರದ ಅನುಮೋದನೆಯು ಬಾಕಿ ಇದ್ದುದರಿಂದ ಕಂಪನಿಯು ತನ್ನ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರಲಿಲ್ಲ.

ಸಿ) ಟಿಪ್ಪಣಿ ಸಂಖ್ಯೆ 5 (i) (ಬಿ) – ಇದರ ಅಡಿಯಲ್ಲಿ ಎತ್ತಿನಹೊಳೆ, ಭದ್ರಾ ಮೇಲ್ದಂಡೆ ಯೋಜನೆ, ಗಾಯತ್ರಿ ಜಲಾಶಯ ಮತ್ತು ವಾಣಿ ವಿಲಾಸ ಸಾಗರ ಯೋಜನೆಗಳನ್ನು ಈವರೆಗೂ ಕಂಪನಿಯು ಕಾರ್ಯಾನಿರ್ವಹಿಸುತ್ತಿದ್ದು, ಕರ್ನಾಟಕ ಸರ್ಕಾರದ ಆದೇಶದ ಅನುಸಾರ ಇಲ್ಲಿಂದ ಮುಂದಕ್ಕೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಸುಪರ್ದಿಗೆ ಬಂದಿರುತ್ತದೆ. ಹಾಗೂ ಕಂಪನಿಯು ತನ್ನ ನಿರ್ದೇಶಕರುಗಳ ಮಂಡಳಿಯ 14.12.2016ರ ಸಭೆಯಲ್ಲಿ ಅನುಮೋದಿಸಿದಂತೆ ಮೇಲೆ ತಿಳಿಸಲಾದ ಯೋಜನೆಗಳನ್ನು ಸಂಬಂಧಿತ ಕಚೇರಿಗಳು ಮತ್ತು ಸಿಬ್ಬಂದಿಯ ಜೊತೆಯಲ್ಲಿ ಮೆ. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ 01/01/2017ರಿಂದ ಜಾರಿಗೆ ಬಂದಂತೆ ವರ್ಗಾಯಿಸಬೇಕಾಗಿದೆ ಹಾಗೂ ಕರ್ನಾಟಕ ಸರ್ಕಾರದ ಅನುಮೋದನೆಯು ಬಾಕಿಯಿದ್ದಂತೆ ಕಂಪನಿಯು ಬೆಂಗಳೂರಿನ ಎಂಬೆಸ್ಸಿ ಸ್ವೇರಿನಲ್ಲಿ ರೂ.14.04 ಕೋಟಿ ಮೊತ್ತಕ್ಕೆ ಖರೀದಿಸಿರುವಂತಹ ಕಟ್ಟಡವನ್ನು ಮೆ. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವರ್ಗಾಯಿಸಬೇಕು, ಈ ಯೋಜನೆಗಳಿಗೆ ಸಂಬಂಧಿತ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಹಾಗೂ ಅಲ್ಲದೆಯೇ ಎಂಬೆಸ್ಸಿ ಸ್ವೇರಿನಲ್ಲಿನಲ್ಲಿನ ಕಟ್ಟಡವನ್ನು ಹಿಂಪಡೆಯಲಾಗಿದ್ದು ಹಾಗೂ 'ವರ್ಗಾವಣೆಗಾಗಿ ಹೊಂದಲಾಗಿರುವ ಆಸ್ತಿಗಳು ಮತ್ತು ಜವಾಬ್ದಾರಿಗಳು' ಈ ಒಂದು ಪ್ರತ್ಯೇಕ ಶೀರ್ಷಿಕೆಯ ಅಡಿಯಲ್ಲಿ – ಪ್ರತ್ಯೇಕವಾಗಿ ತೋರಿಸಲಾಗಿರುವುದು; ಅಲ್ಲದೆಯೇ, ಟಿಪ್ಪಣಿ ಸಂಖ್ಯೆ 20ರಲ್ಲಿ ಮೂಲಕ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವರ್ಗವಣೆಗೊಂಡಿರುವ ಯೋಜನೆಗಳಿಗೆ ಸಂಬಂಧಿತ ಆಸ್ತಿಗಳು ಮತ್ತು ಜವಾಬ್ದಾರಿಗಳ ಮೌಲ್ಯವನ್ನು 31.12.2016ರಲ್ಲಿದ್ದಂತೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವರ್ಗಾವಣೆಗೊಂಡಿರುವ ವಿಭಾಗಗಳನ್ನು ಪರಿಗಣಿಸಿದಂತೆ ಲೆಕ್ಕಹಾಕಲಾಗುತ್ತಿದೆ ಹಾಗೂ ವಾಸ್ತವಿಕ ವರ್ಗಾವಣೆಯ ಸಮಯದಲ್ಲಿ ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಬದಲಾವಣೆಗಳ ಅಗತ್ಯ ಬೀಳಬಹುದು ಎಂಬುದಾಗಿ ತಿಳಿಸಲಾಗಿರುವುದು.

ಡಿ) ಟಿಪ್ಪಣಿ ಸಂಖ್ಯೆ 6 (ಎ) – ಇದರ ಅಡಿಯಲ್ಲಿ ಭದ್ರಾ ಸಿಂಗಟಲೂರು ಏತ ನೀರಾವರಿ ಯೋಜನೆ ಮತ್ತು ತುಂಗಾ ಮೇಲ್ದಂಡೆ ಯೋಜನೆ, ಇವುಗಳ ಅಡಿಯಲ್ಲಿನ ಯೋಜನೆಗಳನ್ನು ಕರ್ನಾಟಕ ಸರ್ಕಾರದ ತಾತ್ವಿಕ ಅನುಮೋದನೆಯ ಆಧಾರದ ಮೇರೆಗೆ ಕೈಗೆತ್ತಿಕೊಳ್ಳಲಾಗಿದ್ದು, ಕೃಷ್ಣಾ ಜಲ ವಿವಾದ ಆಯೋಗ IIರ ತೀರ್ಪಿನ ಅಡಿಯಲ್ಲಿ ಭಾರತ ಸರ್ಕಾರದ ಅಧಿಸೂಚನೆಯನ್ನು ನಿರೀಕ್ಷಿಸಲಾಗುತ್ತಿರುವುದು.

ಇ) ಟಿಪ್ಪಣಿ ಸಂಖ್ಯೆಗಳು 8, 9,11, 18 ಮತ್ತು 19, ಇವುಗಳ ಅಡಿಯಲ್ಲಿ ತೋರಿಸಲಾಗಿರುವಂತಹ ಗುತ್ತಿಗೆದಾರರುಗಳಿಗೆ ಅವರುಗಳು ಕಾಮಗಾರಿಗಳಿಗಾಗಿ ಸಿದ್ಧಗೊಳ್ಳುವ ಸಲುವಾಗಿ ಪಾವತಿಸಲಾಗಿದ್ದ ಮುಂಗಡಗಳು, ಸರ್ಕಾರದಿಂದ ಬರಬೇಕಿರುವ ಮೊತ್ತಗಳು/ಸರ್ಕಾರಕ್ಕೆ ಪಾವತಿಸಬೇಕಿರುವ ಮೊತ್ತಗಳು/ಸರ್ಕಾರದೊಂದಿಗೆ ಇರುವ ಠೇವಣಿಗಳು

ಸರ್ಕಾರಿ ಕಂಪನಿಗಳು/ ಸಂಸ್ಥೆಗಳಿಗೆ ಪಾವತಿಸಬೇಕಿರುವ/ ಸರ್ಕಾರಿ ಕಂಪನಿಗಳು/ ಸಂಸ್ಥೆಗಳಿಂದ ಬರಬೇಕಿರುವ ಮೊತ್ತಗಳು, ಗುತ್ತಿಗೆದಾರರುಗಳಿಂದ ಬರಬೇಕಿರುವವುಗಳು, ಇತರವುಗಳು, ಎಂಎಸ್‌ತಿಸಿ ಮಾರಾಟಗಳ ಬಾಕಿಗಳು, ಸರಬರಾಜುದಾರರುಗಳಿಗೆ/ ಸೇವೆಗಳಿಗೆ ಮುಂಗಡಗಳು ತೋರಿಸಲಾಗಿರುವ ಮೊತ್ತಗಳು ಹಾಗೂ ಇತರೆ ಜವಾಬ್ದಾರಿಗಳು, ಇವುಗಳ ಅಡಿಯಲ್ಲಿರುವಂತಹ ಶಿಲ್ಕುಗಳಿಗೆ ಸಂಬಂಧಿಸಿದಂತೆ ಖಚಿತಪಡಿಸಿಕೊಳ್ಳಬೇಕಾದ ಹಾಗೂ ಅಗತ್ಯವಿದ್ದಲ್ಲಿ ಇವುಗಳನ್ನು ಸಮನ್ವಯಗೊಳಿಸುವ ಷರತ್ತಿಗೆ ಒಳಪಟ್ಟಿರುತ್ತವೆ.

ಎಫ್) ಟಿಪ್ಪಣಿ ಸಂಖ್ಯೆ 19 (ಎ) ಇದರ ಅಡಿಯಲ್ಲಿ ಮುನ್ನೆಚ್ಚರಿಕೆ ಭದ್ರತಾ ಠೇವಣಿ (ಇಎಂಡಿಗಳು) ಹಾಗೂ ಹೆಚ್ಚುವರಿ ಭದ್ರತಾ ಠೇವಣಿಗಳನ್ನು ಗುತ್ತಿಗೆದಾರರುಗಳ ಲಿಖಿತ ಕೋರಿಕೆಯ್ ಆಧಾರದ ಮೇರೆಗೆ ಬಡ್ಡಿಯನ್ನು ಗಳಿಸಬಹುದಾದ ಭದತೆಗಳನ್ನಾಗಿ ಪರಿವರ್ತಿಸಬಹುದಾದ್ದರಿಂದ ಚಾಲ್ತಿ ಹಣಕಾಸು ಜವಾಬ್ದಾರಿಗಳು ಎಂಬುದಾಗಿ ವರ್ಗೀಕರಿಸಲಾಗಿದೆ.

ಜಿ) ಟಿಪ್ಪಣಿ ಸಂಖ್ಯೆ 19 (ಬಿ) ಇದರ ಅಡಿಯಲ್ಲಿ ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಇಲಾಖೆಯಲ್ಲಿ ಇರುವಂತಹ ರೂ.94.92 ಕೋಟಿ ಮೊತ್ತದಷ್ಟು ಮುನ್ನೆಚ್ಚರಿಕೆ ಭದ್ರತಾ ಠೇವಣಿ ಮೊತ್ತಗಳು ಕಂಪನಿಗೆ ವರ್ಗಾವಣೆಗೊಳ್ಳುವುದು ಬಾಕಿಯಿರುತ್ತವೆ.

ಇತರೆ ವಿಷಯಗಳು

(ಎ) ವಿಶೇಷ ಭೂಸ್ವಾಧೀನ ಅಧಿಕಾರಿಯವರ ಕಚೇರಿಗಳ ಲೆಕ್ಕಪತ್ರಗಳನ್ನು ಈ ಹಣಕಾಸು ತ:ಖ್ತೆಗಳಲ್ಲಿ ಸೇರಿಸಿರುವುದಿಲ್ಲ. ಈ ಕಚೇರಿಗಳು ಕಂಪನಿಯ ಆಡಳಿತಾತ್ಮಕ ನಿಯಂತ್ರಣದಲ್ಲಿರುವುದಿಲ್ಲ ಎಂಬುದಾಗಿ ಎಂಬುದಾಗಿ ನಮಗೆ ತಿಳಿಸಲಾಗಿರುವುದು. ನಮ್ಮ ಅಭಿಪ್ರಾಯವು ಕಂಪನಿಯ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ದಾಖಲಿಸಲಾಗಿರುವ ಹಾಗೂ ಕಂಪನಿಯ ಹಣಕಾಸು ತ:ಖ್ತೆಗಳಲ್ಲಿ ಬಹಿರಂಗಪಡಿಸಲಾಗಿರುವ ಈ ಕಚೇರಿಗಳಿಗೆ ಸಂಬಂಧಿಸಿದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮಾತ್ರವೇ ನಮ್ಮ ಅಭಿಪ್ರಾಯವಾಗಿರುತ್ತದೆ.

(ಬಿ) ಕಂಪನಿಯು ನೀರಾವರಿ ಅನುಕೂಲತೆಗಳು ಮತ್ತು ಕರ್ನಾಟಕ ಸರ್ಕಾರವು ಕಾಲಾನುಕಾಲಕ್ಕೆ ವಹಿಸಬಹುದಾದಂತಹ ಸಮಗ್ರ ಕುಡಿಯುವ ನೀರು ಯೋಜನೆಗಳನ್ನು ಕಾರ್ಯಗತಗೊಳಿಸುವ ಒಂದು ನಿರ್ದಿಷ್ಟ ಉದ್ದೇಶದೊಂದಿಗಿನ ಒಂದು ವಿಶೇಷ ಉದ್ದೇಶದ ವಾಹಕವಾಗಿರುತ್ತದೆ. ಕಂಪನಿಯ ಕಾರ್ಯಾಚರಣೆ ಮತ್ತು ನಿರ್ವಹಣೆಯ ವೆಚ್ಚಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕಾರ್ಯಸಾಧ್ಯವಾದಂತಹ ರೀತಿಯಲ್ಲಿ ಭರಿಸಲಾಗಿರುವುದು, ಕಂಪನಿಯ ಹಣಕಾಸಿನ ಅಗತ್ಯತೆಗೆ ಒಂದು ಸಾಮಗ್ರಿಯಾಗಿರದ ನೀರು ಸರಬರಾಜಿಗಾಗಿ ಪಾವತಿಸುವಂತೆ ತಗಾದೆ ಸೃಷ್ಟಿಸುವ ಮೂಲಕ ಭರಿಸುತ್ತದೆಯಾದರೂ, ಅದು ಕಂಪನಿಯ ಹಣಕಾಸಿನ ಅಗತ್ಯತೆಗೆ ಸಮರ್ಪಕವಾಗಿರುವುದಿಲ್ಲ ಮತ್ತು ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಈಕ್ವಿಟಿ ಹಾಗೂ ಅನುದಾನಗಳ ರೂಪದಲ್ಲಿ ಉಳಿಕೆ ಮೊತ್ತವನ್ನು ಕರ್ನಾಟಕ ಸರ್ಕಾರದಿಂದ ಸ್ವೀಕರಿಸುತ್ತದೆ. ಬಡ್ಡಿಯೂ ಸೇರಿದಂತೆ ಅವಧಿ ಸಾಲಗಳು ಮತ್ತು ಬಾಂಡುಗಳ ಮರುಪಾವತಿಗೆ ಅಗತ್ಯತೆ ಬಿದ್ದಂತೆಲ್ಲಾ ಕರ್ನಾಟಕ ಸರ್ಕಾರವು ಖಾತರಿಯನ್ನು ಮತ್ತು ಹಣಕಾಸನ್ನು ಒದಗಿಸುವುದು.

ಮೇಲೆ ತಿಳಿಸಲಾದಂತಹ ವಿಷಯಗಳಿಗೆ ಸಂಬಂಧಿಸಿದಂತೆ ನಾವು ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡಿರುವುದಿಲ್ಲ.

ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ

ಎ) ಅಧಿನಿಯಮದ ಪರಿಚ್ಛೇದ 143(11)ರ ಅನುಗುಣವಾಗಿ ಭಾರತ ಸರ್ಕಾರವು ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ (ಆದೇಶ) ಅಗತ್ಯತೆಯಂತೆ ನೀಡಿರುವ ಆದೇಶದ ಅಗತ್ಯತೆಯಂತೆ ಮೇಲೆ ತಿಳಿಸಲಾಗಿರುವ ಆದೇಶದ ಕಂಡಿಕೆ 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ವಿಷಯಗಳ ಮೇಲೆ ಒಂದು ತ:ಖ್ತೆಯನ್ನು 'ಅನುಬಂಧ 1' ನಲ್ಲಿ ನೀಡಿರುವೆವು.

ಬಿ) ಅಧಿನಿಯಮದ ಪರಿಚ್ಛೇದ 143(5) ರ ಅಡಿಯಲ್ಲಿ ಅಗತ್ಯತೆಯಿರುವಂತೆ, ಕಂಪನಿಯ ಲೆಕ್ಕಪುಸ್ತಕಗಳು ಮತ್ತು ದಾಖಲೆಗಳ ಪರಿಶೀಲನೆಗಳ ಆಧಾರದ ಮೇರೆಗೆ, ನಾವು ಸೂಕ್ತವಾಗಿರುವುದಾಗಿ ಪರಿಗಣಿಸಿದಂತೆ ಹಾಗೂ ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದಂತಹ ವಿವರಗಣೆಗಳಂತೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವಂತಹ ನಿರ್ದೇಶನಗಳ ಮೇಲಿನ ಒಂದು ತ:ಖ್ತೆಯನ್ನು 'ಅನುಬಂಧ 2' ಯಲ್ಲಿ ನಾವು ನೀಡಿರುವೆವು.

ಸಿ) ಅಧಿನಿಯಮದ ಪರಿಚ್ಛೇದ 143(3)ರ ಅನುಸಾರ ಅಗತ್ಯತೆಯಿರುವಂತೆ, ನಾವು ಈ ಕೆಳಗಿನವುಗಳನ್ನು ವರದಿ ಮಾಡುತ್ತಿರುವೆವು:

(i) ಮೇಲಿನ ಕಂಡಿಕೆ "ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ" ದಲ್ಲಿ ವಿವರಿಸಲಾಗಿರುವಂತಹ ವಿಷಯಗಳ ಮೇಲೆ ಪ್ರಭಾವಗಳನ್ನು ಭೀರುವ ಮಾಹಿತಿಗಳನ್ನು ಹೊರತುಪಡಿಸಿದಂತೆ, ನಮ್ಮ ಅತ್ಯುತ್ತಮ ಅರಿವು ಹಾಗೂ ನಂಬಿಕೆಯ ಪ್ರಕಾರ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಅಗತ್ಯವಿದ್ದಂತಹ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನೂ ನಾವು ಪಡೆದುಕೊಂಡಿರುವೆವು;

(ii) ಮೇಲಿನ ಕಂಡಿಕೆ "ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ" ದಲ್ಲಿ ವಿವರಿಸಲಾಗಿರುವಂತಹ ವಿಷಯಗಳ ಮೇಲೆ ಪ್ರಭಾವಗಳನ್ನು ಭೀರುವ ಮಾಹಿತಿಗಳನ್ನು ಹೊರತುಪಡಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ, ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ

ಅಗತ್ಯವಿರುವ ರೀತಿಯಲ್ಲಿ ಕಂಪನಿಯು ಲೆಕ್ಕಪತ್ರಗಳ ಪುಸ್ತಕಗಳನ್ನು, ಅಂತಹ ಪುಸ್ತಕಗಳ ನಮ್ಮ ಪರಿಶೀಲನೆಯಿಂದ ಕಂಡು ಬಂದಂತೆ ಸಮರ್ಪಕವಾಗಿ ನಿರ್ವಹಿಸಿರುವುದು.

iii) ಈ ವರದಿಯು ವ್ಯವಹರಿಸಿರುವಂತಹ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ, ಲಾಭ ಮತ್ತು ನಷ್ಟದ ತ:ಖ್ತೆ ಹಾಗೂ ಹಣಕಾಸು ಹರಿವಿನ ತ:ಖ್ತೆಗಳು ಲೆಕ್ಕಪತ್ರಗಳು ಹಾಗೂ ಈಕ್ವಿಟಿಯಲ್ಲಿನ ಬದಲಾವಣೆಗಳ ತ:ಖ್ತೆಗಳು ಲೆಕ್ಕಪುಸ್ತಕಗಳ ಜೊತೆ ತಾಳೆ ಹೊಂದುತ್ತವೆ.

iv) ಮೇಲಿನ ಕಂಡಿಕೆ "ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ" ದಲ್ಲಿ ವಿವರಿಸಲಾಗಿರುವಂತಹ ವಿಷಯಗಳ ಮೇಲೆ ಪ್ರಭಾವಗಳನ್ನು ಭೀರುವ ಮಾಹಿತಿಗಳನ್ನು ಹೊರತುಪಡಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ, ಈ ವರದಿಯು ವ್ಯವಹರಿಸಿರುವಂತಹ ಮೇಲೆ ತಿಳಿಸಲಾಗಿರುವಂತಹ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವ ಹಣಕಾಸು ತ:ಖ್ತೆಗಳು ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು) ನಿಯಮಗಳು, 2015ರ ಜೊತೆಯಲ್ಲಿ ಓದಲ್ಪಡುವ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ ಅನುವುಗಳನ್ನು ಅನುಸರಿಸಿರುತ್ತವೆ.

v) ಕಂಪನಿಯು ಒಂದು ಸರ್ಕಾರಿ ಕಂಪನಿಯಾಗಿದ್ದು, ನಿರ್ದೇಶಕರುಗಳನ್ನು ಅನರ್ಹ ಗೊಳಿಸುವುದಕ್ಕೆ ಸಂಬಂಧಿತ ಅಧಿನಿಯಮದ ಪರಿಚ್ಛೇದ 164(2)ರ ಅನುವು ಅಧಿಸೂಚನೆ ಜಿ.ಎಸ್.ಆರ್ 463(ಇ) ದಿನಾಂಕ 5 ಜೂನ್ 2015ರ ಪ್ರಕಾರ ಅನ್ವಯಗೊಳ್ಳುವುದಿಲ್ಲ.

vi) ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಅವುಗಳಿಗೆ ಸಂಬಂಧಿತ ವಿಷಯಗಳಿಗೆ ಸಂಬಂಧಿತ ಷರತ್ತುಗಳನ್ನು ಮೇಲಿನ ಕಂಡಿಕೆ "ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ" ದಲ್ಲಿ ತಿಳಿಸಲಾಗಿದೆ.

vii) ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ (ಸಮರ್ಪಕತೆಗೆ ಸಂಬಂಧಿಸಿದಂತೆ) ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಗಳ ಮೇಲಿನ ಪರಿಣಾಮಕಾರಿತ್ವದ ಬಗ್ಗೆ 'ಅನುಬಂಧ ಎ' ನಲ್ಲಿ ನೀಡಲಾಗಿರುವ ನಮ್ಮ ವರದಿಯನ್ನು ಉಲ್ಲೇಖಿಸುವುದು.

viii) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರುಗಳು) ತಿದ್ದುಪಡಿ ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಿರುವ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಅರಿವು ಹಾಗೂ ನಂಬಿಕೆಯ ಪ್ರಕಾರ ಹಾಗೂ ನಮಗೆ ಒದಗಿಸಲಾದ ಮಾಹಿತಿ ಮತ್ತು ನೀಡಲಾದ ವಿವರಣೆಗಳಂತೆ:

ಡಿ) ಕಂಪನಿಯು ಬಾಕಿಯಿರುವಂತಹ ವಿವಾದಗಳು ತನ್ನ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಆಧಾರದ ಮೇರೆಗೆ ತಯಾರಿಸಲಾಗಿರುವ ಹಣಕಾಸು ತ:ಖ್ತೆಗಳ ಮೇಲೆ ಬರಬಹುದಾದ ಪರಿಣಾಮಗಳನ್ನು ತಿಳಿಯಪಡಿಸಿರುತ್ತದೆ.

ಇ) ಮೇಲಿನ ಕಂಡಿಕೆ "ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ" ದಲ್ಲಿ ವಿವರಿಸಲಾಗಿರುವಂತಹ ವಿಷಯಗಳ ಮೇಲೆ ಪ್ರಭಾವಗಳನ್ನು ಭೀರುವ ಮಾಹಿತಿಗಳನ್ನು ಹೊರತುಪಡಿಸಿದಂತೆ, ಅನ್ವಯಗೊಳ್ಳುವ ನಿಯಮಗಳು ಅಥವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅಡಿಯಲ್ಲಿ ಅಗತ್ಯತೆಯಿರುವಂತೆ, ಕಂಪನಿಯು ಜನ್ಯ ಗುತ್ತಿಗೆಗಳು ಸೇರಿದಂತೆ ದೀರ್ಘಾವಧಿ ಗುತ್ತಿಗೆಗಳ ಮೇಲೆ ಯಾವುದಾದರೂ ವಿಷಯಕ ನಿರೀಕ್ಷಿತನಷ್ಟಗಳು ಇದ್ದಲ್ಲಿ, ಅವುಗಳಿಗಾಗಿ ಅನುವನ್ನು ಮಾಡಿರುವುದು.

ಎಫ್) ಲೆಕ್ಕಪತ್ರಗಳ ಪುಸ್ತಕಗಳ ಅನುಸಾರ ಹಾಗೂ ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳ ಅನುಸಾರ, ಕಂಪನಿಯು ಹೂಡಿಕೆದಾರರ ಶೈಕ್ಷಣಿಕ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸಲು ಅಗತ್ಯವಿರುವಂತಹ ಯಾವುದೇ ಮೊತ್ತಗಳೂ ಇರಲಿಲ್ಲ ಮತ್ತು ಆದ್ದರಿಂದ ಹೂಡಿಕೆದಾರರ ಶೈಕ್ಷಣಿಕ ಮತ್ತು ಸಂರಕ್ಷಣಾ ನಿಧಿಗೆ ಮೊತ್ತಗಳನ್ನು ವರ್ಗಾಯಿಸುವಲ್ಲಿನ ವಿಳಂಬಗಳ ಬಗ್ಗೆ ಟೀಕೆಟಿಪ್ಪಣಿ ಮಾಡುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಮಣಿಯನ್ ಅಂಡ್ ರಾವ್
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ : 001983S

ಶ್ರೀಕಾಂತ್ ಆರ್
ಪಾಲುದಾರರು
ಸದಸ್ಯತ್ವ ಸಂಖ್ಯೆ 203138

ಸ್ಥಳ : ಬೆಂಗಳೂರು
ದಿನಾಂಕ : 11ನೇ ಸೆಪ್ಟಂಬರ್, 2018

ಮಣಿಯನ್ ಅಂಡ್ ರಾವ್
ಸನದಿ ಲೆಕ್ಕಿಗರು

ಸಂಖ್ಯೆ 361, 1ನೇ ಮಹಡಿ, 7ನೇ ಅಡ್ಡ ರಸ್ತೆ,
1ನೇ ಬ್ಲಾಕು, ಜಯನಗರ, ಬೆಂಗಳೂರು,–11.
ದೂರವಾಣಿ : **080 – 26569500**
ಫ್ಯಾಕ್ಸ್ : **080 - 26569501**
ಇ–ಮೇಲ್ : **contact@manian-rao.com**

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ – 1

(ಕರ್ನಾಟಕ ನೀರಾವರಿ ನಿಗಮ ನಿಯಮಿತದ 31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿಗೆ ನಮ್ಮ ಅದೇ ದಿನಾಂಕದ ವರದಿಯಲ್ಲಿ ಉಲ್ಲೇಖಿಸಿರುವಂತೆ).

ನಾವು ಈ ಕೆಳಗಿನಂತೆ ವರದಿ ಮಾಡುತ್ತಿರುವೆವು :

1) ಕಂಪನಿಯ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ:

ಎ) ಕಂಪನಿಯು ಪರಿಮಾಣಾತ್ಮಕ ವಿವರಗಳು, ಚಲಿಸಬಹುದಾದ ಸ್ಥಿರಾಸ್ತಿಗಳು ಯಾವ ಸ್ಥಿತಿಯಲ್ಲಿರುತ್ತವೆ ಹಾಗೂ ತನ್ನ ವಿವಿಧ ವಿಭಾಗಗಳ ಉದ್ದಗಲಕ್ಕೂ ಇರುವಂತಹ ನೀರಾವರಿ ಮೂಲಭೂತ ಸೌಕರ್ಯಗಳು ಒಳಗೊಂಡಂತೆ ಸಂಪೂರ್ಣ ವಿವರಗಳನ್ನು ತೋರಿಸಿದಂತೆ ಸಮರ್ಪಕ ದಾಖಲೆಗಳನ್ನು ನಿರ್ವಹಿಸಿರುವುದು. ಆದಾಗ್ಯೂ, ಕರ್ನಾಟಕ ಸರ್ಕಾರದಿಂದ ವರ್ಗಾವಣೆಗೊಂಡಂತಹ ಆಸ್ತಿಗಳಿಗೆ ಸಂಬಂಧಿಸಿದಂತೆ ಹಾಗೂ 1 ಏಪ್ರಿಲ್ 2010ರಲ್ಲಿದ್ದಂತೆ ಕಂಪನಿಯು ಸ್ಥಿರಸ್ತಿಗಳಿಗೆ ಸೇರ್ಪಡೆಗೊಳಿಸಿದ ಚರಾಸ್ತಿಗಳಿಗೆ (ಸಾಗಿಸಬಹುದಾದ) ಸಂಬಂಧಿಸಿದಂತೆ, ವೈಯಕ್ತಿಕ ಆಸ್ತಿಗಳನ್ನು ಗುರುತಿಸುವ ಬದಲು ಆಸ್ತಿಗಳ ಒಂದು ಗುಂಪಾಗಿ ನಿರ್ವಹಿಸಲಾಗಿರುವುದು. ಮುಂದುವರೆದು, ನಮ್ಮ ಅಭಿಪ್ರಾಯದಲ್ಲಿ ಬಂಡವಾಳೀಕರಿಸಲಾದಂತಹ ನಿರ್ಮಾಣಗಳನ್ನೂ ಸಹ ಸ್ತಿರಾಸ್ತಿಗಳ ವಹಿಯಲ್ಲಿ ಸಂಬಂಧಿತ ಆಸ್ತಿಗಳಿಗೆ ಹಂಚಿಕೆ ಮಾಡುವ ಅಗತ್ಯತೆಯಿರುತ್ತದೆ.

ಬಿ) ಕಂಪನಿಯು ಚರಾಸ್ತಿಗಳ ಭೌತಿಕ ತಪಾಸಣೆ/ಪರೀಕ್ಷಣೆಗಾಗಿ ನಿಯತವಾಗಿ ವಾರ್ಷಿಕ ಕಾರ್ಯಕ್ರಮವನ್ನು ಹೊಂದಿರುವುದು ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಗಿರುವುದು. ಆದಾಗ್ಯೂ, ಕಂಪನಿಯು ಪ್ರಸಕ್ತ ಸಾಲಿನಲ್ಲಿ ಸ್ಥಿರಾಸ್ತಿಗಳ ಭೌತಿಕ ತಪಾಸಣೆಯನ್ನು ಕೈಗೊಂಡಿರುವುದಿಲ್ಲ ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಗಿರುವುದು. ಆದ್ದರಿಂದ, ಈ ಆಸ್ತಿಗಳಿಗೆ ಸಂಬಂಧಿಸಿದಂತೆ, ಲೋಪದೋಷಗಳು/ನ್ಯೂನತೆಗಳ ಬಗ್ಗೆ ಹಾಗೂ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಹೊಂದಾಣಿಕೆಗಳನ್ನು ಮಾಡುವುದಕ್ಕೆ ಸಂಬಂಧಿಸಿದಂತೆ ನಾವು ವರದಿ ಮಾಡುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಮುಂದುವರೆದು, ಕಂಪನಿಯು ರಸ್ತೆಗಳು, ಸೇತುವೆಗಳು ಮತ್ತು ನೆಲಗಾಲುವೆ/ಅಡ್ಡಕಾಲುವೆಗಳು, ಅಣೆಕಟ್ಟೆಗಳು ಮತ್ತು ಅಡ್ಡಗಟ್ಟೆಗಳು, ವಿತರಣಾ ನಾಲೆಗಳು ಮತ್ತು ಪಾರ್ಶ್ವನಾಲೆಗಳು, ನಾಲೆಗಳು ಮತ್ತು ಶಾಖಾನಾಲೆಗಳು, ಕಟ್ಟಡಗಳು ಮತ್ತು ಕಾಲೋನಿಗಳು ಮತ್ತು ಭೂಮಿ, ಇವೇ ಮುಂತಾದ ನಿರ್ಮಾಣ ಸಂಬಂಧಿತ ಸ್ಪರ್ಶಿಸಬಹುದಾದ ಆಸ್ತಿಗಳ ಭೌತಿಕ ಪರಿಶೀಲನೆಯನ್ನು ಕಂಪನಿಯು ಮಾಡಿರುವುದಿಲ್ಲ ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಗಿದೆ.

ಆಸ್ತಿಗಳ ಪರಿಶೀಲನೆ ಮತ್ತು ಅವುಗಳನ್ನು ಲೆಕ್ಕಪತ್ರಗಳ ಪುಸ್ತಕಗಳೊಂದಿಗೆ ಹೋಲಿಕೆ ಮಾಡುವ ಸಲುವಾಗಿ ಒಂದು ಸೂಕ್ತ ವ್ಯವಸ್ಥೆಯನ್ನು ಕಂಪನಿಯು ರೂಪಿಸುವ ಅಗತ್ಯತೆಯಿರುತ್ತದೆ.

ಸಿ) ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಸರ್ಕಾರಿ ಅಧಿಸೂಚನೆಗಳ ಮೂಲಕ ಕಂಪನಿಗೆ ಬಂದಿರುವಂತಹ ಸ್ಥಿರಾಸ್ತಿಗಳ ದಾಖಲೆಗಳು/ಹಕ್ಕುಪತ್ರಗಳು, ಪರಿವರ್ತನಾ ಪತ್ರಗಳು (ಮ್ಯುಟೇಷನ್) ಹಾಗೂ ಆರ್ಟಿಸಿಗಳನ್ನು ಕಂಪನಿಯ ಹೆಸರಿನಲ್ಲಿ ಹೊಂದಲಾಗಿದೆ. ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಗಳು 5 (i) (ಎಫ್) ಬಗ್ಗೆಯೂ ಗಮನವನ್ನು ಸೆಳೆಯಲಾಗುತ್ತಿದೆ, ಅದರಲ್ಲಿ, ಸ್ವಾಧೀನಪಡಿಸಿಕೊಳ್ಳಲಾಗಿರುವ 1,64,308 ಎಕರೆಗಳಷ್ಟು ಭೂಮಿಯ ಪೈಕಿ, 1,11,801 ಎಕರೆಗಳಿಗೆ ಸಂಬಂಧಿಸಿದಂತೆ ಪರಿವರ್ತನೆಗೆ ಸಂಬಂಧಿತ ನಮೂದುಗಳನ್ನು ಸರ್ಕಾರದ ಭೂ ದಾಖಲೆಗಳಲ್ಲಿ ಮಾಡಲಾಗಿದ್ದಿತು ಹಾಗೂ ಉಳಿಕೆ 52,507 ಎಕರೆಗಳಷ್ಟು ಭೂ ಹಿಡುವಳಿಗೆ ಸಂಬಂಧಿಸಿದಂತೆ ಪರಿವರ್ತನೆಯ ಪ್ರಕ್ರಿಯೆಯು ಪ್ರಗತಿಯಲ್ಲಿದ್ದಿತು. ಅಲ್ಲದೆಯೇ, ಬೆಂಗಳೂರಿನ ಎಂಬೆಸ್ಸಿ ಸ್ಕ್ವೇರಿನಲ್ಲಿ ಖರೀದಿಸಲಾಗಿರುವ ಕಟ್ಟಡಕ್ಕೆ ಸಂಬಂಧಿಸಿದಂತೆ, ಕಂಪನಿಯು ಸ್ವಾಧೀನವನ್ನು ಪಡೆದುಕೊಂಡಿರುವುದಾದರೂ, ಷೇರುಗಳ ವರ್ಗಾವಣೆಯ ಮೂಲಕ ಕಂಪನಿಯ ಪರವಾಗಿ ಕಟ್ಟಡದ ಮೇಲಿನ ಹಕ್ಕನ್ನು ವರ್ಗಾಯಿಸುವುದಕ್ಕೆ ಸಂಬಂಧಿತ ಕಾರ್ಯವಿಧಾನವು ಬಾಕಿಯಿದ್ದಿತು.

2. ಕಂಪನಿಯ ದಾಸ್ತಾನುಗಳಿಗೆ ಸಂಬಂಧಿಸಿದಂತೆ :

ಎ) ನಮಗೆ ನೀಡಲಾದ ವಿವರಣೆಗಳಂತೆ, ಪ್ರಸಕ್ತ ಸಾಲಿನಲ್ಲಿ ವ್ಯವಸ್ಥಾಪನೆಯು ಒಂದು ನ್ಯಾಯಸಮ್ಮತ ಅಂತರದಲ್ಲಿ ಉಗ್ರಾಣ ಸಾಮಗ್ರಿಗಳು, ಬಿಡಿಭಾಗಗಳು, ಸಾಧನಗಳು, ಸ್ಥಾವರಗಳು ಮತ್ತು ಉಪಯೋಗವಿಲ್ಲದ ಸಾಮಗ್ರಿಗಳು ಮುಂತಾದ ಸರಕುಸಾಮಗ್ರಿಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿರುತ್ತದೆ.

ಬಿ) ನಮಗೆ ನೀಡಲಾದ ವಿವರಣೆಗಳಂತೆ, ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಮಾಡಲಾಗಿರುವ ದಾಖಲೆಗಳಿಗೆ ಹೋಲಿಸಿದಂತೆ ಭೌತಿಕ ಪರಿಶೀಲನೆಯಲ್ಲಿ ಕಂಡುಬಂದಿದ್ದ ವ್ಯತ್ಯಾಸಗಳು ಒಂದು ವಿಷಯಕ ಅಂಶವಾಗಿರುವುದಿಲ್ಲ ಹಾಗೂ ಕೊರತೆ ಹಾಗೂ ಲುಪ್ತಗೊಳ್ಳುತ್ತಿರುವಿಕೆಗಳಿಗೆ ಅನುವು ಮಾಡುವ ಮೂಲಕ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಅಂತಹವುಗಳನ್ನು ವ್ಯವಹರಿಸಲಾಗುವುದು.

3. ಸಾಲಗಳು ಮತು ಮುಂಗಡಗಳು

ಕಂಪನಿಯು, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 189ರ ಅಡಿಯಲ್ಲಿ ನಿರ್ವಹಿಸಿರುವ ವಹಿಯಲ್ಲಿ ವ್ಯಾಪಿಸಿರುವ ಭದ್ರತೆಯಿಂದ ಕೂಡಿದ ಅಥವಾ ಭದ್ರತೆಯಿಂದ ಕೂಡಿರದ ಸಾಲಗಳನ್ನು ಕಂಪನಿಗಳಿಗೆ, ಸಂಸ್ಥೆಗಳಿಗೆ ನಿಯಮಿತ ಜವಾಬ್ದಾರಿಯನ್ನು ಹೊಂದಿರುವ ಪಾಲುದಾರಿಕೆ ಸಂಸ್ಥೆಗಳಿಗೆ ಅಥವಾ ಇತರೆ ತಂಡಗಳಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ. ಅದರಂತೆಯೇ, ಮೇಲೆ ತಿಳಿಸಲಾದಂತಹ ಷರತ್ತುಗಳು 3(iii) (ಎ) ಯಿಂದ (ಸಿ) ವರೆಗಿನ ಷರತ್ತುಗಳ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

4. ಸಾಲಗಳು, ಹೂಡಿಕೆಗಳು ಮತ್ತು ಖಾತರಿಗಳು

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಅರಿವು ಹಾಗೂ ನಂಬಿಕೆಯ ಪ್ರಕಾರ ಹಾಗೂ ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ, ಕಂಪನಿಯು, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 185 ಮತ್ತು 186ರ ಅಡಿಯಲ್ಲಿ ವ್ಯಾಪಿಸಿರುವಂತಹ ತಂಡಗಳಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ ಅಥವಾ ಹೂಡಿಕೆಗಳನ್ನು ಮಾಡಿರುವುದಿಲ್ಲ ಅಥವಾ ಖಾತರಿಗಳು ಅಥವಾ ಭದ್ರತೆಗಳನ್ನು ನೀಡಿರುವುದಿಲ್ಲ. ಆದ್ದರಿಂದ, ಮೇಲೆ ತಿಳಿಸಲಾದಂತಹ ಷರತ್ತು ಸಂಖ್ಯೆ 3 (iv) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

5. ನಮಗೆ ನೀಡಿರುವ ಮಾಹಿತಿಯಂತೆ, ಕಂಪನಿಯು ಪರಿಚ್ಛೇದ 73ರಿಂದ 76ರ ಅನುವುಗಳು ಅಥವಾ ಕಂಪನಿಗಳ ಅಧಿನಿಯಮ 2013ರ ಇತರೆ ಸಂಬಂಧಿತ ಅನುವುಗಳ ಅಡಿಯಲ್ಲಿ ಅರ್ಥೈಸುವ ರೀತಿಯಲ್ಲಿ ಯಾವುದೇ ಠೇವಣಿಗಳನ್ನು ಸ್ವೀಕರಿಸಿರುವುದಿಲ್ಲ. ಆದ್ದರಿಂದ, ಮೇಲೆ ತಿಳಿಸಲಾದಂತಹ ಷರತ್ತು ಸಂಖ್ಯೆ 3(v) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

6. ನಮಗೆ ನೀಡಿರುವ ಮಾಹಿತಿಯಂತೆ, ಕಂಪನಿಗಳ (ವಾಸ್ತವಿಕ ಖರ್ಚುವೆಚ್ಚಗಳ ದಾಖಲೆಗಳು ಮತ್ತು ಲೆಕ್ಕಪರಿಶೋಧನೆ) ನಿಯಮಗಳು, ಕೇಂದ್ರ ಸರ್ಕಾರದ 2014ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 148(1)ರ ಅಡಿಯಲ್ಲಿ ವಾಸ್ತವಿಕ ಖರ್ಚುವೆಚ್ಚಗಳ (Cost) ದಾಖಲೆಗಳ ನಿರ್ವಹಣೆಯನ್ನು ನಿರ್ದಿಷ್ಟಪಡಿಸಿರುವುದಿಲ್ಲ.

7. ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದಂತೆ :

ಎ) ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಹಾಗೂ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು ನಾವು ಮಾಡಿದ ಪರಿಶೀಲನೆಗಳ ಆಧಾರದ ಮೇರೆಗೆ, ಪಾವತಿಸಲು ಬಾಕಿಯಾದಂತಹ ದಿನಾಂಕದಿಂದ 6 ತಿಂಗಳುಗಳಿಗೂ ಮೀರಿದಂತೆ ಪಾವತಿಸಲು ಬಾಕಿಯಿರುವಂತಹ ಈ ಕೆಳಗಿನ ಅವಿವಾಧಿತ ಬಾಕಿಗಳನ್ನು ಹೊರತುಪಡಿಸಿದಂತೆ, ಕಂಪನಿಯು ಆದಾಯ ತೆರಿಗೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ, ಮಾರಾಟಗಳ ಮೇಲಿನ ತೆರಿಗೆ, ಸೇವಾ ತೆರಿಗೆ, ಮೌಲ್ಯ ವರ್ಧಿತ ತೆರಿಗೆ, ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ಸು ರಾಜಧನ, ಭವಿಷ್ಯ ನಿಧಿ, ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಹಾಗೂ ಇತರೆ ಯಾವುದಾದರೂ ಬಾಕಿಗಳು ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ಅವಿವಾಧಿತ ಶಾಸನಬದ್ಧ ಬಾಕಿಗಳನ್ನು ಸಂಬಂಧಿತ ಇಲಾಖೆಗಳಿಗೆ ಪಾವತಿಸುವಲ್ಲಿ ಕಂಪನಿಯು ಸಾಮಾನ್ಯವಾಗಿ ನಿಯತವಾಗಿರುತ್ತದೆ. ಅಲ್ಲದೆಯೇ, ಕೆಲವು ಪ್ರಕರಣಗಳಲ್ಲಿ ಸಂಬಂಧಿತ ಇಲಾಖೆಗಳಿಗೆ ಪಾವತಿಸುವಲ್ಲಿ ವಿಳಂಬಗಳನ್ನೂ ಸಹ ಗಮನಿಸಲಾಯಿತು.

ಶಾಸನಬದ್ಧ ಬಾಕಿಗಳು	ರೂಪಾಯಿಗಳು ಲಕ್ಷದಲ್ಲಿ
ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ಸು (1.11.2006ಕ್ಕೆ ಮುಂಚಿನ ಅವಧಿಯಲ್ಲಿ ವಹಿಸಲಾಗಿದ್ದ ಕಾಮಗಾರಿಗಳೂ ಸೇರಿದಂತೆ)	2667.10
ಸಿ.ಬಿ.ಎಫ್.	54.39
ಪಾವತಿಸಬೇಕಿರುವ ಎನ್‌ಪಿಎಸ್	2609.21
ಪಾವತಿಸಬೇಕಿರುವ ದರಗಳು ಮತ್ತು ತೆರಿಗೆಗಳು	12.81
ವೃತ್ತಿಗಳ ಮೇಲಿನ ತೆರಿಗೆ	0.41
ಮೂಲ ಆದಾಯ ತೆರಿಗೆ	87.61
ಸೇವಾ ತೆರಿಗೆ	44.99
ಡಬ್ಲ್ಯುಸಿಟಿ (WCT)	247.03
ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ	45.18
ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಿರುವ ರಾಜಧನ	18.72
ಜಿಪಿಎಫ್/ಜಿಐಎಸ್/ಕೆಜಿಐಡಿ	4.58
ಪಿಂಚಣಿ ಕಾಣಿಕೆ ನಿಧಿ	1.52

ಮುಂದುವರೆದು,

1. ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಯಾವುದೇ ವಿವಾದದ ಕಾರಣ ಭವಿಷ್ಯ ನಿಧಿ, ಆದಾಯ ತೆರಿಗೆ, ಸೇವಾ ತೆರಿಗೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ, ಮಾರಾಟಗಳ ಮೇಲಿನ ತೆರಿಗೆ, ಮೌಲ್ಯ ವರ್ಧಿತ ತೆರಿಗೆ ಪಾವತಿಗಳ ಬಾಕಿಗಳು ಇರುವುದಿಲ್ಲ.

2. ಅರಣ್ಯಗಳ ಉಪ–ಸಂರಕ್ಷಣಾಧಿಕಾರಿಯವರ ಕಚೇರಿಯ ಮೂಲಕ ಕಾರ್ಯಗತಗೊಳಿಸಲಾದ ಇತರೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಅಗತ್ಯ ವಿವರಗಳ ಅನುಪಸ್ಥಿತಿಯಲ್ಲಿ ಇಎಸ್‌ಐ ಮತ್ತು ಪಿಎಫ್ ಅಧಿನಿಯಮಗಳ ಅನುವುಗಳನ್ನು ಹಾಗೂ ಅಲ್ಲದೆಯೇ ಮೂಲದಲ್ಲಿಯೇ ತೆರಿಗೆಯನ್ನು ಕಡಿದುಕೊಳ್ಳುವುದಕ್ಕೆ ಸಂಬಂಧಿತ ಅನುವುಗಳನ್ನು ಅನ್ವಯಗೊಳಿಸುವುದರ ಬಗ್ಗೆ ನಿರ್ಧಾರಣೆ ಮಾಡಲು ನಮಗೆ ಸಾಧ್ಯವಾಗಲಿಲ್ಲ (ವ್ಯವಸ್ಥಾಪನೆಯ ಅನುಸಾರ ಈ ನಿಟ್ಟಿನಲ್ಲಿ ಅವು ಅನ್ವಯಗೊಳ್ಳುವುದಿಲ್ಲ.)

3. ವರ್ಷದ ಅಂತ್ಯದಲ್ಲಿದ್ದಂತೆ ಅನುವು ಮಾಡಲಾಗಿದ್ದ ಪಾವತಿಯಾಗಿರದ ಬಿಲ್ಲುಗಳಿಗಾಗಿ ಪಾವತಿ ಬಾಧ್ಯತೆಗೆ ಸಂಬಂಧಿಸಿದಂತೆ ಶಾಸನಬದ್ಧ ಕಡಿದುಕೊಳ್ಳುವಿಕೆಗಳನ್ನು ಅಂತಹ ಪಾವತಿಗಳನ್ನು ವಾಸ್ತವಿಕವಾಗಿ ಪಾವತಿಸುವ ಸಾಲಿನಲ್ಲಿ ಹೊಂದಾಣಿಕೆ ಮಾಡಲಾಗುವುದು/ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು, ನಮ್ಮ ಅಭಿಪ್ರಾಯದಲ್ಲಿ ಇದರ ಬಗ್ಗೆ ಪುನರ್–ಯೋಚಿಸುವ ಅಗತ್ಯತೆಯಿರುತ್ತದೆ.

ಬಿ) ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ವರ್ಷದ ಅಂತ್ಯದಲ್ಲಿದ್ದಂತೆ ಯಾವುದೇ ವಿವಾದದ ಕಾರಣ ಭವಿಷ್ಯ ನಿಧಿ, ಆದಾಯ ತೆರಿಗೆ, ಸೇವಾ ತೆರಿಗೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ, ಮಾರಾಟಗಳ ಮೇಲಿನ ತೆರಿಗೆ, ಮೌಲ್ಯ ವರ್ಧಿತ ತೆರಿಗೆ ಪಾವತಿಗಳ ಬಾಕಿಗಳು ಇರುವುದಿಲ್ಲ.

8. ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಕಂಪನಿಯು ಹಣಕಾಸು ಸಂಸ್ಥೆಗಳಿಗೆ / ಸರ್ಕಾರಕ್ಕೆ / ಬ್ಯಾಂಕುಗಳಿಗೆ ಸಾಲಗಳು ಅಥವಾ ಋಣಗಳ ಮರುಪಾವತಿಯಲ್ಲಿ ತಪ್ಪಿತಸ್ತಗೊಂಡಿರುವುದಿಲ್ಲ.

9. ನಮಗೆ ನೀಡಲಾದ ವಿವರಣೆಗಳು ಹಾಗೂ ಒದಗಿಸಲಾದ ಮಾಹಿತಿಯಂತೆ, ಕಂಪನಿಯು, ಸಾಲ ಸಾಧನಗಳೂ ಒಳಗೊಂಡಂತೆ ಪ್ರಾರಂಭಿಕ ಸಾರ್ವಜನಿಕ ನೀಡಿಕೆ ಅಥವಾ ಹೆಚ್ಚುವರಿ ಸಾರ್ವಜನಿಕ ನೀಡಿಕೆಗಳ ಮೂಲಕ ಯಾವುದೇ ಹಣಕಾಸನ್ನು ಸಂಗ್ರಹಿಸಿರುವುದಿಲ್ಲ. (ಋಣ/ಸಾಲಗಳ ಸಾಧನಗಳೂ ಸೇರಿದಂತೆ). ಬ್ಯಾಂಕುಗಳಿಂದ ಅವಧಿ ಸಾಲಗಳಿಗೆ ಸಂಬಂಧಿಸಿದಂತೆ, ಯೋಜನೆಗಳಿಗೆ ಪಾವತಿಗಳು ಒಂದು ಸಾಮಾನ್ಯ ಬ್ಯಾಂಕು ಖಾತೆಯ ಮೂಲಕ ಆಗಿರುವುದರಿಂದ ಹಾಗೂ ಆಂತಹ ಬ್ಯಾಂಕು ಖಾತೆಯು ಈಕ್ವಿಟಿ, ಸಾಲಗಳ ಮೊತ್ತ, ಬಡ್ಡಿ ವರಮಾನ, ಅನುದಾನಗಳು ಮತ್ತು ಇತರೆ ವರಮಾನಗಳನ್ನು ಒಳಗೊಂಡಿರುವುದರಿಂದ, ಪಡೆದುಕೊಳ್ಳಲಾದ ಸಾಲಗಳನ್ನು ಯಾವ ಉದ್ದೇಶಕ್ಕಾಗಿ ಪಡೆಯಲಾಗಿದ್ದಿತೋ ಅದೇ ಉದ್ದೇಶಕ್ಕಾಗಿ ಬಳಸಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಅವಧಿ ಸಾಲಗಳನ್ನು ಕಂಪನಿಯು ಯಾವ ಉದ್ದೇಶಕ್ಕಾಗಿ ಪಡೆದುಕೊಂಡಿದ್ದಿತೋ, ಅದೇ ಉದ್ದೇಶಕ್ಕಾಗಿ ಬಳಸಿಕೊಂಡಿರುತ್ತದೆ.

10. ಕಂಪನಿಯು ಲೆಕ್ಕಪುಸ್ತಕಗಳು ಮತ್ತು ದಾಖಲೆಗಳನ್ನು ಭಾರತದಲ್ಲಿ ಸರ್ವೇ ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಪರಿಪಾಠಗಳ ಅನುಸಾರ ಹಾಗೂ ನಾವು ಪರಿಶೀಲನೆ ಮಾಡುವ ವೇಳೆಯಲ್ಲಿ ನಮಗೆ ಒದಗಿಸಲಾದಂತಹ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ ಪ್ರಸಕ್ತ ಸಾಲಿನಲ್ಲಿ ಕಂಪನಿಯು ಅಥವಾ ಅದರ ಅಧಿಕಾರಿಗಳು ಅಥವಾ ಸಿಬ್ಬಂದಿಯು ಯಾವುದೇ ಭೌತಿಕ ವಂಚನೆಗಳನ್ನೂ ಎಸಗಿರುವಂತಹ ಯಾವುದೇ ದೃಷ್ಟಾಂತಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ ಅಥವಾ ಆ ರೀತಿಯಾಗಿ ವರದಿಯಾಗಿರುವುದಿಲ್ಲ. ಅಕ್ರಮಗಳ ಆಪಾದನೆಯ ಮೇರೆಗೆ ಕೆಲವು ಉದ್ಯೋಗಿಗಳ ವಿರುದ್ಧವಾಗಿ ಕೈಗೊಂಡಿರುವ ಇಲಾಖಾ ತನಿಖೆಗೆ ಸಂಬಂಧಿಸಿದಂತೆ, ಅಂತಹ ತನಿಖೆಗಳು ಪೂರ್ಣಗೊಂಡನಂತರವಷ್ಟೇ ಅಂತಹ ಪ್ರಕರಣಗಳ ಸ್ವರೂಪವನ್ನು ನಿರ್ಧಾರಣೆ ಮಾಡಬಹುದು ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಗಿರುತ್ತದೆ.

11. ಕಂಪನಿಯು ಒಂದು ಸರ್ಕಾರಿ ಕಂಪನಿಯಾಗಿದ್ದು, ವ್ಯವಸ್ಥಾಪಕ ಅಧಿಕಾರಿಗಳ ಸಂಭಾವನೆಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ ಎಫ್ ಸಂಖ್ಯೆ 1/2/2014–ಸಿಎಲ್. v ದಿನಾಂಕ 05 ಜೂನ್ 2015ರ ಅನುಸಾರ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 197ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

12. ಕಂಪನಿಯು ಒಂದು ನಿಧಿ ಕಂಪನಿ ಆಗಿರುವುದಿಲ್ಲ. ಆದ್ದರಿಂದ ಆದೇಶದ ಷರತ್ತು 3(xii) ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

13. ನಮಗೆ ನೀಡಲಾದ ವಿವರಣೆಗಳು ಹಾಗೂ ಒದಗಿಸಲಾದ ಮಾಹಿತಿಯಂತೆ, ಸಂಬಂಧಿತ ತಂಡಗಳೊಂದಿಗೆ ಯಾವುದೇ ವ್ಯವಹಾರಗಳನ್ನು ಮಾಡಿರುವುದಿಲ್ಲ ಮತ್ತು ಆದ್ದರಿಂದ ಆದೇಶದ ಷರತ್ತು 3(xiii) ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

14. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಕಂಪನಿಯು ಲೆಕ್ಕಪರಿಶೋಧನೆಯ ಸಮೀಕ್ಷೆಯ ಅಡಿಯಲ್ಲಿನ ಸಾಲಿನಲ್ಲಿ ರೂ.1,816.38 ಕೋಟಿ ಮೊತ್ತದಷ್ಟು ಷೇರುಗಳ ಆಧ್ಯತೆಯ ಹಂಚಿಕೆಯನ್ನು ಮಾಡಿದ್ದಿತು ಹಾಗೂ 60 ದಿನಗಳ ಶಾಸನಬದ್ಧ ಅವಧಿಯನ್ನೂ ಮೀರಿದಂತೆ ಹಂಚಿಕೆಯಲ್ಲಿನ ವಿಳಂಬ, ಪ್ರತ್ಯೆಕ ಬ್ಯಾಂಕು ಖಾತೆಗಳನ್ನು ತೆರೆಯದಿರುವುದು ಹಾಗೂ ವಿಳಂಬವಾಗಿ ಮಾಡಲಾದ ಹಂಚಿಕೆಗೆ ಬಡ್ಡಿ ಪಾವತಿಯ ಅನುವು ಮಾಡದಿರುವುದು, ಇವುಗಳನ್ನು ಹೊರತುಪಡಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 42ರ ಅಗತ್ಯತೆಗಳನ್ನು ಪೂರೈಸಿದ್ದಿತು.

ಮುಂದುವರೆದು, ಕಂಪನಿಯು ಪ್ರಸಕ್ತ ಸಾಲಿನಲ್ಲಿ ಷೇರು ಬಂಡವಾಳಕ್ಕಾಗಿ ಮುಂಗಡವಾಗಿ ಸ್ವೀಕರಿಸಿದ್ದ ರೂ.298.58 ಕೋಟಿ ಮೊತ್ತದಷ್ಟು ಅನುದಾನಗಳನ್ನು ಪರಿಶಿಷ್ಟ ಜಾತಿಗಳ ಯೋಜನೆ/ಪರಿಶಿಷ್ಟ ಪಂಗಡಗಳ ಉಪ–ಯೋಜನೆಗಳ ಕಾಮಗಾರಿಗಳ ಕಡೆಗೆ ಪರಿವರ್ತಿಸಿದ್ದಿತು, ಅದಕ್ಕಾಗಿ 26–06–2018ರಂದು ಕಂಪನಿಯು ಅಗತ್ಯ ಸರ್ಕಾರಿ ಅಧಿಸೂಚನೆಯನ್ನು ಪಡೆದುಕೊಂಡಿದ್ದಿತು.

15. ನಮಗೆ ಒದಗಿಸಲಾದಂತಹ ಮಾಹಿತಿಗಳು ಮತ್ತು ನೀಡಲಾದ ವಿವರಣೆಗಳ ಅನುಸಾರ, ಕಂಪನಿಯು ನಿರ್ದೇಶಕರುಗಳೊಂದಿಗೆ ಅಥವಾ ಅವರುಗಳೊಂದಿಗೆ ಸಂಬಂಧ ಹೊಂದಿರುವ ವ್ಯಕ್ತಿಗಳೊಂದಿಗೆ ಕಂಪನಿಯು ಯಾವುದೇ ನಗದೇತರ ವ್ಯವಹಾರಗಳನ್ನು ಮಾಡಿರುವುದಿಲ್ಲ. ಅದರಂತೆಯೇ, ಆದೇಶದ ಷರತ್ತು 3(XIV) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

16. ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕು ಅಧಿನಿಯಮ, 1934ರ ಪರಿಚ್ಛೇದ 45–ಎ ಅಡಿಯಲ್ಲಿ ನೋಂದಣಿ ಮಾಡಿಸುವ ಅಗತ್ಯತೆಯಿರುವುದಿಲ್ಲ, ಆದ್ದರಿಂದ ಆದೇಶದ ಷರತ್ತು 3 (XVI) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

ಮಣಿಯನ್ ಅಂಡ್ ರಾವ್
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ : 001983S

ಶ್ರೀಕಾಂತ್ ಆರ್
ಪಾಲುದಾರರು
ಸದಸ್ಯತ್ವ ಸಂಖ್ಯೆ 203138

ಸ್ಥಳ : ಬೆಂಗಳೂರು
ದಿನಾಂಕ : 11ನೇ ಸೆಪ್ಟಂಬರ್, 2018

ಮಣಿಯನ್ ಅಂಡ್ ರಾವ್
ಸನದಿ ಲೆಕ್ಕಿಗರು

ಸಂಖ್ಯೆ 361, 1ನೇ ಮಹಡಿ, 7ನೇ ಅಡ್ಡ ರಸ್ತೆ,
1ನೇ ಬ್ಲಾಕು, ಜಯನಗರ, ಬೆಂಗಳೂರು,–11.
ದೂರವಾಣಿ : **080 – 26569500**
ಫ್ಯಾಕ್ಸ್ : **080 - 26569501**
ಇ–ಮೇಲ್ : **contact@manian-rao.com**

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ – ಎ

31 ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಹಣಕಾಸು ತ:ಖ್ತೆಗಳ ಮೇಲೆ ನಮ್ಮ ಅದೇ ದಿನಾಂಕದ ಸ್ವತಂತ್ರ ಲೆಕ್ಕಪರಿಶೋಧಕರ ವರದಿಯಲ್ಲಿ ಉಲ್ಲೇಖಿಸಿರುವಂತೆ.

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143(3)(i)ರ ಅಡಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿ:

31 ಮಾರ್ಚ್ 2018ರಲ್ಲಿದ್ದಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತದ 31 ಮಾರ್ಚ್ 2018ರಲ್ಲಿದ್ದಂತೆ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಆ ದಿನಾಂಕದಂದು ಮುಕ್ತಾಯಗೊಂಡಂತಹ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯೊಂದಿಗೆ ಜೊತೆಗೂಡಿದಂತೆ ನಾವು ಲೆಕ್ಕಪರಿಶೋಧನೆ ಮಾಡಿದೆವು.

ಆಂತರಿಕ ಹಣಕಾಸು ನಿಯಂತ್ರಣಗಳಿಗೆ ವ್ಯವಸ್ಥಾಪನೆಯ ಜವಾಬ್ದಾರಿ

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ನಿಗಮದಿಂದ ಸ್ಥಾಪಿಸಲಾಗಿರುವ ಹಣಕಾಸು ವರದಿಯ ಮಾನದಂಡದ ಮೇಲೆ ಆಂತರಿಕ ನಿಯಂತ್ರಣವನ್ನು ಆಧರಿಸಿದಂತೆ ಆಂತರಿಕ ನಿಯಂತ್ರಣವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸಿಕೊಂಡು ಹೋಗುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳು, ಕಂಪನಿಯ ಕಾರ್ಯನೀತಿಗಳಿಗೆ ಬದ್ಧತೆಯಿಂದ ಕೂಡಿರುವುದನ್ನೂ ಒಳಗೊಂಡಂತೆ ತನ್ನ ವ್ಯಾಪಾರವ್ಯವಹಾರವನ್ನು ನಿಯಮಗಳ ಅನುಸಾರ ಮತ್ತು ದಕ್ಷತೆಯಿಂದ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಣಾಮಕಾರಿತ್ವದಿಂದ ಕಾರ್ಯಚರಣೆಗೊಳ್ಳುತ್ತಿದ್ದ ಸಮರ್ಪಕವಾದಂತಹ ಆಂತರಿಕ ಹಣಕಾಸು ನಿಯಂತ್ರಣದ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆ, ತನ್ನ ಆಸ್ತಿಗಳನ್ನು ಸಂರಕ್ಷಿಸಿಕೊಳ್ಳುವುದು, ವಂಚನೆಗಳು ಮತ್ತು ತಪ್ಪುಗಳು ಸಂಭವಿಸುವುದನ್ನು ತಡೆಯುವುದು ಮತ್ತು ಅಂತಹ ಪ್ರಕರಣಗಳನ್ನು ಪತ್ತೆಹಚ್ಚುವುದು, ಲೆಕ್ಕವನ್ನಿಡುವಿಕೆಯ ದಾಖಲೆಗಳ ಯಥಾರ್ಥತೆ ಮತ್ತು ಪರಿಪೂರ್ಣತೆ ಹಾಗೂ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅಗತ್ಯತೆಯಿರುವಂತೆ ವಿಶ್ವಸನೀಯತೆಯಿಂದ ಕೂಡಿದ ಹಣಕಾಸಿಗೆ ಸಂಬಂಧಿತ ಮಾಹಿತಿಯನ್ನು ಸಮಯೋಚಿತವಾಗಿ ತಯಾರಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

ಲೆಕ್ಕಪರಿಶೋಧಕರುಗಳ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಈ ಹಣಕಾಸು ತ:ಖ್ತೆಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143(10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ ಎಂಬುದಾಗಿ ಭಾವಿಸಲಾಗಿರುವ ಹಾಗೂ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಅನ್ವಯಗೊಳ್ಳುವ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ, ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹೊಂದಿರುತ್ತವೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯ ಸಮರ್ಪಕತೆ ಹಾಗೂ ಅವುಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷಾಧಾರಗಳನ್ನು ಪಡೆದುಕೊಳ್ಳುವುದಕ್ಕಾಗಿ ಕಾರ್ಯಾಚರಣೆಗಳನ್ನು ನಡೆಸುವುದನ್ನು ನಮ್ಮ ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ನಮ್ಮ ಲೆಕ್ಕಪರಿಶೋಧನೆಯು, ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳನ್ನು ಅರ್ಥ ಮಾಡಿಕೊಳ್ಳುವುದು, ಇರಬಹುದಾದ ವಿಷಯಕ ದುರ್ಬಲತೆಯ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದು ಹಾಗೂ ನಿರ್ಧಾರಣೆ ಮಾಡಲಾದ ಸಂಭಾವ್ಯ

ಅಪಾಯದ ಆಧಾರದ ಮೇರೆಗೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿರುತ್ತದೆ.

ಆಯ್ಕೆ ಮಾಡಿಕೊಳ್ಳಲಾದ ಕಾರ್ಯವಿಧಾನವು ಹಣಕಾಸು ತ:ಖ್ತೆಗಳಲ್ಲಿನ ವಂಚನೆಗಳ ಕಾರಣವಾಗಿರಲಿ ಅಥವಾ ತಪ್ಪುಗಳನ್ನು ಎಸಗುವ ಕಾರಣಗಳಿಂದಾಗಿರಲೀ ವಿಷಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ.

ನಾವು ಪಡೆದುಕೊಂಡಂತಹ ಲೆಕ್ಕಪರಿಶೋಧನಾ ಸಾಕ್ಷಾಧಾರಗಳು ನಿಗಮದ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಒಂದು ಆಧಾರವನ್ನು ಒದಗಿಸುವ ಸಲುವಾಗಿ ಸಮರ್ಪಕವಾಗಿರುತ್ತವೆ ಹಾಗೂ ಸೂಕ್ತವಾಗಿರುತ್ತವೆ ಎಂಬ ವಿಶ್ವಾಸವು ನಮಗಿದೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ತಾತ್ಪರ್ಯ/ಪ್ರಾಮುಖ್ಯತೆ

ಹಣಕಾಸು ವರದಿಯ ಮೇಲೆ ಒಂದು ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣವು, ಹಣಕಾಸು ವರದಿಯ ವಿಶ್ವಸನೀಯತೆಯನ್ನು ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದಕ್ಕಾಗಿ ವಿನ್ಯಾಸಗೊಳಿಸುವ ಹಾಗೂ ಒಂದು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವ ಒಂದು ಪ್ರಕ್ರಿಯೆಯಾಗಿರುತ್ತದೆ. ಹಣಕಾಸು ವರದಿಯ ಮೇಲೆ ಒಂದು ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣವು–

(1) ಕಂಪನಿಯ ಆಸ್ತಿಗಳ ವ್ಯವಹಾರಗಳು ಮತ್ತು ವಿನ್ಯಾಸ/ವ್ಯವಸ್ಥೆ ಅಥವಾ ಅಣಿಗೂಡಿಸುವಿಕೆಗಳನ್ನು ನ್ಯಾಯಸಮ್ಮತವಾದಂತಹ ಮತ್ತು ಯಥಾರ್ಥತೆಯಿಂದ ಕೂಡಿದ ರೀತಿಯಲ್ಲಿ ಪ್ರತಿಬಿಂಭಿಸುವುದು;

(2) ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ ಅನುಮತಿ ನೀಡುವ ಸಲುವಾಗಿ ಅಗತ್ಯವಿರುವಂತೆ ವ್ಯವಹಾರಗಳನ್ನು ದಾಖಲಿಸಲಾಗಿದೆ ಹಾಗೂ ನಿಗಮದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ನಿಗಮದ ವ್ಯವಸ್ಥಾಪನೆ/ಆಡಳಿತ ಮಂಡಳಿಯ ಮತ್ತು ನಿರ್ದೇಶಕರುಗಳ ಅನುಮತಿಯ ಅನುಸಾರವೇ ಮಾಡಲಾಗಿದೆ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು; ಹಾಗೂ

(3) ಕಂಪನಿಯ ಹಣಕಾಸು ತ:ಖ್ತೆಗಳ ಮೇಲೆ ಒಂದು ವಿಷಯಕ ಪ್ರಭಾವವನ್ನು ಭೀರುವಂತಹ ಕಂಪನಿಯ ಆಸ್ತಿಗಳ ಅನಧಿಕೃತ ಸ್ವಾಧೀನತೆ, ಬಳಕೆ ಅಥವಾ ವಿಲೆವಾರಿಗಳನ್ನು ತಡೆಯುವುದು ಅಥವಾ ಸಮಯೋಚಿತವಾಗಿ ಪತ್ತೆಹಚ್ಚುವುದು, ಇತ್ಯಾದಿಗಳ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು.

ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳ ಅಂತರ್ಗತ ಇತಿಮಿತಿಗಳು

ವಂಚನೆ/ಒಳಸಂಚಿನ ಸಂಭಾವ್ಯತೆ ಅಥವಾ ಸಮರ್ಪಕ ಆಡಳಿತ ನಿಯಂತ್ರಣಗಳನ್ನು ಕಡೆಗಣಿಸುವುದು, ಇವುಗಳನ್ನೂ ಒಳಗೊಂಡಂತೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಲ ಕಾರಣ ವಿಷಯಕ ತಪ್ಪು ಹೇಳಿಕೆಗಳು ಅಥವಾ ವಂಚನೆಗಳು ಸಂಭವಿಸಬಹುದು ಹಾಗೂ ಅವುಗಳನ್ನು ಪತ್ತೆಹಚ್ಚಲು ಸಾಧ್ಯವಾಗದಿರಬಹುದು. ಅಲ್ಲದೆಯೇ, ಭವಿಷ್ಯದ ಅವಧಿಗಲಿಗೆ ಸಂಬಂಧಿತ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಪ್ರಕ್ಷೇಪಿಸುವುದು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಸ್ಥಿತಿಗತಿಗಳಲ್ಲಿನ ಬದಲಾವಣೆ ಅಥವಾ ಕಾರ್ಯನೀತಿಗಳು ಅಥವಾ ಕಾರ್ಯವಿಧಾನಗಳು ಹಾಳಾಗುವುದರಕಾರಣ ಅಸಮರ್ಪಕಗೊಳ್ಳುವ ಸಂಭಾವ್ಯ ಅಪಾಯದ ಷರತ್ತಿಗೆ ಒಳಪಟ್ಟಿರುತ್ತದೆ.

ಷರತ್ತುಬದ್ಧ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಮತ್ತು ನೀಡಲಾಗಿರುವ ವಿವರಣೆಗಳಂತೆ ಹಾಗೂ ನಾವು ಕೈಗೊಂಡಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳ ಅನುಸಾರ, ಕಂಪನಿಯ ಹಣಕಾಸು ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆ ಮತ್ತು ಕಾರ್ಯಾಚರಣೆಗಳ ಪರಿಣಾಮಕಾರಿತ್ವಗಳಲ್ಲಿ 31 ಮಾರ್ಚ್ 2018ರಲ್ಲಿದ್ದಂತೆ ಈ ಕೆಳಗಿನ ವಿಷಯಕ ದುರ್ಬಲತೆಗಳನ್ನು ಗುರುತಿಸಲಾಯಿತು:

ಎ) ಕಂಪನಿಯು ಚಿಲ್ಲರೆ ಸಾಲಗಾರರುಗಳಿಗೆ /ಸಾಲದಾತರುಗಳಿಗೆ ಸಂಬಂಧಿಸಿದಂತೆ ಅವರುಗಳಿಗೆ ಪಾವತಿಸಬೇಕಿರುವ ಉಳಿಕೆ ಮೊತ್ತ, ಸರ್ಕಾರದಿಂದ ಬರಬೇಕಿರುವ ಬಾಕಿಗಳು / ಸರ್ಕಾರಕ್ಕೆ ಪಾವತಿಸಬೇಕಿರುವ ಬಾಕಿಗಳು, ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ /ಇತರೆ ತಂಡಗಳಿಗೆ ಪಾವತಿಸಬೇಕಿರುವ / ವಿಶೇಷ ಭೂಸ್ವಾಧೀನ ಅಧಿಕಾರಿಗಳಿಂದ/ಇತರೆ ತಂಡಗಳಿಂದ ಬರಬೇಕಿರುವ ಬಾಕಿಗಳು, ಇವುಗಳ ಬಗ್ಗೆ ಖಚಿತಪಡಿಸಿಕೊಂಡಿರುವುದಿಲ್ಲ ಹಾಗೂ ಸಮನ್ವಯಗೊಳಿಸಿರುವುದಿಲ್ಲ. ಇದು, ಕಂಪನಿಯು ಚಿಲ್ಲರೆ ಸಾಲಗಾರರು/ಸಾಲದಾತರುಗಳು ಮತ್ತು ಇತರೆ ತಂಡಗಳನ್ನು ವಿಷಯಕವಾಗಿ ತಪ್ಪಾಗಿ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಾಧ್ಯತೆಯಿರುತ್ತದೆ.

ಬಿ) ಕಂಪನಿಯು ಈಕ್ವಿಟಿ ಷೇರುಗಳ ಹಂಚಿಕೆಯ ಕಡೆಗೆ ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾದ ಹಣಕಾಸಿನ ವಿನಿಯೋಗಕ್ಕೆ ಸಂಬಂಧಿಸಿದಂತೆ ಹಾಗೂ ಪರಿಶಿಷ್ಟ ಜಾತಿ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ ಕಾಮಗಾರಿಗಳಿಗಾಗಿ ಪ್ರಾರಂಭಿಕವಾಗಿ ಈಕ್ವಿಟಿಯ ಪ್ರತಿಯಾಗಿ ಮುಂಗಡ ಮೊತ್ತವನ್ನಾಗಿ ಸ್ವೀಕರಿಸಲಾದ ಅನುದಾನಗಳಿಗೆ ಸಂಬಂಧಿಸಿದಂತೆ ಯಾವುದೇ ಸೂಕ್ತ ಕಾರ್ಯನೀತಿ ಮತ್ತು ಕಾರ್ಯವಿಧಾನವನ್ನು ಹೊಂದಿರಲಿಲ್ಲ.

ಸಿ) ಗುತ್ತಿಗೆದಾರರುಗಳ ಬಿಲ್ಲುಗಳ ಸಂಸ್ಕರಣೆಗೆ ಸಂಬಂಧಿಸಿದಂತೆ ಆಂತರಿಕ ನಿಯಂತ್ರಣ ವ್ಯವಸ್ಥೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ. ದರ ವ್ಯತ್ಯಯಗಳಿಗಾಗಿ ಒಂದು ಯಥಾರ್ಥತೆಯಿಂದ ಕೂಡಿದ ಸೂಚ್ಯಾಂಕಗಳನ್ನು ಅಳವಡಿಸಿಕೊಳ್ಳುವುದು ಹಾಗೂ ಬೆಲೆಗಳು ಇಳಿಮುಖಗೊಂಡಲ್ಲಿ ನಕಾರಾತ್ಮಕ ದರ ವ್ಯತ್ಯಾಗಳ ಕಾರಣ ಗುತ್ತಿಗೆದಾರರುಗಳಿಂದ ಮಾಡಬೇಕಾದ ವಸೂಲಾತಿಗಾಗಿ ವ್ಯವಸ್ಥೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿರಲಿಲ್ಲ. ಇದು ಕಂಪನಿಯ ಜವಾಬ್ದಾರಿಗಳು ಮತ್ತು ಅನುವುಗಳಲ್ಲಿ, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ, ಸ್ಪರ್ಶಿಸಬಹುದಾದ/ಗೋಚರ ಆಸ್ತಿಗಳಲ್ಲಿ, ಇಡಿಸಿ ಹಂಚಿಕೆ ಹಾಗೂ ಸವಕಳಿಯ ಮೇಲೆ ವಿಷಯಕ ಸಂಭಾವ್ಯ ತಪ್ಪು ಹೇಳಿಕೆ ನೀಡುವಲ್ಲಿ ಪರಿಣಮಿಸಬಹುದು.

ಡಿ) 1 ಜುಲೈ 2017ರಿಂದ ಜಾರಿಗೆ ಬಂದಿರುವ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸುವಿಕೆಯ ಕಾರಣ ಆ ದಿನಾಂಕದಿಂದ ಗುತ್ತಿಗೆದಾರರುಗಳಿಗೆ ನೀಡಲಾಗಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಕಾರ್ಯಗತಗೊಳಿಸುವಿಕೆಯಿಂದ ಉಂಟಾಗುವ ಪ್ರಭಾವವನ್ನು ಕಂಪನಿಯು ಇನ್ನೂ ಖಚಿತಪಡಿಸಿಕೊಳ್ಳಬೇಕಾಗಿದೆ. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪ್ರಾರಂಭಿಕ ದಿನಾಂಕದಲ್ಲಿದ್ದಂತೆ ಕಾರ್ಯಗತಗೊಳಿಸುವ ಸಲುವಾಗಿ ಬಾಕಿಯಿದ್ದಂತಹ ಕಾಮಗಾರಿಗಳ ಮೌಲ್ಯಕ್ಕೆ ಹಾಗೂ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಸೇರಿಸುವ ಮೂಲಕ ಪ್ರಸಕ್ತ ಇದ್ದಂತಹ ತೆರಿಗೆಗಳನ್ನು ತೆಗೆದುಹಾಕಿ ನ್ಯಾಯಸಮ್ಮತ ಹೊಂದಾಣಿಕೆಗಳನ್ನು ಮಾಡಿರುವುದಿಲ್ಲ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಪ್ರಭಾವಗಳ ಅಧ್ಯಯನ ಹಾಗೂ ಮಾಡಬೇಕಾಗಿರುವ ಅಗತ್ಯತೆಯನ್ನು ಹೊಂದಿರುವ ಹೊಂದಾಣಿಕೆಗಳು ಬಾಕಿಯಿರುವುದರಿಂದ ಲೆಕ್ಕಪತ್ರಗಳ ಮೇಲೆ ಅವುಗಳ ಪ್ರಭಾವವನ್ನು ಪರಿಮಾಣೀಕರಿಸಲಾಗುವುದಿಲ್ಲ.

ಇ) ಪ್ರಸಕ್ತ ಸಾಲಿನಲ್ಲಿ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯು ಜಾರಿಗೆ ಬಂದ ಅವಧಿಯಲ್ಲಿ ನೀಡಲಾಗಿರುವ ಹಾಗೂ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಪ್ರಾರಂಭಿಸುವುದಕ್ಕೆ ಮುಂಚಿತ ವಾಗಿ ಇದ್ದಂತಹ ಜಲ ಸಂಪನ್ಮೂಲ ಇಲಾಖೆಯ 2016–17 ಸಾಲಿನ ದರಗಳ ಷೆಡ್ಯೂಲಿನ ಅನುಸಾರ ಮಾಡಲಾಗಿದ್ದು ಕಾಮಗಾರಿಗಳಿಗಾಗಿ ಅಂದಾಜುಗಳ ತಯಾರಿಕೆಗೆ ಆಧಾರವನ್ನು ಇನ್ನೂ ಮಾರ್ಪಾಡು ಮಾಡಬೇಕಿದೆ. ಇದು ಕಾಮಗಾರಿಗಳ ಮೌಲ್ಯ ಮತ್ತು ಜವಾಬ್ದಾರಿಗಳು ಸಂಭಾವ್ಯ ತಪ್ಪು ಹೇಳಿಕೆಗಳಿಂದ ಕೂಡಿರುವಲ್ಲಿ ಪರಿಣಮಿಸಿದ್ದಿತು.

ಎಫ್) ಸ್ಪರ್ಶಾರ್ಹ/ಗೋಚರಿಸಬಹುದಾದ ಆಸ್ತಿಗಳ ಭೌತಿಕ ತಪಾಸಣೆಗಾಗಿ ಒಂದು ನಿಯತ ಕಾರ್ಯಕ್ರಮವು ಇರುವುದಿಲ್ಲ, ಇದರಿಂದಾಗಿ ಕಂಪನಿಯು ತನ್ನ ಹಣಕಾಸು ತ:ಖ್ತೆಗಳಲ್ಲಿ ಸ್ಪರ್ಶಾರ್ಹ/ಗೋಚರಿಸಬಹುದಾದ ಆಸ್ತಿಗಳಿಗೆ ಸಂಬಂಧಿಸಿದಂತೆ ವಿಷಯಕ ತಪ್ಪು ಹೇಳಿಕೆಗಳನ್ನು ನೀಡಬಹುದಾದ ಸಂಭಾವ್ಯತೆಯಿರುತ್ತದೆ.

ಜಿ) ನಿರ್ಮಾಣದ ವೇಳೆಯಲ್ಲಿ ಹಂಚಿಕೆ ಮಾಡಲಾದ ವೆಚ್ಚವನ್ನೂ ಒಳಗೊಂಡಂತೆ ಪ್ರತಿಯೊಂದು ಆಸ್ತಿಗಾಗಿಯೂ ಸ್ಥಿರಾಸ್ತಿಗಳ ವಹಿಯನ್ನು ಇಂದಿನದಿನದನ್ನಾಗಿ ಮಾಡುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಒಂದು ಪರಿಣಾಮಕಾರಿತ್ವದಿಂದ ಕೂಡಿದ ಕಾರ್ಯವಿಧಾನ ಹಾಗೂ ಆಂತರಿಕ ಹಣಕಾಸು ನಿಯಂತ್ರಣವನ್ನು ಕಂಡುಕೊಳ್ಳಬೇಕು. ಇಲ್ಲವಾದಲ್ಲಿ ಕಂಪನಿಯು ತನ್ನ ಹಣಕಾಸು ತ:ಖ್ತೆಗಳಲ್ಲಿ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ವಿಷಯಕ ತಪ್ಪು ಹೇಳಿಕೆಗಳನ್ನು ನೀಡಬಹುದಾದ ಸಂಭಾವ್ಯತೆಯಿರುತ್ತದೆ.

ಹೆಚ್) ಆಸ್ತಿಗಳು ದುರ್ಬಲಗೊಳ್ಳುವಿಕೆಯನ್ನು ಗುರುತಿಸುವ ಸಲುವಾಗಿ ಕಂಪನಿಯು ಒಂದು ಸೂಕ್ತ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಇದರಿಂದಾಗಿ ಕಂಪನಿಯು ತನ್ನ ಹಣಕಾಸು ತ:ಖ್ತೆಗಳಲ್ಲಿ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ವಿಷಯಕ ತಪ್ಪು ಹೇಳಿಕೆಗಳನ್ನು ನೀಡಬಹುದಾದ ಸಂಭಾವ್ಯತೆಯಿರುತ್ತದೆ.

ಐ) ಕಂಪನಿಯು ಸೇವಾ ತೆರಿಗೆ, ರಾಜಧನ, ಮೂಲದಲ್ಲಿಯೇ ಕಡಿದುಕೊಳ್ಳಲಾಗುವ ತೆರಿಗೆ ಹಾಗೂ ವಸೂಲಾತಿ ಮಾಡಬೇಕಾದ /ಪಾವತಿಸಬೇಕಾದ ಇತರೆ ಶಾಸನಬದ್ಧ ಬಾಕಿಗಳನ್ನು ಲೆಕ್ಕಹಾಕುವ, ಸಮನ್ವಯಗೊಳಿಸುವ, ಸಮಯೋಚಿತವಾಗಿ ಪಾವತಿಸುವ ಹಾಗೂ ಯಥಾರ್ಥತೆಯಿಂದ ಮೂಲದಲ್ಲಿಯೇ ಕಡಿದುಕೊಳ್ಳುವ/ವಸೂಲಾತಿ ಮಾಡುವ ಸಲುವಾಗಿ ಆಂತರಿಕ ನಿಯಂತ್ರಣ ವ್ಯವಸ್ಥೆಯ ಮೇಲೆ ಸುಧಾರಣೆಗಳನ್ನು ಮಾಡುವ ಅಗತ್ಯತೆಯು ಇರುತ್ತದೆ.

ಜೆ) ನೀರಿನ ದರಗಳ ಪಾವತಿಗಾಗಿ ತಗಾದೆಗಳನ್ನು ಸೃಷಿಸುವಲ್ಲಿ ಕಂಪನಿಯ ಕಾರ್ಯವಿಧಾನವು ಹಾಗೂ ಆಂತರಿಕ ನಿಯಂತ್ರಣವು ಪರಿಣಾಮಕಾರಿತ್ವದಿಂದ ಕಾರ್ಯನಿರ್ವಹಿಸುತ್ತಿರಲಿಲ್ಲ. ಮುಂದುವರೆದು, ಬಾಕಿಯಿರುವ ಶಿಲ್ಕುಗಳ ಬಗ್ಗೆ ಖಚಿತಪಡಿಸಿಕೊಳ್ಳುವ ಹಾಗೂ ವರಮಾನ ದಾಖಲೆಗಳ ಹಾಗೂ ಅಲ್ಲದೆಯೇ ಸಾಮಾನ್ಯ ಲೆಡ್ಜರುಗಳ ಸಂಬಂಧಿತ ಲೆಡ್ಜರು ಶಿಲ್ಕುಗಳ ಜೊತೆಯಲ್ಲಿ ಉಪ–ದಾಖಲೆಗಳ ಜೊತೆಗೆ ಸಮನ್ವಯಗೊಳಿಸುವ ಒಂದು ವ್ಯವಸ್ಥೆಯನ್ನು ಹೊಂದಿರಲಿಲ್ಲ. ಇದು ವಸೂಲಾತಿಗಳನ್ನು ದಾಖಲಿಸದಿರುವಲ್ಲಿ/ವಿಳಂಬವಾಗಿ ದಾಖಲಿಸುವಲ್ಲಿ ಹಾಗೂ ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳನ್ನು ವಿಷಯಕ ತಪ್ಪು ಹೇಳಿಕೆಗಳಿಂದ ಹೇಳುವ ಸಂಭಾವ್ಯತೆಯಿಂದ ಕೂಡಿರುತ್ತದೆ.

ಕೆ) ಕಂಪನಿಯು ಮುನ್ನೆಚ್ಚರಿಕೆ ಹಣದ ಭದ್ರತಾ ಠೇವಣಿ, ಭದ್ರತಾ ಠೇವಣಿ ಮತ್ತು ಇತರೆ ಠೇವಣಿಗಳ ಬಗ್ಗೆ ಖಚಿತಪಡಿಸಿಕೊಳ್ಳುವಿಕೆಗಾಗಿ ಸೂಕ್ತ ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ, ಇದರಿಂದಾಗಿ ಕಂಪನಿಯು ಚಾಲ್ತಿ ಆಸ್ತಿಗಳು ಮತ್ತು ಚಾಲ್ತಿ ಜವಾಬ್ದಾರಿಗಳನ್ನು ವಿಷಯಕವಾಗಿ ತಪ್ಪಾಗಿ ತಿಳಿಯಪಡಿಸುವಲ್ಲಿ ಪರಿಣಮಿಸುವ ಸಾಧ್ಯತೆಯಿರುತ್ತದೆ.

ಎಲ್) ಅಂದಾಜುಗಳ ಅನುಮೋದನೆ ಮತ್ತು ಟೆಂಡರುಗಳ ಮೌಲ್ಯಮಾಪನವು ಮುಖ್ಯ ಇಂಜಿನಿಯರ್‌ಗಳು/ಅಂದಾಜು ಸಮೀಕ್ಷಾ ಸಮಿತಿ/ಟೆಂಡರು ಪರಿಶೀಲನಾ ಸಮಿತಿ, ಈ ರೀತಿಯಾಗಿ ಅಧಿಕಾರದತ್ತವಾಗಿರುವ ಸಂಬಂಧಿತ ಅಧಿಕಾರಿಗಳ ಮೂಲಕ ನಡೆಯುತ್ತವೆ. ಆದಾಗ್ಯೂ, ಹಣಕಾಸು ವಿಭಾಗಕ್ಕೆ ಸಂಬಂಧಿತ ವ್ಯಕ್ತಿಗಳು ಯಾವುದೇ ಸಮಿತಿಗಳಲ್ಲಿ ಭಾಗಿಗಳಾಗಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಇದು ತೆರಿಗೆಗಳು, ಇತ್ಯಾದಿ ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನವನ್ನು ಸಮರ್ಪಕವಾಗಿ ಮಾಡದಿರುವಲ್ಲಿ ಪರಿಣಮಿಸಬಹುದು.

ಎಂ) ನಕಾರಾತ್ಮಕ ದರ ವ್ಯತ್ಯಯದ ಕಾರಣ ವಿಳಂಬಕ್ಕೆ ಗುತ್ತಿಗೆದಾರರು ಜವಾಬ್ದಾರರಾಗಿದ್ದಲ್ಲಿ ದರ ಹೊಂದಾಣಿಕೆ ಷರತ್ತನ್ನು ಕಂಪನಿಯು ಗುತ್ತಿಗೆದಾರರುಗಳ ಜೊತೆಯಲ್ಲಿ ತನ್ನ ಒಡಂಬಡಿಕೆಗಳಲ್ಲಿ ಸೇರಿಸುವ ಅಗತ್ಯತೆಯಿರುತ್ತದೆ. ವಿಸ್ತರಿಸಲ್ಪಟ್ಟ ಕಾಲಾವಧಿಗೆ ದರ ಹೊಂದಾಣಿಕೆಯನ್ನು ಅನ್ವಯಗೊಳಿಸದಿರುವ ಷರತ್ತಿನ ಮೇಲೆ ಗುತ್ತಿಗೆದಾರರುಗಳಿಗೆ ಕಾಲವಧಿ ವಿಸ್ತರಣೆಯನ್ನು ನೀಡಲಾಗುವುದು. ಕಾಲಾವಧಿಯ ವಿಸ್ತರಣೆಯ ಅವಧಿಯಲ್ಲಿ ದರಗಳ ಇಳಿಕೆಯ ಕಾರಣ ಬಾಬುಗಳ ದರಗಳಲ್ಲಿನ ಇಳಿಕೆಯ ಕಾರಣದ ದರ ವ್ಯತ್ಯಯವನ್ನು ಗುತ್ತಿಗೆದಾರರುಗಳಿಂದ ಎಲ್ಲಾ ಪ್ರಕರಣಗಳಲ್ಲಿಯೂ ವಸೂಲಾತಿ ಮಾಡತಕ್ಕದ್ದು. ಗುತ್ತಿಗೆದಾರರ ಕಾರಣದಿಂದ ಕಾಲಾವಧಿಯ ವಿಸ್ತರಣೆಯನ್ನು ನೀಡಿದ್ದಲ್ಲಿ ಮೂಲ ಅವಧಿಯನ್ನು ಮೀರಿದ ಅವಧಿಯಲ್ಲಿ ನಕಾರಾತ್ಮಕ ದರ ವ್ಯತ್ಯಯಗಳ ಕಾರಣ ಮೊತ್ತಗಳ ವಸೂಲಾತಿಗಾಗಿ ಒಡಂಬಡಿಕೆಗಳಲ್ಲಿ ಷರತ್ತುಗಳನ್ನು ವಿಧಿಸಿರುವುದಿಲ್ಲ. ಅಂತಹ ಷರತ್ತನ್ನು ವಿಧಿಸದಿರುವುದು ಗುತ್ತಿಗೆದಾರರಿಗೆ ಅಧಿಕ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಬಹುದು.

ಎನ್) ವಲಯವಾರು ದರಗಳ ಷೆಡ್ಯೂಲಿನ ತಯಾರಿಕೆ – ಜಲ ಸಂಪನ್ಮೂಲ ಇಲಾಖೆಯು ಉಕ್ಕು ಮತ್ತು ಬೆಂಗಳುರಿನಲ್ಲಿನಿಂದ ಸಾಗಣೆ ವೆಚ್ಚಗಳು ಮುಂತಾದ ಒಟ್ಟಾರೆ ಸಂಪೂರ್ಣ ರಾಜ್ಯಕ್ಕಾಗಿ ದರಗಳ ಷೆಡ್ಯೂಲನ್ನು ತಯಾರಿಸುತ್ತಾದೆ ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಯಿತು. ಅಲ್ಲದೆಯೇ, ಕೂಲಿವೆಚ್ಚಕ್ಕಾಗಿ, ಅದು ಇರುವ ನಿರ್ದಿಷ್ಟ ವಲಯಕ್ಕೆ ಬದಲಾಗಿ ಕರ್ನಾಟಕ ರಾಜ್ಯದ ವಾರ್ಷಿಕ ಸರಾಸರಿ ದರ ಸೂಚ್ಯಾಂಕವನ್ನು ಗಣನೆಗೆ ತೆಗೆದುಕೊಳ್ಳಲಾಗಿದ್ದಿತು. ಇದು ದರಗಳನ್ನು ತಿರುಚುವಲ್ಲಿ ಪರಿಣಮಿಸಬಹುದು ಹಾಗೂ ಅಂದಾಜುಗಳ ತಯಾರಿಕೆಯು ಯಥಾರ್ಥತೆಯಿಂದ ಕೂಡಿಲ್ಲದಿರುವಲ್ಲಿಗೆ ಹಾಗೂ ಉಬ್ಬಿಸಿದ ದರಗಳಲ್ಲಿ ಅಂದಾಜುಗಳನ್ನು ತಯಾರಿಸುವಲ್ಲಿಗೆ ದಾರಿ ಮಾಡಿಕೊಡಬಹುದು. ಅಂದಾಜುಗಳನ್ನು ಸ್ಥಳೀಯ ಸ್ಥಿತಿಗತಿಗಳನ್ನು ಹಾಗೂ ಕಾಮಗಾರಿಗೆ ಸಾಧ್ಯವಾದಷ್ಟು ಅತೀ ಸಮೀಪದಲ್ಲಿ ಲಭ್ಯವಿರುವ ಸಾಮಗ್ರಿಗಳು ಮತ್ತು ಕೂಲಿಗಳನ್ನು ಪರಿಗಣಿಸಿದಂತೆ ತಯರಿಸಬೇಕು.

ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಲ್ಲಿ ಒಂದು ವಿಷಯಕ ದುರ್ಬಲತೆಯು ಒಂದು ನ್ಯೂನತೆಯಾಗಿರುತ್ತದೆ ಅಥವಾ ನ್ಯೂನತೆಗಳ ಒಂದು ಸಂಯೋಜನೆಯಾಗಿರುತ್ತದೆ, ಅವುಗಳು ಯಾವ ರೀತಿಯದಾಗಿರುತ್ತವೆ ಎಂದರೆ ಕಂಪನಿಯ ವಾರ್ಷಿಕ ಅಥವಾ ತಾತ್ಕಾಲಿಕ ಹಣಕಾಸು ತ:ಖ್ತೆಗಳಲ್ಲಿನ ಅಂತಹ ವಿಷಯಕ ತಪ್ಪು ಹೇಳಿಕೆಗಳನ್ನು ತಡೆಯಲು ಸಾಧ್ಯವಾಗುವುದಿಲ್ಲ ಅಥವಾ ಸಮಯೋಚಿತವಾಗಿ ಪತ್ತೆಹಚ್ಚಲು ಸಾಧ್ಯವಾಗುವುದಿಲ್ಲ.

ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣಗಳ ಮಾನದಂಡಗಳ ಉದ್ದೇಶಗಳನ್ನು ಸಾಧಿಸುವುದರ ಬಗ್ಗೆ ಮೇಲೆ ತಿಳಿಸಲಾದಂತಹ ವಿಷಯಕ ದುರ್ಬಲತೆಗಳ ಪರಿಣಾಮಗಳು / ಸಂಭಾವ್ಯ ಪರಿಣಾಮಗಳ ಹೊರತಾಗಿ, ಕಂಪನಿಯು ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಎಲ್ಲಾ ವಿಷಯಕ ಅಂಶಗಳನ್ನು/ ವಿವರಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದು, ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವಂತಹ ಮಾರ್ಗಸೂಚಿಯಲ್ಲಿ ತಿಳಿಸಲಾಗಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ಕಂಪನಿಯು ಸ್ಥಾಪಿಸಿರುವಂತಹ ಹಣಕಾಸು ವರದಿಗಳ

ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಆಧಾರದ ಮೇರೆಗೆ ಅಂತಹ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳು ಮಾರ್ಚ್ 31, 2018ರಿಂದ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿರುವವು.

ಕಂಪನಿಯ 31 ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ಸಾಲಿನ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ಅನ್ವಯಗೊಳಿಸಲಾದಂತಹ ಲೆಕ್ಕಪರಿಶೋಧನಾ ಪರಿಶೀಲನೆಗಳು, ಸ್ವರೂಪ, ಸಮಯಗಳನ್ನು ನಿರ್ಧಾರಣೆ ಮಾಡುವಲ್ಲಿ ಗುರುತಿಸಲಾದಂತಹ ಮತ್ತು ಮೇಲೆ ತಿಳಿಸಲಾದಂತಹ ವಿಷಯಕ ದುರ್ಬಲತೆಗಳನ್ನು ನಾವು ಪರಿಗಣಿಸಿರುವೆವು, ಕಂಪನಿಯ ಹಣಕಾಸು ತ:ಖ್ತೆಗಳ ಮೇಲೆ ನಮ್ಮ ಅಭಿಪ್ರಾಯದ ಮೇಲೆ ಎಲ್ಲೆಲ್ಲಿ ಈ ವಿಷಯಕ ದುರ್ಬಲತೆಗಳು ಪರಿಣಾಮವನ್ನು ಬೀರಿರುವವೋ ಅಂತಹ ಕಡೆಗಳಲ್ಲಿ ನಾವು ಹಣಕಾಸು ತ:ಖ್ತೆಗಳ ಮೇಲೆ ಒಂದು ಷರತ್ತುಬದ್ಧ ಅಭಿಪ್ರಾಯವನ್ನು ನೀಡಿರುವೆವು.

ಮಣಿಯನ್ ಅಂಡ್ ರಾವ್
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ : 001983S

ಶ್ರೀಕಾಂತ್ ಆರ್
ಪಾಲುದಾರರು
ಸದಸ್ಯತ್ವ ಸಂಖ್ಯೆ 203138

ಸ್ಥಳ : ಬೆಂಗಳೂರು
ದಿನಾಂಕ : 11ನೇ ಸೆಪ್ಟಂಬರ್, 2018

ಮಣಿಯನ್ ಅಂಡ್ ರಾವ್
ಸನದಿ ಲೆಕ್ಕಿಗರು

ಸಂಖ್ಯೆ 361, 1ನೇ ಮಹಡಿ, 7ನೇ ಅಡ್ಡ ರಸ್ತೆ,
1ನೇ ಬ್ಲಾಕು, ಜಯನಗರ, ಬೆಂಗಳೂರು,–11.
ದೂರವಾಣಿ : **080 – 26569500**
ಫ್ಯಾಕ್ಸ್ : **080 - 26569501**
ಇ–ಮೇಲ್ : **contact@manian-rao.com**

(ಕರ್ನಾಟಕ ನೀರಾವರಿ ನಿಗಮ ನಿಯಮಿತದ ಸದಸ್ಯರುಗಳಿಗೆ ನೀಡಲಾಗಿರುವಂತಹ 31 ಮಾರ್ಚ್ 2018ಕ್ಕೆ ಅಂತ್ಯಗೊಂಡಂ ಸಾಲಿಗೆ ನಮ್ಮ ಅದೇ ದಿನಾಂಕದ ಸ್ವತಂತ್ರ ಲೆಕ್ಕಪರಿಶೋಧಕರ ವರದಿಯಲ್ಲಿ ಉಲ್ಲೇಖಿಸಿರುವ ಅನುಬಂಧ–2).

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143(5)ರ ಅಡಿಯಲ್ಲಿನ ನಿರ್ದೇಶನಗಳು

ಕ್ರ.ಸಂ	ನಿರ್ದೇಶನಗಳು	ಅನುಪಾಲನಾ ಕ್ರಮಗಳು
1.	ಕಂಪನಿಯು ಅನುಕ್ರಮವಾಗಿ ನಿರುಪಾಧಿಕ ಹಿಡುವಳಿ ಮತ್ತು ಗುತ್ತಿಗೆ ಹಿಡುವಳಿ ಭೂಮಿಗೆ ಸಂಬಂಧಿಸಿದಂತೆ ಸ್ಪಷ್ಟ ಹಕ್ಕುಪತ್ರಗಳನ್ನು / ಗುತ್ತಿಗೆ ಕರಾರುಪತ್ರಗಳನ್ನು ಹೊಂದಿರುವುದೆ? ಇಲ್ಲವಾದಲ್ಲಿ ಸ್ಪಷ್ಟ ಹಕ್ಕುಪತ್ರ /ಗುತ್ತಿಗೆ ಕರಾರುಪತ್ರಗಳು ಲಭ್ಯವಿರದ ನಿರುಪಾಧಿಕ ಹಿಡುವಳಿ ಮತ್ತು ಗುತ್ತಿಗೆ ಹಿಡುವಳಿ ಕ್ಷೇತ್ರಗಳನ್ನು ದಯವಿಟ್ಟು ತಿಳಿಸುವುದು.	**<u>ನಿರುಪಾಧಿಕ ಹಿಡುವಳಿ ಭೂಮಿ :</u>** ನಮಗೆ ಒದಗಿಸಲಾಗಿರುವ ಮಾಹಿತಿಯಂತೆ, ಕಂಪನಿಯು ಕಾರ್ಯಗತಗೊಳಿಸುವ ಯೋಜನೆಗಳಿಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯನ್ನು ಭೂಸ್ವಾಧೀನ ಅಧಿನಿಯಮ, 1984ರ (ಕಾಲಾನುಕಾಲಕ್ಕೆ ತಿದ್ದುಪಡಿಯಾದಂತೆ) ಅನುವುಗಳ ಅಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೂ ಪ್ರಸ್ತುತ ನ್ಯಾಯಸಮ್ಮತ ಪರಿಹಾರಕ್ಕಾಗಿ ಹಕ್ಕು ಹಾಗೂ ಭೂಸ್ವಾಧೀನ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆ ಅಧಿನಿಯಮ, 2013ರ (01/01/2014ರಿಂದ ಅನ್ವಯ) ಅನುವುಗಳ ಅಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ನಮಗೆ ಒದಗಿಸಾಲಾದ ಮಾಹಿತಿಯಂತೆ, ಕಂಪನಿಯು 31,3,2018ರಲ್ಲಿದ್ದಂತೆ ಒಟ್ಟಾರೆ 1,64,308 ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದು. ಇದಕ್ಕೆ ಪ್ರತಿಯಾಗಿ 1,11,801 ಎಕರೆಗಳಿಗೆ ಪರಿವರ್ತನೆಯನ್ನು ಮಾಡಲಾಗಿರುತ್ತದೆ. **<u>ಗುತ್ತಿಗೆ ಭೂಮಿ</u>** ನಮಗೆ ಒದಗಿಸಲಾಗಿರುವ ಮಾಹಿತಿಯಂತೆ, ಯಾವುದೇ ಗುತ್ತಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಅಥವಾ ಹೊಂದಿರುವುದಿಲ್ಲ.
2.	ಋಣಗಳು/ಸಾಲಗಳು/ಬಡ್ಡಿ, ಇತ್ಯಾದಿಗಳನ್ನು ಮನ್ನ ಮಾಡಿರುವ/ ದಾಖಲೆಗಳಿಂದ ತೆಗೆದುಹಾಕಿರುವಂತಹ ಯಾವುದಾದರೂ ಪ್ರಕರಣಗಳು ಇರುವವೆ. ಹೌದು ಎಂದಾದಲ್ಲಿ, ಅವುಗಳಿಗೆ ಕಾರಣಗಳು ಹಾಗೂ ಒಳಗೊಂಡಿರುವ ಮೊತ್ತವನ್ನು ತಿಳಿಸುವುದು.	ವ್ಯವಸ್ಥಾಪನೆಯು ಒದಗಿಸಿರುವ ಮಾಹಿತಿಯಂತೆ ಹಾಗೂ ನಾವು ದಾಖಲೆಗಳನ್ನು ಪರಿಶೀಲಿಸಿದಂತೆ, ಋಣಗಳು/ಸಾಲಗಳು/ಬಡ್ಡಿ, ಇತ್ಯಾದಿಗಳನ್ನು ಮನ್ನ ಮಾಡಿರುವ/ದಾಖಲೆಗಳಿಂದ ತೆಗೆದುಹಾಕಿರುವಂತಹ ಯಾವುದಾದರೂ ಪ್ರಕರಣಗಳು ಇರುವುದಿಲ್ಲ.
3.	ಈ ಕೆಳಗಿನವುಗಳಿಗಾಗಿ ಸಮರ್ಪಕ ದಾಖಲೆಗಳನ್ನು ನಿರ್ವಹಿಸಲಾಗಿದೆಯೆ :	ಮೂರನೇ ತಂಡಗಳ ಜೊತೆಯಲ್ಲಿ ಯಾವುದೇ ಸರಕುಸಾಮಗ್ರಿಗಳೂ ಇರುವುದಿಲ್ಲ ಮತ್ತು ಸರ್ಕಾರ ಅಥವಾ ಇತರೆ ಪ್ರಾಧಿಕಾರಗಳಿಂದ ಉಡುಗೊರೆಯ ರೂಪದಲ್ಲಿ ಯಾವುದೇ ಆಸ್ತಿಗಳನ್ನು ಸ್ವೀಕರಿಸಿರುವುದಿಲ್ಲ.

ಕ್ರ.ಸಂ	ನಿರ್ದೇಶನಗಳು	ಅನುಪಾಲನಾ ಕ್ರಮಗಳು
	ಎ) ಮೂರನೇ ತಂಡಗಳ ಜೊತೆಯಲ್ಲಿರುವ ಸರಕು ಸಾಮಗ್ರಿಗಳಿಗಾಗಿ	ಕಂಪನಿಯು ಮೂರನೇ ತಂಡಗಳಿಗೆ ಯಾವುದೇ ಸರಕುಸಾಮಗ್ರಿಗಳನ್ನು ನೀಡಿರುವುದಿಲ್ಲ ಮತ್ತು ಆದ್ದರಿಂದ ಮೂರನೇ ತಂಡಗಳ ಜೊತೆಯಲ್ಲಿ ಕಂಪನಿಯ ಯಾವುದೇ ಸರಕುಸಾಮಗ್ರಿಗಳು ಇರುವುದಿಲ್ಲ.
	ಬಿ) ಉಡುಗೊರೆಗಳಾಗಿ ಸ್ವೀಕರಿಸಲಾಗಿರುವ ಆಸ್ತಿಗಳು. ಸರ್ಕಾರ ಅಥವಾ ಇತರೆ ಪ್ರಾಧಿಕಾರಗಳಿಂದ ಸ್ವೀಕರಿಸಲಾಗಿರುವ ಅನುದಾನಗಳು	ಸರ್ಕಾರ ಅಥವಾ ಇತರೆ ಪ್ರಾಧಿಕಾರಗಳಿಂದ ಯಾವುದೇ ಉಡುಗೊರೆಗಳನ್ನು ಸ್ವೀಕರಿಸಿರುವುದಿಲ್ಲ.

ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನಗಳು

ಕ್ರ.ಸಂ	ನಿರ್ದೇಶನಗಳು	ಅನುಪಾಲನಾ ಕ್ರಮಗಳು
(ಎ)	ತಾನು ಹೊಂದಿರುವ ನಿರುಪಯುಕ್ತವಾಗಿರುವಂತಹ ಭೂಮಿಯ ಒತ್ತುವರಿಗಳನ್ನು ತಡೆಯುವ ಸಲುವಾಗಿ ಸಮರ್ಪಕ ಕ್ರಮಗಳನ್ನು ತೆಗೆದುಕೊಂಡಿರುವುದೆ. ಕಂಪನಿಯ ಯಾವುದಾದರೂ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆಯೆ, ವಿವಾದದ ಅಡಿಯಲ್ಲಿದ್ದು ಬಳಸಿಕೊಳ್ಳುತ್ತಿಲ್ಲವೆ ಅಥವಾ ಅಗತ್ಯವಿಲ್ಲದೆಯೇ ಅಧಿಕ ಪ್ರಮಾಣದಲ್ಲಿರುವುದಾಗಿ ಘೋಷಿಸಲಾಗಿದೆಯೆ? ವಿವರಗಳನ್ನು ಒದಗಿಸುವುದು.	(i) ನಮಗೆ ನೀಡಲಾಗಿರುವ ಮಾಹಿತಿಯಂತೆ, ಕಂಪನಿಯು ಬಳಕೆಯಾಗುತ್ತಿಲ್ಲದ ಭೂಮಿ ಎಂಬುದಾಗಿ 8,625 ಎಕರೆಗಳನ್ನು ಗುರುತಿಸಿರುತ್ತದೆ. ಇದರ ಪೈಕಿ, 5,859 ಎಕರೆಗಳನ್ನು ಭೂಮಿ ಬ್ಯಾಂಕು ಎಂಬುದಾಗಿ ಗುರುತಿಸಲಾಗಿರುತ್ತದೆ. ನಮಗೆ ನೀಡಲಾಗಿರುವ ಮಾಹಿತಿಯಂತೆ, ಕಂಪನಿಯು ಸ್ವಾಧೀನಪಡಿಸಿಕೊಂಡಿರುವ ಒಟ್ಟಾರೆ ಭೂಮಿಯ ಪೈಕಿ, ಒಟ್ಟಾರೆ 13 ಎಕರೆಗಳು ಮತ್ತು 28 ಗುಂಟೆ ಗಳಷ್ಟು ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ ಹಾಗೂ ಒತ್ತುವರಿದಾರರುಗಳ ವಿರುದ್ಧವಾಗಿ ನೋಟೀಸುಗಳನ್ನು ನೀಡಲಾಗಿದೆ. ಒತ್ತುವರಿಗಳ ತೆರವುಗೊಳಿಸುವ ಸಲುವಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಸಂಬಂಧಿತ ಮುಖ್ಯ ಇಂಜಿನಿಯರುಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ. (ii) ಯಾವುದೇ ಭೂಮಿಯನ್ನೂ ಅಗತ್ಯವಿಲ್ಲದೇ ಅಧಿಕ ಪ್ರಮಾಣದಲ್ಲಿರುವುದಾಗಿ ಘೋಷಿಸಿರುವುದಿಲ್ಲ ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಗಿದೆ ಹಾಗೂ ನಮಗೆ ಮಾಹಿತಿಯನ್ನು ನೀಡಲಾಗಿರುವಂತೆ ಎಲ್ಲಾ ಯೋಜನೆಗಳನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಿದನಂತರವಷ್ಟೇ ಅಗತ್ಯವಿಲ್ಲದೇ ಅಧಿಕ ಪ್ರಮಾಣದಲ್ಲಿರಬಹುದಾದ ಭೂಮಿಯ ಬಗ್ಗೆ ನಿರ್ಧಾರಣೆ ಮಾಡಲು ಸಾಧ್ಯವಾಗುತ್ತದೆ.
(ಬಿ)	ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ ಹಾಗೂ ಅವುಗಳಿಗೆ ಪರಸ್ಪರ ಅಭಿಮುಖವಾಗಿ ಒಡಂಬಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಗತಿಯ ಸಾಧನೆಗಾಗಿ ಹಾಗೂ ದರ ಹೆಚ್ಚಳದ ಪ್ರಭಾವವನ್ನು ನಿರ್ದಿಷ್ಟಪಡಿಸಲಾಗಿರುವ ಮೈಲುಗಲ್ಲುಗಳನ್ನು ಮೇಲ್ವಿಚಾರಣೆ ಮಾಡುವ ವ್ಯವಸ್ಥೆಯು ಇರುವುದೆ. ಬ್ಯಾಂಕು ಖಾತರಿಗಳನ್ನು ಸಮಯೋಚಿತವಾಗಿ ನವೀಕರಿಸಲಾಗಿರುವುದೆ?	**ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯ ಮೇಲ್ವಿಚಾರಣೆಗಾಗಿ ವ್ಯವಸ್ಥೆ :** (i) ಕಾಮಗಾರಿಗಳ ಕಾರ್ಯಗತ ಗೊಳಿಸುವಿಕೆಯನ್ನು ಹಾಗೂ ಅವುಗಳಿಗೆ ಪರಸ್ಪರ ಅಭಿಮುಖವಾಗಿ ಒಡಂಬಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಗತಿಯ ಸಾಧನೆಗಾಗಿ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಒಡಂಬಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾಗಿರು ವಂತಹ ಮೈಲುಗಲ್ಲುಗಳ ಸಾಧನೆಯನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಒಂದು ವ್ಯವಸ್ಥೆಯು ಇರುವುದು, ಈ ವ್ಯವಸ್ಥೆಯು ಕಾಮಗಾರಿಯು ಪ್ರಾರಂಭಗೊಳ್ಳುವುದು, ಕಾಮಗಾರಿಗಳನ್ನು/ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಿಕೆ, ಪ್ರಗತಿಯ ಸಮೀಕ್ಷೆ, ವಿಳಂಬಗಳಿಗಾಗಿ ದಂಡ, ಇತ್ಯಾದಿಗಳನ್ನು ವ್ಯವಹರಿಸುತ್ತದೆ.

		(ii) ಸಂಬಂಧಿತ ಅಧಿಕಾರಿಗಳು, ಕಾರ್ಯನಿರ್ವಾಹಕ ಇಂಜಿನಿಯರ್‌ರವರು / ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರು / ಮುಖ್ಯ ಇಂಜಿನಿಯರ್‌ರವರ ಮಟ್ಟದಲ್ಲಿ ನಡೆಯುವಂತಹ ಸಮೀಕ್ಷ ಸಭೆಗಳಲ್ಲಿ ಟೆಂಡರು ಒಡಂಬಡಿಕೆಗಾಳಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಪ್ರಗತಿಯನ್ನು ಸಮೀಕ್ಷಿಸುವರು. ಸಮೀಕ್ಷೆಯ ಆಧಾರದ ಮೇರೆಗೆ ಯಾವುದಾದರೂ ಅಡಚಣೆಗಳು ಇದ್ದಲ್ಲಿ ಅವುಗಳನ್ನು ತೊಡೆದುಹಾಕುವ ಸಲುವಾಗಿ ಕ್ರಮವನ್ನು ತೆಗೆದುಕೊಳ್ಳಲಾಗುವುದು ಹಾಗೂ ಗುತ್ತಿಗೆ ಷರತ್ತುಗಳ ಪ್ರಕಾರ ಅಪೇಕ್ಷಿತ ಪ್ರಗತಿಯನ್ನು ಸಾಧಿಸುವುದಕ್ಕಾಗಿ ಗುತ್ತಿಗೆ ಅವಧಿಯ ವಿಸ್ತರಣೆ, ವಿಳಂಬಕ್ಕಾಗಿ ದಂಡ ವಿಧಿಸುವಿಕೆ, ಗುತ್ತಿಗೆಯನ್ನು ಅಂತ್ಯಗೊಳಿಸುವುದು ಇತ್ಯಾದಿಗಳಂತಹ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. (iii) ದರ ಹೆಚ್ಚಳದ ಪ್ರಭಾವಕ್ಕೆ ಸಂಬಂಧಿಸಿದಂತೆ, ಮುಂದುವರೆದುಕೊಂಡು ಹೋಗುತ್ತಿರುವ/ ಪ್ರಗತಿಯಲ್ಲಿರುವ ಕಾಮಗಾರಿಗಳಿಗಾಗಿ ಎಲ್ಲಾ ಅನ್ವಯಗೊಳ್ಳುವ ಒಡಂಬಡಿಕೆಗಳಲ್ಲಿ ಅಂತರ್ಗತ ದರ ಹೆಚ್ಚಳಕ್ಕೆ ಸಂಬಂಧಿತ ಷರತ್ತುಗಳು ಇರುತ್ತವೆ ಎಂಬುದನ್ನು ಗಮನಿಸಬೇಕು. ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯಲ್ಲಿ ವಿಳಂಬಗಳು ಸಂಭವಿಸಿದಂತೆಲ್ಲಾ, ಅಧಿಕಾರಿಗಳು ವಿಳಂಬಕ್ಕೆ ಕಾರಣಗಳನ್ನು ವಿಶ್ಲೇಷಿಸುವರು ಹಾಗೂ ದಂಡವನ್ನು ವಿಧಿಸುವುದರೊಂದಿಗೆ ಅಥವಾ ದಂಡವನ್ನು ವಿಧಿಸದೆಯೇ ಕಾಲಾವಧಿಯನ್ನು ವಿಸ್ತರಿಸುವ ತೀರ್ಮಾನವನ್ನು ತೆಗೆದುಕೊಳ್ಳುವರು.ನಮ್ಮ ಲೆಕ್ಕಪರಿಶೋಧನೆಯ ವೇಳೆಯಲ್ಲಿ, ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಗಮನಾರ್ಹವಾದಂತಹ ವಿಳಂಬಗಳು ಸಂಭವಿಸಿದ್ದಂತಹ ದೃಷ್ಟಾಂತಗಳನ್ನು ನಾವು ಗಮನಿಸಿದೆವು. ಇದರ ಬಗ್ಗೆ ವಿವರಗಳನ್ನು ಅನುಬಂಧದ ರೂಪದಲ್ಲಿ ಲಗತ್ತಿಸಿರುವೆವು. **ಬ್ಯಾಂಕು ಖಾತರಿಗಳು :** (i) ಸಾಮಾನ್ಯವಾಗಿ, ಕಾಮಗಾರಿಗಳು ಪ್ರಗತಿಯಲ್ಲಿರುವೆಡೆಗಳಲ್ಲಿ ಹಾಗೂ ನಿರ್ವಹಣಾ ಅವಧಿಯು ಇನ್ನೂ ಜಾರಿಯಲ್ಲಿ ಇರುವೆಡೆಗಳಲ್ಲಿ ಬ್ಯಾಂಕು ಖಾತರಿಗಳನ್ನು ಸಮಯೋಚಿತವಾಗಿ ನವೀಕರಿಸಲಾಗುವುದು. (ii) 31.03.2018 ರಲ್ಲಿದ್ದಂತೆ, ರೂ.47,275.02 ಲಕ್ಷ ಮೊತ್ತವನ್ನು ಒಳಗೊಂಡಿರುವ 484 ಬ್ಯಾಂಕು ಖಾತರಿಗಳು ಸದೃಢವಾಗಿದ್ದವು ಹಾಗೂ ರೂ.7,419.42 ಲಕ್ಷ ಮೊತ್ತವನ್ನು ಒಳಗೊಂಡಂತೆ 260 ಬ್ಯಾಂಕು ಖಾತರಿಗಳು ಅವಧಿ ಮುಕ್ತಾಯಗೊಂಡಿದ್ದವು. ಇದರ ಪೈಕಿ, ರೂ.3,944.36 ಲಕ್ಷ ಮೊತ್ತವು ಒಳಗೊಂಡಂತೆ 197 ಬ್ಯಾಂಕು ಖಾತರಿಗಳು ಕಾಮಗಾರಿಗಳು ಮತ್ತು ನಿರ್ವಹಣಾ ಅವಧಿಗಳು ಮುಕ್ತಾಯಗೊಂಡಿದ್ದು/ಅಂತಿಮ ಪಾವತಿ ಬಿಲ್ಲುಗಳನ್ನು ಪಾವತಿಸದಿರುವ ಹಾಗೂ ಬ್ಯಾಂಕು ಖಾತರಿಗಳನ್ನು ಬಿಡುಗಡೆಗೊಳಿಸಬೇಕಿರುವ ಪ್ರಕರಣಗಳಿಗೆ ಸಂಬಂಧಿಸಿದ್ದವು.

(ಸಿ)	ಕೈಬಿಡಲಾಗಿರುವ ಯೋಜನೆಗಳ ಮೇಲೆ ಭರಿಸಲಾಗಿರುವ ವೆಚ್ಚವನ್ನು ಪರಿಮಾಣೀಕರಿಸುವುದು ಹಾಗೂ ವಾಸ್ತವಿಕವಾಗಿ ದಾಖಲೆಗಳಿಂದ ತೆಗೆದುಹಾಕಲಾದ (ರೈಟ್‌ಆಫ್) ಮೊತ್ತವನ್ನು ತಿಳಿಸುವುದು.	ನಮಗೆ ಒದಗಿಸಲಾದ ಮಾಹಿತಿಯಂತೆ, ಕಂಪನಿಯ ಯಾವುದೇ ಯೋಜನೆಯನ್ನೂ ಕೈಬಿಟ್ಟಿರುವುದಿಲ್ಲ. ಆದಾಗ್ಯೂ, ವ್ಯವಸ್ಥಾಪನೆ/ಆಡಳಿತ ಮಂಡಳಿಯು ಒದಗಿಸಿರುವ ಮಾಹಿತಿಯಂತೆ, ಶಿವಮೊಗ್ಗ ಜಿಲ್ಲೆಯ ಸೊರಬಾ ತಾಲ್ಲೂಕಿನ ದಂಡವತಿ ಜಲಾಶಯ ಯೋಜನೆಗೆ ಪ್ರಸ್ತಾಪಿಸಲಾಗಿದ್ದ ಮಣ್ಣಿನ ಏರಿ ಸೋರಿಕೆನಾಲೆಯ ನಿರ್ಮಾಣವನ್ನು ಸ್ಥಳೀಯ ಜನತೆಯು ಮಾಡಿದ ಚಳುವಳಿಯ ಕಾರಣ ಪ್ರಾರಂಭಿಸಲಾಗಲಿಲ್ಲ. ಈ ಯೋಜನೆಯ ಮೇಲೆ ಈವರೆಗೆ ರೂ.875 ಲಕ್ಷ ಮೊತ್ತವನ್ನು ಭರಿಸಲಾಗಿದ್ದಿತು.
(ಡಿ)	ರಾಜ್ಯ ಸರ್ಕಾರದ ಪುನರ್‌ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯನೀತಿಯ ಅಡಿಯಲ್ಲಿನ ಪರಿಹಾರವೂ ಸೇರಿದಂತೆ ಭೂಸ್ವಾಧೀನ ಕ್ಕಾಗಿ ಪಾವತಿಯ ವ್ಯವಸ್ಥೆಯಿಂದ ಮಾರ್ಗಾಂತರಣಗೊಂಡಿರುವ ಬಗ್ಗೆ ವಿವರಿಸುವುದು. ಭೂ ವಿವಾದಗಳ ಪ್ರಕರಣಗಳನ್ನು ತಿಳಿಸುವುದು.	(i) ವ್ಯವಸ್ಥಾಪನೆಯು/ಆಡಳಿತ ಮಂಡಳಿಯು ನಮಗೆ ಒದಗಿಸಿದ ಮಾಹಿತಿಯಂತೆ, ರಾಜ್ಯ ಸರ್ಕಾರದ ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಕಾರ್ಯನೀತಿಯ ಅಡಿಯಲ್ಲಿನ ಪರಿಹಾರವೂ ಸೇರಿದಂತೆ ಭೂಸ್ವಾಧೀನಕ್ಕಾಗಿ ಪಾವತಿಯ ವ್ಯವಸ್ಥೆಯ ಕಡೆಗೆ ಭೂಸ್ವಾಧೀನ ಮತ್ತು ಪರಿಹಾರಕ್ಕಾಗಿ ಪಾವತಿಗಳನ್ನು ವಿಶೇಷ ಭೂಸ್ವಾಧೀನ ಅಧಿಕಾರಿಗಳು/ಸಹಾಯಕ ಆಯುಕ್ತರುಗಳು ಪಾವತಿಸುತ್ತಾರೆ ಹಾಗೂ ಅಂತಹ ಪಾವತಿಗಳು ರಾಜ್ಯ ಸರ್ಕಾರದ ಕಾರ್ಯನೀತಿಯ ಅನುಸಾರವೇ ಆಗಿರುತ್ತದೆ. ಇದರ ಜೊತೆಗೆ, ಕಂಪನಿಯು ಪುನರ್ವಸತಿ ಮತು ಪುನರ್ ವ್ಯವಸ್ಥಾ ಕೇಂದ್ರಗಳಿಗಾಗಿ ವೆಚ್ಚಗಳನ್ನು ಭರಿಸುತ್ತದೆ. ಆದಾಗ್ಯೂ, 31.03.2018ರಲ್ಲಿದ್ದಂತೆ, ನಮಗೆ ಮಾಹಿತಿಯನ್ನು ನೀಡಲಾದಂತೆ, ನ್ಯಾಯಾಲಯಗಳಿಂದ ನೀಡಲಾಗಿರುವ ಪರಿಹಾರದ ತೀರ್ಪಿನ ಮೊತ್ತಗಳ ಕಡೆಗೆ ವಿಶೇಷ ಭೂಸ್ವಾಧೀನ ಅಧಿಕಾರಿಗಳಿಗೆ ರೂ.236 ಕೋಟಿ ಮೊತ್ತವನ್ನು (ರೂ.7.30 ಕೋಟಿ ಬಡ್ಡಿಯೂ ಸೇರಿದಂತೆ) ಬಿಡುಗಡೆಗೊಳಿಸುವುದು ಬಾಕಿಯಿರುತ್ತದೆ. (ii) ಭೂ ವಿವಾದಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಕಂಪನಿಯು ಪರಿಮಾಣೀಕರಿಸಿರುವುದಿಲ್ಲ.
(ಇ)	ಸಾಲಗಳು/ಸಹಾಯಾನುಧಾನಗಳು/ಸಹಾಯಧನ ಗಳ ಪರಿಣಾಮಕಾರಿತ್ವದಿಂದ ಕೂಡಿದ ಬಳಕೆಯ ವ್ಯವಸ್ಥೆಯಯನ್ನು ಪರಿಶೀಲಿಸುವುದು.	ನಮ್ಮ ಪರಿಶೀಲನೆಯ ಪ್ರಕಾರ, ಕಂಪನಿಯು ಅನುದಾನಗಳು/ಸಾಲಗಳ ಪರಿಣಾಮಕಾರಿತ್ವದಿಂದ ಕೂಡಿದ ಬಳಕೆಗಾಗಿ ಸಮರ್ಪಕ ವ್ಯವಸ್ಥೆಯನ್ನು ಹೊಂದಿರುತ್ತದೆ. ಕಂಪನಿಯು ಪ್ರಸಕ್ತ ಸಾಲಿನಲ್ಲಿ ಯಾವುದೇ ಸಹಾಯಧನವನ್ನು ಪಡೆದಿರುವುದಿಲ್ಲ. ಬಂಡವಾಳ ವೆಚ್ಚಗಳು, ಪರಿಶಿಷ್ಟ ಜಾತಿಯ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ–ಯೋಜನೆ ಕಾಮಗಾರಿಗಳಿಗಳ ಕಡೆಗೆ ವೆಚ್ಚಗಳಿಗಾಗಿ ಹಾಗೂ ಅವಧಿ ಸಾಲಗಳ ಮರುಪಾವತಿಗಾಗಿ ಪ್ರಾರಂಭಿಕವಾಗಿ ಈಕ್ವಿಟಿಯ ಕಡೆಗೆ ಮುಂಗಡ ಎಂಬುದಾಗಿ ನೀಡಲಾಗುತ್ತದೆ. ತದನಂತರ, ಪರಿಶಿಷ್ಟ ಜಾತಿಯ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ–ಯೋಜನೆ ಕಾಮಗಾರಿಗಳಿಗಳ ಕಡೆಗಿನ ವೆಚ್ಚಗಳನ್ನು ಕರ್ನಾಟಕ ಸರ್ಕಾರದ ಆದೇಶದ ಮೂಲಕ ವರಮಾನ ಅನುದಾನಗಳನ್ನಾಗಿ ಪರಿವರ್ತಿಸಲಾಗುವುದು ಹಾಗೂ ವರಮಾನ ಅನುದಾನ ಎಂಬುದಾಗಿ ಲೆಕ್ಕವನ್ನಿಡಲಾಗುವುದು. ಅವಧಿ ಸಾಲಗಳ ಮೇಲಿನ ಬಡ್ಡಿ, ಬಾಂಡುಗಳ ಮೇಲಿನ ಬಡ್ಡಿ ಹಾಗೂ ರಿಪೇರಿ ಕಾಮಗಾರಿಗಳಿಗಾಗಿ ವರಮಾನ ಅನುದಾನವನ್ನು ಒದಗಿಸಲಾಗುವುದು. ಮುಂದುವರೆದು, ಸ್ವೀಕರಿಸಲಾಗುವ ಎಲ್ಲಾ ಅನುದಾನಗಳಿಗೂ ಸೇರಿದಂತೆ ಒಂದು ಏಕೈಕ ಸಾಮಾನ್ಯ ಬ್ಯಾಂಕು ಖಾತೆಯನ್ನು ನಿರ್ವಹಿಸಿರುವುದರಿಂದ, ಒಂದು ಅನುದಾನದ ಹಣಕಾಸಿನಿಂದ ಮತ್ತೊಂದರಲ್ಲಿ ಬಳಸಿಕೊಳ್ಳಲಾಗಿದೆಯೇ ಎಂಬುದನ್ನು ತತ್‌ಕ್ಷಣದಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

(ಎಫ್)	ಎಐಬಿಪಿ ಯೋಜನೆಯ ಮೂಲಕ ಸ್ವೀಕರಿಸಲಾದಂತಹ ಹಣಕಾಸನ್ನು ಪ್ರತ್ಯೇಕವಾಗಿ ಅದೇ ಯೋಜನೆಗಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಂಪನಿಯು ಯಾವುದಾದರೂ ವ್ಯವಸ್ಥೆಯನ್ನು ಹೊಂದಿರುವುದೆ?	ಇರುವಂತಹ ಪರಿಪಾಠಗಳ ಅನುಸಾರ, ಕೇಂದ್ರ ಸರ್ಕಾರದ ಸಹಾಯಧನ/ ರಾಜ್ಯ ಸರ್ಕಾರದ ಪಾಲಿನ ಹಣಕಾಸಿನ ಬಿಡುಗಡೆಯನ್ನು ನಿರೀಕ್ಷಿಸಿದಂತೆ, ಕಂಪನಿಯು ಮೊದಲು ವೆಚ್ಚಗಳನ್ನು ಭರಿಸುತ್ತದೆ ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಗಿದೆ. ಪರಸ್ಪರ ತಿಳಿವಳಿಕೆ ಪತ್ರದ ಪ್ರಕಾರ ಕೇಂದ್ರ ಸರ್ಕಾರವು ಒದಗಿಸಬೇಕಾದ ಕೇಂದ್ರದ ಪಾಲಿನ ಸಹಾಯಧನವನ್ನು ಬಿಡುಗಡೆಗೊಳಿಸುವಲ್ಲಿ ವಿಳಂಬಗಳಿರುತ್ತವೆ ಎಂಬುದಾಗಿ ನಮಗೆ ತಿಳಿಸಲಾಯಿತು. ಮುಂದುವರೆದು, ನಮಗೆ ಒದಗಿಸಲಾದ ಮಾಹಿತಿಯ ಪ್ರಕಾರ ಹಾಗೂ ನಮಗೆ ನೀಡಲಾದ ವಿವರಣೆಯ ಅನುಸಾರ, ತುಂಗಾ ಮೇಲ್ದಂಡೆ ಯೋಜನೆ ಮತ್ತು ಕರಂಜಾ ಯೋಜನೆಗಳಿಗಾಗಿ 2017–18 ಹಣಕಾಸು ಸಾಲಿನಲ್ಲಿ ಎಐಬಿಪಿ/ಪಿಎಂಕೆಎಸ್‌ವೈ ಯೋಜನೆಗಳ ಮೂಲಕ ಭಾರತ ಸರ್ಕಾರವು/ಕೇಂದ್ರ ಸರ್ಕಾರವು ರೂ.90.66 ಕೋಟಿ ಮೊತ್ತದಷ್ಟು ಕೇಂದ್ರ ಸರ್ಕಾರದ ಸಹಾಯಧನವನ್ನು ಬಿಡುಗಡೆಗೊಳಿಸಲಾಗಿದ್ದಿತು. ಕರ್ನಾಟಕ ಸರ್ಕಾರವು ಕೇಂದ್ರದ ಸಹಾಯಧನವೂ ಸೇರಿದಂತೆ ರೂ.140.98 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಿದ್ದಿತು. ಕರ್ನಾಟಕ ಸರ್ಕಾರವು ಎಐಬಿಪಿ ಯೋಜನೆಗಾಗಿ ಆಯವ್ಯಯ ಹಂಚಿಕೆಯ ಮೂಲಕ ಹಣಕಾಸನ್ನು ಬಿಡುಗಡೆಗೊಳಿಸುತ್ತದೆ ಹಾಗೂ ತದನಂತರ ಕಂಪನಿಯು ಈಕ್ವಿಟಿ ಷೇರುಗಳನ್ನು ಹಂಚಿಕೆ ಮಾಡುತ್ತದೆ. ಎಐಬಿಪಿ ಯೋಜನೆಗಾಗಿ ಬಿಡುಗಡೆಗೊಳಿಸಲಾಗುವ ಹಣಕಾಸಿನ ಬಗ್ಗೆ ಮಾಸಿಕ ಪ್ರಗತಿ ಸಭೆಗಳಲ್ಲಿ ನಿಯತವಾಗಿ ಚರ್ಚಿಸಲಾಗುತ್ತದೆ ಹಾಗೂ ಯೋಜನೆಗಳ ನಿಯತ ಪರಿಕ್ಷಣೆಗಳ ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತದೆ ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಯಿತು.
(ಜಿ)	ಎಐಬಿಪಿ ಯೋಜನೆಯ ಅಡಿಯಲ್ಲಿ ಪ್ರಸ್ತಕ ಹಣಕಾಸು ಸಾಲಿನಲ್ಲಿ ಸ್ವೀಕರಿಸಲಾದ ಮೊತ್ತ ಹಾಗೂ ಭರಿಸಲಾದ ವೆಚ್ಚಗಳನ್ನು ಪರಿಶೀಲಿಸುವುದು. ಹಣಕಾಸನ್ನು ಇತರೆ ಯೋಜನೆಗಳಿಗೆ ಮಾರ್ಗಾಂತರಣಗಳನ್ನು ಮಾಡಿದ್ದಲ್ಲಿ ಅದರ ಬಗ್ಗೆ ನಮೂದಿಸುವುದು.	ಪ್ರಸಕ್ತ 2017–18 ಹಣಕಾಸು ಸಾಲಿನಲ್ಲಿ ಕರ್ನಾಟಕ ಸರ್ಕಾರವು ರೂ.90.66 ಕೋಟಿ ಮೊತ್ತವನ್ನು ಎಐಬಿಪಿ/ಪಿಎಂಕೆಎಸ್‌ವೈ ಯೋಜನೆಗಳಿಗಾಗಿ ಬಿಡುಗಡೆಗೊಳಿಸಿದ್ದಿತು. ಕರ್ನಾಟಕ ಸರ್ಕಾರವು ಕೇಂದ್ರದ ಸಹಾಯಧನವನ್ನು ಕಂಪನಿಯು ಮರುಪಾವತಿಗಾಗಿ ಕೋರುವ ಮೊತ್ತದ ಆಧಾರದ ಮೇರೆಗೆ ಬಿಡುಗಡೆಗೊಳಿಸುತ್ತದೆ. ಕಾಮಗಾರಿಗಳಿಗಾಗಿ ಭರಿಸಲಾಗುವ ವೆಚ್ಚಗಳನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಒಂದು ವ್ಯವಸ್ಥೆಯಿರುವುದು ಹಾಗೂ ಯಾವುದೇ ಮಾರ್ಗಾಂತರಣಗಳಿಗೆ ಅನುಮತಿ ನೀಡಲಾಗುವುದಿಲ್ಲ ಎಂಬುದಾಗಿ ನಮಗೆ ಮಾಹಿತಿಯನ್ನು ನೀಡಲಾಯಿತು.
(ಎಚ್)	ಎಐಬಿಪಿ ಯೋಜನೆಗಳ ಮೇಲೆ ಜಲ ಸಂಪನ್ಮೂಲ ಇಲಾಖೆಯು ರೂಪಿಸಿರುವ ಮಾರ್ಗಸೂಚಿಗಳಿಗೆ ಕಂಪನಿಯು ಬದ್ಧವಾಗಿದೆಯೆ? ಮಾರ್ಗಾಂತರಣಗಳ ದೃಷ್ಟಾಂತಗಳನ್ನು ತಿಳಿಸುವುದು.	ನಮಗೆ ನೀಡಲಾದ ಮಾಹಿತಿಯಂತೆ ಕಂಪನಿಯು ಜಲ ಸಂಪನ್ಮೂಲ ಇಲಾಖೆಯು ನೀಡಿರುವ ಮಾರ್ಗಸೂಚಿಗಳಿಗೆ ಬದ್ಧವಾಗಿರುತ್ತದೆ ಹಾಗೂ ಯಾವುದೇ ಮಾರ್ಗಾಂತರಣಗಳೂ ಇರುವುದಿಲ್ಲ.

ಮಣಿಯನ್ ಅಂಡ್ ರಾವ್
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ. 001983S

ಶ್ರೀಕಾಂತ್ ಆರ್.
ಪಾಲುದಾರರು
ಸದಸ್ಯತ್ವ ಸಂಖ್ಯೆ 203138

ಸ್ಥಳ : ಬೆಂಗಳೂರು
ದಿನಾಂಕ : 11ನೇ ಸೆಪ್ಟಂಬರ್, 2018

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143(5)ರ ಅಡಿಯಲ್ಲಿನ ನಿರ್ದೇಶನಗಳಿಗೆ ಅನುಬಂಧ –ಕರ್ನಾಟಕ ನೀರಾವರಿ ನಿಗಮ ನಿಯಮಿತ 2017–18 ಹಣಕಾಸು ಸಾಲಿನಲ್ಲಿ ಕಾಮಗಾರಿಗಳ ಪೂರ್ಣಗೊಳ್ಳುವಿಕೆಯಲ್ಲಿ ಗಮನಿಸಲಾದ ಗಮನಾರ್ಹವಾದಂತಹ ವಿಳಂಬಗಳ ದೃಷ್ಟಾಂತಗಳು

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಕಾಮಗಾರಿಯ ಹೆಸರು	ಕಾರ್ಯಗತ ಗೊಳಿಸುವ ಸಂಸ್ಥೆಯ ಹೆಸರು	ಗುತ್ತಿಗೆಯ ಮೊತ್ತ	ಪೂರ್ಣಗೊಳ್ಳ ಬೇಕಿದ್ದ ವಾಸ್ತವಿಕ ದಿನಾಂಕ	ಪಾವತಿ ಪ್ರಕ್ರಿಯೆಗಳನ್ನು ಮಾಡಲಾಗಿದ್ದ ಬಿಲ್ಲುಗಳ ಮೊತ್ತ
1	ಬಳ್ಳಾರಿ ನಾಲಾ ಯೋಜನೆ	ಬಳ್ಳಾರಿ ನಾಲೆ ಅಣೆಕಟ್ಟೆ, ಸಂಬಂಧಿತ ನಾಲಾ ಕಾಮಗಾರಿಗಳು	ಮೆ. ಇಪಿಐಎಲ್, ನವ ದೆಹಲಿ	635.35	16.01.18	200.18
2	ಕಿನೆಯಾ ನೀರಾವರಿ ಯೋಜನೆ	ಅಣೆಕಟ್ಟೆ ಮತ್ತು ಸಂಬಂಧಿತ ಕಾಮಗಾರಿಗಳು	ಮೆ. ಜಿವಿಆರ್ ಇನ್‌ಫ್ರಾ ಪ್ರಾಜೆಕ್ಟ್ಸ್ ಲಿ.	58.32	03.02.16	64.04
3	ಬೆಣ್ಣೆತೊರ ಯೋಜನೆಯ ನವೀಕರಣ	ಬೆಣ್ಣೆತೊರೆ ಯೋಜನೆಯ ಅಡಿಯಲ್ಲಿ ಎಡ ದಂಡೆ ನಾಲೆ ಮತ್ತು ಬಲ ದಂಡೆ ನಾಲೆಗಳ ನವೀಕರಣ ಕಾಮಗಾರಿಗಳು	ಮೆ. ಆರ್‌ಎಂಎನ್ ಇನ್‌ಫ್ರಾಸ್ಟ್ರಕ್ಚರ್, ಹೈದರಾಬಾದ್	174.15	11.11.16	112.89
4	ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ಮತ್ತು ಹಗರಿ ಬೊಮ್ಮನಹಳ್ಳಿ ತಾಲ್ಲೂಕುಗಳ 22 ಕೆರೆಗಳನ್ನು ತುಂಬುವುದು	ಏತ ನೀರಾವರಿ ಯೋಜನೆ ಮತ್ತು ಸಂಬಂಧಿತ ಕಾಮಗಾರಿಗಳು ಹಾಗೂ 22 ಕೆರೆಗಳಿಗೆ ನೀರು ತುಂಬುವಿಕೆ	ಮೆ. ಜಿವಿಪಿಆರ್ ಇಂಜಿನಿಯರ್ಸ್, ಹೈದರಾಬಾದ್	114.86	30.04.15	103.44
6	ಮುರುಗೋಡು ಏತ ನೀರಾವರಿ ಯೋಜನೆ	ಏತ ನೀರಾವರಿ ಯೋಜನೆ ಮತ್ತು ಸಂಬಂಧಿತ ಕಾಮಗಾರಿಗಳು	ಆದಿತ್ಯಾ ಕನ್ಸ್‌ಟ್ರಕ್ಷನ್ಸ್ ಪ್ರೈ.ಲಿ	12.98	04.03.18	0.04
7	ಚಚಡಿ ಏತ ನೀರಾವರಿ ಯೋಜನೆ	ಏತ ನೀರಾವರಿ ಯೋಜನೆ ಮತ್ತು ಸಂಬಂಧಿತ ಕಾಮಗಾರಿಗಳು	ಅಮೃತಾ ಕನ್ಸ್‌ಟ್ರಕ್ಷನ್ಸ್ ಪ್ರೈ.ಲಿ	10.62	14.10.17	5.14

ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇದರ 31ನೇ ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ವರ್ಷದ ಲೆಕ್ಕಪತ್ರಗಳ ಮೇಲೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143(6) (ಬಿ) ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆ ಟಿಪ್ಪಣಿಗಳು.

ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಹಣಕಾಸಿನ ವರದಿಯ ಚೌಕಟ್ಟಿನ ಪ್ರಕಾರ **31ನೇ ಮಾರ್ಚ್ 2018ಕ್ಕೆ** ಅಂತ್ಯಗೊಂಡಂತಹ ವರ್ಷಕ್ಕೆ **ಕರ್ನಾಟಕ ನೀರಾವರಿ ನಿಗಮ ನಿಯಮಿತ,** ಬೆಂಗಳೂರು, ಇದರ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139(5)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವ ಶಾಸನಬದ್ಧ ಲೆಕ್ಕಪರಿಶೋಧಕರು, ಕಂಪನಿಗಳ ಅಧಿನಿಯಮದ ಪರಿಚ್ಛೇದ 143ರ ಅನುಸಾರ ಅಧಿನಿಯಮದ ಪರಿಚ್ಛೇದ 143(10)ರ ಅಡಿಯಲ್ಲಿ ಲೆಕ್ಕಪರಿಶೋಧನೆಗಾಗಿ ನಿರ್ದಿಷ್ಟಪಡಿಸಲಾಗಿರುವ ಮಾನದಂಡಗಳ ಅನುಸಾರ ನಡೆಸಲಾದಂತಹ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಹಣಕಾಸು ತ:ಖ್ತೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ಜವಾಬ್ದಾರರಾಗಿರುತ್ತಾರೆ. ಇದನ್ನು ಮಾಡಲಾಗಿದೆ ಎಂಬುದಾಗಿ ಅವರು ತಮ್ಮ **11ನೇ ಸೆಪ್ಟೆಂಬರ್, 2018** ದಿನಾಂಕದ ಲೆಕ್ಕಪರಿಶೋಧನಾ ವರದಿಯ ಮೂಲಕ ತಿಳಿಸಿರುತ್ತಾರೆ.

ನಾವು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ, **ಕರ್ನಾಟಕ ನೀರಾವರಿ ನಿಗಮ ನಿಯಮಿತ,** ಬೆಂಗಳೂರು, ಇದರ **31ನೇ ಮಾರ್ಚ್, 2018ಕ್ಕೆ** ಅಂತ್ಯಗೊಂಡಂತಹ ಸಾಲಿಗೆ ಅಧಿನಿಯಮದ ಪರಿಚ್ಛೇದ 143(6)(ಎ) ಅಡಿಯಲ್ಲಿ ಒಂದು ಪೂರಕ ಲೆಕ್ಕಪರಿಶೋಧನೆಯನ್ನು ನಡೆಸಿದೆವು.

ಈ ಪೂರಕ ಲೆಕ್ಕಪರಿಶೋಧನೆಯನ್ನು ಸ್ವತಂತ್ರವಾಗಿ ಶಾಸನಬದ್ಧ ಲೆಕ್ಕಪರಿಶೋಧಕರುಗಳ ಲೆಕ್ಕಪರಿಶೋಧನಾ ಕಾರ್ಯಕ್ಕೆ ಸಂಬಂಧಿತ ಕಾಗದಪತ್ರಗಳನ್ನು ಗಮನಿಸದೆಯೇ ನಡೆಸಲಾಯಿತು ಹಾಗೂ ಪ್ರಾಥಮಿಕವಾಗಿ ಶಾಸನಬದ್ಧಲೆಕ್ಕಪರಿಶೋಧಕರುಗಳ ಜೊತೆ ಹಾಗೂ ಕಂಪನಿಯ ಸಿಬ್ಬಂದಿಯ ಜೊತೆ ವಿಚಾರಣೆಗಳು ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕೆಲವು ದಾಖಲೆಗಳ ಪರೀಕ್ಷಾ–ಪರಿಶೀಲನೆಗೆ ಸೀಮಿತಗೊಳಿಸಲಾಯಿತು. ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಶಾಸನಬದ್ಧ ಲೆಕ್ಕಪರಿಶೋಧಕರುಗಳ ವರದಿಯ ಮೇಲೆ ಯಾವುದೇ ಟೀಕೆಟಿಪ್ಪಣಿಗಳನ್ನು ಮಾಡಲು ಅಥವಾ ಪೂರಕ ವರದಿಯನ್ನು ನೀಡುವ ಸಲುವಾಗಿ ಯಾವುದೇ ಗಮನಾರ್ಹ ಅಂಶಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ.

ಭಾರತದ ನಿಯಂತ್ರಕರು ಹಾಗೂ ಮಹಾ ಲೇಖಾಪಾಲರ ಪರವಾಗಿ

ಸಹಿ/–
(ಬಿಜಿತ್ ಕುಮಾರ್ ಮುಖರ್ಜಿ)
ಪ್ರಧಾನ ಮಹಾ ಲೇಖಾಪಾಲರು
(ಆರ್ಥಿಕ ಮತ್ತು ಆದಾಯ ಕ್ಷೇತ್ರ ಲೆಕ್ಕ ಪರಿಶೋಧಕರು)
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿನಾಂಕ : 25.09.2018

ಕರ್ನಾಟಕ ನೀರಾವರಿ ನಿಗಮ ನಿಯಮಿತ

ಸಿಐಎನ್: ಯು85110ಕೆಎ1998ಎಸ್‌ಜಿಸಿ024503

31ನೇ ಮಾರ್ಚ್ 2018ರಲ್ಲಿದ್ದಂತೆ ಆಸ್ತಿ ಮತ್ತು ಜವಾಬ್ದಾರಿಗಳ ತ:ಖ್ತೆ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಟಿಪ್ಪಣಿ ಸಂಖ್ಯೆ	ಮಾರ್ಚ್ 31 2018ರಲ್ಲಿದ್ದಂತೆ	ಮಾರ್ಚ್ 31 2017ರಲ್ಲಿದ್ದಂತೆ	ಮಾರ್ಚ್ 31 2016ರಲ್ಲಿದ್ದಂತೆ
ಆಸ್ತಿಗಳು				
1. ಚಾಲ್ತಿಯೇತರ ಆಸ್ತಿಗಳು				
(ಎ) ಕಟ್ಟಡಗಳು/ಭೂಮಿ, ಸ್ಥಾವರಗಳು ಮತ್ತು ಉಪಕರಣಗಳು	**5**	**1,40,19,29,00,323**	*1,31,54,37,13,228*	*1,18,09,86,30648*
(ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	6	**74,57,84,06,156**	*58,48,93,89,695*	*87,29,48,43,090*
(ಸಿ) ಹಣಕಾಸು ಆಸ್ತಿಗಳು				
(i) ಹೂಡಿಕೆಗಳು	7	**6,83,874**	*4,07,903*	*4,12,231*
(ii) ಇತರೆ ಹಣಕಾಸು ಆಸ್ತಿಗಳು	8	**3,55,155**	*3,55,155*	*3,55,155*
(ಡಿ) ಇತರೆ ಚಾಲ್ತಿಯೇತರ ಆಸ್ತಿಗಳು	9	**3,50,13,98,354**	*5,70,67,86,992*	*7,58,36,26,798*
2. ಚಾಲ್ತಿ ಆಸ್ತಿಗಳು				
(ಎ) ಸರಕು ಸಾಮಗ್ರಿಗಳು	10	**-**	-	-
(ಬಿ) ಹಣಕಾಸು ಆಸ್ತಿಗಳು				
(i) ವ್ಯಾಪಾರ ಸ್ವೀಕೃತಿಗಳು	11	**16,08,85,142**	*11,87,51,455*	*10,58,68,706*
(ii) ನಗದು ಮತ್ತು ನಗದಿಗೆ ಸಮಾನವಾದವುಗಳು	12	**9,63,03,43,459**	*7,29,94,77,118*	*9,08,44,80,984*
(iii) ಮೇಲಿನ (ii) ನ್ನು ಹೊರತುಪಡಿಸಿದಂತೆ ಬ್ಯಾಂಕು ಶಿಲ್ಕುಗಳು	12ಎ	**3,04,78,04,120**	*2,30,96,14,716*	*23,12,00,000*
(iv) ಇತರೆ ಚಾಲ್ತಿ ಹಣಕಾಸು ಆಸ್ತಿಗಳು	8	**1,26,84,19,822**	*35,49,31,379*	*15,26,46,790*
(ಸಿ) ಇತರೆ ಚಾಲ್ತಿ ಆಸ್ತಿಗಳು	9	**3,56,86,12,264**	*2,52,94,88,419*	*1,60,47,18,125*
3. ವರ್ಗಾವಣೆ ಮಾಡಬೇಕಾದ ಆಸ್ತಿಗಳು	**20ಎ**	**42,90,05,66,653**	*42,76,01,18,653*	**-**
ಒಟ್ಟು		**2,78,85,03,75,322**	**2,51,11,30,34,713**	**2,24,15,67,82527**
ಈಕ್ವಿಟಿ ಮತ್ತು ಹೊಣೆಗಳು				
ಈಕ್ವಿಟಿ				
(ಎ) ಈಕ್ವಿಟಿ ಷೇರು ಬಂಡವಾಳ	13	**2,54,44,91,51,000**	*2,36,28,53,43,000*	*1,99,10,13,43,000*
(ಬಿ) ಇತರೆ ಈಕ್ವಿಟಿ	14	**(24,99,53,84,798)**	*(22,96,04,27,630)*	*(7,89,83,02,535)*
ಹೊಣೆಗಳು				
1. ಚಾಲ್ತಿಯೇತರ ಹೊಣೆಗಳು				
(ಎ) ಹಣಕಾಸು ಹೊಣೆಗಳು				
(i) ಸಾಲಗಳು	**15**	**22,23,82,56,680**	*18,71,23,73,980*	*13,72,96,73,937*
(ಬಿ) ಅನುವುಗಳು	16	**1,43,01,619**	*1,26,75,234*	*1,26,10,741*
(ಸಿ) ಇತರೆ ಹೊಣೆಗಳು	17	**89,43,60,058**	*1,28,50,81,313*	*1,26,68,82,584*

ವಿವರಗಳು	ಟಿಪ್ಪಣಿ ಸಂಖ್ಯೆ	ಮಾರ್ಚ್ 31 2018ರಲ್ಲಿದ್ದಂತೆ	ಮಾರ್ಚ್ 31 2017ರಲ್ಲಿದ್ದಂತೆ	ಮಾರ್ಚ್ 31 2016ರಲ್ಲಿದ್ದಂತೆ
2. ಚಾಲ್ತಿ ಹೊಣೆಗಳು				
(ಎ) ಹಣಕಾಸು ಹೊಣೆಗಳು				
(i) ವ್ಯಾಪಾರ ಸಂದಾಯಗಳು	18	**57,57,06,600**	*19,98,95,320*	*29,96,74,315*
(ii) ಇತರೆ ಹಣಕಾಸು ಹೊಣೆಗಳು	19	**19,36,67,79,840**	*10,85,94,50,613*	*16,21,91,01,658*
(ಬಿ) ಇತರೆ ಹೊಣೆಗಳು	17	**81,22,11,109**	*1,25,23,66,035*	*1,25,00,99,546*
(ಸಿ) ಅನುವುಗಳು	16	**21,34,21,915**	*18,47,05,549*	*17,56,99,281*
3. ವರ್ಗಾವಣೆ ಮಾಡಬೇಕಾದ ಹೊಣೆಗಳು	20 ಬಿ	**5,28,15,71,299**	*5,28,15,71,299*	-
ಒಟ್ಟು		**2,78,85,03,75,322**	**2,51,11,30,34,713**	**2,24,15,67,82,527**

ಕಂಪನಿಯ ಹಿನ್ನೆಲೆ ಮತ್ತು ಅದರ ಚಟುವಟಿಕೆಗಳು	**1**
ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ	**2**
ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು	**3**
ಅಂದಾಜುಗಳ ಬಳಕೆ	**4**

ಈ ಲೆಕ್ಕಪತ್ರಗಳ ಜೊತೆಯಲ್ಲಿರುವ ಟಿಪ್ಪಣಿ ಸಂಖ್ಯೆಗಳು 5 ರಿಂದ 29 ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುತ್ತವೆ.

ಮಂಡಳಿ ಪರವಾಗಿ

ನಮ್ಮ ಅದೇ ದಿನಾಂಕದ ಲಗತ್ತಿಸಲಾಗಿರುವ ವರದಿಯ ಅನುಸಾರ

ಮಲ್ಲಿಕಾರ್ಜುನ ಬಿ ಗುಂಗೆ
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 07777337

ಡಿ.ಎನ್. ದೇಸಾಯಿ
ನಿರ್ದೇಶಕರು
ಡಿಐಎನ್: 00229518

ಮಣಿಯನ್ ಅಂಡ್ ರಾವ್ ಪರವಾಗಿ
ಸನದಿ ಲೆಕ್ಕಿಗರು
ಸಂಸ್ಥೆಯ ನೋಂದಣಿ ಸಂಖ್ಯೆ: 001983S

ಎನ್. ರವೀಂದ್ರನ್
ಪ್ರಧಾನ ವ್ಯವಸ್ಥಾಪಕರು – ಹಣಕಾಸು

ಎಸ್. ಆರ್. ಗೋಪಾಲ್
ಕಂಪನಿ ಕಾರ್ಯದರ್ಶಿ

ಶ್ರೀಕಾಂತ್ ಆರ್.
ಪಾಲುದಾರ – ಸದಸ್ಯತ್ವ ಸಂ. 203138

ಸ್ಥಳ : ಬೆಂಗಳೂರು
ದಿನಾಂಕ : 27.08.2018

ಕರ್ನಾಟಕ ನೀರಾವರಿ ನಿಗಮ ನಿಯಮಿತ

ಸಿಐಎನ್: ಯು85110ಕೆಎ1998ಎಸ್‌ಜಿಸಿ024503

31ನೇ ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿನ ಲಾಭ ಮತ್ತು ನಷ್ಟದ ತ:ಖ್ತೆ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಟಿಪ್ಪಣಿ ಸಂಖ್ಯೆ	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
ವರಮಾನ			
ಕಾರ್ಯಾಚರಣೆಗಳಿಂದ ವರಮಾನ	21	**28,42,96,050**	*2,93,71,868*
ಇತರೆ ವರಮಾನ	22	**7,13,21,01,688**	*6,54,42,46,647*
ಒಟ್ಟು ವರಮಾನ		**7,41,63,97,738**	**6,57,36,18,515**
ವೆಚ್ಚಗಳು			
ಉದ್ಯೋಗಿಗಳ ಸೌಲಭ್ಯ ವೆಚ್ಚಗಳು	23	**1,11,29,03,780**	*1,16,74,55,660*
ಹಣಕಾಸು ವೆಚ್ಚಗಳು	24	**2,36,84,88,164**	*1,83,73,59,074*
ಸವಕಳಿ ಮತ್ತು (ಮೂಲ ಬೆಲೆಯನ್ನು ಕ್ರಮೇಣ) ಕಳೆಯುವಿಕೆಗಳಿಗೆ ಸಂಬಂಧಿತ ವೆಚ್ಚಗಳು	5	**1,89,80,20,966**	*1,98,59,50,765*
ಇತರೆ ವೆಚ್ಚಗಳು	25	**7,79,62,88,672**	*6,14,05,46,757*
ಒಟ್ಟು ವೆಚ್ಚಗಳು		**13,17,57,01,582**	**11,13,13,12,256**
ಅಸಾಧಾರಣ ಮತ್ತು ವಿಶೇಷ ಬಾಬ್ತುಗಳು ಮತ್ತು ತೆರಿಗೆಗೆ ಮುಂಚಿನ ಲಾಭ		**(5,75,93,03,844)**	*(4,55,76,93,741)*
ಅಸಾಧಾರಣ ಬಾಬ್ತು	26	**3,56,346**	*2,68,85,325*
ತೆರಿಗೆಗೆ ಮುಂಚಿನ ಲಾಭ/(ನಷ್ಟ)		**(5,75,89,47,498)**	*(4,53,08,08,416)*
ಕಳೆಯುವುದು: ತೆರಿಗೆ ವೆಚ್ಚಗಳು:			
–ಚಾಲ್ತಿ ತೆರಿಗೆ		**-**	-
–ಸಂಪತ್ತಿನ ತೆರಿಗೆ		**-**	-
ನಿರಂತರ ಕಾರ್ಯಾಚರಣೆಗಳಿಂದ ಪ್ರಸಕ್ತ ಅವಧಿಗೆ ಲಾಭ/ನಷ್ಟ		**(5,75,89,47,498)**	*(4,53,08,08,416)*
ನಿರುಪಯುಕ್ತ ಕಾರ್ಯಾಚರ್ಣೆಗಳಿಂದ ಪ್ರಸಕ್ತ ಅವಧಿಗೆ ಲಾಭ/ನಷ್ಟ		**-**	-
ನಿರುಪಯುಕ್ತ ಕಾರ್ಯಾಚರಣೆಗಳ ಮೇಲೆ ತೆರಿಗೆ ವೆಚ್ಚ		**-**	-
ನಿರುಪಯುಕ್ತ ಕಾರ್ಯಾಚರಣೆಗಳಿಂದ ತೆರಿಗೆಯನಂತರ ಲಾಭ/ನಷ್ಟ		**-**	-
ಪ್ರಸಕ್ತ ಸಾಲಿನ ಲಾಭ/ನಷ್ಟ		**(5,75,89,47,498)**	*(4,53,08,08,416)*
ಇತರೆ ಸಮಗ್ರ ಆದಾಯ/(ವೆಚ್ಚ)		**-**	-
ಲಾಭ ಮತ್ತು ನಷ್ಟಕ್ಕೆ ಮರುಹಂಚಿಕೊಳ್ಳಲಾಗದ ಬಾಬ್ತುಗಳು		**-**	-
ವಿವರಿಸಲ್ಪಟ್ಟಿರುವ ಪ್ರಯೋಜನ ಯೋಜನೆಗಳ ಮೇಲೆ ನಿವ್ವಳ ವಿಮಾಗಣಿತ ಆಧಾರಿತ ಗಳಿಕೆಗಳು/(ನಷ್ಟಗಳು)		**(5,76,641)**	*(5,83,351)*
ಈಕ್ವಿಟಿ ಸಾಧನಗಳ ನ್ಯಾಯಸಮ್ಮತ ಮೌಲ್ಯದ ಮೇಲೆ ನಿವ್ವಳ ಗಳಿಕೆ / ನಷ್ಟಗಳು		**2,75,971**	*(4,328)*
ಪ್ರಸಕ್ತ ಸಾಲಿಗೆ ಸಮಗ್ರ ವರಮಾನ/(ವೆಚ್ಚಗಳು)		**(3,00,670)**	*(5,87,679)*
ಪ್ರಸಕ್ತ ಸಾಲಿಗೆ ಒಟ್ಟು ಸಮಗ್ರ ವರಮಾನ/ವೆಚ್ಚಗಳು		**(5,75,92,48,168)**	*(4,53,13,96,095)*
ಷೇರು ಒಂದಕ್ಕೆ ಗಳಿಕೆಗಳು			
ಮೂಲ		**(23.86)**	*(21.08)*
ದುರ್ಬಲಗೊಳಿಸಲ್ಪಟ್ಟಿರುವ		**(22.92)**	*(20.20)*

ಕಂಪನಿಯ ಹಿನ್ನೆಲೆ ಮತ್ತು ಅದರ ಚಟುವಟಿಕೆಗಳು	**1**
ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ	**2**
ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು	**3**
ಅಂದಾಜುಗಳ ಬಳಕೆ	**4**

ಈ ಲೆಕ್ಕಪತ್ರಗಳ ಜೊತೆಯಲ್ಲಿರುವ ಟಿಪ್ಪಣಿ ಸಂಖ್ಯೆಗಳು 5ರಿಂದ 29 ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುತ್ತವೆ.

ಮಂಡಳಿ ಪರವಾಗಿ

ಮಲ್ಲಿಕಾರ್ಜುನ ಬಿ ಗುಂಗೆ
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 07777337

ಡಿ.ಎನ್. ದೇಸಾಯಿ
ನಿರ್ದೇಶಕರು
ಡಿಐಎನ್: 00229518

ಎನ್. ರವೀಂದ್ರನ್
ಪ್ರಧಾನ ವ್ಯವಸ್ಥಾಪಕರು – ಹಣಕಾಸು

ಎಸ್. ಆರ್. ಗೋಪಾಲ್
ಕಂಪನಿ ಕಾರ್ಯದರ್ಶಿ

ನಮ್ಮ ಅದೇ ದಿನಾಂಕದ ಲಗತ್ತಿಸಲಾಗಿರುವ ವರದಿಯ ಅನುಸಾರ

ಮಣಿಯನ್ ಅಂಡ್ ರಾವ್ ಪರವಾಗಿ
ಸನದಿ ಲೆಕ್ಕಿಗರು
ಸಂಸ್ಥೆಯ ನೋಂದಣಿ ಸಂಖ್ಯೆ: 001983S

ಶ್ರೀಕಾಂತ್ ಆರ್.
ಪಾಲುದಾರ – ಸದಸ್ಯತ್ವ ಸಂ. 203138

ಸ್ಥಳ : ಬೆಂಗಳೂರು
ದಿನಾಂಕ : 27.08.2018

ಕರ್ನಾಟಕ ನೀರಾವರಿ ನಿಗಮ ನಿಯಮಿತ

ಸಿಐಎನ್: ಯು85110ಕೆಎ1998ಎಸ್‌ಜಿಸಿ024503

31ನೇ ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿನ ಹಣಕಾಸು ಹರಿವಿನ ತ:ಖ್ತೆ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಮಾರ್ಚ್ 31, 2018 ವರ್ಷಾಂತ್ಯಕ್ಕೆ	*ಮಾರ್ಚ್ 31, 2017 ವರ್ಷಾಂತ್ಯಕ್ಕೆ*
ಕಾರ್ಯಾಚರಣೆ ಚಟುವಟಿಕೆಗಳಿಂದ ಹಣಕಾಸಿನ ಹರಿವು		
ತೆರಿಗೆಗೆ ಮುಂಚಿನ ನಿವ್ವಳ ನಷ್ಟ	**(5,75,89,47,498)**	*4,53,08,08,416)*
ಈ ಕೆಳಗಿನವುಗಳಿಗಾಗಿ ಹೊಂದಾಣಿಕೆ:		
ಹಣಕಾಸು ವೆಚ್ಚಗಳು ಮತ್ತು ಇತರೆ ಶುಲ್ಕಗಳು	**2,36,84,88,164**	*1,83,73,59,074*
ಬಡ್ಡಿ ವರಮಾನ	**(58,19,59,771)**	(30,06,38,689)
ಅಗತ್ಯವಿಲ್ಲವೆಂಬುದಾಗಿ ಪರಿಗಣಿಸಲಾದ ಅನುವುಗಳು ಮತ್ತು ಜವಾಬ್ದಾರಿಗಳನ್ನು ದಾಖಲೆಗಳಿಂದ ತೆಗೆದುಹಾಕಿರುವುದು	**(43,65,696)**	*(83,43,660)*
ಸವಕಳಿ	**1,89,80,20,966**	*1,98,59,50,765*
ಹಣಕಾಸು ವೆಚ್ಚಗಳಿಗಾಗಿ ಸ್ವೀಕರಿಸಲಾದ ಅನುದಾನಗಳು	**(2,08,89,00,000)**	*(1,68,93,00,000)*
ಅನುಮಾನಾಸ್ಪದವೆಂಬುದಾಗಿ ಪರಿಗಣಿಸಲಾಗಿರುವ ಸಾಲಗಳಿಗಾಗಿ ಅನುವು	**22,00,27,478**	-
ಇತರೆ ಅನುಮಾನಾಸ್ಪದವೆಂಬುದಾಗಿ ಪರಿಗಣಿಸಲಾಗಿರುವ ಸ್ವೀಕೃತಿಗಳಿಗೆ ಅನುವು	**23,61,379**	-
ಗ್ರಾಚುಯಿಟಿಯ ಮೇಲೆ ಇತರೆ ಸಮಗ್ರ ವರಮಾನ	**(5,76,641)**	*(5,83,351)*
ಆಸ್ತಿಗಳ ಮಾರಾಟಗಳ ಮೇಲಿನ ಲಾಭ/ನಷ್ಟ, ಸ್ಥಿರಾಸ್ತಿಗಳ ಮಾರಾಟ/ ಹಾನಿಗೊಂಡಿರುವುದು/ಸವಕಳಿಯನ್ನು ಹಿಂಪಡೆದಿರುವುದು	**(3,56,346)**	*(2,68,85,325)*
ಕಾರ್ಯೋದ್ಯುಕ್ತ ಬಂಡವಾಳದಲ್ಲಿನ ಬದಲಾವಣೆಗಳಿಗೆ ಮುಂಚಿನ ಕಾರ್ಯಾಚರಣೆಗಳಿಂದ ಲಾಭ	**(3,94,62,07,965)**	**(2,73,32,49,602)**
ಕಾರ್ಯೋದ್ಯುಕ್ತ ಬಂಡವಾಳದಲ್ಲಿನ ಬದಲಾವಣೆಗಳು:		
ವ್ಯಾಪಾರ ಸ್ವೀಕೃತಿಗಳಲ್ಲಿ (ಹೆಚ್ಚಳ)/ಇಳಿಮುಖ	**(26,21,61,165)**	*(1,28,82,749)*
ಹಣಕಾಸು ಆಸ್ತಿಗಳಲ್ಲಿ (ಹೆಚ್ಚಳ)/ಇಳಿಮುಖ	**(91,34,88,443)**	*(20,22,84,589)*
ಇತರೆ ಚಾಲ್ತಿ ಆಸ್ತಿಗಳಲ್ಲಿ (ಹೆಚ್ಚಳ)/ಇಳಿಮುಖ	**(1,04,14,85,224)**	*(1,10,46,30,775)*
ದಾಸ್ತಾನುಗಳಲ್ಲಿನ (ಹೆಚ್ಚಳ)/ಇಳಿಮುಖ	**(12,70,620)**	*24,02,754*
ಇತರೆ ಚಾಲ್ತಿಯೇತರ ಆಸ್ತಿಗಳಲ್ಲಿ (ಹೆಚ್ಚಳ)/ಇಳಿಮುಖ	**2,20,53,88,638**	*2,05,67,00,288*
ಹೊಣೆಗಾರಿಕೆಗಳು ಮತ್ತು ಅನುವುಗಳಲ್ಲಿ (ಹೆಚ್ಚಳ)/ಇಳಿಮುಖ	**6,99,56,71,965**	*(6,33,75,93,442)*
ನಗದು ಮತ್ತು ನಗದಿಗೆ ಸಮಾನವಾದವುಗಳನ್ನು ಹೊರತುಪಡಿಸಿ ಬ್ಯಾಂಕು ಶಿಲ್ಕುಗಳಲ್ಲಿ (ಹೆಚ್ಚಳ)/ಇಳಿಮುಖ	**(73,81,89,404)**	*(2,07,84,14,716)*
ಕಾರ್ಯಾಚರಣೆ ಚಟುವಟಿಕೆಗಳಿಂದ (ಚಟುವಟಿಕೆಗಳಲ್ಲಿ ಬಳಸಲಾದ) ನಿವ್ವಳ ನಗದಿನ ಹರಿವು	**2,29,82,57,781**	*(10,40,99,52,830)*
ಹೂಡಿಕೆ ಚಟುವಟಿಕೆಗಳಿಂದ ನಗದಿನ ಹರಿವು:		
ಸ್ಥಿರಾಸ್ತಿಗಳ ಖರೀದಿ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿನ ಬದಲಾವಣೆ	**(26,63,61,05,676)**	**13,17,68,05,905**
ಸ್ಥಿರಾಸ್ತಿಗಳ ಮಾರಾಟದಿಂದ ಬಂದಂತಹ ಪ್ರತಿಫಲ	**2,37,500**	*25,470*
ವರ್ಗಾವಣೆಗಾಗಿ ಹೊಂದಿರುವ ಆಸ್ತಿಗಳಲ್ಲಿ (ಹೆಚ್ಚಳ)/ಇಳಿಮುಖ	**(14,04,48,000)**	*(42,76,01,18,653)*
ವರ್ಗಾವಣೆಗಾಗಿ ಹೊಂದಿರುವ ಹೊಣೆಗಾರಿಕೆಗಳಲ್ಲಿ (ಹೆಚ್ಚಳ)/ಇಳಿಮುಖ	**-**	*5,28,15,71,299*
ಸ್ವೀಕರಿಸಲಾದ ಬಡ್ಡಿ	**58,19,59,771**	*30,06,38,689*
ಹೂಡಿಕೆ ಚಟುವಟಿಕೆಗಳಿಂದ (ಹೂಡಿಕೆ ಚಟುವಟಿಕೆಗಳಲ್ಲಿ ಬಳಸಲಾದ) ನಿವ್ವಳ ನಗದಿನ ಹರಿವು	**(26,19,43,56,405)**	*(24,00,10,77,290)*

ಕರ್ನಾಟಕ ನೀರಾವರಿ ನಿಗಮ ನಿಯಮಿತ

ಸಿಐಎನ್: ಯು85110ಕೆಎ1998ಎಸ್‌ಜಿಸಿ024503

31ನೇ ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿಗೆ ಹಣಕಾಸು ಹರಿವಿನ ತ:ಖ್ತೆ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಮಾರ್ಚ್ 31, 2018 ವರ್ಷಾಂತ್ಯಕ್ಕೆ	*ಮಾರ್ಚ್ 31, 2017 ವರ್ಷಾಂತ್ಯಕ್ಕೆ*
ಹಣಕಾಸು ಚಟುವಟಿಕೆಗಳಿಂದ ನಗದಿನ ಹರಿವು		
ವಿತರಿಸಿರುವ ಷೇರು ಬಂಡವಾಳ	**18,16,38,08,000**	*37,18,40,00,000*
ಈಕ್ವಿಟಿಯ ಕಡೆಗೆ ಮುಂಗಡ (ನಿವ್ವಳ)	**3,72,42,91,000**	*(10,53,07,29,000)*
ದೀರ್ಘಾವಧಿ ಸಾಲಗಳಿಂದ ಸ್ವೀಕೃತಿಗಳು	**9,14,89,60,978**	*12,04,20,00,000*
ದೀರ್ಘಾವಧಿ ಸಾಲಗಳ ಮರುಪಾವತಿ	**(4,53,05,06,849)**	*(5,92,11,85,671)*
ಹಣಕಾಸು ಸಂಬಂಧಿತ ವೆಚ್ಚಗಳು	**(2,36,77,12,667)**	*(1,83,65,94,326)*
ಬಂಡವಾಳೀಕರಿಸಲಾದ ಹಣಕಾಸು ಸಂಬಂಧಿತ ವೆಚ್ಚಗಳು	**(7,75,497)**	*(7,64,748)*
ಹಣಕಾಸು ಸಂಬಂಧಿತ ವೆಚ್ಚಗಳಿಗಾಗಿ ಸ್ವೀಕರಿಸಲಾದ ಅನುದಾನಗಳು	**2,08,89,00,000**	*1,68,93,00,000*
ಹಣಕಾಸು ಚಟುವಟಿಕೆಗಳಿಂದ (ಹಣಕಾಸು ಚಟುವಟಿಕೆಗಳಲ್ಲಿ ಬಳಸಲಾದ) ನಿವ್ವಳ ನಗದಿನ ಹರಿವು	**26,22,69,64,965**	*32,62,60,26,255*
ನಗದು ಮತ್ತು ನಗದಿಗೆ ಸಮಾನವಾದವುಗಳಲ್ಲಿ ನಿವ್ವಳ ಹೆಚ್ಚಳ/ಇಳಿಮುಖ	**2,33,08,66,341**	*(1,78,50,03,865)*
ವರ್ಷದ ಪ್ರಾರಂಭದಲ್ಲಿ ನಗದು ಮತ್ತು ನಗದಿಗೆ ಸಮಾನವಾದವುಗಳು	**7,29,94,118**	*9,08,44,80,984*
ವರ್ಷದ ಅಂತ್ಯದಲ್ಲಿ ನಗದು ಮತ್ತು ನಗದಿಗೆ ಸಮಾನವಾದವುಗಳು	**9,63,03,43,459**	*7,29,94,77,118*

ಟಿಪ್ಪಣಿ:

ಎ) ಮೇಲಿನ ನಗದು ಹರಿವಿನ ತ:ಖ್ತೆಯನ್ನು ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು) ನಿಯಮಗಳು, 2015ರಲ್ಲಿ ನಗದು ಹರಿವಿನ ತ:ಖ್ತೆಗಳ ಬಗ್ಗೆ ನಿರ್ದಿಷ್ಟಪಡಿಸಿರುವ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ–7ರ ಪ್ರಕಾರ "ಅಪರೋಕ್ಷ ಪದ್ಧತಿ"ಯ ಅಡಿಯಲ್ಲಿ ತಯಾರಿಸಲಾಗಿದೆ.

ಬಿ) ಹಿಂದಿನ ಸಾಲಿನ ಅಂಕಿಸಂಖ್ಯೆಗಳನ್ನು ಅಗತ್ಯವಿರುವ ಕಡೆಗಳಲ್ಲಿ ಪುನರ್–ಹೊಂದಾಣಿಕೆಗೊಳಿಸಲಾಗಿದೆ/ಪುನರ್ ಗುಂಪುಗೊಳಿಸಲಾಗಿದೆ.

ಸಿ) ನಗದು ಮತ್ತು ನಗದಿಗೆ ಸಮಾನವಾದವುಗಳು ಎಸ್ಕ್ರೋ/ನಿರ್ದಿಷ್ಟಪಡಿಸಲಾಗಿರುವ ಖಾತೆಗಳು ಮತ್ತು ಖಜಾನೆಯಲ್ಲಿನ ಠೇವಣಿಗಳಲ್ಲಿನ ಶಿಲ್ಕುಗಳನ್ನು ಒಳಗೊಂಡಂತೆ ನಗದು ಮತ್ತು ಬ್ಯಾಂಕು ಶಿಲ್ಕುಗಳನ್ನು ಪ್ರತಿನಿಧಿಸುತ್ತವೆ.

ಡಿ) ಟಿಪ್ಪಣಿ–12ರಲ್ಲಿ ತಿಳಿಸಿರುವಂತೆ ನಗದು ಮತ್ತು ನಗದಿಗೆ ಸಮಾನವಾದವುಗಳನ್ನು ಸಮನ್ವಯಗೊಳಿಸಲಾಗಿದೆ.

ಇ) ಹೂಡಿಕೆ ಚಟುವಟಿಕೆಯಿಂದ ನಗದು ಹರಿವುಗಳು ಹಂಚಿಕೆ ಮಾಡಲಾಗಿರುವ ವೆಚ್ಚಗಳನ್ನು ಒಳಗೊಂಡಿರುತ್ತವೆ.

ಮಂಡಳಿ ಪರವಾಗಿ

ನಮ್ಮ ಅದೇ ದಿನಾಂಕದ ಲಗತ್ತಿಸಲಾಗಿರುವ ವರದಿಯ ಅನುಸಾರ

ಮಲ್ಲಿಕಾರ್ಜುನ ಬಿ ಗುಂಗೆ
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 07777337

ಡಿ.ಎನ್. ದೇಸಾಯಿ
ನಿರ್ದೇಶಕರು
ಡಿಐಎನ್: 00229518

ಮಣಿಯನ್ ಅಂಡ್ ರಾವ್ ಪರವಾಗಿ
ಸನದಿ ಲೆಕ್ಕಿಗರು
ಸಂಸ್ಥೆಯ ನೋಂದಣಿ ಸಂಖ್ಯೆ: 001983S

ಎನ್. ರವೀಂದ್ರನ್
ಪ್ರಧಾನ ವ್ಯವಸ್ಥಾಪಕರು – ಹಣಕಾಸು

	31 ಮಾರ್ಚ್ 2018ರಲ್ಲಿದ್ದಂತೆ	*31 ಮಾರ್ಚ್ 2017ರಲ್ಲಿದ್ದಂತೆ*	*1 ಏಪ್ರಿಲ್ 2016ರಲ್ಲಿದ್ದಂತೆ*	31 ಮಾರ್ಚ್ 2018ರಲ್ಲಿದ್ದಂತೆ	*31 ಮಾರ್ಚ್ 2017ರಲ್ಲಿದ್ದಂತೆ*	*1 ಏಪ್ರಿಲ್ 2016ರಲ್ಲಿದ್ದಂತೆ*
ರಜೆ ನಗದೀಕರಣಕ್ಕಾಗಿ ಅನುವು	**71,74,219**	62,74,620	63,66,095	**5,55,58,811**	6,28,31,397	6,24,74,639
ಗ್ರಾಚುಯಿಟಿಗಾಗಿ ಅನುವು	**71,27,400**	64,00,614	62,44,646	**20,85,014**	6,37,726	2,37,288
ಉದ್ಯೋಗದಾತರ ಕಾಣಿಕೆಗಾಗಿ ಅನುವು–ಇಪಿಎಫ್	**-**	-	-	**2,02,280**	1,84,712	1,74,359
ಉದ್ಯೋಗದಾತರ ಕಾಣಿಕೆಗಾಗಿ ಅನುವು –ಎನ್‌ಪಿಎಸ್	**-**	-	-	**15,55,75,810**	12,10,51,714	11,28,12,995
ಒಟ್ಟು	**1,43,01,619**	**1,26,75,234**	**1,26,10,741**	**21,34,21,915**	**18,47,05,549**	**17,56,99,281**

ಎ) ಕಂಪನಿಯು ರಾಜ್ಯ ಸರ್ಕಾರದಿಂದ ನಿಯೋಜನೆಯ ಆಧಾರದ ಮೇರೆಗೆ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 1957ರಲ್ಲಿ ಅನುವು ಮಾಡಲಾಗಿರುವ ಕಾರ್ಯವಿಧಾನಗಳನ್ನು ಅನುಸರಿಸುತ್ತಿದೆ ಹಾಗೂ 01.04.2006ರಂದು ಮತ್ತು ತದನಂತರದಲ್ಲಿ ಹೊಸದಾಗಿ ನೇಮಕಗೊಂಡಿರುವ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಹೊಸದಾಗಿ ವಿವರಿಸಲ್ಪಟ್ಟಿರುವ ಕಾಣಿಕೆ ಪಿಂಚಣಿ ಯೋಜನೆಯನ್ನು ಇನ್ನೂ ಅಳವಡಿಸಿಕೊಂಡಿರುವುದಿಲ್ಲ.

ಬಿ) ಕರ್ನಾಟಕ ಸರ್ಕಾರದ ಸೇವೆಗಾಗಿ ಹೊಸದಾಗಿ ನೇಮಕಗೊಂಡಿರುವವರಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ ಆಇ (ವಿಶೇಷ) 04 ಪಿಇಟಿ 2005, ಬೆಂಗಳೂರು, ದಿನಾಂಕ 31 ಮಾರ್ಚ್ 2006ರ ಆಧಾರದ ಮೇರೆಗೆ ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಆಇ (ವಿಶೇಷ) 28 ಪಿಂಚಣಿ 2009 ದಿನಾಂಕ 19.01.2010ರ ಮೂಲಕ ಸಾಮಾನ್ಯ ಭವಿಷ್ಯ ನಿಧಿಗೆ ಕಾಣಿಕೆಯನ್ನು ನೀಡುವ ಆಯ್ಕೆಯನ್ನು ಹಿಂಪಡೆದುಕೊಂಡಿತು ಹಾಗೂ ಹೊಸದಾಗಿ ವಿವರಿಸಲ್ಪಟ್ಟ ಕಾಣಿಕೆ ಆಧಾರಿತ ಪಿಂಚಣಿ ಯೋಜನೆಯು 01.04.2006ರಂದು ಮತ್ತು ತದನಂತರದಲ್ಲಿ ರಾಜ್ಯ ಸರ್ಕಾರಿ ಸೇವೆಗೆ ಸೇರಲು ಹೊಸದಾಗಿ ನೇಮಕಾತಿಗೊಂಡವರಿಗೆ ಕಡ್ಡಾಯಗೊಳಿಸಲಾಯಿತು. ಕಂಪನಿಯು, ಹೊಸದಾಗಿ ನೇಮಕಗೊಂಡವರಿಗಾಗಿ/ಕರ್ನಾಟಕ ಸರ್ಕಾರದಿಂದ ನಿಯೋಜನೆಯ ಆಧಾರದ ಮೇರೆಗೆ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗಾಗಿ ಪಿಂಚಣಿ ಸಂಖ್ಯೆಯನ್ನು ನೀಡುವಂತೆ ಕರ್ನಾಟಕ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುವುದು.

ಸಿ) ಸರ್ಕಾರಿ ಆದೇಶ ಸಂಖ್ಯೆ ಆಇ (ವಿಶೇಷ) 28 ಪಿಂಚಣಿ 2009 ದಿನಾಂಕ 19 ಜನವರಿ 2010, ಸರ್ಕಾರಿ ಸೇವೆಗೆ ಹೊಸದಾಗಿ ಸೇರುವವರಿಗಾಗಿ ಹೊಸ ಪಿಂಚಣಿ ಯೋಜನೆಯನ್ನು 01.04.2006ರಿಂದ ಜಾರಿಗೆ ಬರುವಂತೆ ಕಾರ್ಯಗತಗೊಳಿಸಲಾಗಿದೆ. ನಿಗಮವು ಈ ನಿಟ್ಟಿನಲ್ಲಿ ಉದ್ಯೋಗದಾತರ ಕಾಣಿಕೆಯನ್ನು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಅನುವು ಮಾಡಿರುವುದು. ಕರ್ನಾಟಕ ಸರ್ಕಾರದ ಸ್ಪಷ್ಟನೆಯನ್ನು ಸ್ವೀಕರಿಸುವುದು ಹಾಗೂ ಕಂಪನಿಯು ಇತರೆ ಕಾರ್ಯವಿಧಾನಗಳನ್ನು ಪೂರ್ಣಗೊಳಿಸುವುದು ಬಾಕಿಯಿದ್ದು, ಉದ್ಯೋಗಿಗಳ ಕಾಣಿಕೆಯನ್ನು ಉದ್ಯೋಗಿಗಳಿಂದ ವಸೂಲಾತಿ ಮಾಡಬೇಕಾಗಿರುವುದು ಎಂಬುದಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

17. ಇತರೆ ಹೊಣೆಗಳು

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಚಾಲ್ತಿಯೇತರ			ಚಾಲ್ತಿ		
	31 ಮಾರ್ಚ್ 2018 ರಲ್ಲಿದ್ದಂತೆ	*31 ಮಾರ್ಚ್ 2017 ರಲ್ಲಿದ್ದಂತೆ*	*1 ಏಪ್ರಿಲ್ 2016 ರಲ್ಲಿದ್ದಂತೆ*	**31 ಮಾರ್ಚ್ 2018 ರಲ್ಲಿದ್ದಂತೆ**	*31 ಮಾರ್ಚ್ 2017 ರಲ್ಲಿದ್ದಂತೆ*	*1 ಏಪ್ರಿಲ್ 2016 ರಲ್ಲಿದ್ದಂತೆ*
ಶಾಸನಬದ್ಧ ಬಾಕಿಗಳು	-	-	-	65,60,47,276	1,17,75,59,551	1,24,47,69,158
ಇತರವುಗಳು						
ಕರ್ನಾಟಕ ಸರ್ಕಾರಕ್ಕೆ ಬಾಕಿ	89,43,60,058	1,28,50,81,313	1,26,68,82,584	-	-	-
ಇತರರುಗಳಿಗೆ ಬಾಕಿ	-	-	-	15,61,63,833	7,48,06,484	53,30,388
	89,43,60,058	**1,28,50,81,313**	**1,26,68,82,584**	**81,22,11,109**	**1,25,23,66,035**	**1,25,00,99,546**

ಎ) ಗುತ್ತಿಗೆಗಳನ್ನು ನೀಡುವ ಸಮಯದಲ್ಲಿ ಗುತ್ತಿಗೆದಾರರುಗಳು ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮಾ ಪ್ರಾಧಿಕಾರಗಳಲ್ಲಿ ನೋಂದಣಿ ಮಾಡಿಸಿಕೊಂಡಿರುವರು ಎಂಬುದನ್ನು ಕಂಪನಿಯು ಖಚಿತಪಡಿಸಿಕೊಳ್ಳುತ್ತದೆ.

ಬಿ) ಕಂಪನಿಯ ವಿಭಾಗೀಯ ಕಚೇರಿಗಳು ಕರ್ನಾಟಕ ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ಅಗತ್ಯತೆಯಿರುವಂತೆ ಮಾಸಿಕ ಮತ್ತು ವಾರ್ಷಿಕ ವೃತ್ತಿಗಳ ಮೇಲಿನ ತೆರಿಗೆ ಸಲ್ಲಿಕೆಗಳನ್ನು ಸಲ್ಲಿಸಬೇಕಾಗಿದೆ.

ಸಿ) ಕಂಪನಿಯು "ಕರ್ನಾಟಕ ರಾಜ್ಯ ಕಟ್ಟಡಗಳು ಮತ್ತು ಇತರೆ ನಿರ್ಮಾಣ ಕೆಲಸಗಾರರ ಕ್ಷೇಮಾಭಿವೃದ್ಧಿ ಮಂಡಳಿ"ಗೆ ಪಾವತಿಸುವುದು ಬಾಕಿಯಿರುವಂತೆ ನವಂಬರ್ 1, 2006ಕ್ಕೆ ಮುಂಚಿತವಾಗಿ ಮಾಡಿಕೊಳ್ಳಲಾದ ಗುತ್ತಿಗೆ ಒಡಂಬಡಿಕೆಗಳಿಗೆ ಸಂಬಂಧಿಸಿದಂತೆ ನಿರ್ಮಾಣ ವೆಚ್ಚಗಳ ಶೇಕಡಾ 1ರ ದರದಲ್ಲಿ ಕೆಲಸಗಾರರ ಕ್ಷೇಮಾಭಿವೃದ್ಧಿ ಸೆಸ್ ಕಡೆಗೆ ಒಂದು ಅಂದಾಜು ಅಧಾರದ ಮೇರೆಗೆ ರೂ.25,57,58,000/– ಮೊತ್ತದಷ್ಟು ಜವಾಬ್ದಾರಿಯನ್ನು ಲೆಕ್ಕಹಾಕಿರುವುದು ಹಾಗೂ ಅದಕ್ಕೆ ಮನ್ನಣೆ ನೀಡಿರುವುದು.

ಡಿ) ಶಾಸನಬದ್ಧ ಜವಾಬ್ದಾರಿಗಳು ರೂ.4,59,20,973/–ರಷ್ಟು (ಹಿಂದಿನ ಸಾಲಿನಲ್ಲಿ ರೂ.4,94,20,156/–) (01.04.16 – ರೂ.4,59,13,952/–) ಮೊತ್ತದ ಶಾಸನಬದ್ಧ ಜವಾಬ್ದಾರಿಗಳ ಕಾರಣ ನೀಡಲಾಗಿದ್ದ ಚೆಕ್ಕುಗಳನ್ನು ಒಳಗೊಂಡಿರುತ್ತದೆ, ಈ ಚೆಕ್ಕುಗಳನ್ನು ಸಂಬಂಧಿತ ಪ್ರಾಧಿಕಾರಗಳು/ಕಚೇರಿಗಳು ನಗದೀಕರಿಸಿಕೊಂಡಿರುವುದಿಲ್ಲ ಹಾಗೂ ಈ ಚೆಕ್ಕುಗಳು ವಾಯಿದೆ ಕಾಲಮಿತಿಯನ್ನು ಮೀರಿರುತ್ತವೆ.

ಇ) 01.07.2017ರಿಂದ ಅನ್ವಯಗೊಳ್ಳುವಂತಹ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು (ಜಿಎಸ್‌ಟಿ) ಜಾರಿಗೊಳಿಸಿದನಂತರ ಪ್ರಸಕ್ತ ಸಾಲಿನಲ್ಲಿ ನೀಡಲಾದಂತಹ ಗುತ್ತಿಗೆಗಳ ಅಂದಾಜುಗಳನ್ನು ಜಲ ಸಂಪನ್ಮೂಲ ಇಲಾಖೆಯ 2016–17 ದರಗಳ ಷೆಡ್ಯೂಲಿನ ಆಧಾರದ ಮೇರೆಗೆ ತಯಾರಿಸಲಾಗಿರುವುದು ಹಾಗೂ ಆ ದರಗಳು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಜಾರಿಗೆ ತರುವುದಕ್ಕೆ ಮುಂಚಿನ ಅವಧಿಯ ಎಲ್ಲಾ ತೆರಿಗೆಗಳನ್ನೂ ಒಳಗೊಂಡಿರುವುದು. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ಗುತ್ತಿಗೆದಾರರುಗಳ ಜೊತೆಯಲ್ಲಿ ಮಾಡಿಕೊಳ್ಳಲಾಗಿರುವ ಒಡಂಬಡಿಕೆಗಳ ಷರತ್ತುಗಳ ಅನುಸಾರ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಕಾರಣ ಉದ್ಭವಿಸುವಂತಹ ಹಣಕಾಸಿನ ಬಾಧ್ಯತೆಯನ್ನು ಸರ್ಕಾರವು ಈ ನಿಟ್ಟಿನಲ್ಲಿ ಅಂತಿಮ ನಿರ್ಧಾರವನ್ನು ತೆಗೆದುಕೊಂಡ ನಂತರ ಗುತ್ತಿಗೆದಾರರುಗಳ ಕಾಮಗಾರಿ ಬಿಲ್ಲುಗಳ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಗುತ್ತಿಗೆ ದರಗಳ ಮೇಲೆ ಅದರ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

ಎಫ್) ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು (ಜಿಎಸ್‌ಟಿ) ಜಾರಿಗೊಳಿಸಿದ ಮುಂಚಿನ ಅವಧಿಯಲ್ಲಿ ನೀಡಲಾದಂತಹ ಗುತ್ತಿಗೆಗಳ ಅಂದಾಜುಗಳನ್ನು, ಆ ವರ್ಷದ ಅಂದಾಜುಗಳನ್ನು ತಯಾರಿಸಿದ ದಿನಾಂಕದಂದು ಇದ್ದಂತಹ ತೆರಿಗೆಗಳ ಆಧಾರದ ಮೇರೆಗೆ ತಯಾರಿಸಲಾಗಿದ್ದಿತು. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು (ಜಿಎಸ್‌ಟಿ) 1 ಜುಲೈ 2017ರಿಂದ ಜಾರಿಗೆ ತರಲಾಯಿತು ಹಾಗೂ ದರಗಳಲ್ಲಿ ಒಳಗೊಂಡಿರುವ ಪ್ರಸಕ್ತ ಇದ್ದಂತಹ ತೆರಿಗೆಯನ್ನು ಇಳಿಮುಖಗೊಳಿಸುವ ಮೂಲಕ ಹಾಗೂ ಗುತ್ತಿಗೆದಾರರುಗಳಿಗೆ ಲಭ್ಯವಿರುವಂತಹ ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ಅರ್ಹರೀತಿಯಲ್ಲಿ ಪರಿಗಣಿಸಿದನಂತರ ಅನ್ವಯಗೊಳ್ಳುವಂತಹ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು (ಜಿಎಸ್‌ಟಿ) ಕಾಮಗಾರಿ ಬಾಬುಗಳ ದರಗಳಿಗೆ ಸೇರಿಸಿ ನ್ಯಾಯಸಮ್ಮತ ರೀತಿಯಲ್ಲಿ ಹೊಂದಾಣಿಕೆ ಮಾಡಲಾಗುವುದು. ಕಂಪನಿಯು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ (ಜಿಎಸ್‌ಟಿ) ಪ್ರಭಾವವನ್ನು ಗುರುತಿಸುವ ಪ್ರಕ್ರಿಯೆಯಲ್ಲಿರುವುದು. ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ (ಜಿಎಸ್‌ಟಿ) ಪ್ರಭಾವದ ಅಧ್ಯಯನವು ಬಾಕಿಯಿದ್ದಂತೆ, ಗುತ್ತಿಗೆದರಗಳ ಹೊಂದಾಣಿಕೆ ಹಾಗೂ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯು (ಜಿಎಸ್‌ಟಿ) ಜಾರಿಗೆ ಬರುವುದಕ್ಕೆ ಮುಂಚಿನ ಅವಧಿಯಲ್ಲಿ ಕಾರ್ಯಗತಗೊಳಿಸಲಾದಂತಹ ಕಾಮಗಾರಿಗಳಿಗೆ ಮಾಡಲಾಗಿರುವ ಪಾವತಿಗಳ ಮೇಲೆ ಅದರ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
ಹಣಕಾಸು ತ:ಖ್ತೆಗಳ ಅವಿಭಾಜ್ಯ ಅಂಗವಾಗಿರುವ ಟಿಪ್ಪಣಿಗಳು

18. ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾಗಿರುವವುಗಳು

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	*31 ಮಾರ್ಚ್ 2017ರಲ್ಲಿದ್ದಂತೆ*	*31 ಮಾರ್ಚ್ 2016ರಲ್ಲಿದ್ದಂತೆ*
ಎ. ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳು			
– ವೆಚ್ಚಗಳಿಗಾಗಿ	6,38,06,644	5,31,02,333	16,42,97,724
– ಸರಬರಾಜುಗಳು/ಸೇವೆಗಳಿಗಾಗಿ	51,18,99,956	14,67,92,987	13,53,76,591
ಒಟ್ಟು	**57,57,06,600**	**19,98,95,320**	**29,96,74,315**

ಕಂಪನಿಯು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಧಿನಿಯಮ, 2006ರ ಅಡಿಯಲ್ಲಿ ಅವರುಗಳ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ವರ್ತಕರುಗಳಿಂದ ಯಾವುದೇ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ/ಖಚಿತಪಡಿಸಿಕೊಂಡಿರುವುದಿಲ್ಲ ಮತ್ತು (i) ಆದ್ದರಿಂದ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಸಾಲಿನ ಅಂತ್ಯಕ್ಕೆ ಸರಬರಾಜುದಾರರುಗಳಿಗೆ ಪಾವತಿಸಬೇಕಾಗಿರುವ ಮತ್ತು ಬಾಕಿಯಿರುವ ಮೊತ್ತ, (ii) ಪ್ರಸಕ್ತ ಸಾಲಿನಲ್ಲಿ ಪಾವತಿಸಲಾದ ಬಡ್ಡಿ (iii) ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಸಾಲಿನ ಅಂತ್ಯಕ್ಕೆ ಬಾಕಿಯಿರುವ ಮತ್ತು ಪಾವತಿಸಬೇಕಿರುವ ಬಡ್ಡಿ ಹಾಗೂ (iv) ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಸಾಲಿನ ಅಂತ್ಯಕ್ಕೆ ಸಂಚಿತಗೊಂಡಿರುವ ಮತ್ತು ಪಾವತಿಸದಿರುವ ಬಡ್ಡಿ, ಇವುಗಳ ಬಗ್ಗೆ ತಿಳಿಸಿರುವುದಿಲ್ಲ.

19. ಇತರೆ ಹಣಕಾಸು ಜವಾಬ್ದಾರಿಗಳು

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

	ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ	1 ಏಪ್ರಿಲ್ 2016ರಲ್ಲಿದ್ದಂತೆ
1)	**ಇತರೆ ಹಣಕಾಸು ಜವಾಬ್ದಾರಿಗಳು**			
ಎ)	ಭದ್ರತಾ ಠೇವಣಿಗಳು	4,46,14,13,811	3,11,30,17,902	1,84,33,18,844
ಬಿ)	ಗುತ್ತಿಗೆದಾರರುಗಳಿಗೆ –ಕಾಮಗಾರಿಗಳಿಗಾಗಿ ಪಾವತಿಸಬೇಕಾಗಿರುವವುಗಳು	10,64,65,98,208	4,56,74,46,830	12,31,01,97,439
ಸಿ)	ಗುತ್ತಿಗೆದಾರರುಗಳಿಗೆ –ಹೊಲಗಾಲುವೆಗಳಿಗಾಗಿ	9,65,45,549	9,65,45,549	9,29,56,484
ಡಿ)	ಸಂಚಿತಗೊಂಡಿರುವ ಬಡ್ಡಿ			
	i) ಸಾಲಗಳ ಮೇಲೆ ಸಂಚಿತಗೊಂಡಿರುವ ಆದರೆ ತತ್‌ಕ್ಷಣದಲ್ಲಿಯೇ ಪಾವತಿಸಬೇಕಿಲ್ಲದ ಬಡ್ಡಿ	29,56,164	98,55,880	–
	ii) ಸಾಲಗಳ ಮೇಲೆ ಸಂಚಿತಗೊಂಡಿರುವ ಮತ್ತು ತತ್‌ಕ್ಷಣದಲ್ಲಿಯೇ ಪಾವತಿಸಬೇಕಾಗಿರುವ ಬಡ್ಡಿ	11,98,630	11,95,355	11,95,355
ಇ)	ಪಾವತಿಸಬೇಕಿರುವ ಖಾತರಿ ಕಮಿಷನ್ನು	19,96,172	19,96,172	19,96,172
ಎಫ್)	ಉದ್ಯೋಗಿಗಳಿಗೆ ಸಂಬಂಧಿತ ಜವಾಬ್ದಾರಿಗಳು:			
	i) ಸಂಬಳಗಳಿಗಾಗಿ	1,96,30,183	3,24,85,810	6,25,51,215
	ii) ವೈದ್ಯಕೀಯ ವೆಚ್ಚಗಳ ಮರುಪಾವತಿಗಾಗಿ	5,97,053	27,49,905	24,69,761
ಜಿ)	ಅವಧಿ ಮೀರಿರುವ ಚೆಕ್ಕುಗಳು	1,82,86,927	91,71,496	1,70,05,959
	ಉಪ–ಮೊತ್ತ	**15,24,92,22,697**	**7,83,44,64,899**	**14,33,22,30,229**
II.	**ದೀರ್ಘಾವಧಿ ಸಾಲಗಳ** – ಪ್ರಸಕ್ತ ಅವಧಿ ಪೂರ್ಣಗೊಂಡಿರುವವುಗಳು ಮರುಪಾವತಿ ದಿನಾಂಕ ಸಮೀಪಿಸಿರುವುದು (ಪಡೆದಿರುವ ಸಾಲಗಳಿಂದ ವರ್ಗಾವಣೆ – ಟಿಪ್ಪಣಿ–15ನ್ನು ಉಲ್ಲೇಖಿಸುವುದು)	4,11,75,57,143	3,02,49,85,714	1,88,68,71,429
	ಒಟ್ಟು ಮೊತ್ತ	**19,36,67,79,840**	**10,85,94,50,613**	**16,21,91,01,658**

ಎ. ಭದ್ರತಾ ಠೇವಣಿಗಳು ಜವಾಬ್ದಾರಿಗಳಾಗಿದ್ದು ಗುತ್ತಿಗೆ ಷರತ್ತುಗಳ ಅನುಸಾರ ಗುತ್ತಿಗೆದಾರರುಗಳಿಂದ ವಸೂಲಾತಿ ಮಾಡಲಾಗುವ ಮುನ್ನೆಚ್ಚರಿಕೆ ಹಣ ಠೇವಣಿ (ಇಎಂಡಿ) ಮತ್ತು ಹೆಚ್ಚುವರಿ ಭದ್ರತಾ ಠೇವಣಿಗಳನ್ನು (ಎಫ್ಎಸ್ಡಿ) ಒಳಗೊಂಡಿರುತ್ತವೆ. ಷರತ್ತುರಹಿತ ಮತ್ತು ಹಿಂಪಡೆಯಲಾಗದಂತಹ ಬ್ಯಾಂಕು ಖಾತರಿಗಳನ್ನು ಸಲ್ಲಿಸಿದನಂತರ ಹೆಚ್ಚುವರಿ ಮುನ್ನೆಚ್ಚರಿಕೆ ಹಣವನ್ನು ಗುತ್ತಿಗೆದಾರರುಗಳಿಗೆ ಮರುಪಾವತಿಸಲಾಗುವುದು. ಮುನ್ನೆಚ್ಚರಿಕೆ ಹಣ ಠೇವಣಿ/ಹೆಚ್ಚುವರಿ ಭದ್ರತಾ ಠೇವಣಿಗಳನ್ನು ಗುತ್ತಿಗೆದಾರರುಗಳ ಲಿಖಿತ ಕೋರಿಕೆಯ ಆಧಾರದ ಮೇರೆಗೆ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಪರವಾಗಿ ಹಕ್ಕನ್ನು ಹೊಂದಿರುವ ರೀತಿಯಲ್ಲಿ ಬಡ್ಡಿಯನ್ನು ಗಳಿಸುವ ಭದ್ರತೆಗಳನ್ನಾಗಿಯೂ ಪರಿವರ್ತಿಸಬಹುದು. ಆದ್ದರಿಂದ, ಅವುಗಳನ್ನು ಚಾಲ್ತಿ ಹಣಕಾಸು ಜವಾಬ್ದಾರಿಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ.

ಬಿ. ಭದ್ರತಾ ಠೇವಣಿಗಳು 31 ಮಾರ್ಚ್ 2018ರಲ್ಲಿದ್ದಂತೆ, ಕರ್ನಾಟಕ ಸರ್ಕಾರದ ಇ–ಸರಕು ಮತ್ತು ಸೇವೆಗಳ ಖರೀದಿ/ಪಡೆಯುವಿಕೆಗಾಗಿನ ಇಲಾಖೆಯಲ್ಲಿ ಇರುವಂತಹ ಹಾಗೂ ಕಂಪನಿಗೆ ವರ್ಗಾಯಿಸಬೇಕಿರುವ ರೂ.94,42,08,899/–ರಷ್ಟು (ಹಿಂದಿನ ಸಾಲಿನಲ್ಲಿ : ರೂ.21,52,54,773/–) (1.04.16ರಲ್ಲಿದ್ದಂತೆ : ರೂ.– ಯಾವುದೂ ಇರುವುದಿಲ್ಲ––) ಮೊತ್ತದ ಮುನ್ನೆಚ್ಚರಿಕೆ ಭದ್ರತಾ ಠೇವಣಿಗಳನ್ನು ಒಳಗೊಂಡಿರುತ್ತದೆ.

ಸಿ. 17–18 ಹಣಕಾಸು ಸಾಲಿಗೆ ಮುನ್ನೆಚ್ಚರಿಕೆ ಭದ್ರತಾ ಠೇವಣಿಗಳು/ಹೆಚ್ಚುವರಿ ಭದ್ರತಾ ಠೇವಣಿಗಳನ್ನು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಸಮನ್ವಯಗೊಳಿಸುವಿಕೆಯು ಪ್ರಗತಿಯಲ್ಲಿದೆ.

ಡಿ. ಕಾಮಗಾರಿಗಳ ಗುತ್ತಿಗೆದಾರರುಗಳಿಗೆ ಪಾವತಿಸಬೇಕಾಗಿರುವ ಬಾಕಿಗಳು – ಗುತ್ತಿಗೆ ಷರತ್ತುಗಳ ಆಧಾರದ ಮೇರೆಗೆ ಕಂಪನಿಯ ವ್ಯವಸ್ಥಾಪನೆಯು/ಆಡಳಿತ ಮಂಡಳಿಯು ನಿರ್ಧಾರಣೆ ಮಾಡಿರುವಂತಹ ಹಾಗೂ ಅಲ್ಪಾವಧಿ ಜವಾಬ್ದಾರಿ ಎಂಬುದಾಗಿ ವರ್ಗೀಕರಿಸಲಾಗಿರುವ ಉಳಿಸಿಕೊಳ್ಳಬೇಕಾದ ಹಣಕಾಸನ್ನು ಒಳಗೊಂಡಿರುತ್ತದೆ. ಉಳಿಸಿಕೊಳ್ಳಬೇಕಾದ ಹಣಕಾಸಿಗೆ ಸಂಬಂಧಿಸಿದಂತೆ ಅಲ್ಪಾವಾಧಿ ಮತ್ತು ದೀರ್ಘಾವಧಿ ಜವಾಬ್ದಾರಿಗಳನ್ನಾಗಿ ಗುರುತಿಸುವಿಕೆಯು ಪ್ರಗತಿಯಲ್ಲಿದೆ. ಈ ಕಾರಣದಿಂದಾಗಿ ದೀರ್ಘಾವಧಿ ಜವಾಬ್ದಾರಿಗಳ ಮೌಲ್ಯಮಾಪನವನ್ನು ಮಾಡಲಾಗಲಿಲ್ಲ.

ಇ. ಜಲಾನಯನ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕ್ಷೇತ್ರ ನೀರಾವರಿ ಯೋಜನೆಗಳು ಈ ಹಿಂದಿನ ಸಾಲುಗಳಲ್ಲಿ ಪೂರ್ಣಗೊಂಡಿರುವ ಜಲಾನಯನ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕ್ಷೇತ್ರ ನೀರಾವರಿ ಯೋಜನೆಗಳ ಕಾರಣ ಕಂಪನಿಯು ಗುತ್ತಿಗೆದಾರರುಗಳಿಗೆ ಪಾವತಿಸಬೇಕಾದ ಹಾಗೂ ಫಲಾನುಭವಿ ರೈತರುಗಳಿಂದ ವಸೂಲಾತಿಮಾಡಬೇಕಾದ ಗುತ್ತಿಗೆ ಮೌಲ್ಯದ ಶೇಕಡಾ 10ರಷ್ಟು ಮೊತ್ತವನ್ನು ಉಲ್ಲೇಖಿಸುತ್ತದೆ, ಇದು ಅನುಮೋದನಾ ಆದೇಶ ಸಿಎಡಿಡಬ್ಲ್ಯೂಎಂ ಕಾರ್ಯಕ್ರಮ ಸಂಖ್ಯೆ 2–10/2001–ಸಿಎಡಿ, ಪ್ರಕಾರವೇ ಆಗಿರುತ್ತದೆ, ಈ ಕಾರ್ಯಕ್ರಮದ ಪ್ರಕಾರ ಈ ಚಟುವಟಿಕೆಗಳಲ್ಲಿ ರಾಜ್ಯದ ಪಾಲಾಗಿ ಫಲಾನುಭವಿಗಳಿಂದ ಕನಿಷ್ಠ 10% ಕಾಣಿಕೆಯು ಕಡ್ಡಾಯವಾಗಿರುತ್ತದೆ. ಆದಾಗ್ಯೂ, ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಡಬ್ಲ್ಯೂಆರ್ಡಿ:52 ಸಿಎಎಂ 2013 ದಿನಾಂಕ 08.01.2014ರ ಜೊತೆಯಲ್ಲಿ 2015–16 ಹಣಕಾಸು ಸಾಲಿನಿಂದ, ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ ಜಿ–11012/1/2013–ಸಿಎಡಿಡಬ್ಲ್ಯೂಎಂ/48(ಆರ್) ದಿನಾಂಕ 06.12.2013ರ ಪ್ರಕಾರ ಗುತ್ತಿಗೆ ಮೌಲ್ಯದ ಶೇಕಡಾ 10ರಷ್ಟನ್ನು ವಹಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕಂಪನಿಯು ಕನೀನಿನಿ/ಕಾಡಾ/ಎಫ್.ಐ.ಸಿ/2013–14/72 ದಿನಾಂಕ 03/04/2014ರ ಮೂಲಕ ಒಂದು ಸ್ಪಷ್ಟನೆಯನ್ನು ಕೋರಿರುವುದರಿಂದ, ಕಂಪನಿಯು ಗುತ್ತಿಗೆದಾರರುಗಳಿಗೆ ಬಾಕಿಯಿರುವ ಗುತ್ತಿಗೆ ಮೌಲ್ಯದ ಶೇಕಡಾ 10ನ್ನು ಲೆಕ್ಕಪತ್ರಗಳಲ್ಲಿ ಪರಿಗಣಿಸಿರುವುದಿಲ್ಲ.

ಎಫ್. ದರಗಳು ಹಾಗೂ ಅಲ್ಲದೆಯೇ ಪಾವತಿಗಳನ್ನು ಮಾಡಬೇಕಾದ ಹೆಚ್ಚುವರಿ ಪರಿಮಾಣಗಳನ್ನು ಲೆಕ್ಕಹಾಕಿ ಅಂತಿಮ ರೂಪಕ್ಕೆ ತರಬೇಕಾಗಿರುವುದರಿಂದ ಹಾಗೂ ಅವುಗಳಿಗೆ ಸಕ್ಷಮ ಅಧಿಕಾರಿಗಳ ಅನುಮೋದನೆಯನ್ನು ಪಡೆಯಬೇಕಾಗಿರುವುದರಿಂದ ಯಾವುದೇ ಅನುವನ್ನು ಮಾಡಿರುವುದಿಲ್ಲ. ಮೊತ್ತವನ್ನು ಬಿಡುಗಡೆಗೊಳಿಸಲಾಗುವ ಸಾಲಿನಲ್ಲಿಯೇ ಅದನ್ನು ಲೆಕ್ಕಪತ್ರಗಳಲ್ಲಿ ಗುರುತಿಸಲಾಗುವುದು /ನಮೂದಿಸಲಾಗುವುದು. ಆದಾಗ್ಯೂ, ಆಡಳಿತ ಮಂಡಳಿಯು ಅಭಿಪ್ರಾಯಪಟ್ಟಿರುವಂತೆ, ಅಂತಹ ಮೊತ್ತದ ಪ್ರಭಾವವು ವಿಷಯಕ ವಸ್ತುವಾಗುವಂತಹ ನಿರೀಕ್ಷಣೆಯಿರುವುದಿಲ್ಲ.

ಜಿ. ಕಂಪನಿಯು, ಮುಖ್ಯ ಇಂಜಿನಿಯರ್‌ರವರ ವರದಿ ಅಥವಾ ವಿಭಾಗ ಇಂಜಿನಿಯರ್‌ರವರ ವರದಿ ಮತ್ತು ಕರ್ನಾಟಕ ಸರ್ಕಾರದ ಸಂಬಂಧಿತ ಇಲಾಖೆಗಳಿಂದ ನಡೆಸಲಾದ ಜಂಟಿ ಪರೀಕ್ಷಣೆಗಳ ಆಧಾರದ ಮೇರೆಗೆ ಬೆಳೆದುನಿಂತಿರುವ ಗಿಡಮರಗಳನ್ನು ತೆಗೆದುಹಾಕುವುದು, ಬೆಳೆಸಲಾದ ಬೆಳೆಯು ಹಾನಿಯಾಗುವುದು ಮುಂತಾದ ಕಾರಣಗಳಿಂದ ರೈತರುಗಳಿಗೆ ಸಂಭವಿಸುವ ನಷ್ಟಕ್ಕೆ ಬೆಳೆ ಪರಿಹಾರವನ್ನು ಪಾವತಿಸುವುದು. ಬೆಳೆ ಪರಿಹಾರವನ್ನು ಪಾವತಿಸುವ ಸಮಯದಲ್ಲಿ ಲೆಕ್ಕಪತ್ರಗಳಲ್ಲಿ ಗುರುತಿಸಲಾಗುವುದು/ನಮೂದಿಸಲಾಗುವುದು ಹಾಗೂ ಪಾವತಿಸಬೇಕಾದ ಬೆಳೆ ಪರಿಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಅನುವನ್ನೂ ಮಾಡುವುದಿಲ್ಲ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
ಹಣಕಾಸು ತ:ಖ್ತೆಗಳ ಅವಿಭಾಜ್ಯ ಅಂಗವಾಗಿರುವ ಟಿಪ್ಪಣಿಗಳು

20. ವರ್ಗಾವಣೆಗಾಗಿ ಹೊಂದಲಾಗಿರುವ ಆಸ್ತಿಗಳು ಮತ್ತು ಜವಾಬ್ದಾರಿಗಳು

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ	1 ಏಪ್ರಿಲ್ 2016ರಲ್ಲಿದ್ದಂತೆ
ಎ. ಆಸ್ತಿಗಳು			
ಭೂಮಿ/ಕಟ್ಟಡಗಳು ಇತ್ಯಾದಿ ಆಸ್ತಿಗಳು, ಸ್ಥಾವರಗಳು ಮತ್ತು ಉಪಕರಣಗಳು	*1,80,77,75,308*	*1,66,73,27,308*	-
ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	*38,10,23,11,168*	*38,10,23,11,168*	-
ಚಾಲ್ತಿಯೇತರ ಆಸ್ತಿಗಳು	*2,85,01,84,310*	*2,85,01,84,310*	-
ಹಣಕಾಸು ಸಂಬಂಧಿತ ಆಸ್ತಿಗಳು	*80,22,608*	*80,22,608*	-
ಇತರೆ ಚಾಲ್ತಿ ಆಸ್ತಿಗಳು	*13,22,73,259*	*13,22,73,259*	-
ಒಟ್ಟಾರೆ ಆಸ್ತಿಗಳು	**42,90,05,66,653**	**42,76,01,18,653**	-
ಬಿ. ಜವಾಬ್ದಾರಿಗಳು			-
ಅವಧಿ ಮೀರಿದ ಚೆಕ್ಕುಗಳು	*1,19,366*	*1,19,366*	-
ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾಗಿರುವವುಗಳು	*5,02,51,63,272*	*5,02,51,63,272*	-
ಇತರೆ ಚಾಲ್ತಿ ಜವಾಬ್ದಾರಿಗಳು	*25,62,88,661*	*25,62,88,661*	-
ಒಟ್ಟಾರೆ ಜವಾಬ್ದಾರಿಗಳು	**5,28,15,71,299**	**5,28,15,71,299**	-

ಎ) ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ: ಜಸಂಇ/35/ವಿಇ ಬಿವೈಎ ಇಇ/2016, ಬೆಂಗಳೂರು, ದಿನಾಂಕ 20.08.2016ರ ಮೂಲಕ ಎತ್ತಿನಹೊಳೆ, ಭದ್ರಾ ಮೇಲ್ದಂಡೆ ಯೋಜನೆ, ಗಾಯತ್ರಿ ಜಲಾಶಯ ಮತ್ತು ವಾಣಿ ವಿಲಾಸ ಸಾಗರ ಯೋಜನೆಗಳನ್ನು ಈವರೆಗೆ ಕರ್ನಾಟಕ ನೀರಾವರಿ ನಿಗಮ ನಿಯಮಿತವು ಕಾರ್ಯಗತಗೊಳಿಸುತ್ತಿದ್ದು, ಇನ್ನು ಮುಂದೆ ಇವುಗಳ ಕಾರ್ಯಗತಗೊಳಿಸುವಿಕೆಯ ಜವಾಬ್ದಾರಿಯನ್ನು ಮೆ. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವಹಿಸಲಾಗಿದೆ ಎಂಬುದನ್ನು ತಿಳಿಸಿದ್ದಿತು. ಅಲ್ಲದೆಯೇ, ಸರ್ಕಾರಿ ಆದೇಶ ಸಂಖ್ಯೆ ಜಸಂಇ 130/ವಿಐಬಿವೈಎಇ 2016, ಬೆಂಗಳೂರು ದಿನಾಂಕ 18.11.2016ರ ಮೂಲಕ ಈ ಯೋಜನೆಗಳಿಗೆ ಸಂಬಂಧಿತ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಮೆ. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವರ್ಗಾಯಿಸಲು ತಾತ್ವಿಕ ಅನುಮತಿಯನ್ನು ನೀಡಿರುವುದು. ಕಂಪನಿಯು, 14.12.2016ರಂದು ನಡೆದಂತಹ ತನ್ನ ನಿರ್ದೇಶಕರುಗಳ 75ನೇ ಸಭೆಯಲ್ಲಿ ಮೇಲೆ ತಿಳಿಸಲಾಗಿರುವ ಯೋಜನೆಗಳನ್ನು ಸಂಬಂಧಿತ ಕಚೇರಿಗಳು ಮತ್ತು ಸಂಬಂಧಿತ ಸಿಬ್ಬಂದಿಗಳ ಜೊತೆಯಲ್ಲಿ ಮೆ. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ 01.01.2017ರಿಂದ ಜಾರಿಗೆ ಬಂದಂತೆ ವರ್ಗಾಯಿಸುವ ಸಲುವಾಗಿ ಅನುಮೋದನೆಯನ್ನು ನೀಡಿತು ಹಾಗೂ ಈ ಸಂಬಂಧವಾಗಿ ಒಂದು ಅಧಿಸೂಚನೆಯನ್ನು ಹೊರಡಿಸಲಾಯಿತು.

ಬಿ) ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವರ್ಗಾಯಿಸಲಾದಂತಹ ಯೋಜನೆಗಳಿಗೆ ಸಂಬಂಧಿತ ಆಸ್ತಿಗಳು ಮತ್ತು ಜವಾಬ್ದಾರಿಗಳ ಮೌಲ್ಯವನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ 31.12.2016ರಲ್ಲಿದ್ದಂತೆ ವರ್ಗಾವಣೆಗೊಂಡಿರುವ ವಿಭಾಗಗಳನ್ನು ಪರಿಗಣಿಸಿದಂತೆ ಲೆಕ್ಕಹಾಕಲಾಗಿದೆ. ವರ್ಗಾವಣೆಯ ಸಮಯದಲ್ಲಿ ಯಾವುದಾದರೂ ಅಗತ್ಯ ಬಿದ್ದಲ್ಲಿ, ಅಂಕಿಸಂಖ್ಯೆಗಳು ಮುಂದಿನ ಬದಲಾವಣೆಗಳ ಷರತ್ತಿಗೆ ಒಳಪಟ್ಟಿರುತ್ತವೆ,

ಸಿ) ರೂ.14,04,48,00,000/–ರಷ್ಟು (ಪೀಠೋಪಕರಣಗಳು ಮತ್ತು ನೆಲೆವಸ್ತುಗಳೂ ಸೇರಿದಂತೆ) ಮೌಲ್ಯದಲ್ಲಿ ಕಂಪನಿಯು ಬೆಂಗಳೂರಿನ ಎಂಬೆಸ್ಸಿ ಸ್ಕ್ವೇರಿನಲ್ಲಿ ಖರೀದಿಸಿರುವ ಕಟ್ಟಡವನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಕ್ಕೆ ವರ್ಗಾಯಿಸುವ ಸಲುವಾಗಿ ನಿರ್ದೇಶಕರುಗಳ ಮಂಡಳಿಯು 21.11.2017ರಂದು ನಡೆದ ತನ್ನ ಸಭೆಯಲ್ಲಿ ತೀರ್ಮಾನಿಸಿತು. ಆದ್ದರಿಂದ, ಅದನ್ನು "ವರ್ಗಾವಣೆಗಾಗಿ ಹೊಂದಲಾಗಿರುವ ಆಸ್ತಿಗಳು" ಇದರ ಅಡಿಯಲ್ಲಿ ತೋರಿಸಲಾಗಿರುವುದು.

ಡಿ) ಕರ್ನಾಟಕ ಸರ್ಕಾರದಿಂದ ಬಾಕಿಯಿರುವ ಸರ್ಕಾರಿ ಆದೇಶವನ್ನು ಸ್ವೀಕರಿಸಿದ ಕೂಡಲೆಯೇ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ವರ್ಗಾವಣೆ ಮಾಡಲಾಗುವುದು, ವರ್ಗಾವಣೆಯು ಬಾಕಿಯಿರುವಂತೆ, ಆ ವಿಭಾಗಗಳ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು "ವರ್ಗಾವಣೆಗಾಗಿ ಹೊಂದಿರುವಂತಹ ಆಸ್ತಿಗಳು/ಜವಾಬ್ದಾರಿಗಳು" ಎಂಬುದಾಗಿ ತೋರಿಸಲಾಗಿರುವುದು.

21. ಕಾರ್ಯಾಚರಣೆಗಳಿಂದ ವರಮಾನ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	*31 ಮಾರ್ಚ್ 2017ರಲ್ಲಿದ್ದಂತೆ*
ನೀರಿನ ದರಗಳು		
ರೈತರುಗಳು ಮತ್ತು ನೀರು ಬಳಕೆದಾರರ ಸಹಕಾರಿ ಸಂಘಗಳು	24,84,49,233	*76,73,210*
ಇತರರುಗಳು	3,58,46,817	*2,16,98,658*
ಒಟ್ಟು	**28,42,96,050**	**2,93,71,868**

ಕಂಪನಿಯು, ರೈತರುಗಳಿಂದ ಮತ್ತು ನೀರು ಬಳಕೆದಾರರ ಸಹಕಾರಿ ಸಂಘಗಳಿಂದ ನೀರಿನ ದರಗಳ ಪಾವತಿಗಾಗಿ ತಗಾದೆಗಳನ್ನು ಸೃಷ್ಟಿಸುವುದಕ್ಕೆ ಸಂಬಂಧಿಸಿದಂತೆ ಕಾರ್ಯವಿಧಾನವನ್ನು ಸರಳಗೊಳಿಸುವ ಪ್ರಕ್ರಿಯೆಯಲ್ಲಿರುವುದು ಹಾಗೂ ಈ ನಿಟ್ಟಿನಲ್ಲಿನ ಪ್ರಕ್ರಿಯೆಗಳು ಮತ್ತು ದಾಖಲೆಗಳ ಪರಿಶೀಲನೆಗಳನ್ನು ನಡೆಸುವ ಸಲುವಾಗಿ ಒಂದು ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯನ್ನು ನೇಮಕ ಮಾಡಿರುವುದು. ಅವರ ವರದಿಯನ್ನು ಆಧಾರಿಸಿದಂತೆ ಇವುಗಳ ಲೆಕ್ಕವನ್ನಿಡುವಿಕೆಯಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡಲಾಗುವುದು.

22. ಇತರೆ ವರಮಾನ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	*31 ಮಾರ್ಚ್ 2017ರಲ್ಲಿದ್ದಂತೆ*
ಠೇವಣಿಗಳ ಮೇಲೆ ಬಡ್ಡಿ	34,44,67,972	*15,64,82,717*
ಗುತ್ತಿಗೆದಾರರುಗಳಿಗೆ ನೀಡಲಾದ ಮುಂಗಡಗಳ ಮೇಲಿನ ಬಡ್ಡಿ	23,74,91,799	*14,41,55,972*
ಇತರೆ ಬಡ್ಡಿ ವರಮಾನ	6,707	-
ದಾಖಲೆಗಳಿಂದ ಹಿಂಪಡೆಯಲಾದ ಸಣ್ಣಪುಟ್ಟ ಶಿಲ್ಕುಗಳು (ಅವಧಿ ಮೀರಿದ ಚೆಕ್ಕುಗಳು)	41,69,696	*6,52,323*
ಸ್ವೀಕರಿಸಲಾದ ಬಾಡಿಗೆ	3,85,26,476	*3,95,34,084*
ಟೆಂಡರು ಪುಸ್ತಕಗಳ ಮಾರಾಟ	4,19,713	*18,32,473*
ಅವಶೇಷಗಳು/ಕಲ್ಲುಮಣ್ಣಿನ ಮಾರಾಟ	2,16,90,354	*4,32,82,729*
ವಸೂಲಾತಿ ಮಾಡಲಾದ ದಂಡಗಳು	84,56,092	*90,80,870*
ದಾಖಲಾತಿ ಮತ್ತು ನೋಂದಣಿ ಶುಲ್ಕಗಳು	11,61,170	*16,66,000*
ಮುನ್ನೆಚ್ಚರಿಕೆಗಾಗಿ ಭದ್ರತಾ ಠೇವಣಿ/ಹೆಚ್ಚುವರಿ ಭದ್ರತಾ ಠೇವಣಿ	75,70,538	*76,78,950*
ಹೆಚ್ಚುವರಿಯಾಗಿ ಮಾಡಲಾಗಿದ್ದ ಅನುವುಗಳನ್ನು ದಾಖಲೆಗಳಿಂದ ಹಿಂಪಡೆದಿದ್ದು	1,96,000	*76,91,337*
ಇತರೆ ವರಮಾನ	68,77,456	*4,85,28,122*
ವರಮಾನ ಅನುದಾನಗಳು	3,39,18,63,000	*3,13,30,50,000*
ಎಸ್‌ಸಿಪಿ/ಟಿಎಸ್‌ಪಿ ಯ ಅನುದಾನಗಳು	3,06,78,23,246	*2,94,85,00,000*
ಕೆಲಸಗಾರರ ಕ್ಷೇಮಾಭಿವೃದ್ಧಿ ಸೆಸ್ ಮೇಲೆ ಆಡಳಿತಾತ್ಮಕ ವೆಚ್ಚಗಳ ವಸೂಲಿ	13,81,469	*21,11,070*
ಒಟ್ಟು	**7,13,21,01,688**	**6,54,42,46,647**

ಎ) **ಅವಶೇಷ/ಕಲ್ಲುಮಣ್ಣಿನ ಮಾರಾಟ**

ಕಂಪನಿಯು ಯೋಜನೆಗಳ ನಿರ್ಮಾಣದ ವೇಳೆಯಲ್ಲಿ ತಾನು ಗಮನಿಸಿದ ಹಾಗೂ ಗುತ್ತಿಗೆದಾರರುಗಳಿಗೆ ನೀಡಲಾದ ಅವಶೇಷ/ಕಲ್ಲುಮಣ್ಣಿನ ಮೌಲ್ಯವನ್ನು ಗುತ್ತಿಗೆದಾರರುಗಳಿಗೆ ಪಾವತಿಸಲಾಗುವ ಪಾವತಿಗಳಿಂದ ವಸೂಲಾತಿ ಮಾಡುತ್ತದೆ. ಅವಶೇಷಗಳು/ಕಲ್ಲುಮಣ್ಣಿನ ಅಂತಹ ಮಾರಾಟದಿಂದ ಬರುವ ವರಮಾನವನ್ನು ಇತರೆ ವರಮಾನ ಎಂಬುದಾಗಿ ಪರಿಗಣಿಸಲಾಗುವುದು. ಅಂತಹ ಅವಶೇಷ/ಕಲ್ಲುಮಣ್ಣಿನ ಮೌಲ್ಯವನ್ನು ಹಾಗೂ ಅದರ ಮೇಲೆ ರಾಜಧನವನ್ನು

ಲೆಕ್ಕಹಾಕುವ ಸಲುವಾಗಿ ಒಂದೇ ರೀತಿಯ ಪದ್ಧತಿ ಇರುವುದಿಲ್ಲವಾದ್ದರಿಂದ, ಅದಕ್ಕಾಗಿ ಒಂದು ಸಮಾನ ಕಾರ್ಯನೀತಿಯನ್ನು ಕಂಡುಕೊಳ್ಳುವ ಸಲುವಾಗಿ ತಾಂತ್ರಿಕ ಉಪ–ಸಮಿತಿಗೆ ಸೂಚಿಸಿರುವುದು. ಈ ನಿಟ್ಟಿನಲ್ಲಿ ವರಮಾನದ ಮೇಲೆ ಮತ್ತು ಶಾಸನಬದ್ಧ ಜವಾಬ್ದಾರಿಗಳ ಮೇಲೆ ಯಾವುದಾದರೂ ಪ್ರಭಾವವಿದ್ದಲ್ಲಿ, ತಾಂತ್ರಿಕ ಉಪ–ಸಮಿತಿಯ ನಿರ್ದೇಶನಗಳ ಪ್ರಕಾರ ಪರಿಗಣಿಸಲಾಗುವುದು.

ಬಿ) ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ ವರಮಾನ

ವಿದ್ಯುತ್ ಉತ್ಪಾದನೆಗಾಗಿ ನೀರಿನ ಬಳಕೆಯ ಕಡೆಗೆ ವರಮಾನಕ್ಕೆ ಸಂಬಂಧಿಸಿದಂತೆ ನಿಗಮದ ಜೊತೆ ಒಡಂಬಡಿಕೆಯನ್ನು ಇನ್ನೂ ಮಾಡಿಕೊಳ್ಳಬೇಕಾಗಿದೆ. ಆದಾಗ್ಯೂ, ಕರ್ನಾಟಕ ಸರ್ಕಾರದ ನಡೆವಳಿಗಳ ಪ್ರಕಾರ, ಘಟಪ್ರಭಾ ಜಲ ವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ವಿದ್ಯುತ್ ಉತ್ಪಾದನೆಗಾಗಿ ನೀರಿನ ಬಳಕೆಯ ಕಡೆಗೆ ರಾಜಧನ ಶುಲ್ಕಗಳು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು 01.01.2014ರಿಂದ ಜಾರಿಗೆ ಬಂದಂತೆ ಉತ್ಪಾದಿಸುವ ವಿದ್ಯುತ್ತಿಗೆ ಕೆಡಬ್ಲ್ಯೂ ಒಂದಕ್ಕೆ 10 ಪೈಸೆ ಎಂಬುದಾಗಿ ಪರಿಗಣಿಸಲಾಗಿರುವುದು. ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಸಿ. ಕೆಲಸಗಾರರ ಕ್ಷೇಮಾಭಿವೃದ್ಧಿ ಸೆಸ್ ಮೇಲೆ ಆಡಳಿತಾತ್ಮಕ ವೆಚ್ಚಗಳು

ಕಂಪನಿಯು, ಗುತ್ತಿಗೆದಾರರುಗಳಿಂದ ಸಂಗ್ರಹಿಸಲಾದ ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ ಮೊತ್ತದ ಪೈಕಿ ಶೇಕಡಾ 1ರಷ್ಟನ್ನು ಆಡಳಿತಾತ್ಮಕ ಶುಲ್ಕವನ್ನಾಗಿ ಉಳಿಸಿಕೊಂಡು ಉಳಿದ ಶೇಕಡಾ 99ರಷ್ಟನ್ನು ಇಲಾಖೆಗೆ ಪಾವತಿಸುವಂತೆ ತಿದ್ದುಪಡಿ ಸಂಖ್ಯೆ ಎಲ್‌ಡಿ 300 ಎಲ್‌ಇಟಿ 2006 ಮತ್ತು ಪತ್ರ ಸಂಖ್ಯೆ ಸಿಡಬ್ಲ್ಯೂ ಬಿ/ಎಸ್‌ಎಸ್/ಕೆಎನ್‌ಎನ್‌ಎಲ್/ಸಿಆರ್–48/2015–16 ದಿನಾಂಕ 11.03.2016ರ ಮೂಲಕ ಕರ್ನಾಟಕ ಸರ್ಕಾರದ ಒಂದು ಅಧಿಸೂಚನೆಯನ್ನು ಸ್ವೀಕರಿಸಿತು.

ಡಿ) ಲೆಕ್ಕಪುಸ್ತಕಗಳಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವ ಬಡ್ಡಿ ಮತ್ತು ನಮೂನೆ ಎಎಸ್26ರ ಪ್ರಕಾರ ಅದರ ಮೇಲಿನ ಮೂಲದಲ್ಲಿಯೇ ಕಡಿದುಕೊಳ್ಳಲಾದ ತೆರಿಗೆಯ ಜೊತೆಯಲ್ಲಿ ಸಮನ್ವಯಗೊಳ್ಳುತ್ತಿದೆ. ಗುತ್ತಿಗೆದಾರರುಗಳು ಮತ್ತು ಕಂಪನಿಯ (ಮೊದಲ ಹೆಸರು) ಜಂಟಿ ಹೆಸರುಗಳಲ್ಲಿರುವ ಐಬಿಎಸ್ ಠೇವಣಿಗಳ ಮೇಲಿನ ಬಡ್ಡಿಯು ಮೂಲದಲ್ಲಿಯೇ ತೆರಿಗೆಯನ್ನು ಕಡಿದುಕೊಳ್ಳುವಲ್ಲಿ ಹಾಗೂ ಕಂಪನಿಗೆ ಜಮೆ ಮಾಡುವಲ್ಲಿ ಪರಿಣಮಿಸಿತು. ಐಬಿಎಸ್ ಠೇವಣಿಗಳು ಗುತ್ತಿಗೆದಾರರುಗಳಿಗೆ ಸೇರಿರುವುದರಿಂದ, ಕಂಪನಿಯು ರೂ.4,27,54,740/– ರಷ್ಟು (ಹಿಂದಿನ ಸಾಲಿನಲ್ಲಿ : ರೂ.1,42,59,858/–) (1,4.16ರಲ್ಲಿದ್ದಂತೆ – ರೂ.1,81,91,336/–) ಹಾಗೂ ಅಲ್ಲದೆಯೇ ಮೂಲದಲ್ಲಿಯೇ ಕಡಿದುಕೊಳ್ಳಲಾದ ತೆರಿಗೆ ರೂ.42,77,186/– ರಷ್ಟನ್ನು (ಹಿಂದಿನ ಸಾಲಿನಲ್ಲಿ : ರೂ.14,35,438/–) (1.4.16ರಲ್ಲಿದ್ದಂತೆ – ರೂ.18,70,674/–) ಮೊತ್ತವನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಕಂಪನಿಯು ಈ ನಿಟ್ಟಿನಲ್ಲಿ ಅಸಂಗತತೆಯನ್ನು ಸರಿಪಡಿಸುವ ಪ್ರಕ್ರಿಯೆಯಲ್ಲಿರುವುದು.

23. ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳ ವೆಚ್ಚ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಮಾರ್ಚ್ 31, 2018ರ ಅಂತ್ಯದಲ್ಲಿದ್ದಂತೆ	*ಮಾರ್ಚ್ 31, 2017ರ ಅಂತ್ಯದಲ್ಲಿದ್ದಂತೆ*
ಉದ್ಯೋಗಿಗಳ ಸಂಭಾವನೆ ಮತ್ತು ಪ್ರಯೋಜನಗಳು		
ಸಂಬಳ	1,45,21,29,499	*1,59,46,03,172*
ರಜೆ ನಗದೀಕರಣ	4,54,81,657	*5,84,11,249*
ವೈದ್ಯಕೀಯ ವೆಚ್ಚಗಳ ಮರುತುಂಬಿಸಿಕೊಡುವಿಕೆ	58,57,650	*69,81,920*
ಸ್ವಂತ ಊರಿಗೆ ಪ್ರವಾಸ ರಿಯಾಯಿತಿ	31,508	*22,434*
ಭವಿಷ್ಯ ನಿಧಿಗೆ ಕಂಪನಿಯ ಕಾಣಿಕೆ	1,98,45,941	*1,60,51,663*
ಗ್ರಾಚುಯಿಟಿ	18,62,832	*21,45,123*
ಸಮವಸ್ತ್ರ ವೆಚ್ಚಗಳು	98,599	*2,050*
ಸಿಬ್ಬಂದಿ ಕ್ಷೇಮಾಭಿವೃದ್ಧಿ ವೆಚ್ಚಗಳು	20,79,378	*11,69,197*
	1,52,73,87,064	**1,67,93,86,808**
ಕಳೆಯುವುದು: ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ವರ್ಗಾವಣೆ ಮಾಡಿರುವ ಮೊತ್ತ	41,44,83,284	*51,19,31,148*
ಒಟ್ಟು	**1,11,29,03,780**	**1,16,74,55,660**

ಸಂಬಂಧಿತ ತಂಡಗಳನ್ನು ಬಹಿರಂಗಪಡಿಸುವಿಕೆ

ಸ್ವತಂತ್ರ ಕಾರ್ಯಾನಿರ್ವಾಹಕ ನಿರ್ದೇಶಕರುಗಳಲ್ಲದ ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿಗೆ ಪಾವತಿಸಲಾಗಿರುವ ಸಂಭಾವನೆಗಳನ್ನು ವ್ಯವಸ್ಥಾಪನಾ ಸಿಬ್ಬಂದಿಯ ಸಂಭಾವನೆ ಎಂಬುದಾಗಿ ಬಹಿರಂಗಪಡಿಸಲಾಗಿದೆ.

ವ್ಯವಸ್ಥಾಪನಾ ಸಿಬ್ಬಂದಿಯ ಸಂಭಾವನೆ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ಹೆಸರು / ಹುದ್ದೆ	ಸಂಬಳ ಮತ್ತು ಭತ್ಯೆಗಳು	ಇತರೆ ಪ್ರಯೋಜನೆಗಳು
ಶ್ರೀ ಆರ್. ರುದ್ರಯ್ಯ – ವ್ಯವಸ್ಥಾಪಕ ನಿರ್ದೇಶಕರು (25.2.17ರವರೆಗೆ)	3,272	-
ಶ್ರೀ ಮಲ್ಲಿಕಾರ್ಜುನ್ ಬಿ ಗುಂಗೆ – ವ್ಯವಸ್ಥಾಪಕ ನಿರ್ದೇಶಕರು 26.2.17ರಿಂದ	*12,97,942*	-
	13,01,214	-

24. ಸಾಲಗಳು ಮುಂತಾದ ಹಣಕಾಸು ವೆಚ್ಚಗಳು

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಮಾರ್ಚ್ 31, 2018ರ ಅಂತ್ಯದಲ್ಲಿದ್ದಂತೆ	ಮಾರ್ಚ್ 31, 2017ರ ಅಂತ್ಯದಲ್ಲಿದ್ದಂತೆ
ಸಾಲಗಳು ಮುಂತಾದ ಹಣಕಾಸು ಸಂಬಂಧಿತ ವೆಚ್ಚಗಳು		
ಅವಧಿ ಸಾಲಗಳ ಮೇಲಿನ ಬಡ್ಡಿ	1,64,15,11,599	*1,18,87,19,105*
ಖಾತರಿ ಕಮಿಷನ್ನು	28,82,81,858	*21,01,44,450*
ದರ ನಿರ್ಧಾರಣೆ ಮತ್ತು ಕಣ್ಗಾವಲು ಶುಲ್ಕ	17,03,400	*16,73,750*
ಅತ್ಯಲ್ಪ ಮೊತ್ತದ/ನಾಮಮಾತ್ರದ ಶುಲ್ಕಗಳು	2,63,529	*86,517*
ಬಾಂಡುಗಳ ಮೇಲಿನ ಬಡ್ಡಿ	43,75,03,275	*43,75,00,000*
	2,36,92,63,661	**1,83,81,23,822**
ಕಳೆಯುವುದು: ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ವರ್ಗಾಯಿಸಲಾದ ಮೊತ್ತ	7,75,497	*7,64,748*
ಒಟ್ಟು	**2,36,84,88,164**	**1,83,73,59,074**

ಪ್ರಸಕ್ತ ಸಾಲಿನ ಖಾತರಿ ಕಮಿಷನ್ನಿನ ಮೊತ್ತವು ರೂ.28,82,81,858/–ರಷ್ಟು (ಹಿಂದಿನ ಸಾಲಿನಲ್ಲಿ ರೂ.21,01,44,450/–ರಷ್ಟು) ಮೊತ್ತದ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು (ಜಿಎಸ್‌ಟಿ) ಒಳಗೊಂಡಿರುತ್ತದೆ.

25. ಇತರೆ ವೆಚ್ಚಗಳು

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಮಾರ್ಚ್ 31, 2018ರ ಅಂತ್ಯದಲ್ಲಿದ್ದಂತೆ	ಮಾರ್ಚ್ 31, 2017ರ ಅಂತ್ಯದಲ್ಲಿದ್ದಂತೆ
ಜಲಾನಯನ ಪ್ರದೇಶ ಅಭಿವೃದ್ಧಿ ಯೋಜನೆಯ ಮೇಲಿನ ವೆಚ್ಚ	48,24,04,156	65,76,52,038
ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳ ಮೇಲಿನ ವೆಚ್ಚ	3,06,78,23,246	*2,91,17,34,886*
ಸಲಹಾ ಶುಲ್ಕಗಳು	54,20,371	*45,03,998*
ಬಾಡಿಗೆ	2,02,21,758	*2,19,75,171*

ವಿವರಗಳು	ಮಾರ್ಚ್ 31, 2018ರ ಅಂತ್ಯದಲ್ಲಿದ್ದಂತೆ	ಮಾರ್ಚ್ 31, 2017ರ ಅಂತ್ಯದಲ್ಲಿದ್ದಂತೆ
ವಿಮೆ	19,32,925	*22,61,857*
ಶಾಸನಬದ್ಧ ಬಾಕಿಗಳ ಮೇಲೆ ಬಡ್ಡಿ ಮತ್ತು ದಂಡಗಳು	29,85,201	*16,25,706*
ದರಗಳು ಮತ್ತು ತೆರಿಗೆಗಳು	10,06,42,408	*4,12,93,641*
ಅಂಚೆ ಮತ್ತು ದೂರವಾಣಿ ವೆಚ್ಚಗಳು	23,10,241	*76,22,395*
ಮುದ್ರಣ ಮತ್ತು ಲೇಖನಸಾಮಗ್ರಿಗಳು	1,52,50,209	*1,84,77,783*
ವಿದ್ಯುತ್ ಮತ್ತು ನೀರಿನ ಶುಲ್ಕಗಳು	63,10,60,833	*45,79,58,494*
ಪ್ರವಾಸ ವೆಚ್ಚಗಳು		
- ವ್ಯವಸ್ಥಾಪಕ ನಿರ್ದೇಶಕರು ಮತ್ತು ಇತರೆ ನಿರ್ದೇಶಕರುಗಳು	5,25,242	*5,25,242*
- ಇತರರುಗಳು	3,38,40,852	*3,37,22,633*
ಲೆಕ್ಕಪರಿಶೋಧಕರುಗಳ ಸಂಭಾವನೆ (25.1)	41,58,869	*36,31,516*
ಬ್ಯಾಂಕು ಶುಲ್ಕಗಳು	2,65,215	*6,71,375*
ಬೆಳೆ ಪರಿಹಾರ	30,64,284	*46,69,333*
ಗುತ್ತಿಗೆ ಬಾಡಿಗೆ ಶುಲ್ಕಗಳು	98,04,830	*1,81,65,584*
ಪರೀಕ್ಷಣಾ ಶುಲ್ಕಗಳು	1,32,017	*9,84,072*
ನೋಟೀಸುಗಳ ಪ್ರಕಟಣೆ	2,05,42,313	*2,29,00,468*
ಕಾನೂನು ಮತ್ತು ವೃತ್ತೀಯ ಶುಲ್ಕಗಳು	2,30,00,964	*2,96,38,016*
ನಿರ್ದೇಶಕರುಗಳ ಸಭೆಗೆ ಹಾಜರಾತಿ ಶುಲ್ಕಗಳು	5,91,146	*4,38,920*
ತಂತ್ರಾಂಶ ಮತ್ತು ಜಾಲತಾಣ ಶುಲ್ಕಗಳು	72,96,035	*48,41,375*
ಪ್ರಚಾರ ವೆಚ್ಚಗಳು/ಉದ್ಘಾಟನಾ ವೆಚ್ಚಗಳು	82,853	*12,03,286*
ಇತರೆ ಆಡಳಿತಾತ್ಮಕ ವೆಚ್ಚಗಳು	21,20,22,381	*9,40,59,479*
ವಿನಿಮಯ ದರ ಏರಿಳಿಕೆ ನಷ್ಟ ಅಥವಾ ಗಳಿಕೆ	-	*73,549*
ಆಸ್ತಿಗಳ ನಿರ್ವಹಣಾ ವೆಚ್ಚಗಳು	3,15,33,34,757	*2,03,25,677*
ವಸೂಲಾತಿಯು ಅನುಮಾನಾಸ್ಪದವಾಗಿರುವ ಸಾಲಗಳಿಗಾಗಿ ಅನುವು	22,00,27,478	-
ವಸೂಲಾತಿಯು ಅನುಮಾನಾಸ್ಪಪದವಾಗಿರುವ ಮುಂಗಡಗಳು	23,61,379	-
ಟ್ರಸ್ಟಿಗಳ ಶುಲ್ಕ	1,40,542	*1,38,000*
ಉಪ–ಮೊತ್ತ	**8,03,83,93,043**	**6,37,32,94,494**
ಕಳೆಯುವುದು: ಪ್ರಗತಿಯಲ್ಲಿರುವ ಕಾಮಾಗಾರಿಗಳಿಗೆ ವರ್ಗಾಯಿಸಿದ ಮೊತ್ತ	24,21,04,370	*23,27,47,737*
ಒಟ್ಟು ಮೊತ್ತ	**7,79,62,88,672**	**6,14,05,46,757**

ಪ್ರಸಕ್ತ ಸಾಲಿನಲ್ಲಿ ಎಸ್‌ಸಿಪಿ ಟಿಎಸ್‌ಪಿ ಅನುದಾನಗಳ ಕಡೆಗೆ ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗಿರುವ ಅನುದಾನಗಳ ಮೊತ್ತ ರೂ.2,98,58,00,000/– (ಹಿಂದಿನ ಸಾಲಿನಲ್ಲಿ: ರೂ.2,94,85,00,000/–) ಇದಕ್ಕೆ ಪ್ರತಿಯಾಗಿ ಪ್ರಸಕ್ತ ಸಾಲಿನಲ್ಲಿ ವಾಸ್ತವಿಕವಾಗಿ ಭರಿಸಲಾದ ವೆಚ್ಚವು ರೂ.3,06,78,23,246/–ರಷ್ಟು (ಹಿಂದಿನ ಸಾಲಿನಲ್ಲಿ ರೂ.2,91,17,34,886/–) ಆಗಿದ್ದಿತು. ಉಳಿಕೆ ಮೊತ್ತ ರೂ.8,20,23,246/– ರಷ್ಟನ್ನು (ಹಿಂದಿನ ಸಾಲಿನಲ್ಲಿ ರೂ.–ಯಾವುದೂ ಇರುವುದಿಲ್ಲ––) ಕರ್ನಾಟಕ ಸರ್ಕಾರದಿಂದ ಸ್ವೀಕರಿಸಬೇಕಿರುವ ಅನುದಾನ ಎಂಬುದಾಗಿ ತೋರಿಸಲಾಗಿರುತ್ತದೆ.

25.1 ಲೆಕ್ಕಪರಿಶೋಧಕರುಗಳ ಸಂಭಾವನೆ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಮಾರ್ಚ್ 31, 2018ರ ಅಂತ್ಯದಲ್ಲಿದ್ದಂತೆ	ಮಾರ್ಚ್ 31, 2017ರ ಅಂತ್ಯದಲ್ಲಿದ್ದಂತೆ
ಲೆಕ್ಕಪರಿಶೋಧಕರ ಸಂಭಾವನೆ		
ಲೆಕ್ಕಪರಿಶೋಧನಾ ಶುಲ್ಕ	18,18,132	*18,56,140*
ತೆರಿಗೆ ಲೆಕ್ಕಪರಿಶೋಧನಾ ಶುಲ್ಕ	2,89,668	*2,95,000*
ಮೌವತೆ ಲೆಕ್ಕಪರಿಶೋಧನಾ ಶುಲ್ಕ	83,168	*88,500*
ಇತರೆ ಪ್ರಮಾಣೀಕರಣ ವೆಚ್ಚಗಳು	13,40,972	*11,59,00*
ಪಾಕೇಟಿನಿಂದ ಭರಿಸಲಾಗಿರುವ ವೆಚ್ಚಗಳು	6,26,929	*2,32,876*
ಒಟ್ಟು	**41,58,869**	**36,31,516**

26. ಅಸಾಧಾರಣ/ವಿಶೇಷ ಬಾಬ್ತುಗಳು

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಮಾರ್ಚ್ 31, 2018ರ ಅಂತ್ಯದಲ್ಲಿದ್ದಂತೆ	ಮಾರ್ಚ್ 31, 2017ರ ಅಂತ್ಯದಲ್ಲಿದ್ದಂತೆ
ಸ್ಥಿರಾಸ್ತಿಗಳ ಮಾರಾಟದಿಂದ ಬಂದ ಲಾಭ/ ಹಾನಿಗೊಂಡಿರುವುದು/ಸವಕಳಿ/ದಾಖಲೆಗಳಿಂದ ತೆಗೆದುಹಾಕಿರುವುದು	3,56,346	*2,68,85,325*
ಒಟ್ಟು	**3,56,346**	**2,68,85,325**

27. ಸಾಮಾನ್ಯ

ಪ್ರಸಕ್ತ ಸಾಲಿನ ವರ್ಗೀಕರಣ/ಬಹಿರಂಗಪಡಿಸುವಿಕೆಗಳ ಜೊತೆ ಅನುರೂಪಗೊಳಿಸುವ ಸಲುವಾಗಿ ಹಿಂದಿನ ಸಾಲಿನ ಅಂಕಿಸಂಖ್ಯೆಗಳನ್ನು ಎಲ್ಲೆಲ್ಲಿ ಅಗತ್ಯವೋ ಅಂತಹ ಕಡೆಗಳಲ್ಲಿ ಪುನರ್–ಗುಂಪುಗೊಳಿಸಲಾಗಿದೆ/ಪುನರ್–ವರ್ಗೀಕರಿಸಲಾಗಿದೆ.

28. ಹಣಕಾಸು ತ:ಖ್ತೆಗಳಿಗೆ ಹೆಚ್ಚುವರಿ ಮಾಹಿತಿ

ಎ) ಬಂಡವಾಳ ಬದ್ಧತೆಗಳು

ವಿವರಗಳು	ಮಾರ್ಚ್ 31, 2018ರ ಅಂತ್ಯದಲ್ಲಿದ್ದಂತೆ	ಮಾರ್ಚ್ 31, 2017ರ ಅಂತ್ಯದಲ್ಲಿದ್ದಂತೆ
ಬಂಡವಾಳ ಲೆಕ್ಕದಲ್ಲಿ ಕಾರ್ಯಗತಗೊಳಿಸಲು ಉಳಿದಿರುವ ಗುತ್ತಿಗೆಗಳ ಅಂದಾಜು ಮೊತ್ತ ಹಾಗೂ ಅನುವು ಮಾಡದಿರುವುದು (ಖಚಿತಪಡಿಸಿಕೊಂಡಿರುವಷ್ಟರ ಮಟ್ಟಿಗೆ). ನಿರ್ದಿಷ್ಟಪಡಿಸಲಾಗಿರುವ ಮೊತ್ತಕ್ಕೆ ಸಂಬಂಧಿಸಿದಂತೆ ನಗದು ಹರಿವುಗಳು 2017–18 ಹಣಕಾಸು ಸಾಲಿನಲ್ಲಿ ಹಾಗೂ ತದನಂತರದ ಸಾಲುಗಳಲ್ಲಿ ಸಂಭವಿಸುವುದನ್ನು ನಿರೀಕ್ಷಿಸಬಹುದು. ಮೊತ್ತಗಳು ಕಂಪನಿಯು ನೀಡಿರುವ ಪ್ರಮಾಣಪತ್ರದ ಆಧಾರದ ಮೇರೆಗೆ ಹಾಗೂ ಲೆಕ್ಕಪರಿಶೋಧಕರು ಅವಲಂಭಿಸಿದ್ದರ ಮೇರೆಗೆ ಅಗಿರುತ್ತದೆ. **(ಮೊತ್ತಗಳು ಕೋಟಿ ರೂಪಾಯಿಗಳಲ್ಲಿ)**	**19,590.41**	**15,573.70**

ಬಿ) ಆಕಸ್ಮಿಕ ಜವಾಬ್ದಾರಿಗಳು:

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
ಎ) ಕಂಪನಿಯ ಪ್ರತಿಯಾಗಿ ಪಾವತಿಗಾಗಿನ ಕೋರಿಕೆಗಳು		
i) ಸಾಲ/ಋಣಗಳು ಎಂಬುದಾಗಿ ಒಪ್ಪಿಕೊಳ್ಳದಿರುವ ವಿವಿಧ ಪಂಚಾಯತಿ ನಡಾವಳಿಗಳು, ಕಾರ್ಮಿಕ ಪ್ರಕರಣಗಳು ಮತ್ತು ನ್ಯಾಯಾಲಯ ಪ್ರಕರಣಗಳ ಕಾರಣ ಉದ್ಭವಿಸಿರುವ ಪಾವತಿಗಾಗಿನ ಕೋರಿಕೆಗಳನ್ನು ಒಳಗೊಂಡಂತೆ ಕಂಪನಿಯ ಪ್ರತಿಯಾಗಿ ಪಾವತಿಗಾಗಿನ ಕೋರಿಕೆಗಳು (ಖಚಿತಪಡಿಸಿಕೊಳ್ಳಬಹುದಷ್ಟರ ಮಟ್ಟಿಗೆ) (ಮೊತ್ತ ಕೋಟಿ ರೂಪಾಯಿಗಳಲ್ಲಿ).	**924.99**	413.91
ii) ಕಂಪನಿಯು ಆಕಸ್ಮಿಕವಾಗಿ ಪಾವತಿಸಲು ಬಾಧ್ಯವಾಗಿರುವ ಇತರೆ ಹಣಕಾಸುಗಳು – ಭೂಸ್ವಾಧೀನ ಪ್ರಕರಣಗಳು (ಹೆಚ್ಚಿಸಲ್ಪಟ್ಟ ಭೂ ಪರಿಹಾರ/ಬಡ್ಡಿ/ದಂಡವೂ ಸೇರಿದಂತೆ) –ವಿವಿಧ ಕಾರ್ಮಿಕ ಪ್ರಕರಣಗಳು ಮತ್ತು ನ್ಯಾಯಾಲಯ ಪ್ರಕರಣಗಳ ಕಾರಣ ಪಾವತಿಗಾಗಿ ಕೋರಿಕೆಗಳು ಕಂಪನಿಯು ಮೇಲೆ ತಿಳಿಸಲಾದ ಆಕಸ್ಮಿಕ ಜವಾಬ್ದಾರಿಗಳಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸಿನ ಮರುತುಂಬಿಸಿಕೊಡುವಿಕೆಯನ್ನು ನಿರೀಕ್ಷಿಸುವುದಿಲ್ಲ. (ವಿವಿಧ ನ್ಯಾಯಾಲಯ ಪ್ರಕರಣಗಳು, ವಿವಾದಗಳು ಮತ್ತು ಕಂಪನಿಯು ವಿವಾದದಿಂದ ಕೊಡಿದೆ ಎಂಬುದಾಗಿ ತಿಳಿಸಿರುವ ಪಾವತಿಗಾಗಿನ ಕೋರಿಕೆಗಳ ಕಾರಣ ಹಣಕಾಸು ಸಂಪನ್ಮೂಲಗಳ ಹೊರಹರಿವನ್ನು ಈ ಹಂತದಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ)	ಮೊತ್ತವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ	
iii) ಅಂದಾಜುಗಳ ಪರಿಷ್ಕರಣೆ, ಗುತ್ತಿಗೆಗಳ ಕಾಲಾವಧಿಯ ವಿಸ್ತರಣೆ (ಅವುಗಳ ಮೇಲೆ ಭಾಗಶ:ವಾಗಿ ಪಾವತಿಸಲಾಗಿರುವ ಬಿಲ್ಲುಗಳೂ ಸೇರಿದಂತೆ), ಹೆಚ್ಚುವರಿ ಹಣಕಾಸು ಪಾವತಿಯ ಬಾಧ್ಯತೆಗಳು ಹಾಗೂ ದರ ಹೆಚ್ಚಳ, 31.03.2018ರಲ್ಲಿದ್ದಂತೆ ಪಾವತಿಗಾಗಿ ಬಿಲ್ಲುಗಳನ್ನು ಇನ್ನೂ ಕೋರಬೇಕಾಗಿರುವುದು ಮತ್ತು/ಅಥವಾ ಅನುಮೋದನೆಗಳ ನಿರೀಕ್ಷಣೆಯಲ್ಲಿರುವುದು.	ಮೊತ್ತವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ	
iv) 31.03.2018ರಲ್ಲಿದ್ದಂತೆ ಕಾಮಗಾರಿಯನ್ನು ಕಾರ್ಯಗತಗೊಳಿಸಿರುವುದು, ಆದರೆ ಅಳತೆಯನ್ನು ತೆಗೆದುಕೊಳ್ಳದಿರುವುದು/ಬಿಲ್ಲುಗಳನ್ನು ತಯಾರಿಸದಿರುವುದು.	ಮೊತ್ತವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ	

ಬಿ. ಇತರೆ

ಖಾತರಿಗಳು	ಯಾವುದೂ ಇರುವುದಿಲ್ಲ	ಯಾವುದೂ ಇರುವುದಿಲ್ಲ

ಸಿ. ಇತರೆ ಆಕಸ್ಮಿಕಗಳು

ಮುನ್ನೆಚ್ಚರಿಕೆ ಭದ್ರತಾ ಠೇವಣಿ ಮತ್ತು ಹೆಚ್ಚುವರಿ ಭದ್ರತಾ ಠೇವಣಿಗಳಿಗೆ ಬದಲಾಗಿ ಗುತ್ತಿಗೆದಾರರುಗಳಿಂದ ಪಡೆದುಕೊಳ್ಳಲಾಗಿರುವ ನಿಶ್ಚಿತ ಅವಧಿ ಠೇವಣಿಗಳನ್ನು ಷೆಡ್ಯೂಲು ಬ್ಯಾಂಕುಗಳಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ಮತ್ತು ಗುತ್ತಿಗೆದಾರರುಗಳ ಜಂಟಿ ಹೆಸರುಗಳಲ್ಲಿ ಇರುತ್ತವೆ.

– ಮೌಲ್ಯವನ್ನು ಖಚಿತಪಡಿಸಿಕೊಂಡಿರುವುದಿಲ್ಲ.

ಸಿ. ವಿದೇಶಿ ಹಣಕಾಸಿನಲ್ಲಿ ವೆಚ್ಚಗಳು (ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
ವಿದೇಶಿ ಹಣಕಾಸಿನಲ್ಲಿ ವೆಚ್ಚಗಳು	**72,61,089**	**14,14,76,066**

ಡಿ. ಇತರೆ ಬಹಿರಂಗಪಡಿಸುವಿಕೆಗಳು

ಎ. ಸಂಬಂಧಿತ ತಂಡಗಳಿಗೆ ಯಾವುದೇ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಿರುವುದಿಲ್ಲ ಅಥವಾ ಕಂಪನಿಯ ನಿರ್ದೇಶಕರುಗಳು ಅಥವಾ ಅವರುಗಳಲ್ಲಿ ಯಾರಾದರೊಬ್ಬರಿಂದಲೂ ಇತರೆ ಯಾವುದೇ ವ್ಯಕ್ತಿಗೂ ಪ್ರತ್ಯೇಕವಾಗಿ ಅಥವಾ ಜಂಟಿಯಾಗಿ ಬಾಕಿಯಿರುವುದಿಲ್ಲ ಅಥವಾ ಯಾವುದೇ ನಿರ್ದೇಶಕರು ಓರ್ವ ಪಾಲುದಾರರಾಗಿರುವ ಅಥವಾ ಓರ್ವ ಸದಸ್ಯರಾಗಿರುವ ಸಂಸ್ಥೆಗಳು ಅಥವಾ ಖಾಸಗಿ ಕಂಪನಿಗಳಿಂದ ಯಾವುದೇ ಮೊತ್ತವು ಬಾಕಿಯಿರುವುದಿಲ್ಲ.

ಬಿ. ಮುಂಗಡಗಳು, ವಿವಿಧ ಗುತ್ತಿಗೆದಾರರುಗಳ ಬಾಕಿಗಳಿಗೆ ಸಂಬಂಧಿಸಿದಂತೆ ಮಾಡಲಾಗಿರುವ ಠೇವಣಿಗಳು ಸೇರಿದಂತೆ ಠೇವಣಿಗಳು ಸರ್ಕಾರದಿಂದ ಮತ್ತು ಸರ್ಕಾರಿ ಸಂಸ್ಥೆಗಳಿಂದ ಬಾಕಿಯಿರುವ ಮೊತ್ತಗಳು ಸೇರಿದಂತೆ ಮುಂಗಡಗಳು, ಖಚಿತಪಡಿಸಿಕೊಳ್ಳುವಿಕೆಯ ಷರತ್ತಿಗೆ ಒಳಪಟ್ಟಿರುತ್ತವೆ. ಕಂಪನಿಯ ಅಭಿಪ್ರಾಯದಲ್ಲಿ, ಈ ಆಸ್ತಿಗಳು ಲೆಕ್ಕಪತ್ರಗಳಲ್ಲಿ ತಿಳಿಸಲಾಗಿರುವ ಮೊತ್ತಗಳಿಗೆ ಸಮನಾಗಿ ವಸೂಲಾತಿ ಮಾಡಬಹುದಾದ ಮೌಲ್ಯಗಳನ್ನು ಹೊಂದಿರುತ್ತವೆ.

29. ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವಿಕೆಯ ಮಾನದಂಡಗಳು) ನಿಯಮಗಳು, 2015ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕವನ್ನಿಡುವಿಕೆಯ ಮಾನದಂಡಗಳ ಪ್ರಕಾರ ಬಹಿರಂಗಪಡಿಸುವಿಕೆಯ ಅಗತ್ಯತೆಗಳು:

I. "ನಿವ್ವಳ ಲಾಭ ಅಥವಾ ನಷ್ಟ ಹಾಗೂ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಕಾರ್ಯನೀತಿಗಳಲ್ಲಿನ ಬದಲಾವಣೆಗಳು" ಇವುಗಳಿಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 8ರ ಅಗತ್ಯತೆ :

ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 8ರ ಅಗತ್ಯತೆಯಂತೆ, ಪ್ರಸಕ್ತ ಸಾಲಿನಲ್ಲಿ ಈ ಹಿಂದಿನ ಅವಧಿಗಳಿಗೆ ಸಂಬಂಧಿತ ಬಾಬುಗಳಲ್ಲಿನ ತಪ್ಪುಗಳನ್ನು ತಪ್ಪುಗಳು ಸಂಭವಿಸಿದ್ದ 2016–17 ಹಣಕಾಸು ಸಾಲಿಗೆ ತುಲನಾತ್ಮಕ ಮೊತ್ತಗಳನ್ನು ಪುನರ್–ತಿಳಿಸುವ ಮೂಲಕ ಹಾಗೂ ಅಲ್ಲದೆಯೇ 01.04.2016ಕ್ಕೆ ಮುಂಚಿನ ಅವಧಿಯ ತಪ್ಪುಗಳಿಗೆ ಸಂಬಂಧಿಸಿದಂತೆ, ಆಸ್ತಿಗಳು, ಜವಾಬ್ದಾರಿಗಳು ಹಾಗೂ ಈಕ್ವಿಟಿಗಳ ಸ್ಥಿತಿಗತಿಗಳನ್ನು 01.04.2016ರಲ್ಲಿದ್ದಂತೆ ಪುನರ್–ತಿಳಿಸುವ ಮೂಲಕ ಸಂಬಂಧಿತ ಅವಧಿಗಳಿಗೆ ಅನ್ವಯಗೊಳ್ಳುವ ರೀತಿಯಲ್ಲಿ ಸರಿಪಡಿಸಲಾಯಿತು.

2016–17 ಹಣಕಾಸು ಸಾಲಿಗೆ ತಿದ್ದುಪಡಿಯಾಗಿರುವ ಮೊತ್ತಗಳು ಈ ಕೆಳಗಿನಂತಿರುತ್ತವೆ :

ಕ್ರಮ ಸಂಖ್ಯೆ	ಪೂರ್ವಾವಧಿ ತಪ್ಪುಗಳ ಸ್ವರೂಪ	ತಿದ್ದುಪಡಿಯ ಮೊತ್ತ (ಭಾರತೀಯ ರೂಪಾಯಿಗಳಲ್ಲಿ)	ಲೆಕ್ಕಪತ್ರಗಳ ಮೇಲೆ ಬೀರುವ ಪ್ರಭಾವ
1	ಆಸ್ತಿಗಳ ಪ್ರವರ್ಗ – ಏತ ನೀರಾವರಿ ಯೋಜನೆಯನ್ನು (ಎಲ್ಐಎಸ್) ಪುನರ್–ವರ್ಗೀಕರಿಸಲಾದ ಕಾರಣ ಈ ಮೊದಲು ಸವಕಳಿಯನ್ನು ಅಧಿಕ ಪ್ರಮಾಣದಲ್ಲಿ ಅನುವು ಮಾಡಲಾಗಿದ್ದಿತು.	28,87,48,926	ಭೂಮಿ/ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರಗಳು, ಯಂತ್ರೋಪಕರಣಗಳು, ಉಪಕರಣಗಳ ಮೌಲ್ಯದಲ್ಲಿ ಹೆಚ್ಚಳಗೊಂಡಿದ್ದು.
2	ಅಧಿಕ ಪ್ರಮಾಣದಲ್ಲಿ ಮಾಡಲಾಗಿದ್ದ ಅನುವುಗಳ ಕಾರಣ ರಿಪೇರಿಗಳು ಮತ್ತು ನಿರ್ವಹಣಾ ವೆಚ್ಚಗಳನ್ನು ಅಧಿಕ ಪ್ರಮಾಣದಲ್ಲಿ ತೋರಿಸಲಾಗಿದ್ದಿತು.	86,27,153	ರಿಪೇರಿಗಳು ಮತ್ತು ನಿರ್ವಹಣಾ ವೆಚ್ಚಗಳು ಇಳಿಮುಖಗೊಂಡಿದ್ದು.
3	ಈ ಮೊದಲು ಪ್ರವಾಸಗಳಿಗೆ ಸಂಬಂಧಿತ ವೆಚ್ಚಗಳನ್ನು ಅನುವು ಮಾಡಿರಲಿಲ್ಲ.	61,18,793	ಮೊದಲು ಪ್ರವಾಸಗಳಿಗೆ ಸಂಬಂಧಿತ ವೆಚ್ಚಗಳು ಅಷ್ಟರಮಟ್ಟಿಗೆ ಹೆಚ್ಚಳಗೊಂಡಿದ್ದು.
4	ಈಕ್ವಿಟಿ ಷೇರುಗಳ ಹಂಚಿಕೆಗಾಗಿ ಪಾವತಿಸಬೇಕಿದ್ದ ಮುದ್ರಾಂಕ ಸುಂಕವನ್ನು ಈ ಮೊದಲು ಅನುವು ಮಾಡಿರಲಿಲ್ಲ.	3,07,81,016	ದರಗಳು ಮತ್ತು ತೆರಿಗೆಗಳ ವೆಚ್ಚವು ಅಷ್ಟರ ಮಟ್ಟಿಗೆ ಹೆಚ್ಚಳಗೊಂಡಿದ್ದುದು.

ಮೇಲೆ ತಿಳಿಸಲಾದ ಹೊಂದಾಣಿಕೆಗಳ ನಿವ್ವಳ ಪ್ರಭಾವವೆಂದರೆ – 2016–17 ಹಣಕಾಸು ಸಾಲಿಗೆ ವೆಚ್ಚಗಳು ರೂ.2,82,72,656/–ರಷ್ಟು ಹೆಚ್ಚಳಗೊಂಡವು ಹಾಗೂ ಸವಕಳಿಯು ರೂ.28,87,48,926/–ರಷ್ಟು ಇಳಿಮುಖಗೊಂಡಿತು. 2016–17 ಹಣಕಾಸು ಸಾಲಿಗೆ ಮೂಲ ಷೇರು ಒಂದರ ಗಳಿಕೆಯು (–) 22.29ರಿಂದ (–) 21.08ಕ್ಕೆ ಬದಲಾವಣೆಗೊಂಡಿತು. ಹಾಗೂ ದುರ್ಬಲಗೊಳಿಸಲ್ಪಟ್ಟಿದ್ದ ಷೇರು ಒಂದರ ಗಳಿಕೆಯು (–) 21.36ರಿಂದ (–) 20.20ಕ್ಕೆ ಬದಲಾವಣೆಗೊಂಡಿತು. ಮೇಲೆ ತಿಳಿಸಲಾದ ಬದಲಾವಣೆಗಳ ಕಾರಣ 2016–17 ಹಣಕಾಸು ಸಾಲಿನಲ್ಲಿನ ನಗದು/ಹಣಕಾಸು ಹರಿವಿನ ಮೇಲೆ ಯಾವುದೇ ಪ್ರಭಾವವೂ ಬೀರಿರಲಿಲ್ಲ.

01.04.2016ರಲ್ಲಿದ್ದಂತೆ ತಿದ್ದುಪಡಿಗಳ ಮೊತ್ತ :

ಕ್ರಮ ಸಂಖ್ಯೆ	ಪೂರ್ವಾವಧಿ ತಪ್ಪುಗಳ ಸ್ವರೂಪ	ತಿದ್ದುಪಡಿಯ ಮೊತ್ತ (ಭಾರತೀಯ ರೂಪಾಯಿಗಳಲ್ಲಿ	ಲೆಕ್ಕಪತ್ರಗಳ ಮೇಲೆ ಬೀರುವ ಪ್ರಭಾವ
1	ಆಸ್ತಿಗಳ ಪ್ರವರ್ಗ – ಏತ ನೀರಾವರಿ ಯೋಜನೆಯನ್ನು (ಎಲ್ಐಎಸ್) 2015–16 ಹಣಕಾಸು ಸಾಲಿಗೆ ಪುನರ್–ವರ್ಗೀಕರಿಸಲಾದ ಕಾರಣ ಈ ಮೊದಲು ಸವಕಳಿಯನ್ನು ಅಧಿಕ ಪ್ರಮಾಣದಲ್ಲಿ ಅನುವು ಮಾಡಲಾಗಿದ್ದಿತು.	11,49,00,032	ಭೂಮಿ/ಕಟ್ಟಡಗಳು ಮುಂತಾದ ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳೂ ಮತ್ತು ಉಪಕರಣಗಳ ಮೌಲ್ಯವು ಅಷ್ಟರಮಟ್ಟಿಗೆ ಹೆಚ್ಚಳಗೊಂಡಿತು ಹಾಗೂ ಉಳಿಸಿಕೊಳ್ಳಲ್ಪಟ್ಟಿರುವ ಗಳಿಕೆಗಳಿಗೆ ಜಮೆಯನ್ನು ನೀಡುವ ಮೂಲಕ ಕ್ರೋಡೀಕೃತ ಸವಕಳಿಯಲ್ಲಿ ಅಷ್ಟರಮಟ್ಟಿಗೆ ಇಳಿಮುಖಗೊಂಡಿತು.
2	ಆಸ್ತಿಗಳ ಪ್ರವರ್ಗ – ಏತ ನೀರಾವರಿ ಯೋಜನೆಯನ್ನು (ಎಲ್ಐಎಸ್) 01.04.2015ಕ್ಕೆ ಮುಂಚಿನ ಹಣಕಾಸು ಸಾಲುಗಳಿಗೆ ಸಂಬಂಧಿಸಿದಂತೆ ಪುನರ್–ವರ್ಗೀಕರಿಸಲಾದ ಕಾರಣ ಈ ಮೊದಲು ಸವಕಳಿಯನ್ನು ಅಧಿಕ ಪ್ರಮಾಣದಲ್ಲಿ ಅನುವು ಮಾಡಲಾಗಿದ್ದಿತು.	14,36,76,965	ಉಳಿಸಿಕೊಳ್ಳಲ್ಪಟ್ಟಿರುವ ಗಳಿಕೆಗಳಿಗೆ ಜಮೆಯನ್ನು ನೀಡುವ ಮೂಲಕ ಭೂಮಿ/ಕಟ್ಟಡಗಳು ಮುಂತಾದ ಆಸ್ತಿಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳೂ ಮತ್ತು ಉಪಕರಣಗಳ ಮೌಲ್ಯವು ಅಷ್ಟರಮಟ್ಟಿಗೆ ಹೆಚ್ಚಳಗೊಂಡಿತು
3	01.04.2015ಕ್ಕೆ ಮುಂಚಿನ ಅವಧಿಗೆ – ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು – ನಾಲೆಗಳು ಮತ್ತು ಶಾಖಾ ನಾಲೆಗಳ ಮೇಲಿನ ವೆಚ್ಚಗಳನ್ನು ರಿಪೇರಿಗಳು ಮತ್ತು ನಿರ್ವಹಣೆ ವೆಚ್ಚಗಳು ಎಂಬುದಾಗಿ ತಪ್ಪಾಗಿ ಪರಿಗಣಿಸಲಾಗಿದ್ದಿತು.	2,22,28,748	ಉಳಿಸಿಕೊಳ್ಳಲ್ಪಟ್ಟಿರುವ ಗಳಿಕೆಗಳಿಗೆ ಜಮೆಯನ್ನು ನೀಡುವ ಮೂಲಕ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು – ನಾಲೆಗಳು ಮತ್ತು ಶಾಖಾ ನಾಲೆಗಳ ಮೌಲ್ಯವು ಅಷ್ಟರಮಟ್ಟಿಗೆ ಹೆಚ್ಚಳಗೊಂಡಿತು.
4	2006ರಲ್ಲಿ ನ್ಯಾಯಾಲಯದ ಆದೇಶದಂತೆ ಪಾವತಿಸಲಾದ ಕೂಲಿಬಾಕಿಗಳ ಪಾವತಿಯನ್ನು ನ್ಯಾಯಾಲಯಗಳಲ್ಲಿರುವ ಠೇವಣಿಗಳ ಅಡಿಯಲ್ಲಿ ತಪ್ಪಾಗಿ ಹಾಕಲಾಗಿದ್ದಿತು.	10,00,283	"ಇತರೆ ಆಸ್ತಿಗಳು" ಅಡಿಯಲ್ಲಿ ಸರ್ಕಾರಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿನ ಠೇವಣಿಗಳಿಂದ ಮೊತ್ತವನ್ನು ಹಿಂಪಡೆದುಕೊಂಡು ಉಳಿಸಿಕೊಳ್ಳಲ್ಪಟ್ಟ ಗಳಿಕೆಗಳಿಗೆ ಖರ್ಚನ್ನು ಹಾಕಲಾಯಿತು.
5	01.04.2015ಕ್ಕೆ ಮುಂಚಿನ ಅವಧಿಯಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ – ಏತ ನೀರಾವರಿ ಯೋಜನೆಗಳ ಮೇಲಿನ ವೆಚ್ಚಗಳನ್ನು ರಿಪೇರಿಗಳು ಮತ್ತು ನಿರ್ವಹಣಾ ವೆಚ್ಚಗಳು ಎಂಬುದಾಗಿ ತಪ್ಪಾಗಿ ಪರಿಗಣಿಸಲಾಗಿದ್ದಿತು.	49,84,070	ಉಳಿಸಿಕೊಳ್ಳಲ್ಪಟ್ಟ ಗಳಿಕೆಗಳಿಗೆ ಜಮೆಯನ್ನು ಮಾಡುವ ಮೂಲಕ ಅವಧಿಯಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ – ಏತ ನೀರಾವರಿ ಯೋಜನೆಗಳ ಮೌಲ್ಯವನ್ನು ಹೆಚ್ಚಳಗೊಳಿಸಿದ್ದು.

ಮೇಲೆ ತಿಳಿಸಲಾದ ಹೊಂದಾಣಿಕೆಯು "ಭೂಮಿ/ಕಟ್ಟಡಗಳು ಮುಂತಾದ ಆಸ್ತಿಗಳು, ಸ್ಥಾವರಗಳು, ಯಂತ್ರೋಪಕರಣಗಳು ಮತ್ತು ಉಪಕರಣಗಳ ಮೌಲ್ಯವನ್ನು ರೂ.25,85,76,997/–ರಷ್ಟು ಮೊತ್ತದಿಂದ ಹೆಚ್ಚಳಗೊಳಿಸಿತು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು – ನಾಲೆಗಳು ಮತ್ತು ಶಾಖಾನಾಲೆಗಳ ಮೌಲ್ಯವನ್ನು ರೂ.2,22,28,748/–ರಷ್ಟು ಮೊತ್ತದಿಂದ ಹೆಚ್ಚಳಗೊಳಿಸಿತು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು – ಏತ ನೀರಾವರಿ ಯೋಜನೆಗಳ ಮೌಲ್ಯವನ್ನು ರೂ.49,84,070/–ರಷ್ಟು ಮೊತ್ತದಿಂದ ಹೆಚ್ಚಳಗೊಳಿಸಿತು, ಸರ್ಕಾರಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಇಟ್ಟಿರುವ ಠೇವಣಿಗಳ ಮೌಲ್ಯವನ್ನು ರೂ.10,00,283/–ರಷ್ಟು ಇಳಿಮುಖಗೊಳಿಸಿತು ಹಾಗೂ 01.04.2016ರಲ್ಲಿದ್ದಂತೆ ಉಳಿಸಿಕೊಳ್ಳಲ್ಪಟ್ಟಿರುವ ಗಳಿಕೆಗಳ ಮುಂದಿನ ಅವಧಿಗಳಿಗೆ ತೆಗೆದುಕೊಂಡು ಹೋಗಲ್ಪಡುವ ಶಿಲ್ಕಿನಲ್ಲಿ ರೂ.28,47,89,532/–ರಷ್ಟು ಮೊತ್ತದಿಂದ ಇಳಿಮುಖಗೊಂಡಿತು.

II. ಗಮನಾರ್ಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳಲ್ಲಿ ಬದಲಾವಣೆ

ಎ. ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಅನ್ವಯಗೊಳ್ಳುವ ಎಲ್ಲಾ ಮಾನದಂಡಗಳನ್ನು ಕಂಪನಿಯು ಅಳವದಿಸಿಕೊಂಡಿರುವುದು.

ಬಿ. ಕಂಪನಿಯು ಪ್ರಸಕ್ತ ಸಾಲಿನಲ್ಲಿ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿರುವುದಿಲ್ಲ.

ಸಿ. ಪುನರ್ನಿರೂಪಿಸುವಿಕೆ ಹಾಗೂ ತುಲನಾತ್ಮಕ ಅಂಕಿಸಂಖ್ಯೆಗಳು

"ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳು, ಲೆಕ್ಕವನ್ನಿಡುವಲ್ಲಿನ ಅಂದಾಜುಗಳು ಮತ್ತು ತಪ್ಪುಗಳು/ ಲೋಪದೊಷಗಳು" ಇವುಗಳಿಗೆ ಸಂಬಂಧಿತ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 8ರ ಅಡಿಯಲ್ಲಿನ ಅಗತ್ಯತೆಯಂತೆ ಕೆಲವು ವಿಷಯಕ ಪೂರ್ವಾವಧಿಯ ತಪ್ಪುಗಳು/ ಲೋಪದೋಷಗಳನ್ನು ಸರಿಪಡಿಸುವ ಸಲುವಾಗಿ ತುಲನಾತ್ಮಕ ಅವಧಿಯ ಹಣಕಾಸು ತ:ಖ್ತೆಗಳಿಗೆ ಕೆಲವು ಪುನರ್ ನಿರೂಪಣೆಗಳನ್ನು ಮಾಡಲಾಗಿರುವುದು. ತತ್ಪರಿಣಾಮವಾಗಿ 01.04.2016ರಲ್ಲಿ ಇದ್ದಂತೆ ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ, 31.03.2017ರಲ್ಲಿದ್ದಂತೆ ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಹಾಗೂ 2016–17 ಹಣಕಾಸು ಸಾಲಿಗೆ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಕೆಲವು ಬಾಬುಗಳಿಗೆ ಸಂಬಂಧಿಸಿದಂತೆ ಪುನರ್‌ನಿರೂಪಣೆಗಳನ್ನು ಮಾಡಲಾಗಿರುವುದು, ಅವುಗಳ ವಿವರಗಳು ಈ ಕೆಳಗಿನಂತಿರುವುದು:

1 ಏಪ್ರಿಲ್ 2016ರಲ್ಲಿದ್ದಂತೆ ಪುನರ್ನಿರೂಪಣೆಗಳ ಮೊದಲು ಹಾಗೂ ನಂತರ ಆಸ್ತಿ–ಜವಾಬ್ದಾರಿ ತ:ಖ್ತೆಯ ಬಾಬ್ತುಗಳು :

ಕ್ರಮ ಸಂಖ್ಯೆ	ವಿವರಗಳು	31.03.2016ರಲ್ಲಿದ್ದಂತೆ ಪುನರ್ನಿರೂಪಣೆಗಳ ಮೊದಲು	ಪುನರ್ನಿರೂಪಣೆಗಳ ನಂತರ	01.04.2016ರಲ್ಲಿದ್ದಂತೆ ಪುನರ್ನಿರೂಪಣೆಗಳ ನಂತರ
1	ಭೂಮಿ/ಕಟ್ಟಡಗಳು ಮುಂತಾದ ಆಸ್ತಿಗಳು, ಸ್ಥಾವರಗಳು ಮತ್ತು ಉಪಕರಣಗಳು	1,19,93,52,89,599	14,36,76,965	1,20,07,89,66,564
2	ಕ್ರೋಡೀಕೃತ ಸವಕಳಿ	2,09,52,35,948	11,49,00,032	1,98,03,35,916
3	ಪ್ರಗತಿಯಲ್ಲಿರುವ ಬಂಡವಾಳ	87,26,76,30,272	2,72,12,818	87,29,48,43,090
4	ಉಳಿಸಿಕೊಳ್ಳಲ್ಪಟ್ಟಿರುವ ಗಳಿಕೆಗಳು	(24,91,96,06,205)	28,47,89,532	(24,63,48,16,673)

31 ಮಾರ್ಚ್ 2017ರಲ್ಲಿದ್ದಂತೆ ಪುನರ್ನಿರೂಪಣೆಗಳ ಮೊದಲು ಹಾಗೂ ನಂತರ ಆಸ್ತಿ–ಜವಾಬ್ದಾರಿ ತ:ಖ್ತೆಯ ಬಾಬ್ತುಗಳು :

ಕ್ರಮ ಸಂಖ್ಯೆ	ವಿವರಗಳು	31.03.2017ರಲ್ಲಿದ್ದಂತೆ ಪುನರ್ನಿರೂಪಣೆಗಳ ಮೊದಲು ಭಾರತೀಯ ರೂಪಾಯಿಗಳಲ್ಲಿ	01.04.2016 ಮತ್ತು 31.03.2017ರಲ್ಲಿದ್ದಂತೆ ಪುನರ್ನಿರೂಪಣೆಗಳಿಗೆ ಮೊದಲು ಭಾರತೀಯ ರೂಪಾಯಿಗಳಲ್ಲಿ	31.03.2017ರಲ್ಲಿದ್ದಂತೆ ಪುನರ್ನಿರೂಪಣೆಗಳ ನಂತರ ಭಾರತೀಯ ರೂಪಾಯಿಗಳಲ್ಲಿ
1	ಕ್ರೋಡೀಕೃತ ಸವಕಳಿ	4,34,17,08,825	(40,36,48,958)	3,93,80,59,867
2	ಉಳಿಸಿಕೊಳ್ಳಲ್ಪಟ್ಟಿರುವ ಗಳಿಕೆಗಳು	(29,71,08,90,892)	54,52,65,803	(29,16,56,25,089)

31 ಮಾರ್ಚ್ 2017ರಲ್ಲಿದ್ದಂತೆ ಪುನರ್ನಿರೂಪಣೆಗಳ ನಂತರ ಲಾಭ ಮತ್ತು ನಷ್ಟ ತ:ಖ್ತೆಯ ಬಾಬ್ತುಗಳು :

ಕ್ರಮ ಸಂಖ್ಯೆ	ವಿವರಗಳು	31.03.2017ರಲ್ಲಿದ್ದಂತೆ ಪುನರ್ನಿರೂಪಣೆಗಳ ಮೊದಲು ಭಾರತೀಯ ರೂಪಾಯಿಗಳಲ್ಲಿ	01.04.2016 ಮತ್ತು 31.03.2017ರಲ್ಲಿದ್ದಂತೆ ಪುನರ್ನಿರೂಪಣೆಗಳಿಗೆ ಮೊದಲು ಭಾರತೀಯ ರೂಪಾಯಿಗಳಲ್ಲಿ	31.03.2017ರಲ್ಲಿದ್ದಂತೆ ಪುನರ್ನಿರೂಪಣೆಗಳ ನಂತರ ಭಾರತೀಯ ರೂಪಾಯಿಗಳಲ್ಲಿ
1	ಸವಕಳಿ ಹಾಗೂ ಮೂಲ ಬೆಲೆಯನ್ನು ಕ್ರಮೇಣ ಕಳೆದು ಹಾಕುವಿಕೆಗಳಿಗೆ ಸಂಬಂಧಿತ ವೆಚ್ಚಗಳು	2,27,46,99,691	(28,87,48,926)	1,98,59,50,765
2	ಆಸ್ತಿಗಳ ನಿರ್ವಹಣಾ ವೆಚ್ಚಗಳು	2,04,11,52,830	(86,27,153)	2,03,25,25,677
3	ಪ್ರವಾಸಗಳಿಗೆ ಸಂಬಂಧಿತ ವೆಚ್ಚಗಳು	2,81,29,082	61,18,793	3,42,47,875
4	ದರಗಳು ಮತ್ತು ತೆರಿಗೆಗಳು	1,05,12,625	3,07,81,016	4,12,93,641
5	ಪ್ರಸಕ್ತ ಸಾಲಿಗೆ ಲಾಭ/ನಷ್ಟ)	(4,79,12,84,687)	(26,04,76,270)	(4,53,08,08,416)

ಡಿ. ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ವಿಷಯಗಳು, ಆದರೆ ಅನ್ವಯಗೊಳಿಸದಿರುವುದು.

ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ಕಂಪನಿಗಳ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು) ತಿದ್ದುಪಡಿ ನಿಯಮಗಳು, 2018ರ ಮೂಲಕ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 115ನ್ನು ಹಾಗೂ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕೆಲವು ಮಾನದಂಡಗಳಿಗೆ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಅಧಿಸೂಚನೆಯನ್ನು ನೀಡಿರುವುದು, ಆ ರೀತಿ ನೀಡಲಾಗಿರುವ ಅಧಿಸೂಚನೆಯು 01.04.2018ರಿಂದ ಅಥವಾ ಅಲ್ಲಿಂದ ಮುಂದಿನ ವಾರ್ಷಿಕ ಅವಧಿಗಳಿಗೆ ಜಾರಿಗೆ ಬಂದಿರುವುದರಿಂದ, ಕಂಪನಿಯು ಪ್ರಸಕ್ತ ಹಣಕಾಸು ಸಾಲಿನ ಲೆಕ್ಕಪತ್ರಗಳಿಗೆ ಅದನ್ನು ಅನ್ವಯಿಸಿರುವುದಿಲ್ಲ.

ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 115ರಲ್ಲಿನ ಅಂಶಗಳು – ಗ್ರಾಹಕರುಗಳೊಂದಿಗಿನ ಗುತ್ತಿಗೆಯಿಂದ ವರಮಾನ

ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 18, ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 11 ಹಾಗೂ ಅವುಗಳಿಗೆ ಸಂಬಂಧಿತ ಅರ್ಥೈಸಿಕೊಳ್ಳುವಿಕೆಗಳೂ ಸೇರಿದಂತೆ ಪ್ರಸಕ್ತ ಇರುವಂತಹ ವರಮಾನದ ಪರಿಗಣನೆಯನ್ನು ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 115 ರದ್ದುಗೊಳಿಸುವುದು. ಕಾರ್ಯನಿರ್ವಹಣಾ ಬದ್ಧತೆಗಳನ್ನು ಗುರುತಿಸುವಿಕೆ ಮತ್ತು ಅವುಗಳ ತೃಪ್ತಿದಾಯಕತೆಯ ಆಧಾರದ ಮೇರೆಗೆ ಗುತ್ತಿಗೆಗಳು ಮತ್ತು ಗ್ರಾಹಕರುಗಳಿಂದ ಬರುವಂತಹ ವರಮಾನಕ್ಕಾಗಿ ಲೆಕ್ಕವನ್ನಿಡುವಿಕೆಯ ಒಂದು ಏಕೈಕ ಮಾದರಿಗೆ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 115 ಅನುವು ಮಾಡಿರುತ್ತದೆ. ಎಂಬುದನ್ನೂ ಸಹ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು, ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 21ನ್ನು ಒಳಗೊಂಡಂತೆ ಕೆಲವು ಮಾನದಂಡಗಳಿಗೆ ತಿದ್ದುಪಡಿಗಳನ್ನು ಮಾಡಿರುವುದು, ವಿದೇಶಿ ವಿನಿಮಯ ದರಗಳಲ್ಲಿನ ಬದಲಾವಣೆಗಳ ಪ್ರಭಾವಗಳು– ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 12 – ಆದಾಯ ತೆರಿಗೆಗಳು. ಮೇಲೆ ತಿಳಿಸಲಾದ ಮಾನದಂಡಗಳನ್ನು ಅನ್ವಯಗೊಳಿಸುವುದರಿಂದ ಕಂಪನಿಯ ಹಣಕಾಸಿನ ಸ್ಥಿತಿಗತಿಯ ಮೇಲೆ ಯಾವುದೇ ಗಮನಾರ್ಹ ಪ್ರಭಾವವನ್ನೂ ಬೀರುವ ನಿರೀಕ್ಷಣೆ ಇರುವುದಿಲ್ಲ.

III . ಸರ್ಕಾರಿ ಅನುದಾನಗಳು

ಎ) ಪ್ರಸಕ್ತ ಸಾಲಿನಲ್ಲಿ, ಕಂಪನಿಯು ಅವಧಿ ಸಾಲದ ಬಡ್ಡಿ, ಖಾತರಿ ಕಮಿಷನ್ನು, ನಿರ್ವಹಣೆ, ಇತ್ಯಾದಿಗಳ ಪಾವತಿಗಾಗಿ ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾದ ರೂ.339,18,63,000/– (ಹಿಂದಿನ ಸಾಲಿನಲ್ಲಿ – ರೂ.313,30,50,000/–) ಮೊತ್ತಕ್ಕೆ ಮನ್ನಣೆ ನೀಡಿರುವುದು, ಅದನ್ನು ಇತರೆ ವರಮಾನಗಳು – ಸ್ವೀಕರಿಸಲಾದ ವರಮಾನ ಅನುದಾನಗಳು – ಇದರ ಅಡಿಯಲ್ಲಿ ತೋರಿಸಲಾಗಿದೆ.

ಬಿ) ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕವಾಗಿ ಭರಿಸಿದ್ದ ವೆಚ್ಚ ರೂ.306,78,23,246/–ರಷ್ಟಕ್ಕೆ (ಹಿಂದಿನ ಸಾಲಿನಲ್ಲಿ ರೂ.291,17,34,886/–) ಪ್ರತಿಯಾಗಿ ಕಂಪನಿಯು

ಪ್ರಸಕ್ತ ಸಾಲಿನಲ್ಲಿ ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾದ ಅನುದಾನಗಳು ರೂ.2,98,58.00,000/–ರಷ್ಟು (ಹಿಂದಿನ ಸಾಲಿನಲ್ಲಿ ರೂ.2,94,85,00,000/–). ಉಳಿಕೆ ಮೊತ್ತ ರೂ.8,20,23,246/–ರಷ್ಟನ್ನು ಹಿಂದಿನ ಸಾಲಿನಲ್ಲಿ ರೂ.–ಯಾವುದೂ ಇರುವುದಿಲ್ಲ––) ಕರ್ನಾಟಕ ಸರ್ಕಾರದಿಂದ ಸ್ವೀಕರಿಸಬೇಕಿರುವ ಅನುದಾನಗಳು ಎಂಬುದಾಗಿ ತೋರಿಸಲಾಗಿದೆ.

IV. ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳು (ಭಾರತೀಯ ಮಾನದಂಡ–19)

"ಸಿಬ್ಬಂಧಿಗಳ ಪ್ರಯೋಜನಗಳಿಗೆ ಲೆಕ್ಕವನ್ನಿಡುವಿಕೆಗೆ ಕಾರ್ಯನೀತಿಗಳ ಸಂಬಂಧಿತ ಮಾನದಂಡ ಪ್ರಯೋಜನೆಗಳು.

ಸಾಮಾನ್ಯ:

"ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನ"ಗಳಿಗೆ ಸಂಬಂಧಿಸಿದಂತೆ ವಿಮಾಗಣಿತ ಮೌಲ್ಯಮಾಪನ ಪದ್ಧತಿಯನ್ನು ಬಳಸಿಕೊಂಡು 31.3.2018ರಲ್ಲಿದ್ದಂತೆ ಪ್ರಸಕ್ತ ಸಾಲಿಗೆ ಅನುವುಗಳನ್ನು ಮಾಡಲಾಗಿದೆ.

ಎ. ಗ್ರಾಚ್ಯುಯಿಟಿ

1. ಈ ಕೆಳಗಿನ ದಿನಾಂಕಗಳಲ್ಲಿದ್ದಂತೆ ಗ್ರಾಚ್ಯುಯಿಟಿಗಾಗಿ ವಿಮಾಗಣಿತ ಮೌಲ್ಯಮಾಪನಕ್ಕಾಗಿ ಪ್ರಮುಖ ವಿಮಾಗಣಿತದ ಕಲ್ಪನೆ

ವಿವರಗಳು	31.03.2018	31.03.2017	31.03.2016	31.03.2015	31.03.2014
ಮರಣ ಪ್ರಮಾಣ ಟೇಬಲ್ಲು	ಐಎಎಲ್‌ಎಂ (2006–08)	ಐಎಎಲ್‌ಎಂ (2006–08)	ಐಎಎಲ್‌ಎಂ (2006–08)	ಐಎಎಲ್‌ಎಂ (2006–08)	ಐಎಎಲ್‌ಎಂ (2006–08)
ರಿಯಾಯಿತಿ ದರ	7.75%	7.25%	7.85%	7.90%	9.35%
ವೇತನ ಹೆಚ್ಚಳ	7.00%	7.00%	7.00%	7.00%	7.00%
ನಿವೃತ್ತಿ ವಯಸ್ಸು (ವರ್ಷಗಳಲ್ಲಿ)	60	60	60	60	60

2. ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆಯಲ್ಲಿ ಮನ್ನಣೆ ನೀಡಲಾಗಿರುವ ಮೊತ್ತ:

ಕಂಪನಿಯ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆಯಲ್ಲಿ ದಾಖಲಿಸಬೇಕಾದ ನಿವ್ವಳ ಜವಾಬ್ದಾರಿ/ಆಸ್ತಿಯ ಒಟ್ಟಾರೆ ಮೊತ್ತವನ್ನು ಹಿಂದಿನ ಸಾಲಿಗೆ ತುಲನಾತ್ಮಕ ಅಂಕಿಸಂಖ್ಯೆಗಳ ಜೊತೆಯಲ್ಲಿ ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಲ್ಲಿ ಅಂತ್ಯಗೊಂಡ ಸಾಲಿಗೆ	
	31 ಮಾರ್ಚ್ 2018	31 ಮಾರ್ಚ್ 2017
ಹಣಕಾಸನ್ನು ಒದಗಿಸಲ್ಪಟ್ಟಿರುವ ವಿವರಿಸಲಾಗಿರುವ ಪ್ರಯೋಜನ ಬದ್ಧತೆಯ ಈಗಿನ ಮೌಲ್ಯ	-	-
ಯೋಜನಾ ಆಸ್ತಿಗಳ ನ್ಯಾಯಸಮ್ಮತ/ಮಾರುಕಟ್ಟೆ ಮೌಲ್ಯ	-	-
ನಿವ್ವಳ ಹಣಕಾಸನ್ನು ಒದಗಿಸಲಾಗಿರುವ ಬದ್ಧತೆ	-	-
ಹಣಕಾಸನ್ನು ಒದಗಿಸಿರದ ವಿವರಿಸಲ್ಪಟ್ಟಿರುವ ಪ್ರಯೋಜನ ಬದ್ಧತೆಯ ಈಗಿನ ಮೌಲ್ಯ	**78,17,299.00**	**70,38,340.00**
ಮಿತಿಯನ್ನು ವಿಧಿಸಿರುವ ಕಾರಣ ಮನ್ನಣೆ ನೀಡದಿರುವ ಮೊತ್ತ	-	-
ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆಯಲ್ಲಿ ಮನ್ನಣೆ ನೀಡಲಾಗಿರುವ ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನ ಜವಾಬ್ದಾರಿ/(ಆಸ್ತಿ)	**78,17,299.00**	**70,38,340.00**
ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನ ಜವಾಬ್ದಾರಿ/(ಆಸ್ತಿ)ಯನ್ನು ಈ ಕೆಳಗಿನಂತೆ ವಿಭಜಿಸಲಾಗಿದೆ:	-	-
ಚಾಲ್ತಿ	**6,89,899.00**	**6,37,726.00**
ಚಾಲ್ತಿಯೇತರ	**71,27,400.00**	**64,00,614.00**

3. ಲಾಭ ಮತ್ತು ನಷ್ಟ ತ:ಖ್ತೆ ವೆಚ್ಚಗಳು:

ಲಾಭ ಮತ್ತು ನಷ್ಟ ತ:ಖ್ತೆಗೆ ಪ್ರಸಕ್ತ ಸಾಲಿನಲ್ಲಿ ಹಾಕಲಾಗಿರುವ ವೆಚ್ಚಗಳನ್ನು ಹಿಂದಿನ ಅವಧಿಯ ವೆಚ್ಚಗಳಿಗೆ ಅನುಗುಣವಾಗಿ ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಲ್ಲಿ ಅಂತ್ಯಗೊಂಡ ಸಾಲಿಗೆ	
	31 ಮಾರ್ಚ್ 2018	31 ಮಾರ್ಚ್ 2017
ಚಾಲ್ತಿ ಸೇವಾ ವೆಚ್ಚಗಳು	**7,60,833**	**6,40,239**
ಹಿಂದಿನ ಸೇವಾ ವೆಚ್ಚಗಳು	**1,07,605**	**-**
ಆಡಳಿತಾತ್ಮಕ ವೆಚ್ಚಗಳು	**-**	**-**
ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನ ಜವಾಬ್ದಾರಿ/(ಆಸ್ತಿ)ಯ ಮೇಲೆ ಬಡ್ಡಿ	**4,87,162**	**4,99,518**
ಇತ್ಯರ್ಥಗೊಂಡ ಸಮಯದಲ್ಲಿ (ಗಳಿಕೆಗಳು)/ನಷ್ಟಗಳು	**-**	**-**
ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಖರ್ಚಿಗೆ ಹಾಕಲಾದ ಒಟ್ಟಾರೆ ಖರ್ಚುವೆಚ್ಚಗಳು	**13,55,600**	**11,39,757**

4. ಇತರೆ ಸಮಗ್ರ ವರಮಾನದಲ್ಲಿ ದಾಖಲಿಸಲಾದ ಮೊತ್ತ

ಪ್ರಸಕ್ತ ಸಾಲಿನಲ್ಲಿ ಇತರೆ ಸಮಗ್ರ ವರಮಾನದಲ್ಲಿ ತಕ್ಷಣವೇ ದಾಖಲಿಸಲು ಅಗತ್ಯವಿದ್ದಂತಹ ಪುನರ್–ನಿರ್ಧಾರಿತ ಬಾಬುಗಳ ಒಟ್ಟು ಮೊತ್ತ ಮತ್ತು ಒಳಸೇರ್ಪಡೆಗೊಳಿಸಿಕೊಳ್ಳಲಾದ ಜವಾಬ್ದಾರಿಗಳ ಪ್ರಭಾವ, ಯಾವುದಾದರೂ ಇದ್ದಲ್ಲಿ, ಅವುಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಲ್ಲಿ ಅಂತ್ಯಗೊಂಡ ಸಾಲಿಗೆ	
	31 ಮಾರ್ಚ್ 2018	31 ಮಾರ್ಚ್ 2017
ಲಾಭ ಮತ್ತು ನಷ್ಟ ತ:ಖ್ತೆಯ ಹೊರಗೆ ಇತರೆ ಸಮಗ್ರ ವರಮಾನದ ಅಡಿಯಲ್ಲಿ ಮನ್ನಣೆ ನೀಡಲಾಗಿರುವ ಪ್ರಾರಂಭಿಕ ಮೊತ್ತ	**(5,19,050)**	**64,301**
ಈ ಕೆಳಗಿನ ಕಾರಣದಿಂದ ಮರು–ನಿರ್ಧಾರಣೆಗಳು:		
ಹಣಕಾಸಿಗೆ ಸಂಬಂಧಿತ ಊಹೆಗಳಲ್ಲಿನ ಬದಲಾವಣೆಗಳು	**(4,94,137)**	**5,13,220**
ಜನಸಂಖ್ಯಾಶಾಸ್ತ್ರಕ್ಕೆ ಸಂಬಂಧಿತ ಮಾಹಿತಿಯಲ್ಲಿನ (ಡೆಮಾಗ್ರಾಫಿಕ್) ಊಹೆಗಳಲ್ಲಿನ ಬದಲಾವಣೆಗಳು	**-**	**-**
ಅನುಭವ ಹೊಂದಾಣಿಕೆಗಳು	**(82,504)**	**(10,96,571)**
ಯೋಜನಾ ಆಸ್ತಿಗಳಿಂದ ಯೋಜನಾ ಆಸ್ತಿಗಳ ಮೇಲಿನ ಬಡ್ಡಿಯನ್ನು ಕಳೆದನಂತರ ವಾಸ್ತವಿಕ ಪ್ರತಿಫಲ	**-**	**-**
ಆಸ್ತಿ ಮಿತಿಯ ಪ್ರಭಾವವನ್ನು ಮನ್ನಣೆ ನೀಡುವ ಸಲುವಾಗಿ ಹೊಂದಾಣಿಕೆ	**-**	**-**
ಲಾಭ ಮತ್ತು ನಷ್ಟ ತ:ಖ್ತೆಯ ಹೊರಗೆ ಇತರೆ ಸಮಗ್ರ ವರಮಾನದಲ್ಲಿ ಮನ್ನಣೆ ನೀಡಲಾಗಿರುವುದಕ್ಕೆ ಸಂಬಂಧಿಸಿದಂತೆ ಅಂತಿಮ ಶಿಲ್ಕು	**(10,95,691)**	**(5,19,050)**

5. ಪ್ರಯೋಜನ ಬದ್ಧತೆಗಳಲ್ಲಿನ ಚಲನೆ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಲ್ಲಿ ಅಂತ್ಯಗೊಂಡ ಸಾಲಿಗೆ	
	31 ಮಾರ್ಚ್ 2018	31 ಮಾರ್ಚ್ 2017
ವಿವರಿಸಲ್ಪಟ್ಟ ಪ್ರಯೋಜನ ಬದ್ಧತೆಯ ಪ್ರಾರಂಭಿಕ ಶಿಲ್ಕು	70,38,340	64,81,934
ಪ್ರಸಕ್ತ ಸೇವಾ ಶುಲ್ಕ	7,60,833	6,40,239
ಹಿಂದಿನ ಸೇವಾ ಶುಲ್ಕ	1,07,605	-
ವಿವರಿಸಲ್ಪಟ್ಟಿರುವ ಪ್ರಯೋಜನ ಬದ್ಧತೆಯ ಮೇಲಿನ ಬಡ್ಡಿ	4,87,162	4,99,518
ಈ ಕೆಳಗಿನ ಕಾರಣಗಳಿಂದ ಪುನರ್–ನಿರ್ಧಾರಣೆಗಳು:		
ಹಣಕಾಸಿಗೆ ಸಂಬಂಧಿತ ಊಹೆಗಳಲ್ಲಿನ ಬದಲಾವಣೆಗಳಿಂದ ವಿಮಾಗಣಿತ ನಷ್ಟ/(ಗಳಿಕೆ)	(4,94,137)	5,13,220
ಜನಸಂಖ್ಯಾಶಾಸ್ತ್ರಕ್ಕೆ ಸಂಬಂಧಿತ ಮಾಹಿತಿಯಲ್ಲಿನ (ಡೆಮಾಗ್ರಾಫಿಕ್) ಊಹೆಗಳಲ್ಲಿನ ಬದಲಾವಣೆಗಳಿಂದ ವಿಮಾಗಣಿತ ನಷ್ಟ/(ಗಳಿಕೆ)	-	-
ಅನುಭವದಲ್ಲಿನ ಬದಲಾವಣೆಗಳಲ್ಲಿನ ಕಾರಣ ಉಭ್ದವಿಸಿದ ವಿಮಾಗಣಿತ ನಷ್ಟ/(ಲಾಭ)	(82,504)	(10,96,571)
ಪಾವತಿಸಲ್ಪಟ್ಟ ಪ್ರಯೋಜನಗಳು	-	-
ಒಳಸೇರ್ಪಡೆಗೊಂಡಂತಹ/ಇತ್ಯರ್ಥಗೊಂಡಂತಹ ಜವಾಬ್ದಾರಿಗಳು	-	-
ಇತ್ಯರ್ಥಗೊಂಡನಂತರ ಇಲ್ಲವಾದಂತಹ ಜವಾಬ್ದಾರಿಗಳು	-	-
ವಿವರಿಸಲ್ಪಟ್ಟ ಪ್ರಯೋಜನ ಬದ್ಧತೆಯ ಅಂತಿಮ ಶಿಲ್ಕು	78,17,299	70,38,340

6. ನಿವ್ವಳ ಜವಾಬ್ದಾರಿ/ಆಸ್ತಿಯ ಸಮನ್ವಯಗೊಳಿಸುವಿಕೆ

ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಅವಧಿಯ ಪ್ರಾರಂಭದಿಂದ ಅಂತ್ಯದವರೆಗೆ ಕಂಪನಿಯ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆಯಲ್ಲಿ ಮನ್ನಣೆ ನೀಡಿರುವ ರೀತಿಯಲ್ಲಿ ನಿವ್ವಳ ಜವಾಬ್ದಾರಿ/ಆಸ್ತಿಯ ಚಲನೆಯನ್ನು ಈ ಕೆಳಗೆ ತೋರಿಸಲಾಗಿದೆ:

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಗಳಲ್ಲಿ ಅಂತ್ಯಗೊಂಡ ಸಾಲಿಗೆ	
	31 ಮಾರ್ಚ್ 2018	31 ಮಾರ್ಚ್ 2017
ಪ್ರಾರಂಭಿಕ ನಿವ್ವಳ ವಿವರಿಸಲ್ಪಟ್ಟಿರುವ ಪ್ರಯೋಜನ ಜವಾಬ್ದಾರಿ/(ಆಸ್ತಿ)	70,38,340	64,81,934
ಲಾಭ ಮತ್ತು ನಷ್ಟ ತ:ಖ್ತೆಗೆ ಹಾಕಿರುವ ವೆಚ್ಚಗಳು	13,55,600	11,39,757
ಲಾಭ ಮತ್ತು ನಷ್ಟ ತ:ಖ್ತೆಯ ಹೊರಗೆ ಪರಿಗಣಿಸಲಾಗಿರುವ ವೆಚ್ಚಗಳು	(5,76,641)	(583,351)
ಉದ್ಯೋಗದಾತರ ಕಾಣಿಕೆಗಳು	-	-
ಊಹಿಸಲ್ಪಟ್ಟಿರುವ ಅಥವಾ (ಇತ್ಯರ್ಥಗೊಳಿಸಲಾದ) ಜವಾಬ್ದಾರಿಯ ಪ್ರಭಾವ	-	-
ಅಂತಿಮ ನಿವ್ವಳ ವಿವರಿಸಲ್ಪಟ್ಟಿರುವ ಜವಾಬ್ದಾರಿ (ಆಸ್ತಿ)	78,17,299	70,38,340

ಬಿ. ರಜೆ ಸಂಬಳ

1. ಈ ಕೆಳಗಿನ ದಿನಾಂಕಗಳಲ್ಲಿದ್ದಂತೆ ರಜೆ ಸಂಬಳಕ್ಕಾಗಿ ವಿಮಾಗಣಿತ ಮೌಲ್ಯಮಾಪನಕ್ಕಾಗಿ ಪ್ರಮುಖ ವಿಮಾಗಣಿತ ಪದ್ಧತಿಯ ಪರಿಗಣನೆ

ವಿವರಗಳು	31.03.2018	31.03.2017	31.03.2016	31.03.2015	31.03.2014
ಮರಣ ಪ್ರಮಾಣ ಟೇಬಲ್ಲು	ಐಎಎಲ್ಎಂ (2006–08)	ಐಎಎಲ್ಎಂ (2006–08)	ಐಎಎಲ್ಎಂ (2006–08)	ಐಎಎಲ್ಎಂ (2006–08)	ಐಎಎಲ್ಎಂ (2006–08)
ರಿಯಾಯಿತಿ ದರ	7.25%	7.25%	7.85%	7.90%	9.35%
ವೇತನ ಹೆಚ್ಚಳ	7.00%	7.00%	7.00%	7.00%	7.00%
ನಿವೃತ್ತಿ ವಯಸ್ಸು (ವರ್ಷಗಳಲ್ಲಿ)	60	60	60	60	60

2. ಮೌಲ್ಯಮಾಪನದ ಫಲಿತಾಂಶಗಳು

ಕಂಪನಿಯ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಪರಿಹಾರ ನೀಡಲ್ಪಟ್ಟಿರುವ ಅನುಪಸ್ಥಿಯ ವಿವರಿಸಲ್ಪಟ್ಟಿರುವ ಪ್ರಯೋಜನ ಬದ್ಧತೆಯ ಮೌಲ್ಯವು 31 ಮಾರ್ಚ್ 2018ರಲ್ಲಿದ್ದಂತೆ ರೂ.8,05,681/– ಆಗುತ್ತದೆ.

ಚಾಲ್ತಿ ಹಾಗೂ ಚಾಲ್ತಿಯೇತರವುಗಳ ನಡುವೆ ವಿವರಿಸಲ್ಪಟ್ಟಿರುವ ಪ್ರಯೋಜನ ಬದ್ಧತೆಯ ವಿಭಜನೆಯು ಈ ಕೆಳಗಿನಂತಿರುತ್ತದೆ :

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಕ್ಕೆ ಅಂತ್ಯಗೊಂಡ ಅವಧಿಗೆ	
	31 ಮಾರ್ಚ್ 2018	31 ಮಾರ್ಚ್ 2017
ಚಾಲ್ತಿ ಜವಾಬ್ದಾರಿಗಳು	**8,77,462**	**7,88,089**
ಚಾಲ್ತಿಯೇತರ ಜವಾಬ್ದಾರಿಗಳು	**71,74,219**	**62,74,620**
ನಿವ್ವಳ ಜವಾಬ್ದಾರಿಗಳು	**80,51,681**	**70,62,709**

V. ಖಂಡಗಳ (ವಿಭಾಗೀಯ ಘಟಕಗಳ) ವರದಿ: ಕಂಪನಿಯು ಸರ್ಕಾರವು ತನಗೆ ವಹಿಸಿರುವ ವಿವಿಧ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ನಿರತವಾಗಿರುವುದು ಹಾಗೂ ಅಂತಹ ಯೋಜನೆಗಳು ಪ್ರಗತಿಯ ವಿವಿಧ ಹಂತಗಳಲ್ಲಿವೆ. ಕಂಪನಿಯು ಕೇವಲ ಒಂದು ವ್ಯವಹಾರ ಮತ್ತು ಭೌಗೋಳಿಕ ಖಂಡವನ್ನು (ವಿಭಾಗ) ಮಾತ್ರ ಹೊಂದಿರುತ್ತದೆ ಮತ್ತು ಆದ್ದರಿಂದ ವರದಿ ಮಾಡುವ ಸಲುವಾಗಿ ಗುರುತಿಸಬಹುದಾದ ಯಾವುದೇ ಖಂಡಗಳು (ವಿಭಾಗಗಳು) ಇರುವುದಿಲ್ಲ.

VI. ಸಂಬಂಧಿತ ತಂಡಗಳ ವ್ಯವಹಾರಗಳು

ಕಂಪನಿಯು, ಸರ್ಕಾರವು ವಹಿಸಿಕೊಡುವಂತಹ ವಿವಿಧ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ನಿರತವಾಗಿರುವಂತಹ ಒಂದು ರಾಜ್ಯ ನಿಯಂತ್ರಿತ ಉದ್ದಿಮೆಯಾಗಿರುವುದು ಹಾಗೂ ಆ ರೀತಿ ವಹಿಸಿಕೊಡಲ್ಪಟ್ಟಿರುವ ಯೋಜನೆಗಳು ಪ್ರಗತಿಯ ವಿವಿಧ ಹಂತಗಳಲ್ಲಿರುತ್ತವೆ. ಕಂಪನಿಯು ಕೇವಲ ಒಂದೇ ಒಂದು ವ್ಯವಹಾರವನ್ನು ಹಾಗೂ ಭೌಗೋಳಿಕ ಖಂಡ/ಘಟಕವನ್ನು ಹೊಂದಿರುವುದು ಮತ್ತು ಆದ್ದರಿಂದ ವರದಿಯನ್ನು ನೀಡುವ ಸಲುವಾಗಿ ಗುರುತಿಸಬಹುದಾದ ಯಾವುದೇ ಖಂಡ ಅಥವಾ ಘಟಕಗಳೂ ಇರುವುದಿಲ್ಲ.

ಸಂಬಂಧಿತ ತಂಡಗಳ ಜೊತೆಗಿನ ವ್ಯವಹಾರಗಳು :

ಕಂಪನಿಯು, ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಒಂದು ಉದ್ದಿಮೆಯಾಗಿರುತ್ತದೆ (ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 24ರ ಷರತ್ತು 19ರಲ್ಲಿ ವಿವರಿಸಿರುವಂತೆ). ಇತರೆ ಬಹಿರಂಗಪಡಿಸಬೇಕಾಗಿರುವವುಗಳು ಈ ಕೆಳಗಿನಂತಿರುತ್ತವೆ :

ನಿಯಂತ್ರಣ ಸಂಸ್ಥೆ : ಕರ್ನಾಟಕ ಸರ್ಕಾರ

ಸಂಬಂಧಿತ ತಂಡಗಳ ಜೊತೆ ವ್ಯವಹಾರಗಳ ಪಟ್ಟಿ

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಮಾರ್ಚ್ 31, 2018ರ ಅಂತ್ಯದಲ್ಲಿದ್ದಂತೆ	ಮಾರ್ಚ್ 31, 2017ರ ಅಂತ್ಯದಲ್ಲಿದ್ದಂತೆ
ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿ		
ಸಂಭಾವನೆ (ಇತರೆ ಪ್ರಯೋಜನಗಳು ಸೇರಿದಂತೆ)	**13,01,214**	**12,07,777**
ನಿರ್ದೇಶಕರುಗಳ ಮಂಡಳಿಗೆ ಹಾಜರಾದುದಕ್ಕಾಗಿ ಶುಲ್ಕ	**76,000**	**2,68,623**
ಪ್ರಸಕ್ತ ಸಾಲಿನಲ್ಲಿ ಮರುಪಾವತಿಸಲಾದ ಸಾಲ		
ಹಂಚಿಕೆ ಮಾಡಲಾದ ಈಕ್ವಿಟಿ ಷೇರುಗಳು	**18,16,38,08,000**	**37,18,40,00,000**
ಈಕ್ವಿಟಿ ನಿವ್ವಳದ ಕಡೆಗೆ ಸ್ವೀಕರಿಸಲಾದ ಮುಂಗಡ	**21,88,80,99,000**	**26,65,32,71,000**
ಸ್ವೀಕರಿಸಲಾದ ವರಮಾನ ಅನುದಾನಗಳು (ಎಸ್‌ಸಿಪಿ/ಟಿಎಸ್‌ಪಿಗಳಿಗಾಗಿ ಹೊರತುಪಡಿಸಿದಂತೆ)	**3,39,18,63,000**	**3,13,30,50,000**
ಎಸ್‌ಸಿಪಿ/ಟಿಎಸ್‌ಪಿಗಳಿಗಾಗಿ ಸ್ವೀಕರಿಸಲಾದ ನಿರ್ದಿಷ್ಟ ಅನುದಾನಗಳು	**2,98,58,00,000**	**2,94,85,00,000**

ಕರ್ನಾಟಕ ಸರ್ಕಾರದ ಜೊತೆಯಲ್ಲಿ ಮಾಡಿಕೊಳ್ಳಲಾಗಿರುವ ಒಡಂಬಡಿಕೆಯ ಪ್ರಕಾರ ಬಹಳಷ್ಟು ಸಂಖ್ಯೆಯ ವ್ಯವಹಾರಗಳು ಇರುವುದರಿಂದ, ವಿವರಗಳನ್ನು ಒದಗಿಸಿರುವುದಿಲ್ಲ.

ಸಂಬಂಧಿತ ತಂಡಗಳ ಜೊತೆಯಲ್ಲಿ ಬಾಕಿಯಿರುವ ಶಿಲ್ಕುಗಳು

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಮಾರ್ಚ್ 31, 2018ರ ಅಂತ್ಯದಲ್ಲಿದ್ದಂತೆ	ಮಾರ್ಚ್ 31, 2017ರ ಅಂತ್ಯದಲ್ಲಿದ್ದಂತೆ
ಕರ್ನಾಟಕ ಸರ್ಕಾರದಿಂದ ಬರಬೇಕಾಗಿರುವ ಬಾಕಿಗಳು (ಕರ್ನಾಟಕ ಸರ್ಕಾರಕ್ಕೆ ಕಂಪನಿಯು ಪಾವತಿಸಬೇಕಾಗಿರುವ ಮೊತ್ತವನ್ನು ಕಳೆದನಂತರ ಉಳಿಯುವ ನಿವ್ವಳ ಮೊತ್ತ)	**18,10,13,338**	**18,10,13,338**
ಈಕ್ವಿಟಿಯ ಕಡೆಗೆ ಸ್ವೀಕರಿಸಲಾಗಿರುವ ಮುಂಗಡ	**12,91,73,99,606**	**9,15,58,08,606**

ಸಂಬಂಧಿತ ತಂಡದ ಸಂಬಂಧವನ್ನು ಕಂಪನಿಯು ಕಂಪನಿಯು ಗುರುತಿಸುತ್ತದೆ ಹಾಗೂ ಲೆಕ್ಕಪರಿಶೋಧಕರು ಅದನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವರು.

VII. ಷೇರು ಒಂದರ ಗಳಿಕೆ :

ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡದ ಅನುಸಾರ, ಈ ಕೆಳಗಿನವುಗಳು ಬಹಿರಂಗಪಡಿಸಬೇಕಾದ ಅಗತ್ಯತೆಯನ್ನು ಹೊಂದಿರುತ್ತವೆ :

(ಮೊತ್ತ ಭಾರತೀಯ ರೂಪಾಯಿಗಳಲ್ಲಿ)

ವಿವರಗಳು	ಈ ಕೆಳಗಿನ ದಿನಾಂಕಕ್ಕೆ ಅಂತ್ಯಗೊಂಡ ಅವಧಿಗೆ	
	31 ಮಾರ್ಚ್ 2018	31 ಮಾರ್ಚ್ 2017
ಮೂಲ ಮತ್ತು ದುರ್ಬಲಗೊಳಿಸಲ್ಪಟ್ಟ ಷೇರು ಒಂದರ ಗಳಿಕೆಗಾಗಿ ಬಳಸಲಾದ ಅಂಶ/ಭಾಗದ ಪ್ರಕಾರ ಲಾಭ ಮತ್ತು ನಷ್ಟ ತ:ಖ್ತೆಯ ಪ್ರಕಾರ ತೆರಿಗೆಯ ನಂತರದ ಲಾಭ/(ನಷ್ಟ) (ಮೊತ್ತ ಭಾರತೀಯ ರೂಪಾಯಿಗಳಲ್ಲಿ)	(5,75,89,47,498)	(4,53,08,08,416)
ವರ್ಷದ ಪ್ರಾರಂಭದಲ್ಲಿ ಬಾಕಿಯಿದ್ದಂತಹ ಷೇರುಗಳು	23,62,85,343	19,91,01,343

ವಿವರಗಳು	ಈ ಕೆಳಗಿನ ದಿನಾಂಕಕ್ಕೆ ಅಂತ್ಯಗೊಂಡ ಅವಧಿಗೆ	
	31 ಮಾರ್ಚ್ 2018	31 ಮಾರ್ಚ್ 2017
ಕೂಡುವುದು : ಪ್ರಸಕ್ತ ಸಾಲಿನಲ್ಲಿ ನೀಡಲಾಗಿರುವ ಷೇರುಗಳ ತೂಗಲ್ಪಟ್ಟ ಸರಾಸರಿ ಸಂಖ್ಯೆ	50,45,338	1,58,60,480
ಷೇರುಗಳ ಮೂಲ ಸಂಖ್ಯೆ	24,13,30,681	21,49,61,823
ಕೂಡುವುದು : ಈಕ್ವಿಟಿಯ ಕಡೆಗೆ ಮುಂಗಡವಾಗಿ ನೀಡಲ್ಪಟ್ಟಿದೆಯೆಂಬುದಾಗಿ ಭಾವಿಸಲ್ಪಡುವ ಷೇರುಗಳ ತೂಗಲ್ಪಟ್ಟ ಸರಾವರಿ	99,31,600	93,36,641
ದುರ್ಬಲಗೊಳಿಸಲ್ಪಟ್ಟ ಷೇರುಗಳ ಸಂಖ್ಯೆ	25,12,62,281	22,42,98,464
ಈಕ್ವಿಟಿ ಷೇರು ಒಂದರ ಗಳಿಕೆ:		
1. ಮೂಲ	(23.86)	(21.08)
2. ದುರ್ಬಲಗೊಳಿಸಲ್ಪಟ್ಟ	(22.92)	(20.20)

ಕಂಪನಿಯು ಈಕ್ವಿಟಿಯ ಕಡೆಗೆ ಮುಂಗಡವನ್ನು ವಿವಿಧ ದಿನಾಂಕಗಳಲ್ಲಿ ಸ್ವೀಕರಿಸಿದ್ದಿತಾದ್ದರಿಂದ, ನೀಡಲಾಗಿದೆಯೆಂಬುದಾಗಿ ಭಾವಿಸಲ್ಪಟ್ಟ ಷೇರುಗಳ ತೂಗಲ್ಪಟ್ಟ ಸರಾಸರಿಯನ್ನು ಪರಿಗಣಿಸಿರುವುದಿಲ್ಲ. ಷೇರು ಒಂದಕ್ಕೆ ಮೂಲ ಮತ್ತು ದುರ್ಬಲಗೊಳಿಸಲ್ಪಟ್ಟ ಗಳಿಕೆಗಳೆರಡಕ್ಕೂ ಪರಿಗಣಿಸಲಾದಂತಹ ನಿವ್ವಳ ನಷ್ಟವು ರೂ.575,89,47,498/–ರಷ್ಟು (ಹಿಂದಿನ ಸಾಲಿನಲ್ಲಿ ರೂ.4,53,08,416/–) ಆಗಿರುತ್ತದೆ.

VIII. ಕಾರ್ಯಾಚರಣೆಯ ಗುತ್ತಿಗೆ: ಕಂಪನಿಗಳ ಗುತ್ತಿಗೆ ವ್ಯವಸ್ಥೆಗಳು ಕಚೇರಿಗಳು ಮತ್ತು ಉದ್ಯೋಗಿಗಳ ವಸತಿಗಾಗಿ ಕಟ್ಟಡಗಳ ಗುತ್ತಿಗೆಗಳ ಕಾರ್ಯಾಚರಣೆಗಳಿಗೆ ಸಂಬಂಧಿಸಿರುತ್ತವೆ. ಈ ಗುತ್ತಿಗೆ ವ್ಯವಸ್ಥೆಗಳನ್ನು ಸಾಮಾನ್ಯವಾಗಿ ಪರಸ್ಪರ ಒಪ್ಪಿಕೊಳ್ಳಲಾಗಿರುವ ಷರತ್ತುಗಳ ಪ್ರಕಾರ ನವೀಕರಿಸಬಹುದು, ಆದರೆ ರದ್ದುಗೊಳಿಸಲು ಸಾಧ್ಯವಿರುವುದಿಲ್ಲ.

ಕಚೇರಿಗಳು ಮತ್ತು ಉದ್ಯೋಗಿಗಳ ನಿವಾಸದ ಬಳಕೆಗಾಗಿ ಸ್ಥಳಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಬಾಡಿಗೆಗಳ ಮೊತ್ತವು ಮಾರ್ಚ್ 31, 2018ಕ್ಕೆ ಅಂತ್ಯಗೊಂಡ ಸಾಲಿಗೆ ರೂ.2,02,21,758/–ರಷ್ಟು (ಹಿಂದಿನ ಸಾಲಿನಲ್ಲಿ ರೂ.2,19,75,171/–) ಆಗಿದ್ದಿತು.

IX. ಆದಾಯದ ಮೇಲಿನ ತೆರಿಗೆಗಳು

ಎ) ಕಂಪನಿಯ ಅಭಿಪ್ರಾಯದಲ್ಲಿ 31.3.2018ಕ್ಕೆ ಅಂತ್ಯಗೊಂಡ ಸಾಲಿಗೆ ತೆರಿಗೆಯನ್ನು ವಿಧಿಸಬಹುದಾದ ಆದಾಯವು ಇರಲಿಲ್ಲವಾದ್ದರಿಂದ ಆದಾಯ ತೆರಿಗೆಯ ಕಡೆಗೆ ಯಾವುದೇ ಅನುವನ್ನೂ ಮಾಡಿರುವುದಿಲ್ಲ.

ಬಿ) ಕಂಪನಿಯು, 31 ಮಾರ್ಚ್ 2017ರಲ್ಲಿದ್ದಂತೆ ನಷ್ಟಗಳು/ಸವಕಳಿ, ಇವುಗಳಿಗೆ ಸಂಬಂಧಿಸಿದಂತೆ ಮುಂದಕ್ಕೆ ತೆಗೆದುಕೊಂಡು ಹೋಗಲಾಗಿರುವ ಮುಂದೂಡಲ್ಪಟ್ಟಿರುವ ತೆರಿಗೆ ಜವಾಬ್ದಾರಿ/ಆಸ್ತಿಗೆ, ಅಂತಹ ಮುಂದೂಡಲ್ಪಟ್ಟ ತೆರಿಗೆ ಆಸ್ತಿಯನ್ನು ವಸೂಲಾತಿ ಮಾಡಿಕೊಳ್ಳಬಹುದಾದಂತಹ ವರಮಾನವು ಲಭ್ಯಗೊಳ್ಳುತ್ತದೆ ಎಂಬ ವಾಸ್ತವಿಕ ಖಚಿತತೆಯು ಇರುವುದಿಲ್ಲವಾದ್ದರಿಂದ, ಅದನ್ನು ಪರಿಗಣಿಸಿರುವುದಿಲ್ಲ.

ಮಂಡಳಿಯ ಪರವಾಗಿ **ನಮ್ಮ ಅದೇ ದಿನಾಂಕದ ಲಗತ್ತಿಸಲಾಗಿರುವ ವರದಿಯ ಅನುಸಾರ**

ಮಲ್ಲಿಕಾರ್ಜುನ ಬಿ ಗುಂಗೆ
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 07777337

ಡಿ.ಎನ್. ದೇಸಾಯಿ
ನಿರ್ದೇಶಕರು
ಡಿಐಎನ್: 00229518

ಮಣಿಯನ್ ಅಂಡ್ ರಾವ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳ
ಸಂಸ್ಥೆಯ ನೋಂದಣಿ ಸಂಖ್ಯೆ 001983S

ಎನ್. ರವೀಂದ್ರನ್
ಪ್ರಧಾನ ವ್ಯವಸ್ಥಾಪಕರು–ಹಣಕಾಸು

ಎಸ್. ಆರ್. ಗೋಪಾಲ್
ಕಂಪನಿ ಕಾರ್ಯದರ್ಶಿ

ಶ್ರೀಕಾಂತ್ ಆರ್.
ಪಾಲುದಾರ – ಸದಸ್ಯತ್ವ ಸಂ. 203138,

ಸ್ಥಳ : ಬೆಂಗಳೂರು
ದಿನಾಂಕ : 27.08.2018

ದಿನಾಂಕ : 31–08–2018ರಲ್ಲಿದ್ದಂತೆ ನಿಗಮದಡಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಪ್ರಗತಿಯ ವರದಿ :

1. ಘಟಪ್ರಭಾ ಯೋಜನೆ:

ಘಟಪ್ರಭಾ ಯೋಜನೆಯಡಿ ಬೆಳಗಾವಿ, ಬಾಗಲಕೋಟ ಜಿಲ್ಲೆಗಳ ಅಥಣಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ, ರಾಯಭಾಗ, ರಾಮದುರ್ಗ, ಸವದತ್ತಿ, ಬದಾಮಿ, ಬಾಗಲಕೋಟ, ಬೀಳಗಿ, ಹುನಗುಂದ, ಜಮಖಂಡಿ, ಮುಧೋಳ ತಾಲ್ಲೂಕುಗಳ 310823 ಹೆ.ಭೂಮಿಗೆ ನೀರಾವರಿ ಒದಗಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಡಿ ನೀರಾವರಿ ಕ್ಷೇತ್ರವನ್ನು ಸೃಷ್ಟಿಸಲಾಗಿದ್ದು, ಬಾಕಿ ಹೊಲಗಾಲುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಕಾಲುವೆಯ ಉದ್ದದ ವಿವರ ಈ ಕೆಳಗಿನಂತಿದೆ:

ಕಾಲುವೆಯ ಉದ್ದ	ಘ.ಬ.ದ.ಕಾಲುವೆ	ಘ.ಎ.ದ.ಕಾಲುವೆ
ಎ) ಮುಖ್ಯ ಕಾಲುವೆ	199 ಕಿ.ಮೀ.	109 ಕಿ.ಮೀ.
ಬಿ) ಉಪ ಕಾಲುವೆ	88 ಕಿ.ಮೀ.	210 ಕಿ.ಮೀ.
ಸಿ) ಹಂಚು ಕಾಲುವೆ	994 ಕಿ.ಮೀ.	494 ಕಿ.ಮೀ.

ಘಟಪ್ರಭ ಯೋಜನೆಯಡಿಯ ಏತ ನೀರಾವರಿ ಯೋಜನೆಗಳು

* ದಡ್ಡಿನಾಗನೂರು ಏತ ನೀರಾವರಿ ಯೋಜನೆ
* ರುಸ್ತುಂಪುರ ಏತ ನೀರಾವರಿ ಯೋಜನೆ
* ಕೊಟಬಾಗಿ ಏತ ನೀರಾವರಿ ಯೋಜನೆ

ಏತ ಕಾಮಗಾರಿಗಳ ಪೂರ್ಣಗೊಂಡಿದ್ದು, ಹೊಲಗಾಲುವೆ ಕಾಮಗಾರಿ ಪ್ರಗತಿಯಲ್ಲಿವೆ.

2. ಹಿಪ್ಪರಗಿ ನೀರಾವರಿ ಯೋಜನೆ:

ಹಿಪ್ಪರಗಿ ಯೋಜನೆಯಡಿ ಬೆಳಗಾವಿ, ಬಾಗಲಕೋಟ ಜಿಲ್ಲೆಗಳ ಅಥಣಿ, ಚಿಕ್ಕೋಡಿ, ಜಮಖಂಡಿ ತಾಲ್ಲೂಕುಗಳ 74742 ಹೆ. ಪ್ರದೇಶಕ್ಕೆ ನೀರಾವರಿ ಕ್ಷೇತ್ರ ಸೃಷ್ಟಿಸಲು ಯೋಜಿಸಲಾಗಿದೆ. ಕಾಲುವೆಯ ಉದ್ದ 306 ಕಿ.ಮೀ. ಇರುತ್ತದೆ. ಸದರಿ ಯೋಜನೆಯಡಿ ಈ ಕೆಳಕಂಡ ಏತ ಯೋಜನೆಗಳು ಒಳಗೊಂಡಿವೆ.

* ಐನಾಪುರ ಹಂತ 1 & 2 ಏತ ನೀರಾವರಿ ಯೋಜನೆ,
* ಕರಿಮಸೂತಿ ಹಂತ 1 & 2 ಏತ ನೀರಾವರಿ ಯೋಜನೆ,
* ಹಲ್ಯಾಳ ಹಂತ 1 & 2 ಏತ ನೀರಾವರಿ ಯೋಜನೆ,
* ಸಾವಳಗಿ ತುಂಗಳ ಏತ ನೀರಾವರಿ ಯೋಜನೆ.

ಏತ ನೀರಾವರಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ ಉಳಿದ ಹೋಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ.

3. ಮಾರ್ಕಂಡೇಯ ಜಲಾಶಯ ಯೋಜನೆ:

ಮಾರ್ಕಂಡೇಯ ಯೋಜನೆಯಡಿ ಬೆಳಗಾವಿ ಜಿಲ್ಲೆಯ ಬೆಳಗಾವಿ, ಹುಕ್ಕೇರಿ, ಗೋಕಾಕ, ಸವದತ್ತಿ ತಾಲ್ಲೂಕುಗಳ 14448 ಹೆ. ಪ್ರದೇಶಕ್ಕೆ ನೀರಾವರಿ ಕ್ಷೇತ್ರ ಸೃಷ್ಟಿಸಲು ಯೋಜಿಸಲಾಗಿದೆ. ಮಾರ್ಕಂಡೇಯ ಯೋಜನೆಯಿಂದ 7 ಮುಳಗಡೆ ಗ್ರಾಮಗಳ ಪುನರವಸತಿ ಕೇಂದ್ರ ಪೂರ್ಣಗೊಳಿಸಿದ್ದು ಯೋಜನಾ ಸಂತ್ರಸ್ಥರನ್ನು ಸ್ಥಳಾಂತರಿಸಲಾಗಿದೆ. ಸದರಿ ಯೋಜನೆಯಡಿ ವಿತರಣಾ ನಾಲಾ ಹಾಗೂ ಹೊಲಗಾಲುವೆ ಕಾಮಗಾರಿ ಪ್ರಗತಿಯಲ್ಲಿವೆ. ಉಳಿದ ಕಾಮಗಾರಿಗಳು ಪೂರ್ಣಗೊಂಡಿವೆ.

4. ಮುರಗೋಡ ಏತ ನೀರಾವರಿ ಯೋಜನೆ:

ಈ ಯೋಜನೆಯನ್ನು ಮಾರ್ಕಂಡೇಯ ಬಲದಂಡೆ ಕಾಲುವೆಯ 55 ಕಿ.ಮೀ. ರಲ್ಲಿ (ಮಳಗಲಿ ಗ್ರಾಮದ ಹತ್ತಿರ) ನೀರನ್ನು ಎತ್ತಿ 8 ಗ್ರಾಮಗಳ 1939 ಹೆ. ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಹೆಡ್ ವರ್ಕ್ ಕಾಮಗಾರಿಗಳು ಪ್ರಗತಿಯಲ್ಲಿದೆ. ಇನ್ನುಳಿದ ಕಾಮಗಾರಿಯ ಅಂದಾಜು ಪತ್ರಿಕೆಗಳು ತಯಾರಿಕಾ ಹಂತದಲ್ಲಿದೆ.

5. ಚಚಡಿ ಏತ ನೀರಾವರಿ ಯೋಜನೆ:

ಮಾರ್ಕಂಡೇಯ ಬಲದಂಡೆ ಕಾಲುವೆಯ 34 ಕಿ.ಮೀ. ನಲ್ಲಿ ನೀರನ್ನು ಎತ್ತಿ 2,718 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಚಚಡಿ ಏತ ನೀರಾವರಿ ಯೋಜನೆ ಹೆಡ್ ವರ್ಕ್ ಮತ್ತು ಪ್ರಾರಂಭಿಕ 5 ಕಿ.ಮೀ ವರೆಗಿನ ಕಾಲುವೆ ಜಾಲ ಸಹಿತ ಗುತ್ತಿಗೆಯನ್ನು ಟರ್ನ್‌ಕೀ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಇನ್ನುಳಿದ ಕಾಮಗಾರಿಯ ಅಂದಾಜು ಪತ್ರಿಕೆ ತಯಾರಿಕಾ ಹಂತದಲ್ಲಿರುತ್ತದೆ.

6. ದೂಧಗಂಗಾ ನೀರಾವರಿ ಯೋಜನೆ:

ಈ ಯೋಜನೆಯು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಅಂತರ ರಾಜ್ಯ ಯೋಜನೆಯಾಗಿದೆ. ದೂದ್‌ಗಂಗಾ ನದಿಗೆ ಅಡ್ಡಲಾಗಿ ಕೊಲ್ಲಾಪುರ ಜಿಲ್ಲೆ, ರತ್ನಗಿರಿ ತಾಲ್ಲೂಕು, ಅಸಗಾಂ ಗ್ರಾಮದ ಬಳಿ ಸಂಯುಕ್ತ ಅಣೆಕಟ್ಟು ನಿರ್ಮಾಣ ಹಾಗೂ ಮಹಾರಾಷ್ಟ್ರ ರಾಜ್ಯದ 44,766 ಹೆಕ್ಟೇರ್ ಮತ್ತು ಕರ್ನಾಟಕ ರಾಜ್ಯದ 15,167 ಹೆ. ಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಡಿ 3 ಶಾಖಾ ಕಾಲುವೆಗಳಿದ್ದು ವಿವರಗಳು ಈ ಕೆಳಗಿನಂತಿವೆ:

ಶಾಖಾ ಕಾಲುವೆ	ನಿಧೋರಿ	ಬಿದರಿ	ದತ್ತವಾಡ
ಉದ್ದ ಕಿ.ಮಿ.	21.57	25.155	30.00

ನಿಧೋರಿ ಶಾಖಾ ಕಾಲುವೆ ಕಾಮಗಾರಿ ಪೂರ್ಣಗೊಂಡಿರುತ್ತದೆ. ಬಿದರಿ ಶಾಖಾ ಕಾಲುವೆ ಕಾಮಗಾರಿ ಪ್ರಗತಿಯಲ್ಲಿವೆ. ದತ್ತವಾಡ ಶಾಖಾ ಕಾಲುವೆಯು ಭೂಸ್ವಾಧಿನ ಸಮಸ್ಯೆಯಿಂದ ಕಾಮಗಾರಿಯ ಪ್ರಗತಿಯು ಕುಂಠಿತವಾಗಿರುತ್ತದೆ.

7. ಹಿರಣ್ಯಕೇಶಿ ಏತ ನೀರಾವರಿ ಯೋಜನೆ:

ಹಿರಣ್ಯಕೇಶಿ ನದಿಯಿಂದ 8 ಟಿ.ಎಂ.ಸಿ ನೀರನ್ನೆತ್ತಿ, ಘಟಪ್ರಭಾ ಬಲದಂಡೆಯ ಖಾರೀಫ್ ಹಂಗಾಮಿಗೆ ನೀರು ಒದಗಿಸಲು ಹಿರಣ್ಯಕೇಶಿ ಏತ ನೀರಾವರಿ ಯೋಜನೆಯಿಂದ ಉದ್ದೇಶಿಸಲಾಗಿದೆ. ಈ ಯೋಜನೆಯಿಂದ ಘಟಪ್ರಭಾ ಎಡದಂಡೆ ನಾಲೆ ಹೆಚ್ಚುವರಿ ನೀರಿನ ಬಳಕೆಯಿಂದ ಉಂಟಾದ ಕೊರತೆಯನ್ನು ಸರಿದೂಗಿಸಲು ಉದ್ದೇಶಿಸಲಾಗಿದೆ. ಕಾಮಗಾರಿ ಪೂರ್ಣಗೊಂಡಿದ್ದು ಪ್ರಾಯೋಗಿಕವಾಗಿ ಚಾಲನೆಗೊಳಿಸಬೇಕಾಗಿದೆ.

8. ಬಳ್ಳಾರಿ ನಾಲಾ ಯೋಜನೆ:

ಸದರಿ ಯೋಜನೆಯಡಿ ಮಾರ್ಕಂಡೇಯ ನದಿಯ ಮುಖ್ಯ ಉಪನದಿಯಾದ ಬಳ್ಳಾರಿ ನಾಲಾಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿ, ಬೆಳಗಾವಿ ಜಿಲ್ಲೆಯ ಬೆಳಗಾವಿ, ಗೋಕಾಕ, ಸವದತ್ತಿ, ಬೈಲಹೊಂಗಲ ತಾಲ್ಲೂಕಿನ 8,200 ಹೆ. ಪ್ರದೇಶಕ್ಕೆ ನೀರಾವರಿ ಕ್ಷೇತ್ರ ಸೃಷ್ಟಿಸಲು ಯೋಜಿಸಲಾಗಿದೆ. ಅಣೆಕಟ್ಟಿನ ತಳಪಾಯ, ಬ್ಲಾಕ್ 1 ರಿಂದ 6 ಮತ್ತು 8 ರಿಂದ 18 (ಭಾಗಶಃ) ನ್ನು ನಿರ್ಮಿಸಲಾಗಿದೆ. ಮುಖ್ಯ ಕಾಲುವೆಯು 106 ಕಿ.ಮಿ. ಉದ್ದವಿದ್ದು ಕಿ.ಮೀ ನಂ 44 ರಿಂದ 106 ರವರೆಗಿನ ಕಾಲುವೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ (ಕಿ.ಮೀ ನಂ 1 ರಿಂದ 10 ರ ವರೆಗೆ 32 ರಿಂದ 40 ರ ವರೆಗೆ ಅರಣ್ಯ ಪ್ರದೇಶದಲ್ಲಿನ ಭಾಗಗಳನ್ನು ಹೊರತುಪಡಿಸಿ).

9. ಶ್ರೀ ರಾಮೇಶ್ವರ ಏತ ನೀರಾವರಿ ಯೋಜನೆ:

ಶ್ರೀ ರಾಮೇಶ್ವರ ಏತ ನೀರಾವರಿ ಯೋಜನೆ ಅಡಿಯಲ್ಲಿ ಘಟಪ್ರಭಾ ನದಿಯಿಂದ 2.20 ಟಿ.ಎಂ.ಸಿ. ನೀರನ್ನೆತ್ತಿ ಬೆಳಗಾವಿ ಜಿಲ್ಲೆಯ ರಾಮದುರ್ಗ, ಸವದತ್ತಿ ಹಾಗೂ ಗೋಕಾಕ ತಾಲ್ಲೂಕುಗಳ ಒಟ್ಟು 13,800 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ತೂಬುಗಾಲುವೆ 13,800 ಹೆ. ಸೃಷ್ಟಿಸಲಾಗಿದ್ದು, ಹೊಲಗಾಲುವೆ ಕಾಮಗಾರಿ ಪ್ರಗತಿಯಲ್ಲಿದೆ.

10. ಕಿಣಿಯೇ ನೀರಾವರಿ ಯೋಜನೆ:

ಬೆಳಗಾವಿ ಜಿಲ್ಲೆ, ಕಿಣಿಯೇ ಗ್ರಾಮದಲ್ಲಿ ಮಂಗೊತ್ರಿ ನಾಲೆಗೆ ಅಡ್ಡಲಾಗಿ ಅಣ್ಣೆಕಟ್ಟು ನಿರ್ಮಿಸಿ, ಖಾರೀಫ್ ಹಂಗಾಮಿನಲ್ಲಿ 1,200 ಹೆ. ಹಾಗೂ ರಬಿ ಹಂಗಾಮಿನಲ್ಲಿ 275 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ. ಅಣೆಕಟ್ಟು ಮತ್ತು ತತ್ಸಂಬಂಧ ಕಾಮಗಾರಿಗಳು ಮತ್ತು ಕಾಲುವೆ ಜಾಲದ ಕಾಮಗಾರಿಗಳು ಪ್ರಗತಿಯಲ್ಲಿವೆ.

11. ಹಿರಣ್ಯಕೇಶಿ ನದಿಯಿಂದ 22 ಕೆರೆಗಳನ್ನು ತುಂಬಿಸುವ ಕಾಮಗಾರಿ (ಹುಕ್ಕೇರಿ ತಾಲೂಕಿನ 18 ಕೆರೆಗಳು ಮತ್ತು ಚಿಕ್ಕೋಡಿ ತಾಲೂಕಿನ 4 ಕೆರೆಗಳು):

ಸದರಿ ಯೋಜನೆಯನ್ನು 77 ಕೋಟಿಗಳ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು ಯೋಜನೆಯಡಿ ಹಿರಣ್ಯಕೇಶಿ ನದಿಯಿಂದ ನೀರನ್ನು ಎತ್ತಿ ಹುಕ್ಕೇರಿ ತಾಲೂಕಿನ 18 ಮತ್ತು ಚಿಕ್ಕೋಡಿ ತಾಲೂಕಿನ 4 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ. ಕಾಮಗಾರಿ ಪೂರ್ಣಗೊಂಡಿದ್ದು ಪ್ರಾಯೋಗಿಕವಾಗಿ ಚಾಲನೆಗೊಳಿಸಬೇಕಾಗಿದೆ.

12. ತುಬಚಿ–ಬಬಲೇಶ್ವರ ಏತ ನೀರಾವರಿ ಯೋಜನೆ:

ತುಬಚಿ ಬಬಲೇಶ್ವರ ಏತ ನೀರಾವರಿ ಯೋಜನೆಯಡಿಯಲ್ಲಿ ಕೃಷ್ಣಾ ನದಿಯಿಂದ 6.30 ಟಿ.ಎಂ.ಸಿ ನೀರನ್ನು ಉಪಯೋಗಿಸಿ ವಿಜಯಪೂರ, ಅಥಣಿ, ಜಮಖಂಡಿ ತಾಲೂಕಿನ 52,700 ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಮೊದಲನೆಯ ಹಂತವಾಗಿ (phase-I) ಹೆಡ್‌ವರ್ಕ ಕಾಮಗಾರಿಯ ಟೆಂಡರ್‌ನ್ನು ಟರ್ನಕೀ ಆಧಾರದ ಮೇಲೆ ರೂ.1,022.58 ಕೋಟಿಗಳಿಗೆ ಗುತ್ತಿಗೆ ವಹಿಸಿಕೊಡಲಾಗಿದ್ದು, ಹೆಡ್‌ವರ್ಕ್ಸ್ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಎರಡನೇ ಹಂತವಾಗಿ (phase-II) ಉಳಿದ ಹೆಡ್‌ವರ್ಕ ಕಾಮಗಾರಿಯ ಟೆಂಡರ್‌ನ್ನು ಟರ್ನಕೀ ಆಧಾರದ ಮೇಲೆ ರೂ.533.63 ಕೋಟಿಗಳಿಗೆ ಗುತ್ತಿಗೆ ವಹಿಸಿಕೊಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಯೋಜನೆಯ ಪಶ್ಚಿಮ ಮುಖ್ಯ ಕಾಲುವೆಯ ರೂ.333.76 ಕೋಟಿ ಮೊತ್ತದ ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ಪೂರ್ವ, ಉತ್ತರ ಮತ್ತು ದಕ್ಷಿಣ ಕಾಲುವೆಯ ಕಾಮಗಾರಿಗಳ ಟೆಂಡರ್ ಅನುಮೋದಿಸಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ. ಮುಂದುವರೆದು ಯೋಜನೆಯ ಎಲ್ಲಾ ವಿತರಣಾ ಕಾಲುವೆಗಳ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

13. ಬಸವೇಶ್ವರ (ಕೆಂಪವಾಡ) ಏತ ನೀರಾವರಿ ಯೋಜನೆ:

ಬಸವೇಶ್ವರ (ಕೆಂಪವಾಡ) ಏತ ನೀರಾವರಿ ಯೋಜನೆ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕು ಐನಾಪೂರ ಗ್ರಾಮದ ಹತ್ತಿರ ಹಿಪ್ಪರಗಿ ಬ್ಯಾರೇಜಿನ ಹಿನ್ನೀರಿನಿಂದ 4.00 ಟಿಎಂಸಿ ನೀರನ್ನು ಮಳೆಗಾಲದಲ್ಲಿ ಬಳಿಸಿಕೊಂಡು ಅಥಣಿ ತಾಲೂಕಿನ ಉತ್ತರ ಭಾಗದ 22 ಹಳ್ಳಿಗಳ 27,462 ಹೆಕ್ಟೇರ್ ಒಣ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಪ್ರಸ್ತುತ ಯೋಜನೆಯ ಕಾಮಗಾರಿಗಳನ್ನು ರೂ.1,363.48 ಕೋಟಿಗಳ ಮೊತ್ತದಲ್ಲಿ ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

14. ಶ್ರೀ ವೀರಭದ್ರೇಶ್ವರ ಏತ ನೀರಾವರಿ ಯೋಜನೆ:

ಶ್ರೀ ವೀರಭದ್ರೇಶ್ವರ ಏತ ನೀರಾವರಿ ಯೋಜನೆಯಡಿ 2.5 ಟಿಎಂಸಿ ನೀರನ್ನು ಘಟಪ್ರಭಾ ನದಿಯಿಂದ ಎತ್ತಿ ಮುಧೋಳ ಹಾಗೂ ರಾಮದುರ್ಗ ತಾಲ್ಲೂಕಿನ 17377 ಹೆ. ಪ್ರದೇಶಕ್ಕೆ ನೀರಾವರಿ ಒದಗಿಸಲು ಹಾಗೂ 10 ಸಣ್ಣ ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ. ಯೋಜನೆಯ ರೂ.544.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಜನವರಿ 2015ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು ಪ್ರಸ್ತುತ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದೆ.

15. ವೆಂಕಟೇಶ್ವರ ಏತ ನೀರಾವರಿ ಯೋಜನೆ:

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನಡಿ ಬರುವ 6 ಹಳ್ಳಿಗಳು, ಮುಧೋಳ ತಾಲೂಕಿನ 4 ಹಳ್ಳಿಗಳು ಒಟ್ಟಾರೆ 10 ಗ್ರಾಮಗಳ 7200 ಹೆಕ್ಟೇರ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಉದ್ದೇಶದಿಂದ ವೆಂಕಟೇಶ್ವರ ಏತ ನೀರಾವರಿ ಯೋಜನೆ ಕೈಗೊಳ್ಳಲು ಉದ್ದೇಶಿಸಲಾಗಿದೆ. ಸದರಿ ಯೋಜನೆಗೆ ಫೆಬ್ರವರಿ–2015ರಲ್ಲಿ ರೂ.174.42 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನ ಪಡೆಯಲಾಗಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ.

16. ಚಿಕ್ಕೋಡಿ ಶಾಖಾ ಕಾಲುವೆಯ ಸುಧಾರಣೆ ಕಾಮಗಾರಿ:

ಚಿಕ್ಕೋಡಿ ಶಾಖಾ ಕಾಲುವೆಯು 88 ಕಿ.ಮೀ. ಉದ್ದವಿದ್ದು ಈ ಕಾಲುವೆ ನಿರ್ಮಾಣವನ್ನು 1984 ರಲ್ಲಿ ಪೂರ್ಣಗೊಳಿಸಿದ್ದು ಉದ್ದೇಶಿತ 33,403 ಹೆ. ಅಚ್ಚುಕಟ್ಟಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಕಾಲುವೆಯ ದುರಸ್ತಿಯಿಂದ ಉದ್ದೇಶಿತ ಅಚ್ಚುಕಟ್ಟಿಗೆ ನೀರಾವರಿ ಕಲ್ಪಿಸಲು ಅನಾನುಕೂಲವಾಗುತ್ತಿದ್ದು, ಕಾಲುವೆಯ ಮೊದಲ 30 ಕಿ.ಮೀ. ದುರಸ್ತಿಯಿಂದಾಗಿ 11,481 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿ ಮುಂದಿನ ಅಚ್ಚುಕಟ್ಟಿಗೂ ಸಹ ನೀರನ್ನು ಹರಿಸಲು ಅನುಕೂಲವಾಗುವಂತೆ ಉದ್ದೇಶಿಸಲಾಗಿದೆ. ಪ್ರಸ್ತುತ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.

17. ಸುಲ್ತಾನಪುರ ಬ್ರಿಡ್ಜ್ ಕಂ ಬಾಂಧಾರ ನಿರ್ಮಾಣ ಕಾಮಗಾರಿ:

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸುಲ್ತಾನಪುರ ಗ್ರಾಮದ ಹತ್ತಿರ ಹಿರಣ್ಯಕೇಶಿ ನದಿಗೆ ಈ ಹಿಂದೆ ಅಡ್ಡಲಾಗಿ ನಿರ್ಮಿಸಿದ ಬ್ರಿಡ್ಜ ಕಂ ಬಾಂಧಾರವು 2015ರ ಜೂನ್ ಮಾಹೆಯಲ್ಲಿ ಸುರಿದ ಭಾರಿ ಮಳೆಯಿಂದಾಗಿ ಶಿಥಿಲಗೊಂಡಿದ್ದು ಸುತ್ತ–ಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳು, ರೈತಾಪಿ ಚಟುವಟಿಕೆಗಳಿಗೆ ಹಾಗೂ ಸಾರ್ವಜನಿಕರ ಸಾರಿಗೆ ಸಂಪರ್ಕಕ್ಕೆ ಬಹಳ ತೊಂದರೆಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಹಾಗು ಭವಿಷ್ಯದ ವಾಹನ ಸಂಚಾರದ ದೃಷ್ಟಿಯಿಂದ ಹಾಗೂ ಸಾರ್ವಜನಿಕರ ಹಿತ ದೃಷ್ಟಿಯಿಂದ ಮೇಲ್ಮಟ್ಟದ ಬ್ರಿಡ್ಜ ಹಾಗೂ ಕೆಳಮಟ್ಟದ ಬಾಂಧಾರದ ನಿರ್ಮಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ವಿವರವಾದ ಯೋಜನ ವರದಿಗೆ ಫೆಬ್ರವರಿ–2017ರಲ್ಲಿ 19.52 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

18. ರಾಯಬಾಗ ತಾಲ್ಲೂಕಿನ 10 ಗ್ರಾಮಗಳ 17 ಕೆರೆಗಳು ಹಾಗೂ ಇತರೆ 22 ಹೆಚ್ಚುವರಿ ಕೆರೆಗಳನ್ನು ತುಂಬಿಸುವ ಯೋಜನೆ:

ರಾಯಬಾಗ ತಾಲ್ಲೂಕಿನ 10 ಗ್ರಾಮಗಳ 17 ಕೆರೆಗಳು ಹಾಗೂ ಇತರೆ 22 ಹೆಚ್ಚುವರಿ ಕೆರೆಗಳ ಯೋಜನೆಯಡಿ ಬೆಳಗಾವಿ ಜಿಲ್ಲೆಯ ಒಟ್ಟು 39 ಕೆರೆಗಳನ್ನು ಕೃಷ್ಣಾ ನದಿಯಿಂದ ತುಂಬಿಸಲು ಯೋಜಿಸಲಾಗಿದೆ. ಒಳಹರಿವಿನ ಕೊರತೆಯಿಂದ ಕೆರೆಗಳಲ್ಲಿ ನಿಗದಿತ ಪ್ರಮಾಣದಲ್ಲಿ ನೀರಿನ ಸಂಗ್ರಹಣೆಯಾಗದೇ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು, ಸದರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ ಈ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ರೂ.91.40 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

19. ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಕುಡಚಿ ಮತಕ್ಷೇತ್ರದಲ್ಲಿ ಬರುವ 10 ಗ್ರಾಮಗಳ 19 ಕೆರೆಗಳನ್ನು ಕೃಷ್ಣಾ ನದಿಯಿಂದ ತುಂಬಿಸುವ ಯೋಜನೆ:

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಕುಡಚಿ ಮತಕ್ಷೇತ್ರದಲ್ಲಿ ಬರುವ ಬಸ್ತವಾಡ, ಖಣದಾಳ, ಕಟಕಬಾವಿ, ದೇವಾಪೂರಹಟ್ಟಿ, ನಿಡಗುಂದಿ ಮತ್ತು ಸವಸುದ್ದಿ, ಮೊರಬ, ನಿಲಜಿ, ಸುಟ್ಟಟ್ಟಿ ಮತ್ತು ಹಾರೂಗೇರಿ ಗ್ರಾಮಗಳಲ್ಲಿ ಕಳೆದ ಹತ್ತಾರು ವರ್ಷಗಳಿಂದ ಒಳಹರಿವಿನ ಕೊರತೆಯಿಂದ ಕೆರೆ ಬಾವಿಗಳು ಬತ್ತಿ, ಅಂತರ್‌ಜಲ ಮಟ್ಟ ಕುಸಿದು, ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಈ ಸಮಸ್ಯೆಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಕುಡಚಿ ಮತಕ್ಷೇತ್ರದಲ್ಲಿ ಬರುವ 10 ಗ್ರಾಮಗಳ 19 ಕೆರೆಗಳನ್ನು ಕೃಷ್ಣಾ ನದಿಯಿಂದ ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ರೂ.34.383 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

20. ಕುಲ್ಲಹಳ್ಳಿ ಹುನ್ನೂರ ಏತ ನೀರಾವರಿ ಯೋಜನೆ:

ಘಟಪ್ರಭಾ ಎಡದಂಡೆ ಮುಖ್ಯ ಕಾಲುವೆಯ ಕಿ.ಮೀ. 70 (ಚಿಮ್ಮಡ ಚೌಕಿ) ರಲ್ಲಿ ಜಮಖಂಡಿ ಶಾಖಾ ಕಾಲುವೆ

ಪ್ರಾರಂಭವಾಗುತ್ತಿದ್ದು, ಜಮಖಂಡಿ ಶಾಖಾ ಕಾಲುವೆಯ ಚೈ 20+650 ರ (ಮೈಗೂರ ಚೌಕಿ) ಕೆಳಭಾಗದಲ್ಲಿ ಬರುವ 9,164 ಹೆಕ್ಟೇರ್ ಅಚ್ಚುಕಟ್ಟು ನೀರಾವರಿಯಿಂದ ಭಾದಿವಾಗಿರುವುದರಿಂದ ಸದರಿ ಕ್ಷೇತ್ರಕ್ಕೆ ಮುಂಗಾರು ಹಂಗಾಮಿನಲ್ಲಿ ಕೃಷ್ಣಾ ನದಿಯಿಂದ 0.88 ಟಿಎಂಸಿ ನೀರನ್ನು ಎತ್ತಿ ಏತ ನೀರಾವರಿ ಮೂಲಕ ಸ್ಥಿರಗೊಳಿಸಲು (ಣಚಿಛುಟುಚಿಣುಠಟಿ) ಕುಲಹಳ್ಳಿ–ಹುನ್ನೂರ ಏತ ನೀರಾವರಿ ಯೋಜಯನ್ನು ಕೈಗೆತ್ತಿಕೊಳ್ಳಲಾಗಿದೆ. ಯೋಜನೆಯ ರೂ.73.75 ಕೋಟಿಗಳ ಡಿ.ಪಿ.ಆರ್. ಗೆ. ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

21. ಗೊಡಚಿನಮಲ್ಕಿ ಏತ ನೀರಾವರಿ ಯೋಜನೆ:

ಗೊಡಚಿನಮಲ್ಕಿ ಏತ ನೀರಾವರಿ ಯೋಜನೆಯಡಿ ಒಟ್ಟು 2,568.42 ಹೆಕ್ಟೇರ್ ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು 2 ಹಂತಗಳಲ್ಲಿ ಒದಗಿಸುವ ಗುರಿ ಹೊಂದಲಾಗಿದ್ದು, ಸದರಿ ಏತ ನೀರಾವರಿ ಯೋಜನೆಗೆ, ಮಾಸ್ಟರ್ ಪ್ಲಾನ್ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ 0.50 ಟಿಎಂಸಿ ನೀರಿನ ಹಂಚಿಕೆಗೆ ಪರಿಗಣಿಸಲಾಗಿರುತ್ತದೆ.

ಮೊದಲನೇ ಹಂತದಲ್ಲಿ 1,031.51 ಹೆಕ್ಟೇರ್ ಪ್ರದೇಶಕ್ಕೆ ಘಟಪ್ರಭಾ ನದಿಯಿಂದ 0.191 ಟಿಎಂಸಿ ನೀರನ್ನು ಮತ್ತು ಎರಡನೇ ಹಂತದಲ್ಲಿ 1,537.91 ಹೆಕ್ಟೇರ್ ಪ್ರದೇಶಕ್ಕೆ ಮಾರ್ಕಂಡೇಯ ನದಿಯಿಂದ 0.280 ಟಿಎಂಸಿ ನೀರನ್ನು ಎತ್ತಿ ಗೋಕಾಕ್ ತಾಲ್ಲೂಕಿನ 12 ಗ್ರಾಮಗಳ ಒಟ್ಟಾರೆ 2,568.42 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಉದ್ದೇಶಿಸಲಾಗಿದೆ. ಯೋಜನೆಯ ರೂ.73.75 ಕೋಟಿಗಳ ಡಿ.ಪಿ.ಆರ್.ಗೆ. ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

22. ಗಲಗಲಿ ಬ್ಯಾರೇಜನ್ನು ಸದೃಢಗೊಳಿಸಿ ಎತ್ತರಿಸುವ ಯೋಜನೆ:

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಗಲಗಲಿ ಹಾಗೂ ಚಿಕ್ಕಗಲಗಲಿ ಗ್ರಾಮಗಳ ನಡುವೆ ಕೃಷ್ಣಾ ನದಿಗೆ ಅಡ್ಡಲಾಗಿ 1973 ರಲ್ಲಿ ಗಲಗಲಿ ಬಾಂದಾರ ನಿರ್ಮಿಸಲಾಗಿರುತ್ತದೆ. ಸದರಿ ಬ್ಯಾರೇಜಿನ ನೀರಿನ ಸಂಗ್ರಹ ಸಾಮರ್ಥ್ಯ 0.569 ಟಿಎಂಸಿ. ಸದರಿ ಬ್ಯಾರೇಜ್‌ನಿಂದ 7,748 ಎಕರೆ ಭೂಮಿಗೆ ನೀರಾವರಿ ಕಲ್ಪಿಸಲಾಗುತ್ತಿದ್ದು, ಬೇಸಿಗೆ ಕಾಲದಲ್ಲಿ ಸುಮಾರು 20 ಗ್ರಾಮಗಳಿಗೆ ಕುಡಿಯುವ ನೀರಿಗೆ ಬಳಕೆಯಾಗುತ್ತಿದೆ. ಜನಸಂಖ್ಯೆ ಹೆಚ್ಚಾದ ಪ್ರಯುಕ್ತ ನೀರಿನ ಬೇಡಿಕೆ ಹೆಚ್ಚಾಗಿದ್ದು, ಸದರಿ ಬ್ಯಾರೇಜನ್ನು ಸಧೃಡಗೊಳಿಸಿ ಎತ್ತರಿಸಿ ಬ್ಯಾರೇಜ್‌ನ ಸಾಮರ್ಥ್ಯವನ್ನು 0.569 ಟಿಎಂಸಿ ಇಂದ 1.244 ಟಿಎಂಸಿಗೆ ಹೆಚ್ಚಿಸಬಹುದಾಗಿದ್ದು, ಇದರಿಂದ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ ಗ್ರಾಮಗಳ ಕುಡಿಯುವ ನೀರಿನ ಬೇಡಿಕೆಯನ್ನು ಪೂರೈಸಬಹುದಾಗಿದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

23. ಸಾಲಾಪೂರ ಏತ ನೀರಾವರಿ ಯೋಜನೆ:

ಸಾಲಾಪೂರ ಏತ ನೀರಾವರಿ ಯೋಜನೆಯಡಿ ಪ್ರಸ್ತುತ ಪ್ರಗತಿಯಲ್ಲಿರುವ ರಾಮೇಶ್ವರ ಹಾಗೂ ವೀರಭದ್ರೇಶ್ವರ ಏತ ನೀರಾವರಿ ಯೋಜನೆಗಳಿಂದ ವಂಚಿತವಾಗಿರುವ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಡಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಚಿಕ್ಕೂರು ತಾಂಡಾ ಬಳಿ ಘಟಪ್ರಭಾ ನದಿಯಿಂದ ನೀರನ್ನೆತ್ತಿ ರಾಮದುರ್ಗ ತಾಲ್ಲೂಕಿನ 19 ಹಳ್ಳಿಗಳು (10,878 ಹೆ.), ಬಾದಾಮಿ ತಾಲ್ಲೂಕಿನ 6 ಹಳ್ಳಿಗಳು (1,832 ಹೆ.) ಹಾಗೂ ಮುಧೋಳ ತಾಲ್ಲೂಕಿನ 2 ಹಳ್ಳಿಗಳು (290 ಹೆ.) ಸೇರಿದಂತೆ ಒಟ್ಟಾರೆ 13,000 ಹೆ. ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಯೋಜಿಸಲಾಗಿದೆ. ಸದರಿ ಯೋಜನೆಯನ್ನು ಎರಡು ಹಂತಗಳಲ್ಲಿ ಅಂದರೆ ಮೊದಲ ಹಂತವನ್ನು ರೂ.327.00 ಕೋಟಿಗಳಲ್ಲಿ ಹಾಗು ಎರಡನೆ ಹಂತವನ್ನು ರೂ.239.00 ಕೋಟಿಗಳಲ್ಲಿ ಆದ್ಯತೆಯಾನುಸಾರ ಹಂತಹಂತವಾಗಿ ತೆಗೆದುಕೊಳ್ಳುವ ಷರತ್ತಿಗೊಳಪಟ್ಟು ರೂ.566.00 ಕೋಟಿಗಳಿಗೆ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ವ್ರೆದಲನೆ ಹಂತದ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

24. ಕಿತ್ತೂರು ಏತ ನೀರಾವರಿ ಯೋಜನೆ:

ಬೆಳಗಾವಿ ಜಿಲ್ಲೆಯ ಕಿತ್ತೂರು ಮತ್ತು ಬೈಲಹೊಂಗಲ ಮತಕ್ಷೇತ್ರದ 64 ಕೆರೆಗಳನ್ನು ಮಲಪ್ರಭಾ ನದಿಯಿಂದ ತುಂಬಿಸಲು ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಸದರಿ ಕೆರೆಗಳಿಗೆ ಮಳೆಯ ಅಭಾವದಿಂದ ನೀರಿನ ಸಂಗ್ರಹಣೆಯಾಗದೇ, ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿರುತ್ತದೆ. ಸದರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ, ಈ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

25. ಮಲಪ್ರಭಾ ಯೋಜನೆ:

ಮಲಪ್ರಭಾ ಯೋಜನೆಯು ಬೆಳಗಾವಿ ಜಿಲ್ಲೆಯ ಸೌವದತ್ತಿ ತಾಲೂಕಿನಲ್ಲಿ ಮುನವಳ್ಳಿ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡವಾಗಿ ಅಣೆಕಟ್ಟು ನಿರ್ಮಿಸಿ, ಕಾಲುವೆಗಳಿಂದ ಬೆಳಗಾವಿ, ಬಾಗಲಕೋಟೆ, ಮತ್ತು ಧಾರವಾಡ ಜಿಲ್ಲೆಗಳಲ್ಲಿ ಒಟ್ಟು 1,96,132 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶವನ್ನು ಒಳಗೊಂಡಿರುತ್ತದೆ. ಅಣೆಕಟ್ಟು ಹಾಗೂ ಕಾಲುವೆ ಕಾಮಗಾರಿಗಳು ಪೂರ್ಣಗೊಂಡಿದ್ದು, ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ.

ಕಾಲುವೆಯ ವಿವರ ಈ ಕೆಳಗಿನಂತಿದೆ :

ಕಾಲುವೆಯ ಉದ್ದ	ಮ.ಎ.ದ. ಕಾಲುವೆ	ಮ.ಬ.ದ. ಕಾಲುವೆ
ಎ) ಮುಖ್ಯ ಕಾಲುವೆ	150 ಕಿಮೀ	142 ಕಿಮೀ
ಬಿ) ವಿತರಣಾ ಕಾಲುವೆ ಸಂಖ್ಯೆ	58	60
ಸಿ) ಕೊಳಚಿ ಬಲದಂಡೆ ಕಾಲುವೆ	64 ಕಿ.ಮಿ.	

26. ಮಲಪ್ರಭಾ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆಯ ಆಧುನೀಕರಣ ಯೋಜನೆ:

ಮಲಪ್ರಭಾ ಮುಖ್ಯ ಕಾಲುವೆಯು ಸುಮಾರು 35 ವರ್ಷಗಳ ಹಿಂದೆ ಹಾಗೂ ಹಂತ ಹಂತವಾಗಿ ನಿರ್ಮಿಸಿದ್ದು ಕಾಲ ಕ್ರಮೇಣವಾಗಿ ಕೆಲವೊಂದು ಕಾಲುವೆ ಭಾಗಗಳು ಶಿಥಿಲಾವಸ್ಥೆ ತಲುಪಿದ್ದು, ಕಾಲುವೆಯ ಕೊನೆಯ ಭಾಗಗಳಿಗೆ ನೀರನ್ನು ಸಮರ್ಪಕವಾಗಿ ಒದಗಿಸುವುದು ದುಸ್ತರವಾಗಿರುತ್ತದೆ. ಅಲ್ಲದೇ, ಮುಖ್ಯವಾಗಿ ಬಲದಂಡೆ ಕಾಲುವೆ/ ನರಗುಂದ ಹಂಚು ಕಾಲುವೆಗಳು ಎರೆ ಮಣ್ಣಿನ ಪ್ರದೇಶದಲ್ಲಿ ಹಾಯುತ್ತಿದ್ದು, ಮಣ್ಣಿನ ಗುಣಧರ್ಮವನ್ನು ಪರಿಗಣಿಸಿದ್ದಲ್ಲಿ ಕಾಲುವೆ ನಿರ್ಮಾಣವು ಸವಾಲಾಗಿ ಪರಿಣಮಿಸಿದೆ. ಆದ್ದರಿಂದ ಶಿಥಿಲಾವಸ್ಥೆಯಲ್ಲಿರುವ ಕಾಲುವೆ, ಸಿ.ಡಿ. ಕಾಮಗಾರಿಗಳ ನಿರ್ಮಾಣ/ನವೀಕರಣ/ ದುರಸ್ತಿ ಕಾಮಗಾರಿಗಳು ಅವಶ್ಯಕವಾಗಿರುತ್ತದೆ.

ಮಲಪ್ರಭಾ ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆಯ ಆಧುನೀಕರಣ ಕಾಮಗಾರಿಯ ರೂ.1120.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಗಸ್ಟ್–2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

27. ಅಮರಗೋಳ – ಗೊಬ್ಬರಗುಂಪಿ ಏತ ನೀರಾವರಿ ಯೋಜನೆ:

ನರಗುಂದ ಶಾಖಾ ಕಾಲುವೆಯ ಡಿ–6 ಹಂಚಿಕೆಯ 17–ಎಲ್ ಉಪ ಹಂಚಿಕೆಯ ಕೊನೆಯ ಭಾಗದ ನೀರಾವರಿ ಭಾದಿತ 1,696 ಹೆಕ್ಟೇರ್ ಪ್ರದೇಶಕ್ಕೆ ನೀರು ಪೂರೈಸಲು ಅಮರಗೋಳ ಗ್ರಾಮದ ಹತ್ತಿರ ಬೆಣ್ಣೆಹಳ್ಳಕ್ಕೆ ಏತ ನೀರಾವರಿ ಯೋಜನೆಯನ್ನು ಹಾಗೂ ಡಿ–6 ಹಂಚಿಕೆಯ ಕೊನೆಯ ಭಾಗದ ನೀರಾವರಿ ಭಾದಿತ 2,160 ಹೆಕ್ಟೇರ್ ಪ್ರದೇಶಕ್ಕೆ ನೀರು ಪೂರೈಸಲು ಗೊಬ್ಬರಗುಂಪಿ ಗ್ರಾಮದ ಹತ್ತಿರ ಬೆಣ್ಣೆಹಳ್ಳದ ಪ್ರಮುಖ ಉಪಹಳ್ಳವಾದ ತುಪ್ಪರಿಹಳ್ಳಕ್ಕೆ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಅಮರಗೋಳ ಏತ ನೀರಾವರಿ ಯೋಜನೆ ಹಾಗೂ ಗೊಬ್ಬರಗುಂಪಿ ಏತ ನೀರಾವರಿ ಯೋಜನೆ ಸೇರಿದಂತೆ ಒಂದು ಪ್ಯಾಕೇಜ್ ಅಡಿಯಲ್ಲಿ ರೂ.48.08 ಕೋಟಿಗಳಿಗೆ ಟೆಂಡರ್ ಆಧಾರದ ಮೇಲೆ ವಹಿಸಿಕೊಡಲಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

28. ಮದಗುಣಕಿ ಹಾಗೂ ಹದ್ಲಿ–ಗಂಗಾಪುರ ಏತ ನೀರಾವರಿ ಯೋಜನೆ:

ನರಗುಂದ ಶಾಖಾ ಕಾಲುವೆಯ 14ನೇ 5ಆರ್ ಹಂಚಿಕೆಯ 4ಆರ್ ಉಪಹಂಚಿಕೆಯ ಕೊನೆಯ ಭಾಗದ ನೀರಾವರಿ ಭಾದಿತ 650 ಹೆಕ್ಟೇರ್ ಪ್ರದೇಶಕ್ಕೆ ನೀರು ಪೂರೈಸಲು ಬೆಣ್ಣೆಹಳ್ಳಕ್ಕೆ ಅಡ್ಡಲಾಗಿ ಮದಗುಣಕಿ ಏತ ನೀರಾವರಿ ಯೋಜನೆಯನ್ನು ಹಾಗೂ 14ನೇ ಹಂಚಿಕೆಯ ಕೊನೆಯ ಭಾಗದ ನೀರಾವರಿ ಭಾದಿತ 720 ಹೆಕ್ಟೇರ್ ಪ್ರದೇಶಕ್ಕೆ ನೀರು ಪೂರೈಸಲು ಬೆಣ್ಣೆಹಳ್ಳಕ್ಕೆ ಅಡ್ಡಲಾಗಿ ಹದ್ಲಿ–ಗಂಗಾಪುರ ಏತ ನೀರಾವರಿ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ.

ಕಾಮಗಾರಿಯ ಡೈವರ್ಶನ್ ವಿಯರ್, ಇನ್‌ಟೇಕ್ ಕೆನಾಲ್, ರೈಸಿಂಗ್ ಮೇನ್ ಅಳವಡಿಸುವ ಕಾರ್ಯ ಮುಕ್ತಾಯಗೊಂಡಿದ್ದು, ಜಾಕ್‌ವೆಲ್ ಕಂ ಪಂಪಹೌಸ್ ನೆಲಮಟ್ಟದವರೆಗೂ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

29. ಕಳಸಾ ಮತ್ತು ಬಂಡೂರ ನಾಲಾ ಯೋಜನೆಗಳು:

ಈ ಎರಡು ಯೋಜನೆಗಳು ಕಳಸಾ ಬಂಡೂರ ನಾಲೆಗಳನ್ನು ತಿರುವುಗೊಳಿಸಿ, 7.56 ಟಿಎಂಸಿ ನೀರನ್ನು ಮಲಪ್ರಭಾ ಜಲಾಶಯಕ್ಕೆ ಒದಗಿಸುವ ಯೋಜನೆಗಳಾಗಿವೆ. ಗೋವಾ ಹಾಗೂ ಮಹಾರಾಷ್ಟ್ರ ಸರ್ಕಾರದ ಆಕ್ಷೇಪಣೆಯ ಹಿನ್ನಲೆಯಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗುತ್ತಿದ್ದು, ಪ್ರಕರಣವು ಮಹಾದಾಯಿ ನ್ಯಾಯಾಧೀಕರಣದಲ್ಲಿದೆ. ಈ ಯೋಜನೆಗೆ ಪ್ರಸ್ತುತ ಅರಣ್ಯ ಇಲಾಖೆಯ ತೀರುವಳಿಯು ಇದ್ದು, ಮಹಾದಾಯಿ ನ್ಯಾಯಾಧೀಕರಣದ ಅಂತಿಮ ತೀರ್ಪಿನ ನಂತರ ಅಗತ್ಯ ಕ್ರಮ ಜರುಗಿಸಲಾಗುವುದು.

30. ಕೊಣ್ಣೂರು ಏತ ನೀರಾವರಿ ಯೋಜನೆ:

ಈ ಯೋಜನೆಯನ್ನು ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಬಳಿ ನಿರ್ಮಿಸಲಾಗಿದೆ. ಮಲಪ್ರಭಾ ನದಿಯಿಂದ ಕೊಣ್ಣೂರಿನಲ್ಲಿ 0.39 ಟಿಎಂಸಿ ನೀರನ್ನು ಎತ್ತಿ ನರಗುಂದ ಶಾಖಾ ಕಾಲುವೆಯ ಬಾಧಿತ 1,578 ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು ಭೂಸ್ವಾಧೀನದ ಸಮಸ್ಯೆ ಕಾರಣಗಳಿಂದ ಕಾಮಗಾರಿಯ ಪ್ರಗತಿ ಕುಂಠಿತವಾಗಿರುತ್ತದೆ.

31. ಶಿಗ್ಗಾಂವ್ ಏತ ನೀರಾವರಿ ಯೋಜನೆ:

ಹಾವೇರಿ ಜಿಲ್ಲೆಯ ಶಿಗ್ಗಾಂವ್, ಸವಣೂರು ಮತ್ತು ಹಾನಗಲ್ ತಾಲೂಕುಗಳ ತುಂತುರು ಹನಿ ನೀರಾವರಿ ಯೋಜನೆಯಿಂದ 9,900 ಹೆಕ್ಟೇರ್ ಭೂಮಿಗೆ ಮತ್ತು 3,600 ಹೆಕ್ಟೇರ್ ಭೂಮಿಗೆ ಹನಿ ನೀರಾವರಿ ಒದಗಿಸಲು ಈ ಯೋಜನೆಯಿಂದ ಉದ್ದೇಶಿಸಲಾಗಿದೆ. ದಿನಾಂಕ 13.01.2009ರ ಸರ್ಕಾರಿ ಆದೇಶದನ್ವಯ ರೂ.238.00 ಕೋಟಿ ಮೊತ್ತದ ಯೋಜನೆಗೆ

ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಹಾಗೂ ದಿನಾಂಕ 30.10.2013ರ ಸರ್ಕಾರಿ ಆದೇಶದ ಅನ್ವಯ ಪರಿಷ್ಕೃತ ಡಿ.ಪಿ.ಆರ್. ಗೆ ರೂ.532.00 ಕೋಟಿಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಜ್ಯಾಕ್‌ವೆಲ್–ಪಂಪ್‌ಹೌಸ್, ರೈಸಿಂಗ್ ಮೇನ್ ಕಾಮಗಾರಿಗಳು ಪೂರ್ಣಗೊಂಡಿವೆ. 9,900ಹೆ. ಪ್ರದೇಶದ ಜಮೀನುಗಳಿಗೆ ನೀರನ್ನು ಒದಗಿಸಲು ತುಂತುರು ನೀರಾವರಿ ಪದ್ದತಿ ಅಳವಡಿಸಲಾಗಿದ್ದು ಕಾಮಗಾರಿ ಮುಕ್ತಾಯವಾಗಿರುತ್ತದೆ. ಸದರಿ ಯೋಜನೆಯನ್ನು ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ. ಡೈವರ್ಷನ್ ವಿಯರ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ಶಿಗ್ಗಾಂವ್ ಏತ ನೀರಾವರಿ ಯೋಜನೆಯ ಬಾಕಿ ಉಳಿದ 3,600 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವ ಕುರಿತಂತೆ, ಅಂದಾಜು ಪತ್ರಿಕೆಯನ್ನು ತಯಾರಿಸಲಾಗುತ್ತಿದೆ.

32. ಸವಣೂರ ಏತ ನೀರಾವರಿ ಯೋಜನೆ:

ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕು ಡಾ॥ ನಂಜುಂಡಪ್ಪ ವರದಿಯಂತೆ ಅತೀ ಹಿಂದುಳಿದ ಹಾಗೂ ಬೆಳವಣಿಗೆ ಕಾಣದ ಪ್ರದೇಶವಾಗಿರುತ್ತದೆ. ಆದುದರಿಂದ ಸವಣೂರು ತಾಲ್ಲೂಕಿನ ಕಲಸೂರು ಗ್ರಾಮದ ಹತ್ತಿರ ವರದಾ ನದಿಯಿಂದ 1.5 ಟಿಎಂಸಿ ನೀರನ್ನೆತ್ತಿ ಏತ ನೀರಾವರಿ ಮುಖಾಂತರ ಸವಣೂರು ತಾಲ್ಲೂಕಿನ 30 ಹಳ್ಳಿಗಳ ಒಟ್ಟು 15500 ಹೆ. ಪ್ರದೇಶಕ್ಕೆ ಸೂಕ್ಷ್ಮ ಹನಿ ನೀರಾವರಿ ಮುಖಾಂತರ 1.35 ಟಿಎಂಸಿ ನೀರನ್ನು ಉಪಯೋಗಿಸಿ ನೀರಾವರಿಗೊಳಪಡಿಸುವ, ಸವಣೂರು ತಾಲ್ಲೂಕಿನ 9 ಸಣ್ಣ ನೀರಾವರಿ ಕೆರೆಗಳಿಗೆ 0.091 ಟಿಎಂಸಿ ನೀರನ್ನು ಉಪಯೋಗಿಸಿ ಕೆರೆ ತುಂಬಿಸುವ ಹಾಗೂ 0.059 ಟಿಎಂಸಿ ನೀರನ್ನು ಕುಡಿಯುವ ನೀರು ಒದಗಿಸುವ ಯೋಜನೆಯಾಗಿರುತ್ತದೆ. ಸದರಿ ಯೋಜನೆಯ ಹೆಡ್‌ವರ್ಕ್ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ಯೋಜನೆಯ ಹೆಡ್‌ವಕ್, 9 ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸುವ ಹಾಗು ಹೆಚ್ಚುವರಿಯಾಗಿ 39 ಕೆರೆಗಳನ್ನು ತುಂಬಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಮುಂದುವರೆದು, 3200 ಹೆ. ಪ್ರದೇಶಕ್ಕೆ ಹನಿ ನೀರಾವರಿ ಮೂಲಕ ನೀರಾವರಿ ಕಲ್ಪಿಸುವ ಕಾಮಗಾರಿಯ ಅಂದಾಜು ಪತ್ರಿಕೆ ಪರಿಶೀಲನೆಯ ಹಂತದಲ್ಲಿದೆ.

33. ಕೊಳಚಿ ಬಲದಂಡೆ ಕಾಲುವೆ ಆಧುನೀಕರಣ:

ಕೊಳಚಿ ವಿಯರ್‌ನ್ನು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಕೊಳಚಿ ಗ್ರಾಮದ ಬಳಿ ಮಲಪ್ರಭಾ ನದಿಗೆ ಅಡ್ಡಲಾಗಿ ಕಟ್ಟಲಾಗಿರುತ್ತದೆ. ಕೊಳಚಿ ಬಲದಂಡೆ ಕಾಲುವೆಯು 49 ಕಿ.ಮೀ. ಉದ್ದವಿದ್ದು, 5877 ಹೆ. ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಗಿದೆ. ಕಾಮಗಾರಿಯು ಬಹಳ ಹಿಂದೆಯೇ ಪೂರ್ಣಗೊಂಡಿದ್ದು, ಪ್ರಸ್ತುತ ಆಧುನೀಕರಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಆಧುನೀಕರಣ ಕಾಮಗಾರಿಯನ್ನು 5 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡಿದ್ದು, ಈ ಪೈಕಿ 2 ಪ್ಯಾಕೇಜ್‌ಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಉಳಿದ 3 ಪ್ಯಾಕೇಜ್‌ಗಳ ಕಾಮಗಾರಿ ಪ್ರಗತಿಯಲ್ಲಿದೆ.

34. ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಸಿದ್ದನಬಾವಿ, ಬೆಂಡಿಗೇರಿ ಮತ್ತು ಮುತ್ನಾಳ ಗ್ರಾಮಗಳ ಕೆರೆಗಳನ್ನು ಮಲಪ್ರಭಾ ನದಿಯಿಂದ ತುಂಬಿಸುವ ಯೋಜನೆ:

ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಸಿದ್ದನಬಾವಿ ಬೆಂಡಿಗೇರಿ ಮತ್ತು ಮುತ್ನಾಳ ಕೆರೆಗಳನ್ನು ಪಾರಿಶ್ವಾಡ ಗ್ರಾಮದ ಹತ್ತಿರ ಮಲಪ್ರಭಾ ನದಿಯಿಂದ 0.0285 ಟಿಎಂಸಿ ನೀರನ್ನೆತ್ತಿ ತುಂಬಿಸಲು ಯೋಜಿಸಲಾಗಿದೆ. ಸರ್ಕಾರವು ಮಾರ್ಚ್ 2017ರಲ್ಲಿ ರೂ.12.57 ಕೋಟಿಗಳ ಮೊತ್ತಕ್ಕೆ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

35. ತುಪ್ಪರಿಹಳ್ಳದಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆ:

ಧಾರವಾಡ ಜಿಲ್ಲೆ ಧಾರವಾಡ ತಾಲ್ಲೂಕಿನ ತಡಕೋಡ, ಬೋಕ್ಯಾಪೂರ, ಗರಗ, ಹಳೇತೇಗೂರ, ಬೋಗೂರ ಮತ್ತು ನೀರಲಕಟ್ಟಿ ಗ್ರಾಮಗಳ ಸಣ್ಣ ನೀರಾವರಿ ಕೆರೆಗಳಿಗೆ ತುಪ್ಪರಿಹಳ್ಳದಿಂದ ನೀರು ತುಂಬಿಸಲು ಯೋಜಿಸಲಾಗಿದೆ. ತುಪ್ಪರಿಹಳ್ಳಕ್ಕೆ ಪೊಲಾವರಂ ಯೋಜನೆಯಡಿ ಗೋದಾವರಿ ನೀರನ್ನು ಕೃಷ್ಣಾ ಕೊಳ್ಳಕ್ಕೆ ತಿರುವುಗೊಳಿಸಿ, ಅದರಲ್ಲಿ ಹಂಚಿಕೆ ಮಾಡಲಾದ 1.00 ಟಿಎಂಸಿ ನೀರಿನಲ್ಲಿ 0.164 ಟಿಎಂಸಿ ನೀರನ್ನು ಬಳಸಿಕೊಂಡು ಈ 9 ಕೆರೆಗಳನ್ನು ತುಂಬಿಸುವ ಯೋಜನೆಗೆ ಸರ್ಕಾರವು ಮಾರ್ಚ್ 2017ರಲ್ಲಿ ರೂ.22.50 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

36. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಕೆರೆ ಹಾಗೂ ಬಾಂಧಾರಗಳಿಗೆ ಕಾಳಿ ನದಿಯಿಂದ ನೀರನ್ನು ತುಂಬಿಸುವ ಯೋಜನೆ:

ಈ ಯೋಜನೆಯಡಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ 46 ಕೆರೆಗಳು ಹಾಗೂ 19 ಬ್ಯಾರೇಜ್‌ಗಳನ್ನು ಕಾಳಿ ನದಿಯಿಂದ 0.812 ಟಿಎಂಸಿ ನೀರನ್ನೆತ್ತಿ ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಿಂದ ಬೇಸಿಗೆ ಸಮಯದಲ್ಲಿ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದು, ಪ್ರತಿ ವರ್ಷ ಜನವರಿಯಿಂದ ಜೂನ್‌ವರೆಗೂ ಜನ ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಮರುಪೂರಣ ಮಾಡಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ವಿವರವಾದ ಯೋಜನಾ ವರದಗೆ ಸರ್ಕಾರವು ರೂ.220.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

37. ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಸಣ್ಣ ನೀರಾವರಿ ಕೆರೆಗಳನ್ನು ಬೇಡ್ತಿ ನದಿಯಿಂದ ಏತ ನೀರಾವರಿ ಮೂಲಕ ತುಂಬಿಸುವ ಯೋಜನೆ:

ಈ ಯೋಜನೆಯಡಿ ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ 35 ಕೆರೆಗಳನ್ನು ಬೆಳವಂತರ ಗ್ರಾಮದ ಹತ್ತಿರ ಬೇಡ್ತಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಿಸಿ, 0.449 ಟಿಎಂಸಿ ನೀರನ್ನೆತಿ ಕೆರೆಗಳ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಿಂದ ಕೆರೆಗಳ ಸುತ್ತಮುತ್ತಲಿನ ಗ್ರಾಮದ ಜನ-ಜಾನುವಾರುಗಳಿಗೆ ನೀರಿನ ಲಭ್ಯತೆ, ಅಂತರ್ಜಲ ಮಟ್ಟ ಸುಧಾರಣೆ ಹಾಗೂ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ವಿವರವಾದ ಯೋಜನಾ ವರದಗೆ ಸರ್ಕಾರವು ರೂ.125.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

38. ಮುಂಡಗೋಡ್ ಏತ್ ನೀರಾವರಿ ಯೋಜನೆ:

ಸದರಿ ಏತ ನೀರಾವರಿ ಯೋಜನೆಯಡಿ ಮುಂಡಗೋಡ್ ತಾಲ್ಲೂಕಿನ ಕೆರೆಗಳಿಗೆ ಒಳಹರಿವಿನ ಅಭಾವದಿಂದ ಕೆರೆಗಳಲ್ಲಿ ನಿಗದಿತ ಪ್ರಮಾಣ ನೀರು ಸಂಗ್ರಹಣೆಯಾಗದೇ ಇರುವುದರಿಂದ ಮಳೆಗಾಲದಲ್ಲಿ ಸಣ್ಣ ನೀರಾವರಿ ಇಲಾಖೆಯ 129 ಕೆರೆಗಳನ್ನು ಬೇಡ್ತಿ ನದಿಯಿಂದ 1.48 ಟಿ.ಎಂ.ಸಿ. ನೀರನ್ನು ಎತ್ತಿ, ಅವುಗಳ ಸಾಮರ್ಥ್ಯದ ಶೇ.50% ರಷ್ಟು ತುಂಬಿಸಲು ಯೋಜಿಸಲಾಗಿದೆ. ಪ್ರಸ್ತುತ ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

39. ತುಂಗಾ ಮೇಲ್ದಂಡೆ ಯೋಜನೆ:

ತುಂಗಾ ಮೇಲ್ದಂಡೆ ಯೋಜನೆಯಡಿ ತುಂಗಾ ನದಿಗೆ ಅಡ್ಡಲಾಗಿ ಶಿವಮೊಗ್ಗ ತಾಲ್ಲೂಕಿನ ಗಾಜನೂರು ಬಳಿ ಹಾಲಿ ಇದ್ದ ತುಂಗಾ ಅಣೆಕಟ್ಟಿನಿಂದ 100 ಮೀ. ಕೆಳಭಾಗದಲ್ಲಿ ಅಣೆಕಟ್ಟೆ ನಿರ್ಮಿಸಿ ಮತ್ತು 258.00 ಕಿ.ಮೀ. ಉದ್ದದ ತುಂಗಾ ಮೇಲ್ದಂಡೆ ಮುಖ್ಯ ಕಾಲುವೆಯನ್ನು ನಿರ್ಮಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಿಂದ ದಾವಣಗೆರೆ, ಶಿವಮೊಗ್ಗ, ಹಾವೇರಿ ಜಿಲ್ಲೆಗಳ 80,494 ಹೆ. ಪ್ರದೇಶಕ್ಕೆ ನೀರಾವರಿ ಸೃಷ್ಟಿಸಲು ಯೋಜಿಸಲಾಗಿದೆ. ತುಂಗಾ ಮೇಲ್ದಂಡೆ ಅಡಿ ಮುಖ್ಯ ಕಾಲುವೆ 258.00 ಕಿ.ಮೀ. ರಲ್ಲಿ 230.00 ಕಿ.ಮೀ. ವರೆಗೆ ಪೂರ್ಣಗೊಂಡಿದೆ. ಕಿ.ಮಿ. 230.00 ರಿಂದ ಕಿ.ಮಿ. 245.00 ರವರೆಗೆ ಕಾಮಗಾರಿಗಳು ಪ್ರಗತಿಯಲ್ಲಿದೆ. ಉಳಿದ ಕಾಮಗಾರಿಯನ್ನು ಪ್ರಾರಂಭಿಸಬೇಕಿದೆ. ಯೋಜನೆಯಡಿ 6 ವಿತರಣಾ ಕಾಲುವೆಗಳಿದ್ದು, ವಿತರಣಾ ಕಾಲುವೆ-6 ಹೊರತುಪಡಿಸಿ ಎಲ್ಲಾ ವಿತರಣಾ ಕಾಲುವೆಯ ಕಾಮಗಾರಿಗಳು ಪೂರ್ಣಗೊಂಡಿದ್ದು, 74,461 ಹೆ. ಪ್ರದೇಶಕ್ಕೆ ನೀರಾವರಿ ಒದಗಿಸಲಾಗಿದೆ.

40. ತುಂಗಾ ಅಣೆಕಟ್ಟು ಯೋಜನೆಯ ಆಧುನೀಕರಣ:

ತುಂಗಾ ಆಣೆಕಟ್ಟಿನಿಂದ ಹಾಲಿ ನೀರಾವರಿಯಾಗುತ್ತಿರುವ ಎಡ ಮತ್ತು ಬಲದಂಡೆ ಕಾಲುವೆಗಳನ್ನು ಆಧುನೀಕರಣಗೊಳಿಸುವ ಸಲುವಾಗಿ ಈ ಯೋಜನೆಗೆ ದಿನಾಂಕ 28.06.2012ರಂದು ರೂ.309.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ. 0 ರಿಂದ 32 ಕಿ.ಮಿ. ವರೆಗಿನ ಮೊದಲನೆ ಹಂತದ ಕಾಮಗಾರಿಗಳು ಪ್ರಗತಿಯಲ್ಲಿದ್ದು ಎರಡನೆ ಹಂತದ (32 ಕಿ.ಮಿ. ಯಿಂದ ಟೇಲ್ ಎಂಡ್) ಕಾಮಗಾರಿಗಳು ಟೆಂಡರ್ ಅನುಮೋದನೆಗೊಂಡಿದ್ದು ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

41. ತುಂಗಾ ಏತ ನೀರಾವರಿ ಯೋಜನೆ:

ತುಂಗಾ ಏತ ನೀರಾವರಿ ಯೋಜನೆಯು ಶಿವಮೊಗ್ಗ ನಗರದ ಸಮೀಪ ಹರಿಯುತ್ತಿರುವ ತುಂಗಾ ನದಿಯ ನೀರನ್ನೆತ್ತಿ ಶಿವಮೊಗ್ಗ ತಾಲ್ಲೂಕಿನ ಹಾಯ್‌ಹೊಳೆ, ಬಾರೆಹಳ್ಳ ಮತ್ತು ಗೌಡನಕೆರೆಗಳಿಗೆ ನೀರನ್ನು ತುಂಬಿಸಿ ನಂತರ ಗೌಡನಕೆರೆ ಕೆಳಭಾಗದ 29 ಕೆರೆಗಳಿಗೆ ವರ್ಷಕ್ಕೊಮ್ಮೆ ತುಂಬಿಸಲು ಯೋಜಿಸಲಾಗಿದೆ. ಟರ್ನ್‌ಕೀ ಆಧಾರದ ಮೇಲೆ ಕಾಮಗಾರಿಯನ್ನು ವಹಿಸಲಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ.

42. ಬಸಾಪುರ ಏತ ನೀರಾವರಿ ಯೋಜನೆ;

ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ 13 ಹಳ್ಳಿಗಳ 2267 ಹೆ. ಜಮೀನಿಗೆ ನೀರೊದಗಿಸಲು ಬಸಾಪುರ ಗ್ರಾಮದ ಹತ್ತಿರ ವರದಾ ನದಿಯ ಬಲದಂಡೆಯಿಂದ ಎರಡು ಹಂತದಲ್ಲಿ ನೀರೆತ್ತುವ ಯೋಜನೆ ರೂಪಿಸಲಾಗಿದೆ. ಈ ಯೋಜನೆಗೆ 0.6 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದೆ. ಈ ಯೋಜನೆಯ ಮೊದಲನೇ ಹಂತದ ಕಾಮಗಾರಿ ಪೂರ್ಣಗೊಂಡಿದ್ದು, 2ನೇ ಹಂತದ ಏತ ಕಾಮಗಾರಿಗಳಿಗೆ ಟೆಂಡರ್ ಕರೆದು ಗುತ್ತಿಗೆಯನ್ನು ವಹಿಸಲಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿದೆ.

43. ಉಬ್ರಾಣಿ-ಅಮೃತಾಪುರ ಸಂಯುಕ್ತ ಏತ ನೀರಾವರಿ ಯೋಜನೆ:

ಚನ್ನಗಿರಿ ತಾಲ್ಲೂಕಿನಲ್ಲಿ ಬರುವ 89 ಕೆರೆಗಳು ಹಾಗೂ ತರೀಕೆರೆ ತಾಲ್ಲೂಕಿನಲ್ಲಿ ಬರುವ 57 ಕೆರೆಗಳಿಗೆ ನೀರು ತುಂಬಿಸುವುದು ಮತ್ತು ಕುಡಿಯುವ ನೀರಿಗಾಗಿ ಅಂತರ್ಜಲ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ. ಈ ಯೋಜನೆಯು 2 ಹಂತಗಳಿದ್ದು, ಪ್ರಸ್ತುತ ಎರಡು ಹಂತದ ಕಾಮಗಾರಿಗಳು ಪೂರ್ಣಗೊಂಡಿದ್ದು ಚಾಲನೆಗೊಳಿಸಲಾಗಿದೆ. ಮುಂದುವರೆದು ಪೈಪ್‌ಲೈನ್ ವಿಸ್ತರಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು ಎರಡು ಕೆರೆ ತುಂಬಿಸುವ ಕಾಮಗಾರಿಯು ಪ್ರಗತಿಯಲ್ಲಿದೆ.

44. ಅಂಬ್ಲಿಗೊಳ ಹಾಗೂ ಅಂಜನಾಪುರ ಜಲಾಶಯ ಯೋಜನೆಗಳ ನಾಲಾ ಅಭಿವೃದ್ಧಿ:

ಅಂಬ್ಲಿಗೊಳ ಜಲಾಶಯ ಯೋಜನೆಯನ್ನು 1954–65ರ ಅವಧಿಯಲ್ಲಿ ಕುಮುದ್ವತಿ ಹೊಳೆಗೆ ಸೇರುವ ಸಾಲೂರು ಹಳ್ಳಕ್ಕೆ ಅಡ್ಡವಾಗಿ ಅಂಬ್ಲಿಗೊಳದ ಬಳಿ ಸುಮಾರು 7,908–13 ಎಕರೆ ಜಮೀನಿಗೆ ಮುಂಗಾರು ಬೆಳೆಗೆ ನೀರೊದಗಿಸಲು ನಿರ್ಮಿಸಲಾಗಿದೆ. ಅಂಜನಾಪುರ ಜಲಾಶಯ ಯೋಜನೆಯನ್ನು 1927–30ರ ಅವದಿಯಲ್ಲಿ ಕುಮದ್ವತಿ ನದಿಗೆ ಅಡ್ಡಲಾಗಿ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಅಂಜನಾಪುರ ಗ್ರಾಮದ ಸಮೀಪ ಸುಮಾರು 6,736 ಹೆಕ್ಟೇರು ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ನಿರ್ಮಿಸಲಾಗೆದೆ. ಪ್ರಸ್ತುತ ಯೋಜನೆಗಳ ನಾಲಾ ಅಭಿವೃದ್ಧಿ ಕಾಮಗಾರಿಗಳನ್ನು ಒಟ್ಟು ರೂ.38.00 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

45. ಕಚವಿ ಏತ ನೀರಾವರಿ ಯೋಜನೆ:

ಶಿವಮೊಗ್ಗ ಜಿಲ್ಲೆ ಸೊರಬ ತಾ॥ ಕಚವಿ ಗ್ರಾಮದ ಬಳಿ ವರದಾ ನದಿಯಿಂದ 0.15 ಟಿಎಂಸಿ ನೀರನ್ನು ಎತ್ತಿ ಸೊರಬ ತಾಲ್ಲೂಕಿನ 11 ಗ್ರಾಮಗಳ 21 ಕೆರೆಗಳಿಗೆ ನೀರು ತುಂಬಿಸಿ ಗ್ರಾಮದ ನೀರಿನ ಅಭಾವ ನೀಗಿಸಲು ಈ ಯೋಜನೆಯನ್ನು ರೂಪಿಸಲಾಗಿದ್ದು ಯೋಜನಾ ಅಂದಾಜು ರೂ.16.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಅನುಮೋದನೆಗೊಂಡಿದ್ದು ಪ್ರಸ್ತುತ ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ.

46. ಧರ್ಮಾ ಜಲಾಶಯ ಯೋಜನೆ:

ಧರ್ಮಾ ಅಣೆಕಟ್ಟನ್ನು ಧರ್ಮಾ ನದಿಗೆ ಅಡ್ಡಲಾಗಿ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ತಾಲ್ಲೂಕಿನ ಎಮಗಲ್ಲಿ ಗ್ರಾಮದಲ್ಲಿ 1994ರಲ್ಲಿ ನಿರ್ಮಾಣ ಮಾಡಲಾಯಿತು. ಈ ಯೋಜನೆಯಿಂದ ಸುಮಾರು 7,692 ಹೆಕ್ಟೇರು ಜಮೀನುಗಳಿಗೆ ನೀರನ್ನು ಒದಗಿಸಲಾಗುತ್ತಿದೆ. ಸದರಿ ಯೋಜನೆಯು ಈ ಹಿಂದೆಯೆ ಪೂರ್ಣಗೊಂಡಿದ್ದು, ಯೋಜನೆಯ ಆಧುನೀಕರಣ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.

47. ಭದ್ರಾ ಕಾಲುವೆ ಜಾಲದ ಆಧುನೀಕರಣ:

ಭದ್ರಾ ಅಣೆಕಟ್ಟನ್ನು 1947–1959 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ, ಲಕ್ಕವಳ್ಳಿ ಗ್ರಾಮದ ಹತ್ತಿರ ಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ. ಚಿಕ್ಕಮಗಳೂರು, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಅಡಿ ಬರುವ 1,05,570 ಹೆ. ಪ್ರದೇಶಕ್ಕೆ ನೀರಾವರಿ ಒದಗಿಸಲಾಗುತ್ತಿದೆ. ಭದ್ರಾ ನಾಲಾ ಜಾಲವನ್ನು ಲೈನಿಂಗ್ ರಹಿತ ನಿರ್ಮಿಸಲಾಗಿದ್ದು, ಭದ್ರಾ ನಾಲೆಗಳ ಆಧುನೀಕರಣ ಕಾಮಗಾರಿಯನ್ನು 2008ರಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

48. ಗೊಂದಿ ಕಾಲುವೆ ಜಾಲದ ಆಧುನೀಕರಣ:

ಗೊಂದಿ ಅಣೆಕಟ್ಟನ್ನು 1926ರಲ್ಲಿ ಶಿವಮೊಗ್ಗ ಜಿಲ್ಲೆಯ, ಭದ್ರಾವತಿ ನಗರದ ಹತ್ತಿರ ಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ. ಸದರಿ ಅಣೆಕಟ್ಟಿನ ಒಟ್ಟಾರೆ ಸಂಗ್ರಹಣಾ ಸಾಮರ್ಥ್ಯ 0.37 ಟಿಎಂಸಿ ಇದ್ದು, 4,600 ಹೆ. ಪ್ರದೇಶಕ್ಕೆ ನೀರಾವರಿ ಒದಗಿಸಲಾಗುತ್ತಿದೆ. ನಾಲಾ ಜಾಲವನ್ನು ಲೈನಿಂಗ್ ರಹಿತ ನಿರ್ಮಿಸಲಾಗಿದ್ದು, ನಾಲಾ ಜಾಲಾವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಆಧುನೀಕರಣ ಕಾಮಗಾರಿಯನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ ಆರ್ಥಿಕ ನೆರವಿನಡಿ ಕೈಗೆತ್ತಿಕೊಂಡಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದೆ.

49. ಹೋದಿರಾಯನಹಳ್ಳ ಪಥ ಪರಿವರ್ಥನ ಯೋಜನೆ:

ಹೋದಿರಾಯನಹಳ್ಳ ಪಥ ಪರಿವರ್ಥನ ಯೋಜನೆಯನ್ನು ಜಂಬದಹಳ್ಳ ಬಾಧಿತ ಪ್ರದೇಶಕ್ಕೆ ಅಂದರೆ 1,296 ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ ಒದಗಿಸಲು ಜಂಬದಹಳ್ಳ ಸಮೀಪದಲ್ಲಿ ಸಮಾನಾಂತರವಾಗಿ ಹರಿದು ಹೋಗುತ್ತಿರುವ ಹೋದಿರಾಯನ ಹಳ್ಳದ ನೀರನ್ನು ತಿರುಗಿಸಿ ಜಂಬದಹಳ್ಳ ಜಲಾಶಯಕ್ಕೆ ಒದಗಿಸಲು ಉದ್ದೇಶಿಸಲಾಗಿದೆ. ಜೊತೆಗೆ 243 ಹೆಕ್ಟೇರ್ ಗಳಷ್ಟು ಪ್ರದೇಶ ಹೊಸದಾಗಿ ನೀರಾವರಿ ಸೌಲಭ್ಯ ಪಡೆಯಲಿದೆ. ಸದರಿ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

50. ರಾಜನಹಳ್ಳಿ ಏತ ನೀರಾವರಿ ಯೋಜನೆ:

ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ರಾಜನಹಳ್ಳಿ ಬಳಿ ತುಂಗಭದ್ರಾ ನದಿಯಿಂದ ನೀರನ್ನು ಮೇಲೆತ್ತಿ ದಾವಣಗೆರೆ, ಜಗಳೂರು ಮತ್ತು ಹರಪನಹಳ್ಳಿ ತಾಲ್ಲೂಕಿನ 22 ಕೆರೆಗಳನ್ನು ತುಂಬಿಸುವ ಯೋಜನೆಯ ಕಾಮಗಾರಿಯ ಕೈಗೊಳ್ಳಲು ರೂ.100 ಕೋಟಿಗಳ ಮೊತ್ತಕ್ಕೆ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯನ್ನು ಟರ್ನ್ ಕೀ ಆಧಾರದ ಮೇಲೆ ಟೆಂಡರ್ ವಹಿಸಲಾಗಿದ್ದು, ಯೋಜನಾ ಕಾಮಗಾರಿಗಳು ಪೂರ್ಣಗೊಂಡು ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ.

ಮುಂದುವರೆದು ಯೋಜನೆಯನ್ನು ವಿಸ್ತರಿಸಿ ಹೆಚ್ಚುವರಿಯಾಗಿ ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ದೊಡ್ಡ ಕೆರೆ, ಸಣ್ಣ ಕೆರೆ ಹಾಗೂ ಎಮ್ಮೆಹಟ್ಟಿ ಕೆರೆಗಳಿಗೆ ನೀರನ್ನು ತುಂಬಿಸಲು ಉದೇಶಿಸಿದ್ದು, ಮೊತ್ತ ರೂ.14.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ.

51. ಕಾಗಿನೆಲೆ ಗ್ರಾಮದ ಕನಕ ಸರೋವರದ (ದೊಡ್ಡಕೆರೆ) ಅಭಿವೃದ್ಧಿ:

ಕಾಗಿನೆಲೆ ಗ್ರಾಮದ ಕನಕ ಸರೋವರ (ದೊಡ್ಡಕೆರೆ) ಸುಮಾರು 280 ಎಕರೆ ವಿಸ್ತೀರ್ಣ ಹೊಂದಿದ್ದು, ಸಂತ ಕನಕದಾಸರು ಪ್ರತಿನಿತ್ಯ ಈ ಕೆರೆಯಲ್ಲಿ ಮಿಂದು ಶ್ರೀ ಆದಿಕೇಶವನನ್ನು ಪೂಜಿಸುತ್ತಿದ್ದರೆಂಬ ಇತಿಹಾಸವಿದ್ದು, ಸದರಿ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಕೆರೆ ಏರಿ ಅಭಿವೃದ್ಧಿ, ದ್ವೀಪ ನಿರ್ಮಾಣ, ಉದ್ಯಾನವನ, ಸಂಗೀತ ಕಾರಂಜಿ, ಪಾತ್‌ವೇ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸಲು ರೂ.14.15 ಕೋಟಿಗಳ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಅನುಮೋದನೆಗೊಂಡಿದ್ದು ಕಾಮಗಾರಿಯು ಪ್ರಗತಿಯಲ್ಲಿದೆ.

52. ವಾರಾಹಿ ನೀರಾವರಿ ಯೋಜನೆ:

ಪಶ್ಚಿಮಾಭಿಮುಖವಾಗಿ ಹರಿಯುವ ವಾರಾಹಿ ನದಿಗೆ ಉಡುಪಿ ಜಿಲ್ಲೆ ಕುಂದಾಪುರ ತಾಲೂಕಿನ ಸಿದ್ದಾಪುರದ ಬಳಿ ಹೊರಿಯಬ್ಬೆ ಎಂಬಲ್ಲಿ ಡೈವರ್ಶನ್ ವಿಯರ್‌ನ್ನು ನಿರ್ಮಿಸಲಾಗಿದೆ. ಸದರಿ ಯೋಜನೆಯಿಂದ ಕುಂದಾಪುರ ತಾಲೂಕಿನ 33 ಗ್ರಾಮಗಳು ಮತ್ತು ಉಡುಪಿ ತಾಲೂಕಿನ 35 ಗ್ರಾಮಗಳ ಒಟ್ಟು ಸುಮಾರು 15,702 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಗುರಿ ಹೊಂದಲಾಗಿದೆ. ಕಾಮಗಾರಿ ಪ್ರಗತಿಯಲ್ಲಿರುತ್ತದೆ.

53. ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆ:

ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯಡಿ ಸಾಸ್ವೆಹಳ್ಳಿ ಹತ್ತಿರ ತುಂಗಭದ್ರಾ ನದಿಯಿಂದ ಚನ್ನಗಿರಿ ತಾಲ್ಲೂಕಿನ ಕಸಬಾ ಹೋಬಳಿಯ ಚನ್ನಗಿರಿ ವಿಧಾನಸಭಾ ಕ್ಷೇತ್ರದ 27 ಕೆರೆಗಳಿಗೆ, ದಾವಣಗೆರೆ ತಾಲ್ಲೂಕಿನ ಮಾಯಕೊಂಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ 11 ಕೆರೆಗಳಿಗೆ ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 4 ಕೆರೆಗಳಿಗೆ ಮತ್ತು ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ 1 ಕೆರೆಗೆ ನೀರನ್ನು ತುಂಬಿಸಲು ಪ್ರಸ್ತಾಪಿಸಲಾಗಿರುತ್ತದೆ. ಎರಡನೇ ಹಂತದಲ್ಲಿ ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರ ಕೆರೆಯಿಂದ ನೀರನ್ನೆತ್ತಿ ಚನ್ನಗಿರಿ ತಾಲ್ಲೂಕಿನ ಸಂತೆಬೆನ್ನೂರು ಹೋಬಳಿಯ 24 ಕೆರೆಗಳಿಗೆ, ದಾವಣಗೆರೆ ತಾಲ್ಲೂಕಿನ ಮಾಯಕೊಂಡ ವಿಧಾನಸಭಾ ಕ್ಷೇತ್ರದ 19 ಕೆರೆಗಳಿಗೆ ಮತ್ತು ಚಿತ್ರದುರ್ಗ ತಾಲ್ಲೂಕಿನ 3 ಕೆರೆಗಳಿಗೆ ಹಾಗೂ ಹೊಳಲ್ಕೆರೆ ವಿಧಾನ ಸಭಾ ಕ್ಷೇತ್ರದ 3 ಕೆರೆಗಳಿಗೆ ನೀರನ್ನು ತುಂಬಿಸಲಾಗುವುದು. ಸದರಿ ಕಾಮಗಾರಿಯ ರೂ.415.68 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತವೆ.

54. ರಾಣೆಬೆನ್ನೂರು ದೊಡ್ಡಕೆರೆ ಹಾಗೂ ಸುತ್ತಮುತ್ತಲಿನ 3 ಕೆರೆಗಳನ್ನು ತುಂಬಿಸುವ ಯೋಜನೆ:

ಸದರಿ ಯೋಜನೆಯಡಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ರಾಣೆಬೆನ್ನೂರು ದೊಡ್ಡಕೆರೆ ಹಾಗೂ ಸುತ್ತಮುತ್ತಲಿನ 3 ಕೆರೆಗಳನ್ನು ತುಂಗಭದ್ರಾ ನದಿಯಿಂದ ತುಂಬಿಸಲು ಯೋಜಿಸಲಾಗಿದೆ. ಮಳೆಯ ಅಭಾವದಿಂದ ಕೆರೆಗಳಲ್ಲಿ ನಿಗದಿತ ಪ್ರಮಾಣದಲ್ಲಿ ನೀರಿನ ಸಂಗ್ರಹಣೆಯಾಗದೇ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು, ಸದರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ ಈ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ರೂ.31.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

55. ಹರಪ್ಪನಹಳ್ಳಿ ತಾಲ್ಲೂಕಿನ 50 ಕೆರೆಗಳನ್ನು ತುಂಬಿಸುವ ಯೋಜನೆ:

ಈ ಯೋಜನೆಯಡಿ ಬರಪೀಡಿತ ಹರಪ್ಪನಹಳ್ಳಿ ತಾಲ್ಲೂಕಿನ 50 ಕೆರೆಗಳಿಗೆ ಚಿಕ್ಕಬಿದರೆ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ ನೀರನ್ನೆತ್ತಿ ತುಂಬಿಸಲು ಯೋಜಿಸಲಾಗಿದೆ. ಕಾಮಗಾರಿಗೆ ಸರ್ಕಾರವು ರೂ.227.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

56. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮದಗ ಮಾಸೂರು ಕೆರೆಯಿಂದ ಹಿರೇಕೆರೂರು ಪಟ್ಟಣದ ದುರ್ಗಾದೇವಿ ಹಾಗೂ ಬಹುಗ್ರಾಮ ಕೆರೆಗಳಿಗೆ ಕುಮುದ್ವತಿ ನದಿಯಿಂದ ನೀರನ್ನು ಎತ್ತಿ ತುಂಬಿಸುವ ಯೋಜನೆ:

ಈ ಯೋಜನೆಯೂ ಹಿರೇಕೆರೂರು ತಾಲ್ಲೂಕಿನ ತಿಪ್ಪಾಯಿಕೊಪ್ಪ ಗ್ರಾಮದ ಹತ್ತಿರ ಜಾಕ್‌ವೆಲ್ ಹಾಗೂ ಪಂಪ್ ಹೌಸನ್ನು ನಿರ್ಮಿಸಿ, ಕುಮುದ್ವತಿ ನದಿಯಿಂದ 0.067 ಟಿ.ಎಂ.ಸಿ ನೀರನ್ನೆತ್ತಿ ಹಿರೇಕೆರೂರು ಪಟ್ಟಣದ ದುರ್ಗಾದೇವಿ ಹಾಗೂ ಸುತ್ತಮುತ್ತಲಿನ 8 ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸುವ ಯೋಜನೆಯಾಗಿರುತ್ತದೆ. ಸದರಿ ಯೋಜನೆಯ ರೂ.140.00 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

57. ಮಡ್ಲೂರು ಏತ ನೀರಾವರಿ ಯೋಜನೆ:

ಈ ಯೋಜನೆಯಡಿ ಹಾನಗಲ್ ತಾಲ್ಲೂಕಿನ ತಿಳುವಳ್ಳಿ ಗ್ರಾಮದ ಹತ್ತಿರ ಹೊಂಕನ ಬ್ಯಾರೇಜಿನ ಮೇಲ್ಭಾಗದಲ್ಲಿ ಜಾಕ್‌ವೇಲ್ ಮತ್ತು ಪಂಪ್‌ಹೌಸ್ ನಿರ್ಮಿಸಿ, ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ 13 ಕೆರೆ ಹಾಗೂ ಬ್ಯಾಡಗಿ ತಾಲ್ಲೂಕಿನ 2 ಕೆರೆಗಳಿಗೆ ವರದಾ ನದಿಯಿಂದ ನೀರನ್ನೆತ್ತಿ ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಲು ಯೋಜಿಸಲಾಗಿರುತ್ತದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

58. ಗುಡ್ಡದ ಮಾದಾಪುರ ಏತ ನೀರಾವರಿ ಯೋಜನೆ:

ಗುಡ್ಡದ ಮಾದಾಪುರ ಏತ ನೀರಾವರಿ ಯೋಜನೆಯನ್ನು ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನ 13 ಕೆರೆಗಳಿಗೆ ತುಂಗಭದ್ರಾ ನದಿಯಿಂದ 0.037 ಟಿ.ಎಂ.ಸಿ. ನೀರನ್ನೆತ್ತಿ ತುಂಬಿಸಲು ಯೋಜಿಸಲಾಗಿದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

59. ಅಸುಂಡಿ ಹಾಗೂ ಸುತ್ತಮುತ್ತಲಿನ 17 ಕೆರೆಗಳನ್ನು ತುಂಬಿಸುವ ಯೋಜನೆ :

ಹಾವೇರಿ ಜಿಲ್ಲೆಯ ರಾಣೆಬೆನ್ನೂರು, ಬ್ಯಾಡಗಿ ಮತ್ತು ಹಿರೇಕೆರೂರು ತಾಲ್ಲೂಕಿನ ಅಸುಂಡಿ ಹಾಗೂ ಸುತ್ತಮುತ್ತಲಿನ 17 ಕೆರೆಗಳನ್ನು ಕುಮುದ್ವತಿ ನದಿಯಿಂದ ನೀರನ್ನು ಎತ್ತಿ ತುಂಬಿಸುವ ಅಸುಂಡಿ ಏತ ನೀರಾವರಿ ಯೋಜನೆಯ ರೂ.79.80 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಡಿಸೆಂಬರ್–2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

60. ಉತ್ತರ ಕನ್ನಡ ಜಿಲ್ಲೆಯ ಶಿರಾಸಿ ತಾಲ್ಲೂಕಿನ ಬನವಾಸಿ ಹೋಬಳಿಯ 32 ಕೆರೆಗಳಿಗೆ ವರದಾ ನದಿಯಿಂದ ನೀರನ್ನೆತ್ತಿ ತುಂಬಿಸುವ ಯೋಜನೆ:

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿ ಹೋಬಳಿಯ 32 ಕೆರೆಗಳನ್ನು ವರದಾ ನದಿಯಿಂದ ನೀರನ್ನು ತುಂಬಿಸಿ ಕೃಷಿ ಚಟುವಟಿಕೆ, ಕುಡಿಯುವ ನೀರು ಹಾಗೂ ಅಂತರ್ಜಲ ಮರುಪೂರ್ಣ ಮಾಡಲು ಉದ್ದೇಶಿಸಲಾಗಿದೆ. ಶಿರಸಿ ತಾಲ್ಲೂಕಿನಲ್ಲಿ ಕೆರೆಗಳ ಒಳಹರಿವಿನ ಅಭಾವದಿಂದ ನಿಗದಿತ ಪ್ರಮಾಣದ ನೀರಿನ ಸಂಗ್ರಹಣೆಯಾಗದೇ ಬಹುಪಾಲು ಕೆರೆಗಳು ಬರಿದಾಗುತ್ತಿದ್ದು, ಅವಲಂಬಿತ ನೀರಾವರಿ ಪ್ರದೇಶದ ರೈತರು ನೀರಿನ ಕೊರತೆಯನ್ನು ಅನುಭವಿಸುತ್ತಿದ್ದು, ಈ ಪ್ರದೇಶಗಳಲ್ಲಿರುವ ಕೊಳವೆಬಾವಿಗಳು ಕೂಡಾ ಬರಿದಾಗುತ್ತಿರುವ ಹಿನ್ನಲೆಯಲ್ಲಿ ವರದಾ ನದಿಯಿಂದ 0.107 ಟಿ.ಎಂ.ಸಿ. ನೀರನ್ನೆತ್ತಿ ಸದರಿ ಕೆರೆಗಳಿಗೆ ತುಂಬಿಸಲು ಯೋಜಿಸಲಾಗಿದೆ. ಯೋಜನೆಯ ರೂ.62.58 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಡಿಸೆಂಬರ್–2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

61. ಬೆಣ್ಣೆತೋರಾ ಯೋಜನೆ:

ಬೆಣ್ಣಿತೋರಾ ಯೋಜನೆಯ ಅಣೆಕಟ್ಟು ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಹೆರೂರ ಗ್ರಾಮದ ಬೆಣ್ಣಿತೋರಾ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ. ಸದರಿ ಯೋಜನೆಯ ಎರಡು ಕಾಲುವೆಗಳ ಅಡಿಯಲ್ಲಿ ಕಲಬುರ್ಗಿ ಜಿಲ್ಲೆಯ 20,234 ಹೆ. ಪ್ರದೇಶವು ನೀರಾವರಿಗೊಳಪಟ್ಟಿದ್ದು 5.75 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬಹುದು. ಯೋಜನೆಯ ಅಣೆಕಟ್ಟಿನ ಏರಿಯ (ಎಂಬ್ಯಾಂಕ್‌ಮೆಂಟ್) ಕೆಲಸ ಹಾಗೂ ಸ್ಪಿಲ್‌ವೇ ಕೆಲಸ ಪೂರ್ಣಗೊಂಡಿದ್ದು 2001ರಿಂದ ನೀರನ್ನು ಶೇಖರಿಸಲಾಗುತ್ತಿದೆ. ಸದರಿ ಯೋಜನೆಯ ಕಾಲುವೆ ಜಾಲಗಳ ಆಧುನೀಕರಣ ಕಾಮಗಾರಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ರೂ.150.00 ಕೋಟಿಗಳಿಗೆ ನೀಡಲಾಗಿರುತ್ತದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

62. ಭೀಮಾ ಏತ ನೀರಾವರಿ ಯೋಜನೆ :

ಭೀಮಾ ಏತ ನೀರಾವರಿ ಯೋಜನೆ ಅಡಿ ಕಲಬುರ್ಗಿ ಜಿಲ್ಲೆಯ ಅಫಜಲಪೂರ ತಾಲೂಕಿನ ಸೊನ್ನ ಗ್ರಾಮದ ಬಳಿ ಬ್ಯಾರೇಜ ನಿರ್ಮಿಸಲಾಗಿದ್ದು, ಸ್ಪಿಲ್‌ವೇ ಮುಖಾಂತರ 9 ಲಕ್ಷ ಕ್ಯೂಸೆಕ್ಸ ನೀರು ಹರಿಸಬಹುದಾಗಿದೆ. ಇದರಿಂದ 24,292 ಹೆ. ಪ್ರದೇಶಕ್ಕೆ ನೀರಾವರಿ ಒದಗಿಸಲು ಉದ್ದೇಶಿಸಲಾಗಿದೆ. ಈ ಯೋಜನೆ ಅಡಿಯಲ್ಲಿ 6.00 ಟಿ.ಎಂ.ಸಿ. ನೀರಿನ ಬಳಕೆಯಾಗಲಿದೆ. ಸದರಿ ಯೋಜನೆಯ ಬಹುತೇಕ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.

63. ಗಂಡೋರಿನಾಲಾ ಆಧುನೀಕರಣ ಯೋಜನೆ:

ಗಂಡೋರಿನಾಲಾ ಯೋಜನೆಯಡಿ ಕಲಬುರಗಿ ತಾಲ್ಲೂಕಿನ ಬೆಳಕೋಟಾ ಗ್ರಾಮದ ಹತ್ತಿರ ಆಣೆಕಟ್ಟು ನಿರ್ಮಿಸಿ ಬರಪೀಡಿತ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 7,943 ಹೆ. ಪ್ರದೇಶಕ್ಕೆ 1.99 ಟಿ.ಎಂ.ಸಿ. ನೀರನ್ನು ಬಳಸಿ ನೀರಾವರಿ ಸೌಲಭ್ಯ ಒದಗಿಸಲಾಗಿರುತ್ತದೆ.

ಯೋಜನೆಯ ಮುಖ್ಯ ಕಾಲುವೆ ಸುಮಾರು 15 ವರ್ಷಗಳ ಹಿಂದೆ ನಿರ್ಮಿಸಿದ್ದು, ಕಾಲ ಕ್ರಮೇಣವಾಗಿ ಕೆಲವೊಂದು ಕಾಲುವೆ ಭಾಗಗಳು ಶಿಥಿಲಾವಸ್ಥೆ ತಲುಪಿರುತ್ತವೆ. ಗಂಡೋರಿನಾಲಾ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಗಳನ್ನು ರೂ.92.00 ಕೋಟಿಗಳಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು ಪ್ರಸ್ತುತ ಕಾಮಗಾರಿಯ ಗುತ್ತಿಗೆಯನ್ನು ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

64. ಕೆಳದಂಡೆ ಮುಲ್ಲಾಮಾರಿ ಯೋಜನೆಯ ಕಾಲುವೆ ಜಾಲದ ಆಧುನೀಕರಣ:

ಕೆಳದಂಡೆ ಮುಲ್ಲಾಮಾರಿ ಯೋಜನೆಯಡಿ 1972ರಲ್ಲಿ ಕೃಷ್ಣಾ ಕೊಳ್ಳದ ಕಾಗಿಣಾ ನದಿಯ ಉಪನದಿಯಾದ ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ನಾಗರಾಳ ಗ್ರಾಮದ ಬಳಿ ಅಣೆಕಟ್ಟನ್ನು ನಿರ್ಮಿಸಿ, 2.61 ಟಿ.ಎಂ.ಸಿ. ನೀರಿನ ಬಳಕೆಯೊಂದಿಗೆ ಚಿಂಚೋಳಿ ತಾಲ್ಲೂಕಿನ 9,713 ಹೆಕ್ಟೇರ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲುಗಿರುತ್ತದೆ.

ಯೋಜನೆಯ ಪೂರ್ಣಗೊಂಡು ಬಹಳ ವರ್ಷಗಳಾಗಿದ್ದು, ಕಾಲ ಕ್ರಮೇಣವಾಗಿ ಕೆಲವೊಂದು ಕಾಲುವೆ ಭಾಗಗಳು ಶಿಥಿಲಾವಸ್ಥೆ ತಲುಪಿರುತ್ತವೆ. ಕೆಳದಂಡೆ ಮುಲ್ಲಾಮಾರಿ ಯೋಜನೆಯ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಗಳನ್ನು ರೂ.117.00 ಕೋಟಿಗಳಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

65. ಅಮರ್ಜಾ ಯೋಜನೆ:

ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಸಂಗೋಳಗಿ ಗ್ರಾಮದ ಹತ್ತಿರ ಅಮರ್ಜಾ ನದಿಗೆ ಅಡ್ಡಲಾಗಿ ಆಣೆಕಟ್ಟು ನಿರ್ಮಿಸಿ 1,554 ಟಿ.ಎಂ.ಸಿ. ನೀರನ್ನು ಸಂಗ್ರಹಿಸಿ ಆಳಂದ ಹಾಗೂ ಅಫಜಲಪೂರ ತಾಲೂಕಿನ ಗ್ರಾಮಗಳ 8,903 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಅಣೆಕಟ್ಟು ನಿರ್ಮಾಣ ಪೂರ್ಣಗೊಂಡಿದ್ದು, ಒಟ್ಟಾರೆ 8,903 ಹೆ. ನಲ್ಲಿ 8,729 ಹೆ. ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಬಾಕಿ ಕಾಮಗಾರಿ ಪ್ರಗತಿಯಲ್ಲಿದೆ.

66. ಬೋರಿ ಏತ ನೀರಾವರಿ ಯೋಜನೆ:

ಕಲಬುರಗಿ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಳೆಯ ಪ್ರಮಾಣ ಕ್ಷೀಣಿಸುತ್ತಿದ್ದು, ಇದರಿಂದಾಗಿ ಕೊಳವೆಬಾವಿಗಳಲ್ಲಿ, ತೆರೆದ ಬಾವಿಗಳಲ್ಲಿ ಹಾಗೂ ಕೆರೆಗಳಲ್ಲಿ ನೀರಿನ ಪ್ರಮಾಣವು ಕಡಿಮೆಯಾಗಿದ್ದು ಅಂತರ್ ಜಲ ಮಟ್ಟವು ಕುಸಿದಿರುತ್ತದೆ. ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕು ಮತ್ತು ಅಫಜಲ್‌ಪುರ್ ತಾಲ್ಲೂಕಿನಲ್ಲಿ ಇದರ ತೀವ್ರತೆ ಹೆಚ್ಚಾಗಿದ್ದು, ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಭೀಮಾ ನದಿಯ ಉಪನದಿಯಾದ ಬೋರಿ ನದಿಯಿಂದ 1.00 ಟಿ.ಎಂ.ಸಿ. ನೀರನ್ನು ಎತ್ತಿ ಅಫಜಲ್‌ಪುರ ತಾಲ್ಲೂಕಿನ 10 ಕೆರೆಗಳು ಹಾಗೂ ಅಳಂದ ತಾಲ್ಲೂಕಿನ 3 ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ ಹಾಗೂ ಅಮರ್ಜಾ ಜಲಾಶಯ ಒಳಹರಿವಿನ ಕೊರತೆಯನ್ನು 60% ಸರಿದೂಗಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

67. ಕಾರಂಜಾ ಯೋಜನೆ:

ಕಾರಂಜಾ ನೀರಾವರಿ ಯೋಜನೆಯು ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರ ಇರುತ್ತದೆ. ಸದರಿ ಯೋಜನೆಯಿಂದ ಬೀದರ್ ಜಿಲ್ಲೆಯ ಬಾಲ್ಕಿ, ಬೀದರ್, ಹುಮ್ನಾಬಾದ್ ತಾಲ್ಲೂಕುಗಳ 29,227 ಹೆ. ನೀರಾವರಿ ಕಲ್ಪಿಸಲು ಉದ್ದೇಶಿಲಾಗಿದ್ದು, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.

68. ಕಾರಂಜಾ ಯೋಜನೆಯ ನಾಲೆಗಳ ಆಧುನೀಕರಣ:

ಕಾರಂಜಾ ನೀರಾವರಿ ಯೋಜನೆಯು ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರ ನಿರ್ಮಿಸಲಾಗಿದೆ. ಸದರಿ ಯೋಜನೆಯಿಂದ ಬಿದರ್ ಜಿಲ್ಲೆಯ ಬಾಲ್ಕಿ, ಬೀದರ್, ಹುಮ್ನಾಬಾದ್ ತಾಲ್ಲೂಕುಗಳ 29,227 ಹೆ. ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಲಾಗಿರುತ್ತದೆ. ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆಗಳನ್ನು ಸುಮಾರು 30 ವರ್ಷಗಳ ಹಿಂದೆ ನಿರ್ಮಿಸಿದ್ದು, ಕಾಲ ಕ್ರಮೇಣ ಕಾಲುವೆಗಳು ಶಿಥಿಲಾವಸ್ಥೆ ತಲುಪಿರುತ್ತವೆ. ಆದ್ದರಿಂದ ಕಾಲುವೆಗಳ ಆಯ್ದ ಭಾಗಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಪ್ರಸ್ತುತ ಕಾಮಗಾರಿ ಗುತ್ತಿಗೆಯನ್ನು ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

69. ಕಾರಂಜಾ ಜಲಾಶಯದ ಒಳಹರಿವಿನ ಕೊರತೆಯನ್ನು ಸರಿದೂಗಿಸಲು ಬಲದಂಡೆ ಕಾಲುವೆ ಕಿ.ಮೀ.60 ಮತ್ತು 90 ರಲ್ಲಿ ಮಾಣಿಕೇಶ್ವರ ಮತ್ತು ಹಾಲಹಳ್ಳಿ ಬ್ಯಾರೇಜ್‌ನಿಂದ ನೀರನ್ನು ಒದಗಿಸಿ ಅಚ್ಚುಕಟ್ಟನ್ನು ಸ್ಥಿರೀಕರಿಸುವ (supplimental) ಯೋಜನೆ:

ಕಾರಂಜಾ ನೀರಾವರಿ ಯೋಜನೆಯು ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರ ನಿರ್ಮಿಸಲಾಗಿರುತ್ತದೆ. ಸದರಿ ಯೋಜನೆಯಿಂದ ಬಿದರ್ ಜಿಲ್ಲೆಯ ಬಾಲ್ಕಿ, ಬೀದರ್, ಹುಮ್ನಾಬಾದ್ ತಾಲ್ಲೂಕುಗಳ 29,227 ಹೆ. ನೀರಾವರಿ ಕಲ್ಪಿಸಲು ಉದ್ದೇಶಿಲಾಗಿದ್ದು, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.

ಮುಂದುವರೆದು ಕಾರಂಜಾ ಜಲಾಶಯದ ಒಳಹರಿವಿನ ಕೊರತೆಯನ್ನು ಸರಿದೂಗಿಸಲು ಬಲದಂಡೆ ಕಾಲುವೆ ಕಿ.ಮೀ.60 ಮತ್ತು 90 ರಲ್ಲಿ ಮಾಣಿಕೇಶ್ವರ ಮತ್ತು ಹಾಲಹಳ್ಳಿ ಬ್ಯಾರೇಜ್‌ನಿಂದ ನೀರನ್ನು ಒದಗಿಸಿ ಅಚ್ಚುಕಟ್ಟನ್ನು ಸ್ಥಿರೀಕರಿಸುವ (supplimental) ಯೋಜನೆಗೆ ಸರ್ಕಾರದಿಂದ ಸೆಪ್ಟೆಂಬರ್–

2017ರಲ್ಲಿ ರೂ.126.85 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿ ಗುತ್ತಿಗೆಯನ್ನು ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

70. ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಆಧುನೀಕರಣ:

ಮುಲ್ಲಾಮಾರಿ ಮೇಲ್ದಂಡೆ ಯೋಜನೆಯಡಿ ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಲಾಗಿದ್ದು, ಸದರಿ ಯೋಜನೆಯಿಂದ ಬೀದರ್ ಹಾಗು ಕಲಬುರಗಿ ಜಿಲ್ಲೆಯ ಹುಮ್ನಾಬಾದ್, ಬಸವಕಲ್ಯಾಣ, ಕಲಬುರಗಿ ತಾಲ್ಲೂಕಿನ 3,279ಹೆ. ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಗಿದೆ. ಸದರಿ ಯೋಜನೆಯು ಬಹಳ ಹಿಂದೆಯೆ ಪೂರ್ಣಗೊಂಡಿರುತ್ತದೆ. ಯೋಜನೆಯ ಮುಖ್ಯ ಕಾಲುವೆಯು ಸುಮಾರು 30 ವರ್ಷಗಳ ಹಿಂದೆ ನಿರ್ಮಿಸಿದ್ದು, ಕಾಲ ಕ್ರಮೇಣವಾಗಿ ಕೆಲವೊಂದು ಕಾಲುವೆ ಭಾಗಗಳು ಶಿಥಿಲಾವಸ್ಥೆ ತಲುಪಿರುತ್ತವೆ.

ಆದ್ದರಿಂದ ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಗಳನ್ನು ರೂ.68.60 ಕೋಟಿಗಳಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು ಪ್ರಸ್ತುತ ಕಾಮಗಾರಿ ಗುತ್ತಿಗೆಯನ್ನು ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

71. ಬಸವಕಲ್ಯಾಣ ತಾಲ್ಲೂಕಿನ ಕೊಂಗಳಿ ಬ್ಯಾರೇಜಿನಿಂದ ನೀರನ್ನು ಎತ್ತಿ ಚುಲ್ಕಿನಾಲಾ ಜಲಾಶಯ ಮತ್ತು ಕೆರೆಗಳನ್ನು ತುಂಬಿಸುವ ಯೋಜನೆ:

ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಜಮಖಂಡಿ ಗ್ರಾಮದ ಹತ್ತಿರ ಇರುವ ಕೊಂಗಳಿ ಬ್ಯಾರೇಜಿನಿಂದ ನೀರನ್ನೆತ್ತಿ ಚುಲ್ಕಿನಾಲಾ ಜಲಾಶಯ ಮತ್ತು ಬಸವಕಲ್ಯಾಣ ತಾಲ್ಲೂಕಿನ 15 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಸದರಿ ಯೋಜನೆಯಿಂದ ಜನ ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಮರುಪೂರಣಗೊಳಿಸಲು ಉದ್ದೇಶಿಸಲಾಗಿದೆ. ಚುಲ್ಕಿನಾಲ ಯೋಜನೆಯಿಂದ ಒಟ್ಟು 4,047 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿರುತ್ತದೆ. ಆದರೆ, ಒಳಹರಿವಿನ ಅಭಾವದಿಂದ ವಂಚಿತ ನೀರಾವರಿ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಸ್ಥಿರೀಕರಿಸಲು ಯೋಜಿಸಲಾಗಿದೆ. ಈ ಯೋಜನೆಗೆ 0.768 ಟಿ.ಎಂ.ಸಿ ನೀರಿನ ಅವಶ್ಯಕತೆಯಿದ್ದು ಮಾಂಜ್ರಾ ನದಿಯಿಂದ ನೀರನ್ನೆತ್ತಿ ಚುಲ್ಕಿನಾಲಾ ಜಲಾಶಯ ಮತ್ತು 15 ಕೆರೆಗಳಿಗೆ ನೀರು ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ರೂ.188.00 ಕೋಟಿಗಳ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿ ಗುತ್ತಿಗೆಯನ್ನು ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ.

72. ತುಂಗಭದ್ರಾ ನಾಲಾ ಜಾಲದ ಆಧುನಿಕರಣ :

ಈ ಯೋಜನೆಯು ಅಂತರರಾಜ್ಯ ವಿವಿಧೋದ್ದೇಶ ಯೋಜನೆಯಾಗಿದ್ದು, ತುಂಗಭದ್ರಾ ಆಣೆಕಟ್ಟೆಯನ್ನು ತುಂಗಭದ್ರಾ ನದಿಗೆ ಅಡ್ಡಲಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಮಲ್ಲಾಪುರ ಹತ್ತಿರ ಕಟ್ಟಲಾಗಿದೆ. ಇದು ಕೃಷ್ಣಾ ನದಿಯ ಉಪನದಿಯಾಗಿದೆ. ಈ ಯೋಜನೆಯ ಎರಡು ಬದಿಯ ಕಾಲುವೆಗಳಿಂದ ಕರ್ನಾಟಕ ರಾಜ್ಯದ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ 3,62,938 ಹೆಕ್ಟೇರು ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದ್ದು, ನಿಗದಿತ ನೀರಿನ ಬಳಕೆಯ ಪ್ರಮಾಣ 3,736 ದಶಲಕ್ಷ ಘನ ಮೀಟರ್ ಆಗಿರುತ್ತದೆ. ಈಗ ಇದು ಎರಡು ರಾಜ್ಯ ಸರ್ಕಾರಗಳ (ಆಂಧ್ರ ಪ್ರದೇಶ ಮತ್ತು ಕರ್ನಾಟಕ) ಜಂಟಿ ಯೋಜನೆಯಾಗಿದೆ. ಈ ಯೋಜನೆಯ ಅಣೆಕಟ್ಟು ಮತ್ತು ಕಾಲುವೆಗಳ ಕೆಲಸಗಳು ಪೂರ್ಣಗೊಂಡಿದೆ. ತುಂಗಭದ್ರಾ ಎಡದಂಡೆ ಕಾಲುವೆಯ ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿವೆ.

73. ಹಿರೇಹಳ್ಳ ಯೋಜನೆ:

ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗ್ರಾಮದ ಹತ್ತಿರ ತುಂಗಭದ್ರಾ ನದಿಯ ಉಪ ನದಿಯಾದ ಹಿರೇಹಳ್ಳಕ್ಕೆ ಅಣೆಕಟ್ಟನ್ನು ಕಟ್ಟಿ ಜಲಾಶಯ ನಿರ್ಮಿಸಲಾಗಿದೆ. ಈ ಯೋಜನೆಯಿಂದ ಕೊಪ್ಪಳ ತಾಲ್ಲೂಕಿನ 8,330 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಈ ಯೋಜನೆಯ ಅಣೆಕಟ್ಟು, ಕಾಲುವೆ ಹಾಗೂ ಎಲ್ಲಾ ವಿತರಣಾ ಕಾಲುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಪುನರ್ವಸತಿ ಕಾಮಗಾರಿಗಳು ಪ್ರಗತಿಯಲ್ಲಿವೆ.

74. ಸಿಂಗಟಾಲೂರು ಏತ ನೀರಾವರಿ ಯೋಜನೆ:

ಸಿಂಗಟಾಲೂರು ಏತ ನೀರಾವರಿ ಯೋಜನೆಯಲ್ಲಿ ಬಳ್ಳಾರಿ, ಕೊಪ್ಪಳ ಮತ್ತು ಗದಗ ಜಿಲ್ಲೆಗಳ ಹೂವಿನಹಡಗಲಿ, ಕೊಪ್ಪಳ, ಯಲಬುರ್ಗ, ಗದಗ, ಮುಂಡರಗಿ ತಾಲ್ಲೂಕಿನ 107380 ಹೆ (19,587 ಹೆ. ಪ್ರದೇಶಕ್ಕೆ ಹರಿ ನೀರಾವರಿ ಹಾಗೂ 87,793 ಹೆ. ಪ್ರದೇಶಕ್ಕೆ ಹನಿ ನೀರಾವರಿ ಮುಖಾಂತರ) ಪ್ರದೇಶಕ್ಕೆ ನೀರಾವರಿ ಪ್ರದೇಶ ಕಲ್ಪಿಸಲು ಉದ್ದೇಶಿಸಲಾಗಿರುತ್ತದೆ. ಬ್ಯಾರೇಜ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಬಲದಂಡೆ ಕಾಲುವೆಯು 40.13 ಕಿ.ಮಿ ಉದ್ದ ಇದ್ದು, ಕಾಲುವೆಯ ನಿರ್ಮಾಣದ ಕಾಮಗಾರಿಗಳು ಪೂರ್ಣಗೊಂಡಿದೆ. ಎಡದಂಡೆ ಕಾಲುವೆಯ ಒಟ್ಟಾರೆ 166.44. ಕಿ.ಮಿ ಉದ್ದ ಇದ್ದು, ಭಾಗಶಃ ಎಡದಂಡೆ ಯೋಜನೆಯ 10,080 ಹೆ. ಅಚ್ಚಕಟ್ಟು ಕ್ಷೇತ್ರಕ್ಕೆ ಸೂಕ್ಷ್ಮ ನೀರಾವರಿ ಕಲ್ಪಿಸಲು ಯೋಜಿಸಿದ್ದು, ಪ್ರಸ್ತುತ ಕಾಮಗಾರಿಯ ಗುತ್ತಿಗೆ ವಹಿಸಲಾಗಿದ್ದು, ಕಾಮಗಾರಿಯನ್ನು

ಪ್ರಾರಂಭಿಸಬೇಕಾಗಿದೆ. ಉಳಿದಂತೆ 24,097 ಹೆ. ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಕಲ್ಪಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

75. ವೈ.ಕಗ್ಗಲ್ ಏತ ನೀರಾವರಿ ಯೋಜನೆ:

ವೈಕಗ್ಗಲ್ ಏತ ನೀರಾವರಿ ಯೋಜನೆಗೆ ಹಗರಿ ನದಿಯಿಂದ ನೀರನ್ನು ಎತ್ತಿ ಬಳ್ಳಾರಿ ತಾಲ್ಲೂಕಿನ 2,690 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆಯಾಗಿದೆ. ಕಾಮಗಾರಿಯ ಕಾರ್ಯವ್ಯಾಪ್ತಿಯಲ್ಲಿ ಆದ ಬದಲಾವಣೆಯಿಂದ ಕಾಮಗಾರಿ ಸ್ಥಗಿತಗೊಂಡಿರುತ್ತದೆ. ಸದರಿ ಯೋಜನೆಯ ಬಾಕಿ ಕಾಮಗಾರಿಯನ್ನು ಕೈಗೊಳ್ಳಲು ಪರಿಷ್ಕೃತ ಅಂದಾಜು ಪಟ್ಟಿ ಪರಿಶೀಲನಾ ಹಂತದಲ್ಲಿದೆ.

76. ಒಳ ಬಳ್ಳಾರಿ ಏತ ನೀರಾವರಿ ಯೋಜನೆ:

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕು ಒಳಬಳ್ಳಾರಿ ಏತ ನೀರಾವರಿ ಯೋಜನೆಯನ್ನು ತುಂಗಭದ್ರಾ ಯೋಜನೆಯಿಂದ ವಂಚಿತರಾಗಿ ತೊಂದರೆಗೆ ಒಳಗಾಗಿರುವ ಕೊನೆಯ ಅಂಚಿನ ಸುಮಾರು 2,542 ಹೆ. ಪ್ರದೇಶಕ್ಕೆ ನೀರನ್ನು ಒದಗಿಸುವ ಸಲುವಾಗಿ ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

77. ವಿಜಯನಗರ ಕಾಲುವೆ ಜಾಲದ ಆಧುನೀಕರಣ:

ವಿಜಯನಗರ ಕಾಲುವೆಗಳು ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ನಿರ್ಮಾಣಗೊಂಡ ಕಾಲುವೆಗಳಾಗಿರುತ್ತವೆ. ಸದರಿ ಯೋಜನೆಯಿಂದ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಹೊಸಪೇಟೆ, ಬಳ್ಳಾರಿ, ಶಿರಗುಪ್ಪ, ಗಂಗಾವತಿ, ಕೊಪ್ಪಳ ಮತ್ತು ಮಾನ್ವಿ ತಾಲ್ಲೂಕುಗಳ ಸುಮಾರು 11,222 ಹೆ. ಪ್ರದೇಶಕ್ಕೆ ನೀರಾವರಿ ಒದಗಿಸಲಾಗುತ್ತಿದೆ. ಸದರಿ ಕಾಲುವೆಗಳ ಆಧುನೀಕರಣವನ್ನು ಏಷಿಯನ್ ಡೆವಲೆಂಪಮೆಂಟ್ ಬ್ಯಾಂಕ್‌ನ ಆರ್ಥಿಕ ಧನಸಹಾಯದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

78. ರಾಜೋಳಿಬಂಡಾ ಯೋಜನೆ:

ಈ ಯೋಜನೆಯು ತುಂಗಭದ್ರಾ ಜಲಾಶಯದ ಕೆಳಭಾಗದ ಜಲಾನಯನ ಪ್ರದೇಶದಿಂದ ಹಾಗೂ ತುಂಗಭದ್ರಾ ಯೋಜನೆಯ ಪುನರ್‌ಉತ್ಪತ್ತಿ ನೀರಿನಿಂದ ಲಭ್ಯವಾಗುವ ನೀರನ್ನು ಉಪಯೋಗಿಸಿ 2380 ಹೆ. ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಗಿದೆ. ಸದರಿ ಯೋಜನೆ ಪೂರ್ಣಗೊಂಡಿದ್ದು, ಆಧುನೀಕರಣ ಕಾಮಗಾರಿ ಪ್ರಗತಿಯಲ್ಲಿದೆ.

79. ತುಂಗಭಧ್ರಾ ನದಿಯಿಂದ ಹೂವಿನಹಡಗಲಿ ತಾಲೂಕಿನಲ್ಲಿ ಬರುವ 10 ಕೆರೆಗಳಿಗೆ ನೀರು ತುಂಬಿಸುವ ಯೋಜನೆ:

ಹೂವಿನಹಡಗಲಿ ವಿಧಾನ ಸಭಾ ಕ್ಷೇತ್ರದ 10 ಕೆರೆಗಳಿಗೆ ತುಂಗಭದ್ರಾ ಜಲಾಶಯದ ಮೇಲ್ಭಾಗದ ನದಿ ಮೂಲದಿಂದ ನೀರು ತುಂಬಿಸುವ ಯೋಜನೆಯನ್ನು ಟೆಂಡರ್ ಮೂಲಕ ಟರ್ನ್‌ಕೀ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.

80. ಅಳವಂಡಿ–ಬೆಟಗೇರಿ ಏತ ನೀರಾವರಿ ಯೋಜನೆ:

ಕೊಪ್ಪಳ ತಾಲ್ಲೂಕಿನ ಬರ ಪೀಡಿತ ಪ್ರದೇಶಗಳ ಸುಮಾರು 5,992.30 ಎಕರೆ ಭೂಮಿಗೆ ಕಾಲುವೆ ಮುಖಾಂತರ ನೀರಾವರಿ ಕಲ್ಪಿಸಲು ಉದ್ದೇಶಿಸಿದ್ದು, ಈಗಾಗಲೇ ರೂ.87.10 ಕೋಟಿಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ. ಸದರಿ ಯೋಜನೆಯ ಹೆಡ್‌ವರ್ಕ್ ಹಾಗು ಕಾಲುವೆ ಜಾಲದ ಕಾಮಗಾರಿಗಳು ಪ್ರಗತಿಯಲ್ಲಿದೆ.

81. ಬಳ್ಳಾರಿ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲ್ವಿ ಜಲಾಶಯಕ್ಕೆ ತುಂಗಭದ್ರಾ ನದಿಯಿಂದ ಏತ ನೀರಾವರಿ ಮೂಲಕ ನೀರನ್ನು ತುಂಬಿಸುವ ಯೋಜನೆ:

ಹಗರಿಬೊಮ್ಮನಹಳ್ಳಿ ನೀರಾವರಿ ಯೋಜನೆಯನ್ನು ಚಿಕ್ಕ ಹಗರಿ ನದಿಗೆ ಅಡ್ಡಲಾಗಿ ಮಾಲವಿ ಗ್ರಾಮದ ಬಳಿ 1972ರಲ್ಲಿ ಆಣೆಕಟ್ಟು ನಿರ್ಮಾಣ ಮಾಡಿದ್ದು, ಸುಮಾರು 2,965 ಹೆಕ್ಟೇರ್ ಪ್ರದೇಶಕ್ಕೆ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಜಮೀನುಗಳಿಗೆ ನೀರು ಒದಗಿಸಲು ಯೋಜಿಸಲಾಗಿರುತ್ತದೆ. ಸದರಿ ಜಲಾಶಯದಿಂದ 1972ರಿಂದ 1980ರ ಸಾಲಿನವರೆಗೆ ಸತತವಾಗಿ ಎರಡು ಹಂಗಾಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ತದನಂತರ ಜಲಾನಯನ ಪ್ರದೇಶದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿ ಹಾಗೂ ಜಲಾಶಯದ ಮೇಲ್ಭಾಗದಲ್ಲಿ (catchment) ಸಣ್ಣ ಕೆರೆಗಳು ನಿರ್ಮಾಣವಾಗಿರುವುದರಿಂದ ಜಲಾಶಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಸಂಗ್ರಹಣೆ ಆಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಮಾಲ್ವಿ ಜಲಾಶಯದ ಒಳ ಹರಿವಿನಲ್ಲಿ ಉಂಟಾದ ನೀರಿನ ಕೊರತೆಯನ್ನು ನೀಗಿಸಲು ತುಂಗಭದ್ರಾ ನದಿಯಿಂದ ನೀರನ್ನು ಎತ್ತಿ ಮಾಲ್ವಿ ಜಲಾಶಯಕ್ಕೆ ಪೈಪ್ ಮೂಲಕ ಹರಿಸುವ ರೂ.144.95 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಅನುಮೋದಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

82. ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಇಟಗಿ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ ನೀರನ್ನೆತ್ತಿ 20 ಇಂಗು ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ:

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನಲ್ಲಿನ ಕೆರೆಗಳು ಒಳಹರಿವಿನ ಕೊರತೆಯಿಂದ ತುಂಬದ ಕಾರಣ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆ ಹಾಗೂ ಅಂತರ್ಜಲ ಮಟ್ಟವು ಕುಸಿದು ತೀವ್ರ ಸಂಕಷ್ಟವನ್ನು ಅನುಭವಿಸುತ್ತಿರುವುದರಿಂದ

ಇಟಗಿ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ 0.226 ಟಿ.ಎಂ.ಸಿ. ನೀರನ್ನೆತ್ತಿ 20 ಇಂಗು ಕೆರೆಗಳಿಗೆ ನೀರನ್ನು ತುಂಬಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ರೂ.140.00 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಅನುಮೋದಿಸಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದೆ.

83. ತಿಮ್ಮಾಪುರ ಏತ ನೀರಾವರಿ:

ತುಂಗಭದ್ರಾ ಎಡದಂಡೆ ಕಾಲುವೆಯ ವಿತರಣಾ ಕಾಲುವೆ – 54 ರಡಿ ಭಾದಿತವಾದ 34,948 ಎಕರೆ ನೀರಾವರಿ ಪ್ರದೇಶವನ್ನು, ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕಿನ ತುರಕಟ್ಟಿ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ ನೀರನ್ನು ಎತ್ತಿ ಸ್ಥಿರಗೊಳಿಸಲು (stabilisation) ತಿಮ್ಮಾಪುರ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಸದರಿ ಯೋಜನೆಯ ಭಾದಿತ ಅಚ್ಚುಕಟ್ಟಿನ ಪೈಕಿ 11,687 ಎಕರೆ ಪ್ರದೇಶವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗಕ್ಕೆ ಸೇರಿರುತ್ತದೆ. ಯೋಜನೆಯ ರೂ.92.00 ಕೋಟಿಗಳ ಡಿ.ಪಿ.ಆರ್. ಗೆ. ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

84. ಕರಡೋಣ ಮತ್ತು ರಾಮದುರ್ಗ ಕೆರೆಗಳನ್ನು ತುಂಬಿಸುವ ಯೋಜನೆ:

ಗಂಗಾವತಿ ತಾಲ್ಲೂಕಿನ ಕನಕಗಿರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಮಳೆಯ ಅಭಾವದಿಂದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು ಸದರಿ ನೀರಿನ ಭವಣೆಯನ್ನು ನೀಗಿಸಲು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಸದರಿ ಯೋಜನೆಯಡಿ ತುಂಗಭದ್ರಾ ಜಲಾಶಯದ ಕೆಳಭಾಗದಲ್ಲಿ ಈಗಾಗಲೆ ಸಣ್ಣ ನೀರಾವರಿ ಇಲಾಖೆಯಿಂದ ಪೂರ್ಣಗೊಳಿಸಲಾಗಿರುವ ದೇವಲಾಪುರ ಮತ್ತು ಇತರೆ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಿಂದ ಕರಡೋಣ, ಶೀರವಾರ, ರಾಮದುರ್ಗ ಮತ್ತು ಹೊಸಕೆರೆ ಕೆರೆಗಳನ್ನು ಅವುಗಳ ಶೇಖರಣಾ ಸಾಮರ್ಥ್ಯದ ಶೇ.50ರಷ್ಟು ನೀರನ್ನು ತುಂಬಿಸಲು ಯೋಜಿಸಲಾಗಿದೆ. ಯೋಜನೆಯ ವಿವರವಾದ ಯೋಜನಾ ವರದಿಯು ರೂ.15.00 ಕೋಟಿಗಳಿಗೆ ಆನುಮೋದನೆಗೊಂಡಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಆಹ್ವಾನಿಸಬೇಕಾಗಿದೆ.

85. ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆ:

ಕೊಪ್ಪಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಬಹದ್ದೂರ್ ಬಂಡಿ ಮತ್ತು ಇತರೆ 18 ಗ್ರಾಮಗಳ ವ್ಯಾಪ್ತಿಯಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು ರೈತರನ್ನು ಆರ್ಥಿಕವಾಗಿ ಸಧೃಡಗೊಳಿಸುವ ಸಲುವಾಗಿ ಅಲ್ಲಿನ 5,256 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಹಿನ್ನೆಲೆಯಲ್ಲಿ ತುಂಗಭದ್ರಾ ಉಪಕೊಳ್ಳದಲ್ಲಿನ 0.6 ಟಿಎಂಸಿ ನೀರನ್ನು ಬಳಸಿಕೊಂಡು ರೂ.188.41 ಕೋಟಿಗಳ ಮೊತ್ತದ 2 ಹಂತಗಳ ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆಯಿಂದ ರೈತರ ಬವಣೆಯನ್ನು ನೀಗಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ರೂ. 80 ಕೋಟಿಗಳ ಮೊದಲನೆ ಹಂತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

BOARD OF DIRECTORS

Sri H.D.Kumaraswamy	Chairman
Sri D.K.Shivakumar	Vice-Chairman
Sri. T.M.Vijay Bhaskar, IAS	Director
Sri I.S.N.Prasad, IAS	Director
Dr: E.V.Ramana Reddy, IAS	Director
Sri Rakesh Singh, IAS	Director
Dr: Shalini Rajneesh, IAS	Director
Sri K.Jaiprakash,	Director
Sri Mallikarjuna B. Gunge	Managing Director
Sri D.N. Desai	Independent Director
Sri S.S.Magadal	Independent Director
Prof: M.S.Mohan Kumar	Independent Director

Key Officers :

Sri N. Ravindran
General Manager - Finance &
Chief Finance Officer

Sri S.R. Gopal
Company Secretary

Sri Shashidhar Bagali
Chief Administrative Officer

Sri M.M. Mirza
Chief Accounts Officer

Registered Office :
4th Floor, Coffee Board Building, No.1,
Dr.B.R. Ambedkar Veedhi, Bangalore-560 001

Central Office :
Vijaya Complex, Srinagar Circle,
Haliyal Road, Dharwad-580 003.

Legal Advisors (Retainers):

Sri M.R.C. Ravi,
M/s ILPM Consultants, "Swathi",
No.123, 6th Main, Between 12th & 13th Cross
Malleshwaram, Bangalore – 560 003.

Sri R.N. Misale, Advocate,
"Krishna" No.13/A, Opp. to Grace Apartment,
M.G.Colony, Tilakavadi, Belgaum – 590 006.

M/s Law Links,
Advocates & Legal Consultants, C-47,
(Basement), Nizamuddin East,
New Delhi- 110 013.

Statutory Auditors

M/s. Manian & Rao, Chartered Accountants
No.361 1st Floor, 7th Cross, 1st Block, Jayanagar, Bangalore - 560 011
Tel: 080-26569500, Fax: 080-26569501, e-mail: contact@manian-rao.com

Sl.No.	CONTENTS	Page No.
1	Notice	158
2	Directors' Report	159-208
3	Auditors' Report	209-231
4	Comments of the Comptroller and Auditor General	232
5	Balance Sheet	233-234
6	Statement of Profit & Loss Account	235
7	Cash Flow Statement	236-237
8	Statement of Change in Equaity	238-239
9	Notes forming part of financial statements	240-297
10	Progress Report of the Projects as on 31.08.2018	298-311

KARNATAKA NEERAVARI NIGAM LIMITED

Regd Office: 4th Floor, Coffee Board Building, No.1, Dr. Ambedkar Veedhi, Bangalore-560 001

N O T I C E

Notice is hereby given that the **20th** Annual General Meeting of the Members of the Company will be held on **Saturday, the 29th September, 2018 at 04.15.p.m. at,** Room No. 336, the Chambers of Hon'ble Minister for Water Resources and Medical Education, 3rd Floor, Vidhana Soudha, Bangalore-560 001. Due to administrative reason, the meeting was held at the **Nigam's Registered Office Board Room,** after issue of separate notice to that effect, to consider and transact the following business:

General Business:

1. To receive, consider and adopt the Balance Sheet as at 31.03.2018 and the Profit and Loss Account for the year ended on that date along with the Schedules attached thereto and Reports of Directors' and Auditors thereon;

2. To fix the remuneration of the Auditors of the Company appointed under section 102(2) of the Companies Act, 2013 **(Please see Note-1 below).**

By the order of the Board
For **Karnataka Neeravari Nigam Limited**

Sd/-
(S.R. Gopal)
Company Secretary

Date : 28.09.2018
Place : Bangalore

NOTE:

1. As per the provisions of Section 139 of the Companies Act, 2013, the remuneration payable to the Auditors has to be fixed by the Company in General Meeting or in such manner as the Company in General Meeting may determine. At the 3rd Annual General Meeting held on 29.09.01, the AGM have authorized the Board of Directors to fix the remuneration payable to the Statutory Auditors of the Company every year separately as and when appointment is made by the C & AG of India, under Section 139 of the Companies Act, 2013. The C&AG vide their letter dtd 17.08.2017 has fixed Rs.15.73 lakhs as audit fee for FY 2017-18. Accordingly, the Audit Committee of the Board have recommended & approved a remuneration Rs.15,73,000/- (Rupees Fifteen Lakhs and Seventy Three Thousand only) exclusive of applicable taxes as the fee payable to the Statutory Auditors and Tax Audit, M/s Mannian & Rao, Co., Chartered Accountants, for the year 2017-18.

2. A Member entitled to attend and vote at the Meeting is entitled to appoint a Proxy to attend and vote instead of himself and such Proxy need not be a Member.

3. This meeting has been called with short notice after obtaining consent of the members as required under section 101(1) of the Companies Act, 2013.

DIRECTORS' REPORT FOR THE FINANCIAL YEAR 2017-18

Dear Members,

Your Directors have pleasure in presenting the Twentieth Annual Report together with the Audited Financial Statements for the year ended 31st March 2018.

2. Projects under implementation:

Your Company is implementing 90 ongoing projects entrusted by Government. The brief details of the projects are given below:

Particulars	
Total No of Projects	90
Balance cost as on 1.4.2018**(Rs. crores)**	19,590.41
Ultimate Potential	16,71,407
Cumulative Potential created upto Mar'18**(in Ha)**	14,03,938
Balance potential as on 01.04.18**(in Ha)**	2,67,469
Allocation of water (TMC)	477.51

3. Status Report of the projects:

The status report of the projects under implementation by the Company as at 31.08.2018 is separately appended at the end as a part of this Annual Report. However, brief highlights of the major projects upto the date of this report is furnished below:

(i) Upper Tunga Project: Upper Tunga project envisages construction of new dam across Tunga River at 100.00 meter downstream of existing Tunga Anicut near Gajanur in Shimoga Taluk and construction of Upper Tunga Main Canal for a length of 270.00 km. It includes construction of tunnel of 4.00 km length and also distributary network. Under this project it is proposed to irrigate 80,494 Ha areas of Shimoga, Davanagere and Haveri Districts by utilising 12.24 TMC of water from River Tunga. Dam work is completed in all respect. Presently, 230 km out of 258 km of canal construction is completed and 5 of the 6 distributaries are completed. Rest is under progress.

(ii) Tubachi-Bableshwar LIS: The lift irrigation scheme is proposed to irrigate 52,700 ha areas of Vijayapur, Athani & Jamakhandi of Belagavi & Bagalkot Districts by utilising the 6.30 TMC of water from Krishna River during Kharif season. Under Phase-I, the head work is entrusted on turnkey basis amounting to Rs.1,022.58 Crores and the 80% of the work is completed. Under Phase-II balance head works are entrusted on turnkey basis for Rs.536.30 crores and the works are under progress. Further, the works related to West Main canal and East main canal have been awarded for Rs.333.76 Crores and Rs.59.59 Crores the works are under progress. Works of North and South canal under East Main canal and Kajibilagi West Canal and Kalabilagi East Canal under DC 1A are also under progress.

(iii) **Basaveshwar (Kempwad) LIS:** The lift irrigation scheme is proposed to irrigate 27,462 Ha of 22 drought affected villages coming under Athani Taluka Belagavi District, utilizing 4.00 TMC of water from backwaters of Hippargi Barrage during rainy season. Presently, the tender is awarded for Rs.1,363.48 Cr. and the works are under progress.

(iv) **Sri Veerabhadreshwara LIS:** The lift irrigation scheme is proposed to irrigate 17,377 Ha of Mudhol and Ramdurga taluk by utilizing 2.40 TMC of water during Khariff season & filling up of 10 minor tanks in the command by utilizing 0.10TMC of water. Administrative approval was accorded for the work for Rs.544.00 crores. Presently, the headworks are under progress.

(v) **Sasvehalli LIS:** The project involves lifting of water from Tungabhadra near Sasvehalli village to fill 121 tanks of Shivamogga, Chithradurga and Davanagere districts. The work is administratively approved for Rs.415.68 Cr. and presently, is under progress.

(vi) **Micro-irrigation:** Your Company has been a pioneer in the country in taking up micro- irrigation scheme on a large scale, following the successful implementation in Shiggaon LIS with sprinkler irrigation which is already in operation in an area of 9,900 ha. in Haveri district. Additional area of 3,600 Ha will be brought under drip irrigation in this project. The other projects taken up with drip irrigation are Singtalur LIS (87,793 ha.), and Savanur LIS (15,500 ha.) which put-together constitute an area of 1,16,793 Ha. of Micro irrigation.

4. **AIBP Assistance:**

During the year, the Company has received an amount of Rs.90.66 crores as central assistance for Upper Tunga Project and Karanja under the Accelerated Irrigation Benefit Programme (AIBP).

5. **Karnataka Integrated and Sustainable Water Resources Management Investment Programme (KISWRMIP):**

The Company has received approval from the ADB and also concurrence from the Central Government for a Multi-Tranche Financing Facility of 150 Million $ (Rs.750 Crores) in a period of seven years i.e. 2014-2020. The Asian Development Bank assisted Karnataka Integrated and Sustainable Water Resources Management Investment Programme (KISWRMIP) is in progress. The loan signing for the first Tranche of KISWRMIP was held on 7th May 2015 and the loan was declared effective on 13th July 2015. The first tranche of this assistance amounting to 48 Million $ (Rs 240 Crores) will be utilized for modernization of Gondi Project, telemetry in select projects in Tungabhadra Sub-basin (K-8), River Basin Planning and capacity building activities during the period from 2014-2018. Presently, all the activities of KISWRMIP Project-I and preparatory activities of Project-II are under progress. Project-I closes on Sept-2018 (Project Closing).Further, action is being taken to take up the work of Modernisation of Vijayanagara Channels under KISWRMIP Tranche-2.

6. **New Projects :** The following new projects were administratively approved by the Government during 2017-18, giving the necessary impetus to irrigated agriculture and to meet the drinking water needs by tank filling in drought prone areas of the State:

